ಶುಕ್ರವಾರ, ಮೇ 15, 2026 | ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಬಿಸಿಲ ಬೇಗೆ



ಪಶ್ಚಿಮ ಬಂಗಾಳದ ಹೌರಾದಲ್ಲಿ ಪ್ರಖರ ಬಿಸಿಲಿನಿಂದ ರಕ್ಷಣೆ ಪಡೆಯಲು ಮಹಿಳೆಯೊಬ್ಬರು ಮುಖವನ್ನು ವೇಲ್‌ನಿಂದ ಮುಚ್ಚಿಕೊಂಡಿದ್ದರು

ಕ್ವಾರ್ಟರ್‌ಗೆ ಸೇನ್



ಭಾರತದ ಬ್ಯಾಡ್ಮಿಂಟನ್ ಆಟಗಾರ ಲಕ್ಷ್ಯ ಸೇನ್ ಅವರು ಗುರುವಾರ ಥಾಯ್ಲೆಂಡ್ ಓಪನ್ ಸೂಪರ್ 500 ಟೂರ್ನಿಯ ಸಿಂಗಲ್ಸ್‌ನಲ್ಲಿ ಚೀನಾದ ಝು ಷುವಾನ್ ಅವರನ್ನು ಮಣಿಸಿ ಕ್ವಾರ್ಟರ್ ಫೈನಲ್ ತಲುಪಿದರು




Dr. Peter Machado
Archbishop of Bangalore
ಶ್ರೀ ಸಿದ್ದರಾಮಯ್ಯ
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ರಾಜ್ಯದ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು
ಕನ್ನಡಿಗರ ಭರವಸೆಯ ನಾಯಕರು ಹಾಗೂ
ಕರ್ನಾಟಕದ ಮುಂದಿನ ಮುಖ್ಯಮಂತ್ರಿಯಾಗಿ
ನಾಡನ್ನು ಮುನ್ನಡೆಸಲಿರುವ.
ಶ್ರೀ ಡಿ.ಕೆ.ಶಿವಕುಮಾರ್
ಅವರಿಗೆ
ಜನ್ಮದಿನದ
ಹಾರ್ದಿಕ ಶುಭಾಶಯಗಳು.
ಬಾಲ ಪ್ರದೀಪ್
ಕರ್ನಾಟಕ ಪ್ರದೇಶ ರಾಜ್ಯ ಯುವ
ಕಾಂಗ್ರೆಸ್ ಉಪಾಧ್ಯಕ್ಷ.
ಶ್ರೀ ಅಂತೋಣಿ ಕುಮಾರ್. ಬಿ
ಆಕಾಂಕ್ಷಿ, ಬಿಳೇಕಹಳ್ಳಿ ವಾರ್ಡ್ - 60
(ಗ್ರೇಟರ್ ಬೆಂಗಳೂರು ಪ್ರಾಧಿಕಾರ)
ಪ್ರಧಾನ ಕಾರ್ಯದರ್ಶಿ, ಬೆಂಗಳೂರು ದಕ್ಷಿಣ ಜಿಲ್ಲಾ
ಕಾಂಗ್ರೆಸ್ ಸಮಿತಿ
ಎ ಬರ್ತಲೋಮ್
ಕಾಂಗ್ರೆಸ್ ಮುಖಂಡರು
ಕೆಪಿಸಿಸಿ ಮಾಜಿ ಪ್ರಧಾನ ಕಾರ್ಯದರ್ಶಿಗಳು
ಅಧ್ಯಕ್ಷರು - ಫೋರಂ ಆಫ್ ಇಂಡಿಯನ್ ಕ್ರಿಶ್ಚಿಯನ್ ಅಸೋಸಿಯೇಷನ್

ಶುಕ್ರವಾರ, ಮೇ 15, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



‘ಮಿಂತ್ರಾ’ ಕಾರ್ಯಕ್ರಮ
ಮುಂಬೈನಲ್ಲಿ ನಡೆದ ‘ಮಿಂತ್ರಾ ಕ್ರಿಯೇಟರ್ ಸ್ಕೂಲ್’ ಕಾರ್ಯಕ್ರಮದಲ್ಲಿ ಬಾಲಿವುಡ್ ನಟಿ ಮಲೈಕಾ ಅರೋರಾ ಭಾಗವಹಿಸಿದ್ದರು



ಪ್ರತಿಭಟನೆ
ನೀಟ್–ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಕುರಿತು ತನಿಖೆಗೆ ಆಗ್ರಹಿಸಿ ಎಬಿವಿಪಿ ಹುಬ್ಬಳ್ಳಿಯಲ್ಲಿ ನಡೆಸಿದ ಧರಣಿಯಲ್ಲಿ ವಿದ್ಯಾರ್ಥಿನಿ ಪಾಲ್ಗೊಂಡಿದ್ದರು



ಶ್ರೀ ಎನ್.ಎ ಹ್ಯಾರಿಸ್

ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (BDA)
ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ

ಶುಭ ಕೋರುವವರು :
ಡಿಕೆಎಸ್ ಅಭಿಮಾನಿ ಬಳಗ

ಶುಕ್ರವಾರ, ಮೇ 15, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 134 | ಪುಟ 20
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ವೈಭವ್‌ಗೆ ಮಣೆ



ಯುವ ಬ್ಯಾಟರ್ ವೈಭವ್ ಸೂರ್ಯವಂಶಿ ಅವರು ಶ್ರೀಲಂಕಾ ವಿರುದ್ಧ ಜೂನ್ 9ರಿಂದ ನಡೆಯಲಿರುವ ತ್ರಿಕೋನ ಏಕದಿನ ಸರಣಿಯಲ್ಲಿ ಆಡುವ ಭಾರತ 'ಎ' ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ತಿಲಕ್ ವರ್ಮಾ ತಂಡವನ್ನು ಮುನ್ನಡೆಸಲಿದ್ದಾರೆ

ಸೆನ್ಸೆಕ್ಸ್ 75,398 | ನಿಫ್ಟಿ 23,689 | $/₹ 95.64 | ಚಿನ್ನ (Std. 10g) ₹1,67,200 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹3,05,900 (ಬೆಂಗಳೂರು)

ರಾಜ್ಯಕ್ಕೂ ಬಂತು ಎಸ್‌ಐಆರ್

ಇದೇ 20ರಿಂದ ಶುರು ● ಚುನಾವಣಾ ಆಯೋಗದ ಆದೇಶ
140 ದಿನಗಳಲ್ಲಿ ಪರಿಷ್ಕರಣೆ ಪೂರ್ಣ


● ಜಯಸಿಂಹ ಆರ್.

ಬೆಂಗಳೂರು: ಕರ್ನಾಟಕದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಮೇ 20ರಿಂದ ಪ್ರಕ್ರಿಯೆ ಆರಂಭವಾಗಲಿದೆ. ಒಟ್ಟು 5.50 ಕೋಟಿ ಮತದಾರರು ಪೈಕಿ ಯಾರೆಲ್ಲ ಮತದಾನಕ್ಕೆ ಅರ್ಹರು ಎಂಬುದನ್ನು ಈ ಪ್ರಕ್ರಿಯೆ ನಿರ್ಧರಿಸಲಿದೆ.

ಚುನಾವಣಾ ಆಯೋಗವು ಈಗಾಗಲೇ 13 ರಾಜ್ಯಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಳಿಸಿದೆ. ಈಗ ದೇಶದಲ್ಲಿ ಮೂರನೇ ಹಂತದ ಎಸ್‌ಐಆರ್ ಪ್ರಕ್ರಿಯೆಗೆ ವೇಳಾಪಟ್ಟಿ ನಿಗದಿ ಮಾಡಿದೆ. ಈ ಕುರಿತು ಗುರುವಾರ ಅಧಿಕೃತ ಆದೇಶವನ್ನೂ ಹೊರಡಿಸಿದೆ. ಅದರಂತೆ, ರಾಜ್ಯದಲ್ಲಿ ಅಕ್ಟೋಬರ್ 7ರವರೆಗೆ ಒಟ್ಟು 140 ದಿನಗಳಲ್ಲಿ ಈ ಪ್ರಕ್ರಿಯೆ ಪೂರ್ಣಗೊಳಿಸಲು ವೇಳಾಪಟ್ಟಿ ಅಂತಿಮಗೊಂಡಿದೆ.

▶11

ಎಸ್‌ಐಆರ್ ಪೂರ್ವ ಮ್ಯಾಪಿಂಗ್ ವಿವರ



2.27 ಕೋಟಿ 2025 ಮತ್ತು 2002ರ ಎರಡೂ ಪಟ್ಟಿಯಲ್ಲಿ ಇದ್ದು, ಮ್ಯಾಪಿಂಗ್ ಆಗಿರುವ ಮತದಾರರ ಸಂಖ್ಯೆ

2.52 ಕೋಟಿ 2025ರ ಪಟ್ಟಿಯಲ್ಲಿ ಇದ್ದು, 2002ರ ಪಟ್ಟಿಯಲ್ಲಿ ಇಲ್ಲದಿರುವ ಹಾಗೂ ಪೋಷಕರ ವಿವರದ ಆಧಾರದಲ್ಲಿ ಮ್ಯಾಪಿಂಗ್ ಆದವರು

75.70 ಲಕ್ಷ ಇನ್ನಷ್ಟೇ ಮ್ಯಾಪಿಂಗ್ ಆಗಬೇಕಿರುವವರು

ರಾಜ್ಯ ವೇಳಾಪಟ್ಟಿ

ದಿನಾಂಕ	ವಿವರ
ಮೇ 20–29	ಸಿದ್ಧತೆ, ತರಬೇತಿ ಹಾಗೂ ಗಣತಿ ನಮೂನೆಗಳ ಮುದ್ರಣ
ಜೂನ್ 30–ಜುಲೈ 29	ಮತಗಟ್ಟೆ ಅಧಿಕಾರಿಗಳಿಂದ ಮನೆ–ಮನೆ ಭೇಟಿ
ಆಗಸ್ಟ್ 5	ಕರಡು ಮತದಾರರ ಪಟ್ಟಿ ಪ್ರಕಟ
ಆಗಸ್ಟ್ 5–ಸೆಪ್ಟೆಂಬರ್ 4	ಆಕ್ಷೇಪಣೆ ಸಲ್ಲಿಸಲು ಮತದಾರರ ಅವಕಾಶ
ಆಗಸ್ಟ್ 5–ಅಕ್ಟೋಬರ್ 3	ನೋಟಿಸ್, ಆಕ್ಷೇಪಣೆಗಳ ವಿಲೇವಾರಿ
ಅಕ್ಟೋಬರ್ 7	ಮತದಾರರ ಅಂತಿಮ ಪಟ್ಟಿ ಪ್ರಕಟ

59,050 ಕರ್ನಾಟಕಕ್ಕೆ ನಿಗದಿಪಡಿಸಿರುವ ಬಿಎಲ್‌ಒಗಳು

25,284 ಕರ್ನಾಟಕಕ್ಕೆ ನಿಗದಿಪಡಿಸಿರುವ ಬಿಎಲ್‌ಎಗಳು

ಮೂರನೇ ಹಂತಕ್ಕೆ ವೇಳಾಪಟ್ಟಿ

ನವದೆಹಲಿ: ಮೂರನೇ ಹಂತದಲ್ಲಿ ಕರ್ನಾಟಕ ಸೇರಿದಂತೆ 16 ರಾಜ್ಯಗಳು ಮತ್ತು ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸಲು ಭಾರತೀಯ ಚುನಾವಣಾ ಆಯೋಗ ಗುರುವಾರ ವೇಳಾಪಟ್ಟಿ ಪ್ರಕಟಿಸಿದೆ.

ಈ ರಾಜ್ಯಗಳಲ್ಲಿ ಮೇ 30ರಂದು ಪ್ರಕ್ರಿಯೆ ಆರಂಭವಾಗಿ ಸೆಪ್ಟೆಂಬರ್ ಹಾಗೂ ಡಿಸೆಂಬರ್ ನಡುವೆ ಅಂತಿಮ ಮತದಾರರ ಪಟ್ಟಿ ಪ್ರಕಟವಾಗಲಿದೆ. ಈ ಪ್ರಕ್ರಿಯೆಯನ್ನು ವಿವಿಧ ರಾಜ್ಯಗಳಲ್ಲಿ ವಿವಿಧ ದಿನಾಂಕಗಳಲ್ಲಿ ಕೈಗೊಳ್ಳಲಾಗುವುದು. ಪಕ್ಷಗಳಿಂದ ನೇಮಿಸಲ್ಪಟ್ಟ 3.42 ಲಕ್ಷ ಬೂತ್ ಮಟ್ಟದ ಏಜೆಂಟ್‌ಗಳ (ಬಿಎಲ್‌ಎ) ಸಹಾಯದಿಂದ ಸುಮಾರು 3.94 ಲಕ್ಷ ಬೂತ್ ಮಟ್ಟದ ಅಧಿಕಾರಿಗಳು (ಬಿಎಲ್‌ಒಗಳು) ಗಣತಿ ಹಂತದಲ್ಲಿ 36.73 ಕೋಟಿ ಮತದಾರರನ್ನು ಪರಿಶೀಲಿಸಲು ಮನೆ ಮನೆಗೆ ಹೋಗಲಿದ್ದಾರೆ.

ಮೊದಲ ಎರಡು ಹಂತಗಳಲ್ಲಿ 13 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಎಸ್‌ಐಆರ್ ನಡೆಸಿ 5.18 ಕೋಟಿ ಮಂದಿಯ ಹೆಸರನ್ನು ಮತದಾರರ ಪಟ್ಟಿಯಿಂದ ಅಳಿಸಲಾಗಿದೆ. ಎಸ್‌ಐಆರ್‌ಗೆ ವಿರೋಧ ಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. ಕಾನೂನು ಸಮಸ್ಯೆಗಳಿಂದಾಗಿ, ಅಸ್ಸಾಂನಲ್ಲಿ ಎಸ್‌ಐಆರ್ ನಡೆಸಿಲ್ಲ. ಇದರೊಂದಿಗೆ, ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ ಮತ್ತು ಲಡಾಖ್ ಹೊರತುಪಡಿಸಿ ಇಡೀ ದೇಶದಲ್ಲಿ ಎಸ್‌ಐಆರ್ ನಡೆದಂತಾಗುತ್ತದೆ.



3ನೇ ಹಂತದಲ್ಲಿ ಎಸ್‌ಐಆರ್ ಎಲ್ಲೆಲ್ಲಿ?

ಕರ್ನಾಟಕ, ಒಡಿಶಾ, ಮಿಜೋರಾಂ, ಸಿಕ್ಕಿಂ, ಮಣಿಪುರ, ಉತ್ತರಾಖಂಡ, ಆಂಧ್ರಪ್ರದೇಶ, ಅರುಣಾಚಲ ಪ್ರದೇಶ, ಹರಿಯಾಣ, ತೆಲಂಗಾಣ, ಪಂಜಾಬ್, ಮೇಘಾಲಯ, ಮಹಾರಾಷ್ಟ್ರ, ಜಾರ್ಖಂಡ್, ದೆಹಲಿ, ನಾಗಾಲ್ಯಾಂಡ್, ತ್ರಿಪುರಾ, ದಾದ್ರಾ ನಗರ ಹವೇಲಿ, ದಮನ್ ಮತ್ತು ಡಿಯು ಹಾಗೂ ಚಂಡೀಗಢ

ಬಲೆ ರಿಪೇರಿ...

ಪ್ರಜಾವಾಣಿ ಚಿತ್ರ ಫಕ್ರುದ್ದೀನ್ ಎಚ್.



ಮಂಗಳೂರಿನ ಸುಲ್ತಾನ್ ಬತ್ತೇರಿಯಲ್ಲಿ ಮೀನುಗಾರರು ಗುರುವಾರ ಬಲೆ ರಿಪೇರಿಯಲ್ಲಿ ತೊಡಗಿದ್ದರು

ಸತೀಶನ್ ಕೇರಳಂ ಸಿ.ಎಂ

ವೇಣುಗೋಪಾಲ್, ರಮೇಶ್ ಚೆನ್ನಿತ್ತಲಗೆ ಒಲಿಯದ 'ಅದೃಷ್ಟ'

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಕೇರಳದ ಮುಂದಿನ ಮುಖ್ಯಮಂತ್ರಿಯಾಗಿ ಆರು ಬಾರಿಯ ಶಾಸಕ ವಿ.ಡಿ. ಸತೀಶನ್ ಅವರನ್ನು ಕಾಂಗ್ರೆಸ್ ಹೈಕಮಾಂಡ್ ಗುರುವಾರ ಹೆಸರಿಸಿದೆ. ಈ ಮೂಲಕ ಹಲವು ದಿನಗಳಿಂದ ಮೂಡಿದ್ದ ಅನಿಶ್ಚಿತತೆ ಹಾಗೂ ಊಹಾಪೋಹಗಳಿಗೆ ಕೊನೆಗೂ ತೆರೆ ಎಳೆದಿದೆ.


ಪಕ್ಷದ ಹಿರಿಯ ನಾಯಕರಾದ ಕೆ.ಸಿ. ವೇಣುಗೋಪಾಲ್, ರಮೇಶ್ ಚೆನ್ನಿತ್ತಲ ಹಾಗೂ ವಿರೋಧ ಪಕ್ಷದ ನಾಯಕರಾಗಿದ್ದ ಸತೀಶನ್ ಅವರು ಮುಖ್ಯಮಂತ್ರಿ ಸ್ಥಾನದ ಪ್ರಬಲ ಆಕಾಂಕ್ಷಿಗಳಾಗಿದ್ದರು. 61 ವರ್ಷ ವಯಸ್ಸಿನ ಸತೀಶನ್ ಅವರಿಗಿರುವ ಸಾರ್ವಜನಿಕ ಬೆಂಬಲ ಹಾಗೂ ಕಳೆದ ಐದು ವರ್ಷಗಳಲ್ಲಿ ವಿಪಕ್ಷ ನಾಯಕರಾಗಿ ಅವರು ಸಮರ್ಥವಾಗಿ ಕಾರ್ಯನಿರ್ವಹಿಸಿರುವುದನ್ನು ಪರಿಗಣಿಸಿ ಅವರನ್ನು ಆಯ್ಕೆ ಮಾಡಲಾಗಿದೆ. ಉಳಿದ ಇಬ್ಬರಿಗೆ ಹೋಲಿಸಿದರೆ ಸತೀಶನ್ ಕಿರಿಯರು.

▶10

ಮುಖ್ಯಾಂಶಗಳು

- ರಾಜ್ಯಪಾಲರ ಭೇಟಿಯಾಗಿ ಸರ್ಕಾರ ರಚನೆಗೆ ಹಕ್ಕು ಮಂಡನೆ
- ಮೇ 18ರಂದು ಪ್ರಮಾಣ ವಚನ ಸ್ವೀಕಾರ ಸಾಧ್ಯತೆ

ಜನರ ಜೀವನಮಟ್ಟ ಸುಧಾರಿಸಲು, ಕೇರಳಂ ಅನ್ನು ಬದಲಿಸಲು ಮತ್ತು ಪುದು ಯುಗವನ್ನು (ಹೊಸ ಯುಗ) ಪ್ರಾರಂಭಿಸಲು ನಾವೆಲ್ಲರೂ ಒಟ್ಟಾಗಿ ಶ್ರಮಿಸುತ್ತೇವೆ



ವಿ.ಡಿ. ಸತೀಶನ್, ಕಾಂಗ್ರೆಸ್ ಸಿಎಲ್‌ಪಿ ನಾಯಕ

ಮೌನಕ್ಕೆ ಶರಣಾದ ಚೆನ್ನಿತ್ತಲ

ತಿರುವನಂತಪುರ: ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳಲ್ಲಿ ಒಬ್ಬರಾಗಿದ್ದ ಹಿರಿಯ ನಾಯಕ ರಮೇಶ್ ಚೆನ್ನಿತ್ತಲ ಅವರು ಮೌನಕ್ಕೆ ಶರಣಾಗಿದ್ದಾರೆ. ಹೈಕಮಾಂಡ್ ನಿರ್ಧಾರದ ಬಗ್ಗೆ ಅವರು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಸುಮಾರು ಐದು ದಶಕಗಳ ರಾಜಕೀಯ ಜೀವನದಲ್ಲಿ ಬಹುಶಃ ಅವರಿಗೆ ಮುಖ್ಯಮಂತ್ರಿ ಆಗಲು ಲಭಿಸಿದ ಕೊನೆಯ ಅತ್ಯುತ್ತಮ ಅವಕಾಶ ಇದಾಗಿತ್ತು. 70 ವರ್ಷ ವಯಸ್ಸಿನ ಚೆನ್ನಿತ್ತಲ ಅವರು ನೆಹರೂ-ಗಾಂಧಿ ಕುಟುಂಬದೊಂದಿಗೆ ಬಹುಕಾಲದ ನಂಟು ಹೊಂದಿದ್ದಾರೆ.

ಮಾಧ್ಯಮದವರು ಗುರುವಾರ ಸಂಜೆ ಅವರ ಪ್ರತಿಕ್ರಿಯೆ ಪಡೆಯಲು ಇಲ್ಲಿನ ವಜುದಕ್ಕಾಡ್‌ನಲ್ಲಿರುವ ನಿವಾಸಕ್ಕೆ ಬಂದಾಗ ಅವರು ಅಲ್ಲಿರಲಿಲ್ಲ. 'ಅವರು ಮನೆಯಲ್ಲಿಲ್ಲ. ಗುರುವಾಯೂರು ದೇವಸ್ಥಾನಕ್ಕೆ ತೆರಳಿದ್ದಾರೆ' ಎಂದು ಕಾಂಗ್ರೆಸ್ ಮುಖಂಡರೊಬ್ಬರು ತಿಳಿಸಿದ್ದಾರೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ



ಸಕ್ಕರೆ ರಫ್ತಿಗೆ ನಿಷೇಧ

ನವದೆಹಲಿ (ಪಿಟಿಐ): ಸಕ್ಕರೆ ರಫ್ತಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಕೇಂದ್ರ ಸರ್ಕಾರ ನಿಷೇಧ ಹೇರಿದೆ. ಇದು ಸೆಪ್ಟೆಂಬರ್ 30ರವರೆಗೆ ಜಾರಿಯಲ್ಲಿ ಇರಲಿದೆ. ಈ ಕ್ರಮವು ದೇಶಿ ಮಾರುಕಟ್ಟೆಯಲ್ಲಿ ಸಕ್ಕರೆ ಲಭ್ಯತೆಯನ್ನು ಹೆಚ್ಚು ಮಾಡಲಿದೆ.

ಈ ಮೊದಲು ಸಕ್ಕರೆ ರಫ್ತಿನ ಮೇಲೆ ನಿರ್ಬಂಧ ಇತ್ತು. ಸಕ್ಕರೆಯನ್ನು ರಫ್ತು ಮಾಡಲು ಪರವಾನಗಿ ಪಡೆಯಬೇಕಿತ್ತು. ಈಗ ಸಕ್ಕರೆ ರಫ್ತನ್ನು ಸೆಪ್ಟೆಂಬರ್ 30ರವರೆಗೆ ಅಥವಾ ಮುಂದಿನ ಆದೇಶದವರೆಗೆ ನಿಷೇಧಿಸಲಾಗಿದೆ.



ಇದಕ್ಕೆ ಸಂಬಂಧಿಸಿದ ಅಧಿಸೂಚನೆಯನ್ನು ವಿದೇಶ ವಹಿವಾಟುಗಳ ಮಹಾನಿರ್ದೇಶನಾಲಯವು (ಡಿಜಿಎಫ್‌ಟಿ) ಅಧಿಸೂಚನೆಯಲ್ಲಿ ಪ್ರಕಟಿಸಿದೆ.

ಆದರೆ ಈ ಆದೇಶವು ಐರೋಪ್ಯ ಒಕ್ಕೂಟಕ್ಕೆ ವಿಶೇಷವಾದ ಸುಂಕ ವಿನಾಯಿತಿ ವ್ಯವಸ್ಥೆಯ ಅಡಿಯಲ್ಲಿ ಮತ್ತು ಅಮೆರಿಕಕ್ಕೆ 'ಸುಂಕ ದರ ಕೋಟಾ' ಅಡಿಯಲ್ಲಿ ರಫ್ತಾಗುವ ಸಕ್ಕರೆಗೆ ಅನ್ವಯ ಆಗುವುದಿಲ್ಲ. ಸರ್ಕಾರದ ಹಂತದಲ್ಲಿ ನಡೆಯುವ ರಫ್ತಿಗೆ ಹಾಗೂ ಈಗಾಗಲೇ ವಿದೇಶಕ್ಕೆ ಸಾಗಣೆ ಆಗುತ್ತಿರುವ ಸಕ್ಕರೆಗೆ ಇದು ಅನ್ವಯ ಆಗುವುದಿಲ್ಲ.

ಬಸ್‌ನಲ್ಲಿ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ

ನವದೆಹಲಿ (ಪಿಟಿಐ): ಕೆಲಸ ಮುಗಿಸಿ ನಡೆಯುತ್ತಾ ಮನೆಗೆ ತೆರಳುತ್ತಿದ್ದ ಮಹಿಳೆಯೊಬ್ಬರನ್ನು ಎಳೆದುಕೊಂಡು, ಚಲಿಸುತ್ತಿದ್ದ ಬಸ್‌ನಲ್ಲಿಯೇ ಸರತಿಯಲ್ಲಿ ಚಾಲಕ ಹಾಗೂ ನಿರ್ವಾಹಕ ಸಾಮೂಹಿಕ ಅತ್ಯಾಚಾರ ಎಸಗಿದ ಘಟನೆ ದೆಹಲಿಯಲ್ಲಿ ನಡೆದಿದೆ. ಇಬ್ಬರೂ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಇಲ್ಲಿನ ರಾಣಿ ಭಾಗ್ ಪ್ರದೇಶದಲ್ಲಿ ಸೋಮವಾರ ರಾತ್ರಿ (ಮೇ 11) ನಡೆದ ಈ ಘಟನೆಯು 2012ರಲ್ಲಿ ದೆಹಲಿಯಲ್ಲಿಯೇ ನಡೆದಿದ್ದ ನಿರ್ಭಯಾ ಪ್ರಕರಣವನ್ನು ನೆನಪಿಸುವಂತಿದೆ. ಘಟನೆ ನಡೆದ ಮರುದಿನವೇ ಆರೋಪಿಗಳನ್ನು ಬಂಧಿಸಲಾಗಿದೆ. ಮಹಿಳೆಯು ವಿವಾಹಿತಳಾಗಿದ್ದು, ಅವರಿಗೆ ಮೂವರು ಮಕ್ಕಳಿದ್ದಾರೆ. 'ಮಹಿಳೆಯ ದೂರಿನ ಅನ್ವಯ ವಿಳಂಬ ಮಾಡದೆಯೇ ಎಫ್‌ಐಆರ್ ದಾಖಲಿಸಲಾಗಿದೆ. ಆಕೆಯ ಹೇಳಿಕೆಯನ್ನೂ ದಾಖಲಿಸಿಕೊಳ್ಳಲಾಗಿದೆ. ಆಕೆಯ ಹೇಳಿಕೆ ಆಧರಿಸಿ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಡಿಸಿಪಿ ವಿಕ್ರಮ್ ಸಿಂಗ್ ಮಾಹಿತಿ ನೀಡಿದರು.

ವಿವರ ಪುಟ ▶9

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ

ಆರ್‌ಡಿಎಸ್‌ಒ ಪ್ರಾಯೋಗಿಕ ಸಂಚಾರ

ಕಾಳೇನ ಅಗ್ರಹಾರ–ತಾವರೆಕೆರೆ ಎತ್ತರಿಸಿದ ಮಾರ್ಗದಲ್ಲಿ 3 ತಿಂಗಳಲ್ಲಿ ಸಂಚಾರ ಸಾಧ್ಯತೆ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ನಮ್ಮ ಮೆಟ್ರೊ ಗುಲಾಬಿ ಮಾರ್ಗದಲ್ಲಿ ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗಿನ ಎತ್ತರಿಸಿದ ಮಾರ್ಗದಲ್ಲಿ ಸಂಶೋಧನ ವಿನ್ಯಾಸ ಮತ್ತು ಮಾನದಂಡಗಳ ಸಂಸ್ಥೆ (ಆರ್‌ಡಿಎಸ್‌ಒ) 12 ದಿನ ಪ್ರಾಯೋಗಿಕ ಸಂಚಾರ ನಡೆಸಿದೆ. ಮೂರು ವಾರಗಳ ಒಳಗೆ ವರದಿ ಸಲ್ಲಿಸಲಿದೆ.

ಆರ್‌ಡಿಎಸ್‌ಒ ಪ್ರಾಯೋಗಿಕ ವೇಗ ಮತ್ತು ತುರ್ತು ಬ್ರೇಕಿಂಗ್ ದೂರವನ್ನು ಪರೀಕ್ಷೆ ನಡೆಸಿದೆ. ವರದಿ ಸಲ್ಲಿಕೆಯಾದ ಬಳಿಕ ಇಂಡಿಪೆಂಡೆಂಟ್ ಸೇಫ್ಟಿ ಅಸೆಸರ್ (ಐಎಸ್‌ಎ) ಎಲ್ಲ ದಾಖಲೆ, ಅಂಕಿ ಅಂಶಗಳನ್ನು ಪರಿಶೀಲಿಸಿ ಪ್ರಮಾಣ ಪತ್ರ ನೀಡಲಿದ್ದಾರೆ. ಅದನ್ನು ರೈಲ್ವೆಯ ಮೆಟ್ರೊ ರೈಲು ಸುರಕ್ಷತಾ ಆಯೋಗಕ್ಕೆ (ಸಿಎಂಆರ್‌ಎಸ್) ಸಲ್ಲಿಸಲಾಗುತ್ತದೆ. ಸಿಎಂಆರ್‌ಎಸ್ ಆಯುಕ್ತರು ಬಂದು ಅಂತಿಮ ಪರಿಶೀಲನೆ ನಡೆಸುತ್ತಾರೆ. ಅವರು ಒಪ್ಪಿಗೆ ನೀಡಿದ ಬಳಿಕ ಮೆಟ್ರೊ



ಗುಲಾಬಿ ಮಾರ್ಗದ ಮೆಟ್ರೊ ರೈಲು ಸಂಚಾರಕ್ಕೆ ದಿನಗಣನೆ ಆರಂಭವಾಗಿದೆ

ವೇಗದ ಪ್ರಯೋಗಗಳು ಹೊಸ ರೈಲು ಸಾರ್ವಜನಿಕ ಸೇವೆಗೆ ಅನುಮೋದನೆ ಪಡೆಯುವ ಮೊದಲು ಅದರ ಗರಿಷ್ಠ ಸುರಕ್ಷಿತ ಕಾರ್ಯಾಚರಣೆಯ ವೇಗವನ್ನು ನಿರ್ಧರಿಸುತ್ತವೆ. ತುರ್ತು ಬ್ರೇಕಿಂಗ್ ದೂರ (ಇಬಿಡಿ) ಪರೀಕ್ಷೆಯು ರೈಲನ್ನು ಸುರಕ್ಷಿತವಾಗಿ ನಿಲ್ಲಿಸುವ ಸಾಮರ್ಥ್ಯವನ್ನು ಅಳೆಯುತ್ತದೆ. ರೈಲಿನ ವಿನ್ಯಾಸ ವೇಗವನ್ನು ಗಂಟೆಗೆ 90 ಕಿ.ಮೀ. ವೇಗದಲ್ಲಿ ನಡೆಸಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಮೂರು ತಿಂಗಳು ತಡ: ಗುಲಾಬಿ ಮಾರ್ಗದಲ್ಲಿ ಮೆಟ್ರೊ ಸಂಚಾರ ಗಡುವು ಹಲವು ಬಾರಿ ವಿಸ್ತರಣೆಗೊಂಡಿದ್ದು, ಮೇ ಅಂತ್ಯದಲ್ಲಿ ಆರಂಭವಾಗಲಿದೆ ಎಂದು ಆರು ತಿಂಗಳ ಹಿಂದೆ ಅಧಿಕಾರಿಗಳು, ಜನಪ್ರತಿನಿಧಿಗಳು ತಿಳಿಸಿದ್ದರು. ಇದೀಗ ಒಂದೊಂದೇ ಪರಿಶೀಲನೆ, ಪ್ರಯೋಗ, ಪರೀಕ್ಷೆಗಳು ಆರಂಭವಾಗಿದ್ದು, ಅಧಿಕೃತ ವಾಣಿಜ್ಯ ಸಂಚಾರಕ್ಕೆ ಇನ್ನೂ ಮೂರು ತಿಂಗಳು ಬೇಕು ಎಂದು ಬಿಎಂಆರ್‌ಸಿಎಲ್ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ಮೇ ಅಂತ್ಯದ ವೇಳೆಗೆ ಸಿಗ್ನಲಿಂಗ್ ಮತ್ತು ರೈಲು ನಿಯಂತ್ರಣ ವ್ಯವಸ್ಥೆಗಳಿಗಾಗಿ ಸ್ವತಂತ್ರ ಸುರಕ್ಷತಾ ಮೌಲ್ಯಮಾಪನ (ಐಎಸ್‌ಎ) ನಡೆಸಲು ಬಿಎಂಆರ್‌ಸಿಎಲ್ ಸಿದ್ಧತೆ ನಡೆಸುತ್ತಿದೆ. ಈಗಾಗಲೇ ಈ ಮಾರ್ಗಕ್ಕೆ ಐದು ಪ್ರೊಟೊಟೈಪ್ ರೈಲುಗಳ ಪೂರೈಕೆಯಾಗಿದೆ. ಸದ್ಯದಲ್ಲಿಯೇ ಆರನೇ ರೈಲನ್ನು ಪಿಎಸ್‌ಯು ಬಿಇಎಂಎಲ್ ಪೂರೈಕೆ ಮಾಡಲಿದೆ ಎಂದು ಹೇಳಿದ್ದಾರೆ.

ಎತ್ತರಿಸಿದ ನಿಲ್ದಾಣಗಳು

ಗುಲಾಬಿ ಮಾರ್ಗದಲ್ಲಿ ಕಾಳೇನ ಅಗ್ರಹಾರ, ಹುಳಿಮಾವು, ಐಐಎಂಬಿ, ಜೆ.ಪಿ.ನಗರ ನಾಲ್ಕನೇ ಹಂತ, ಜಯದೇವ ಆಸ್ಪತ್ರೆ, ಸ್ವಾಗ್ ರೋಡ್ ಕ್ರಾಸ್ (ತಾವರೆಕೆರೆ) ನಿಲ್ದಾಣಗಳಿವೆ. ಜಯದೇವ ಆಸ್ಪತ್ರೆ ನಿಲ್ದಾಣವು ಹಳದಿ ಮಾರ್ಗದೊಂದಿಗೆ ಇಂಟರ್‌ಚೇಂಜ್ ನಿಲ್ದಾಣವಾಗಲಿದೆ.

ಅಂಕಿ ಅಂಶಗಳು

- 21.26 ಕಿ.ಮೀ. — ನಮ್ಮ ಮೆಟ್ರೊ ಗುಲಾಬಿ ಮಾರ್ಗದ ಉದ್ದ
- 18 — ಒಟ್ಟು ನಿಲ್ದಾಣಗಳು
- 13.76 — ಸುರಂಗ ಮಾರ್ಗ
- ₹12,000 ಕೋಟಿ — ಯೋಜನೆಯ ಒಟ್ಟು ವೆಚ್ಚ
- ₹5,000 ಕೋಟಿ — ಸುರಂಗ ಮಾರ್ಗ ನಿರ್ಮಾಣದ ವೆಚ್ಚ

ಆಗಸ್ಟ್ 15ರ ಒಳಗೆ ಸಂಚಾರ ಆರಂಭ

ಆರ್‌ಡಿಎಸ್‌ಒ ವರದಿ ಸಲ್ಲಿಕೆಯಾದ ಮೇಲೆ ಅಂತಿಮ ಸುರಕ್ಷತಾ ಪ್ರಮಾಣ ಪತ್ರ ಸಿಗಲಿದೆ. ಆ ನಂತರ ಉಳಿದ ಕೆಲಸಗಳು ನಡೆಯಲಿವೆ. ಆಗಸ್ಟ್ 15ರ ಒಳಗೆ ಎತ್ತರಿಸಿದ ಮಾರ್ಗದಲ್ಲಿ ಮೆಟ್ರೊ ಸಂಚಾರ ಆರಂಭಗೊಳ್ಳುವ ನಿರೀಕ್ಷೆ ಇದೆ. ಡೇರಿ ಸರ್ಕಲ್‌ನಿಂದ ನಾಗವಾರದವರೆಗಿನ ಸುರಂಗ ಮಾರ್ಗದಲ್ಲಿ ಈ ವರ್ಷ ಡಿಸೆಂಬರ್ ಒಳಗೆ ಸಂಚಾರ ಆರಂಭಿಸುವ ಗುರಿ ಇಟ್ಟುಕೊಳ್ಳಲಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಮಾಹಿತಿ ನೀಡಿದರು.



ನಗರದಲ್ಲಿ ಗುರುವಾರ ರಾಷ್ಟ್ರೋತ್ಥಾನ ಪರಿಷತ್ ಆಯೋಜಿಸಿದ್ದ ಸಮಾರಂಭದಲ್ಲಿ ಸುತ್ತೂರಿನ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ 'ಅವಿಶ್ರಾಂತ ಧ್ಯೇಯಜೀವಿ ಮೈ.ಚ.ಜಯದೇವ: ಬದುಕು ನೆನಪು' ಪುಸ್ತಕ ಜನಾರ್ಪಣೆಗೊಳಿಸಿದರು. ಬಾಬು ಕೃಷ್ಣಮೂರ್ತಿ, ದತ್ತಾತ್ರೇಯ ಹೊಸಬಾಳೆ, ಎಂ.ಪಿ. ಕುಮಾರ್, ಬೇಳೂರು ಸುದರ್ಶನ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

'ಸಾರ್ವಜನಿಕ ಜೀವನದಲ್ಲಿ ಮಾದರಿಯಾಗಿದ್ದ ಜಯದೇವ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಾರ್ವಜನಿಕ ಜೀವನದಲ್ಲಿ ಇದ್ದರೂ ತನಗಾಗಿ ಏನನ್ನೂ ಬಯಸದ ಮೈ.ಚ. ಜಯದೇವ ಅವರ ಕುರಿತ ಕೃತಿಯು ಸ್ತುತಿಗಿಂತ ಸಮಾಜಕ್ಕಾಗಿ ದುಡಿದ ಸಂಗತಿಗಳನ್ನು ಕಟ್ಟಿಕೊಟ್ಟಿದೆ' ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸರ ಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಗುರುವಾರ ಹೇಳಿದರು.

ರಾಷ್ಟ್ರೋತ್ಥಾನ ಪರಿಷತ್ ಪುರಭವನದಲ್ಲಿ ಹಮ್ಮಿಕೊಂಡಿದ್ದ ಅವಿಶ್ರಾಂತ ಧ್ಯೇಯ ಜೀವಿ: ಬದುಕು– ನೆನಪು ಕೃತಿಯ ಜನಾರ್ಪಣೆ ಸಮಾರಂಭದಲ್ಲಿ ಪುಸ್ತಕದ ಕುರಿತು ಅವರು ಮಾತನಾಡಿದರು.

'ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಚಾರಕರಾಗಿ ನಿರಂತರವಾಗಿ ದುಡಿಯುತ್ತಲೇ ಹಲವಾರು ಸಂಘ ಸಂಸ್ಥೆಗಳನ್ನು ಜಯದೇವ ಬೆಳೆಸಿದರು. ತ್ಯಾಗದಿಂದಲೇ ಮನುಷ್ಯ ಶಾಶ್ವತ ಆಗುತ್ತಾನೆ ಎನ್ನುವುದಕ್ಕೆ ಇವರ ಬದುಕೇ ಮಾದರಿ. ರಾಜಕೀಯ ಕ್ಷೇತ್ರದಲ್ಲಿ ಹಲವರ ಬೆಳವಣಿಗೆಗೆ ಪ್ರೋತ್ಸಾಹ ನೀಡಿದರೂ ಯಾವುದೇ ಹುದ್ದೆಯ ಹಿಂದೆ ಹೋಗಲಿಲ್ಲ. ಸನ್ಮಾನಗಳಿಂದಲೂ ದೂರವೇ ಉಳಿಯುತ್ತಿದ್ದರು. ಈ ಪುಸ್ತಕವು ಜಯದೇವ ಅವರ ಜೀವನ ಚರಿತ್ರೆ ಆಗದೇ ವಿಶಾಲ ವ್ಯಕ್ತಿತ್ವವನ್ನು ತೆರೆದಿಟ್ಟಿದೆ' ಎಂದು ಹೇಳಿದರು.

'ರಾಷ್ಟ್ರೋತ್ಥಾನ ಪರಿಷತ್ತಿನ ಆರಂಭದ ದಿನಗಳಲ್ಲಿ ಅದರ ಜವಾಬ್ದಾರಿ ಹೊತ್ತು, ಅದನ್ನು ಸಾಹಿತ್ಯ ಮತ್ತು ಸೇವಾ ಕ್ಷೇತ್ರದ ಪ್ರಮುಖ ಕೇಂದ್ರವನ್ನಾಗಿ ಬೆಳೆಸುವಲ್ಲಿ ಜಯದೇವ ಅವರ ಶ್ರಮ ಅಪಾರ. ಅವರು ಕೇವಲ ಕಟ್ಟಡಗಳನ್ನು ಕಟ್ಟಲಿಲ್ಲ, ಬದಲಿಗೆ ಸಂಸ್ಥೆಗಳನ್ನು ಮುನ್ನಡೆಸಬಲ್ಲ ಸಮರ್ಥ ವ್ಯಕ್ತಿಗಳನ್ನು ತಯಾರು ಮಾಡಿದರು. ಸಾರ್ವಜನಿಕ ಜೀವನದಲ್ಲಿ ನಡೆ-ನುಡಿ ಹೇಗಿರಬೇಕು ಎಂಬುದಕ್ಕೆ ಅವರೇ ಒಂದು ಮಾದರಿಯಾಗಿದ್ದರು' ಎಂದರು.

ಪುಸ್ತಕ ಜನಾರ್ಪಣೆ ಮಾಡಿದ ಸುತ್ತೂರು ಕ್ಷೇತ್ರದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, 'ಆರು ದಶಕಗಳಿಗೂ ಹೆಚ್ಚು ಕಾಲ ಸಾರ್ವಜನಿಕ ಬದುಕಿನಲ್ಲಿ ಇದ್ದರೂ ಎಂದೂ ಕಿಂಗ್ ಆಗಲೇ ಇಲ್ಲ. ಕಿಂಗ್ ಮೇಕರ್ ಆಗಿದ್ದರು. ಅಧಿಕಾರ, ಪ್ರಚಾರದ ಹಿಂದೆ ಹೋಗದೇ ರಾಷ್ಟ್ರದ ಪ್ರಗತಿಗೆ ದುಡಿದು ಸಂಸ್ಥೆ, ವ್ಯಕ್ತಿತ್ವ ರೂಪಿಸಿದರು' ಎಂದರು.

'ಮಂಡ್ಯದಲ್ಲಿ ನಡೆಯುತ್ತಿದ್ದ ಸಂಘದ ಚಟುವಟಿಕೆಗಳಿಗೆ ಬಿ.ಎಸ್. ಯಡಿಯೂರಪ್ಪ ಬಾರದೇ ಇದ್ದಾಗ ತಾವೇ ಸೈಕಲ್‌ನಲ್ಲಿ ಬೂಕನಕೆರೆಗೆ ಹೋಗಿ ಅವರನ್ನು ಕರೆ ತಂದಿದ್ದರು. ಅವರನ್ನು ಪೂರ್ಣಾವಧಿ ಕಾರ್ಯಕರ್ತರನ್ನಾಗಿ ಮಾಡುವಲ್ಲಿ ಜಯದೇವ ಪ್ರಮುಖ ಪಾತ್ರ ವಹಿಸಿದ್ದರು' ಎಂದು ನೆನಪಿಸಿಕೊಂಡರು.

ಲೇಖಕರಾದ ಬಾಬು ಕೃಷ್ಣಮೂರ್ತಿ, ಬೇಳೂರು ಸುದರ್ಶನ, ರಾಷ್ಟ್ರೋತ್ಥಾನ ಪರಿಷತ್ ಅಧ್ಯಕ್ಷ ಎಂ.ಪಿ.ಕುಮಾರ್, ಪ್ರಧಾನ ಕಾರ್ಯದರ್ಶಿ ನಾ.ದಿನೇಶ್ ಹೆಗ್ಡೆ ಉಪಸ್ಥಿತರಿದ್ದರು.

ರಾಷ್ಟ್ರೋತ್ಥಾನ ಪರಿಷತ್ ಪರಿಷತ್ ಪ್ರಕಟಿಸಿರುವ ಈ ಪುಸ್ತಕದ ಬೆಲೆ ₹300

ಮಹದಾಯಿ: ಪ್ರಸ್ತಾವ ತೆಗೆದು ಹಾಕಿದ ಕೇಂದ್ರ ಸರ್ಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹದಾಯಿ ಬಂಡೂರಾ ನಾಲಾ ತಿರುವು ಯೋಜನೆಗೆ ಪ್ರಾದೇಶಿಕ ಉನ್ನತಾಧಿಕಾರ ಸಮಿತಿ (ಆರ್‌ಇಸಿ) ಎತ್ತಿದ್ದ ಆಕ್ಷೇಪಗಳಿಗೆ ಕರ್ನಾಟಕ ಸರ್ಕಾರ ನಾಲ್ಕು ತಿಂಗಳು ಕಳೆದರೂ ಉತ್ತರಿಸಿಲ್ಲ. ಹೀಗಾಗಿ ಪ್ರಸ್ತಾವವನ್ನು ಕೇಂದ್ರ ಅರಣ್ಯ ಸಚಿವಾಲಯವು ಡಿ-ಲಿಸ್ಟ್ (ಪಟ್ಟಿಯಿಂದ ತೆಗೆದು ಹಾಕುವುದು) ಮಾಡಿದೆ.

ಯೋಜನೆಗೆ ಪೈಪ್‌ಲೈನ್, ಪಂಪ್‌ಹೌಸ್, ವಿದ್ಯುತ್ ಮಾರ್ಗ ನಿರ್ಮಾಣಕ್ಕಾಗಿ ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನ ನೆರಸೆ, ಮಂತುರ್ಗ ಹಾಗೂ ಬಚೋಲಿ ಗ್ರಾಮಗಳ 71 ಎಕರೆ ಅರಣ್ಯ ಬಳಕೆಗೆ ಅನುಮೋದನೆ ಕೋರಿ ಕರ್ನಾಟಕ ನೀರಾವರಿ ನಿಗಮವು ಕೇಂದ್ರಕ್ಕೆ ಮೂರು ವರ್ಷಗಳ ಪ್ರಸ್ತಾವ ಸಲ್ಲಿಸಿತ್ತು. ಪ್ರಾದೇಶಿಕ ಉನ್ನತಾಧಿಕಾರ ಸಮಿತಿಯು ಕಳೆದ ಒಂದೂವರೆ ವರ್ಷದಲ್ಲಿ ರಾಜ್ಯದಿಂದ ಹತ್ತು ಹಲವು ಸ್ಪಷ್ಟೀಕರಣಗಳನ್ನು ಕೇಳಿತ್ತು. 2025ರ ಡಿಸೆಂಬರ್ 12ರಂದು ಸಭೆ ನಡೆಸಿದ್ದ ಸಮಿತಿಯು ರಾಜ್ಯ ಸರ್ಕಾರದಿಂದ ನಾಲ್ಕು ಸ್ಪಷ್ಟೀಕರಣ ಕೇಳಿತ್ತು.

ಸಮಿತಿಯ ಆಕ್ಷೇಪಣೆಗಳಿಗೆ ಉತ್ತರ ನೀಡುವ ಜತೆಗೆ ಸಮಗ್ರ ವರದಿ ಸಲ್ಲಿಸುವಂತೆ ಅರಣ್ಯ ಇಲಾಖೆಯ ಪಿಸಿಸಿಎಫ್ (ನೋಡಲ್ ಅಧಿಕಾರಿ) ಅವರು ಬೆಳಗಾವಿ ವೃತ್ತದ ಡಿಸಿಎಫ್ ಅವರಿಗೆ ಜನವರಿ 20ರಂದು ನಿರ್ದೇಶನ ನೀಡಿದ್ದರು. ಆದರೆ, ಆ ಬಳಿಕ ಡಿಸಿಎಫ್ ಅವರು ಕೇಂದ್ರಕ್ಕೆ ಯಾವುದೇ ಉತ್ತರ ನೀಡಿಲ್ಲ. ಅಧಿಕಾರಿಗಳ ಧೋರಣೆಗೆ ಪರಿಸರ ಕಾರ್ಯಕರ್ತರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜಟಾಪಟಿಯಿಂದಾಗಿ ಯೋಜನೆಗೆ ಇಲ್ಲಿಯವರೆಗೆ ಅನುಮೋದನೆ ಪಡೆಯಲು ಸಾಧ್ಯವಾಗಿಲ್ಲ. ಯೋಜನೆ ಜಾರಿಗೊಳಿಸುವ ಇಚ್ಛಾಶಕ್ತಿ ಇದ್ದಿದ್ದರೆ ಕೇಂದ್ರದ ಆಕ್ಷೇಪಗಳಿಗೆ ರಾಜ್ಯ ಸರ್ಕಾರ ಕೂಡಲೇ ಉತ್ತರ ನೀಡಬೇಕಿತ್ತು. ಉತ್ತರ ನೀಡದೆ ಅಧಿಕಾರಿಗಳು ಕಾಲಹರಣ ಮಾಡುತ್ತಿದ್ದಾರೆ. ಈ ವಿಷಯದಲ್ಲಿ ಸಿಸಿಎಫ್ ಹಾಗೂ ಡಿಸಿಎಫ್ ಲೋಪ ಎದ್ದು ಕಾಣುತ್ತಿದೆ' ಎಂದು ಪರಿಸರ ಕಾರ್ಯಕರ್ತ ರಾಮ್ ದೂರಿದರು.


ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ಕನಕಪುರ ವೈದ್ಯಕೀಯ ಕಾಲೇಜಿಗೆ ಭೂಮಿಪೂಜೆ

ಕನಕಪುರ: ಬೆಂಗಳೂರು ರಸ್ತೆಯ ರಾಯಸಂದ್ರ ಕೆಎಚ್‌ಬಿ ಬಡಾವಣೆಗೆ ಹೊಂದಿಕೊಂಡಿರುವ 25 ಎಕರೆ ಜಾಗದಲ್ಲಿ ₹450 ಕೋಟಿ ವೆಚ್ಚದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ನಿರ್ಮಾಣಕ್ಕೆ ಗುರುವಾರ ಭೂಮಿ ಪೂಜೆ ನೆರವೇರಿಸಲಾಯಿತು.

ಕನಕಪುರ ತಾಲ್ಲೂಕಿನ ಬಹುದಿನಗಳ ಕನಸಾಗಿದ್ದ ವೈದ್ಯಕೀಯ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿ ಎರಡು ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ. ಆದರೆ, ಮುಂದಿನ ವರ್ಷದಿಂದಲೇ ವೈದ್ಯಕೀಯ ಕಾಲೇಜು ಕಾರ್ಯಾರಂಭ ಮಾಡಲಿದ್ದು, ತಾಲ್ಲೂಕಿನ ಜನರಿಗೆ ವೈದ್ಯಕೀಯ ಸೇವೆ ದೊರೆಯಲಿದೆ ಎಂದು ಬಮುಲ್ ಅಧ್ಯಕ್ಷ ಡಿ.ಕೆ.ಸುರೇಶ್ ಹೇಳಿದರು.

ಗುರುವಾರ ಒಳ್ಳೆಯ ಸಮಯವಾಗಿರುವುದರಿಂದ ಸರಳವಾಗಿ ಭೂಮಿಪೂಜೆ ನೆರವೇರಿಸಿದ್ದೇವೆ. ಮುಂದೆ ಅಧಿಕೃತವಾಗಿ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ವೈದ್ಯಕಿಯ ಸಚಿವರ ಸಮ್ಮುಖದಲ್ಲಿ ಭರ್ಜರಿಯಾಗಿ ಭೂಮಿಪೂಜೆ ನೆರವೇರಿಸುವುದಾಗಿ ಹೇಳಿದರು.



ಕೇರಳಂ ರಾಜ್ಯದ ಮಂಜೇಶ್ವರದ ಯುಡಿಎಫ್ ಶಾಸಕ ಅಶ್ರಫ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗುರುವಾರ ಭೇಟಿ ಮಾಡಿದರು. ವಸತಿ ಸಚಿವ ಜಮೀರ್ ಅಹಮದ್ ಖಾನ್ ಉಪಸ್ಥಿತರಿದ್ದರು

ಹೆಣ್ಣು ಮಕ್ಕಳು ಅರಿಸಿನದ ಕೊಂಬು ಧರಿಸಬೇಕೇ?

ರಾಮನಗರ: 'ಪ್ರಧಾನಿ ಮೋದಿ ಹೇಳಿದ್ದಾರೆಂದು ನಮ್ಮ ಹೆಣ್ಣು ಮಕ್ಕಳು ಚಿನ್ನದ ತಾಳಿ ಬದಲು ಅರಿಸಿನದ ಕೊಂಬು ಧರಿಸಬೇಕೇ? ತನ್ನ ಆಡಳಿತ ವೈಫಲ್ಯ ಮುಚ್ಚಿಕೊಳ್ಳಲು ಮೋದಿ ದೇಶದ ಜನರಿಗೆ ಚಿನ್ನ ಖರೀದಿಸಬೇಡಿ ಎಂಬುದೂ ಸೇರಿದಂತೆ ಮಿತವ್ಯಯದ ಪಾಠ ಹೇಳುತ್ತಿದ್ದಾರೆ' ಎಂದು ಕಾಂಗ್ರೆಸ್ ಉಪಾಧ್ಯಕ್ಷ ವಿ.ಎಸ್. ಉಗ್ರಪ್ಪ ಕಿಡಿಕಾರಿದರು.

'ಮದುವೆ ಸೇರಿದಂತೆ ಇತರ ಸಮಾರಂಭಗಳಿಗೆ ಹೆಣ್ಣು ಮಕ್ಕಳು ಚಿನ್ನ ಖರೀದಿಸುವುದು ಸಾಮಾನ್ಯ. ಆದರೆ, ನಮ್ಮ ಪ್ರಧಾನಿಗೆ ಹೆಣ್ಣು ಮಕ್ಕಳ ಸ್ಥಿತಿಯೇ ಅರ್ಥವಾಗುವುದಿಲ್ಲ ಬಿಡಿ' ಎಂದು ನಗರದ ಚೈತನ್ಯ ಭವನದಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ವ್ಯಂಗ್ಯವಾಡಿದರು.

ಕೋವಿಡ್ ನಿರ್ವಹಣೆಯಲ್ಲೂ ವಿಫಲರಾಗಿದ್ದ ಮೋದಿ, ಆಗ ಜನರಿಗೆ ದೀಪ ಹಚ್ಚಲು ಮತ್ತು ತಟ್ಟೆ ಬಡಿಯಲು ಹೇಳಿ ನಗೆಪಾಟಲಿಗೆ ಈಡಾಗಿದ್ದರು. ಈಗ ಡಾಲರ್ ಎದುರು ರೂಪಾಯಿ ಮೌಲ್ಯ ಸಾರ್ವಕಾಲಿಕ ಕುಸಿತ ಕಂಡಿದೆ. ಚಿನ್ನ ಮತ್ತು ಇಂಧನ ದರ ಗಗನಕ್ಕೇರಿದೆ. 11 ವರ್ಷಕ್ಕೆ ಮುಂಚೆ ₹52 ಲಕ್ಷ ಕೋಟಿ ಇದ್ದ ದೇಶದ ಸಾಲ, ಮೋದಿ ಪ್ರಧಾನಿಯಾದ ಬಳಿಕ ₹216 ಲಕ್ಷ ಕೋಟಿಗೆ ಏರಿಕೆಯಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದ್ದಕ್ಕಿದ್ದಂತೆ ಪ್ರಧಾನಿ ಮಿತವ್ಯಯದ ಸಂದೇಶ ನೀಡಲು ಕಾರಣವೇನು? ಅದಕ್ಕೆ ಮುಂಚೆ ಸಂಸತ್ತಿನಲ್ಲಿ ಈ ಬಗ್ಗೆ ವಿಶೇಷ ಅಧಿವೇಶನ ಕರೆಯಬೇಕಿತ್ತು. ಸರ್ವಪಕ್ಷಗಳ ಜೊತೆ ಚರ್ಚಿಸಬೇಕಿತ್ತು ಎಂದರು.

ನೈಸರ್ಗಿಕ ಕೃಷಿಗೆ ಉತ್ತೇಜನ ಅಗತ್ಯ: ರಾಜ್ಯಪಾಲ

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 60ನೇ ಘಟಿಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಆರ್ಥಿಕತೆಯ ಬೆನ್ನೆಲುಬಾಗಿರುವ ಕೃಷಿ ವಲಯ ಜಿಡಿಪಿಗೆ ಮಹತ್ವದ ಕೊಡುಗೆ ನೀಡುತ್ತಿದೆ. ರಾಸಾಯನಿಕ ಮುಕ್ತ ಪೌಷ್ಟಿಕಾಂಶವುಳ್ಳ ಕೃಷಿ ಉತ್ಪನ್ನಗಳ ಉತ್ಪಾದನೆಗೆ ರೈತರು ಆದ್ಯತೆ ನೀಡಬೇಕು ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಹೇಳಿದರು.

ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿ.ಕೆ.ವಿ.ಕೆ) ಆವರಣದ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 60ನೇ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಆಧುನಿಕ ಕೃಷಿ ಪದ್ಧತಿ ಜತೆಗೆ ಗುಣಮಟ್ಟದ ಉತ್ಪಾದನೆಗೆ ಒತ್ತು ನೀಡಬೇಕು. ರಾಸಾಯನಿಕಗಳ ಬಳಕೆ ಕಡಿಮೆಗೊಳಿಸಿ ಭೂಮಿಯ ಫಲವತ್ತತೆ ವೃದ್ಧಿಸುವ ನಿಟ್ಟಿನಲ್ಲಿ ಗಮನ ಹರಿಸಬೇಕು. ರಾಸಾಯನಿಕ ಗೊಬ್ಬರ, ಕೀಟನಾಶಕಗಳನ್ನು ಅತಿಯಾಗಿ ಬಳಸಿ ಮಣ್ಣು, ನೀರು ಮತ್ತು ಪರಿಸರವನ್ನು ಕಲುಷಿತಗೊಳಿಸಲಾಗಿದೆ. ಇದರಿಂದ ಮಾನವನ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುತ್ತಿದೆ ಎಂದರು.

ನೈಸರ್ಗಿಕ ಕೃಷಿಯನ್ನು ಉತ್ತೇಜಿಸುವ ಅಗತ್ಯ ಹೆಚ್ಚಾಗಿದೆ. ಪ್ರಕೃತಿಯಲ್ಲಿ ಲಭ್ಯವಿರುವ ನೈಸರ್ಗಿಕ ಅಂಶಗಳನ್ನೇ ಕೀಟನಾಶಕ ಹಾಗೂ ಪೋಷಕಾಂಶಗಳಾಗಿ ಬಳಸುವ ಮೂಲಕ ಮಣ್ಣಿನ ಫಲವತ್ತತೆ ಮತ್ತು ಉತ್ಪಾದಕತೆ ಹೆಚ್ಚಿಸಬಹುದು. ಜೊತೆಗೆ ಸಾವಯವ ಗೊಬ್ಬರಗಳ ಬಳಕೆಯಿಂದ ಭೂಮಿಯ ಗುಣಮಟ್ಟ ಸುಧಾರಿಸಿ, ಉತ್ಪಾದನಾ ವೆಚ್ಚ ಕಡಿಮೆ ಆಗುವುದರೊಂದಿಗೆ ರೈತರ ಆದಾಯವೂ ಹೆಚ್ಚಾಗುತ್ತದೆ ಎಂದರು.

ವಿಕಸಿತ ಭಾರತ- 2047 ಸಂಕಲ್ಪ ಸಾಕಾರಗೊಳಿಸಬೇಕು. ಗುಣಮಟ್ಟದ ಉತ್ಪಾದನೆಯ ಜತೆಗೆ ಡ್ರೋನ್ ಬಳಕೆ, ಕೃತಕ ಬುದ್ಧಿಮತ್ತೆ, ಡಿಜಿಟಲ್ ಮಾರುಕಟ್ಟೆ ಮಾದರಿಗಳನ್ನು ವ್ಯಾಪಕವಾಗಿ ಬಳಸಬೇಕಿದೆ. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ರೈತರಿಗೆ ನೇರವಾಗಿ ಮಾರುಕಟ್ಟೆ ಸಂಪರ್ಕ ಒದಗಿಸುವ ಅಗತ್ಯವಿದೆ ಎಂದರು.

ಕೃಷಿ ಸಚಿವ ಎನ್. ಚಲುವರಾಯ ಸ್ವಾಮಿ ಮಾತನಾಡಿ, ಕೃಷಿ ವಿ.ವಿಗಳ ವಿಜ್ಞಾನಿಗಳು ಸಂಶೋಧನೆಗೆ ಒತ್ತು ನೀಡಿ ಬೆಳೆಗಳಲ್ಲಿ ಹೆಚ್ಚಿನ ಸಂಖ್ಯೆಯ ನೂತನ ತಳಿಗಳು ಹಾಗೂ ತಂತ್ರಜ್ಞಾನಗಳನ್ನು ಬಿಡುಗಡೆಗೊಳಿಸಿ ರೈತರ ಸಬಲೀಕರಣಕ್ಕೆ ಸಹಕರಿಸಬೇಕು ಎಂದರು.

ಕುಲಪತಿಗಳು ವಿಶ್ವವಿದ್ಯಾಲಯ ವ್ಯಾಪ್ತಿಯಲ್ಲಿ ಬರುವ ಜಿಲ್ಲೆಗಳಲ್ಲಿನ ಸ್ಥಳೀಯ ಹಾಗೂ ವಿಶೇಷ ಬೆಳೆಯ ತಳಿಗಳನ್ನು ಗುರುತಿಸಿ ಆಯಾ ಭೌಗೋಳಿಕ ಪ್ರದೇಶಕ್ಕೆ ಜಿಐ ಟ್ಯಾಗ್ ಪಡೆಯಲು ವಿಜ್ಞಾನಿಗಳ ತಂಡ ರಚಿಸಿ ಕಾರ್ಯೋನ್ಮುಖರಾಗಬೇಕು. ಈ ಮೂಲಕ ರೈತರ ಆದಾಯ ಹೆಚ್ಚಿಸಿ ತಳಿ ಸಂರಕ್ಷಣಾ ಕ್ರಮ ಜರುಗಿಸುವಂತೆ ಸಲಹೆ ನೀಡಿದರು.

ಕುಲಪತಿ ಎಸ್.ವಿ. ಸುರೇಶ್, ಕುಲಸಚಿವ ಡಾ.ಕೆ. ಮಧುಸೂಧನ್, ವಿಶ್ವವಿದ್ಯಾಲಯ ಸ್ಥಾಪನಾ ಮಂಡಳಿ ಸದಸ್ಯರು, ಶೈಕ್ಷಣಿಕ ಮಂಡಳಿ ಸದಸ್ಯರು ಇದ್ದರು.



ಘಟಿಕೋತ್ಸವದಲ್ಲಿ (ಕುಳಿತವರು ಎಡದಿಂದ) ಜಿ.ವಿ.ಕೆ.ನಾಯ್ಡು, ಎಚ್.ಕೆ. ಶ್ರೀಕಂಠ ಮತ್ತು ಟಿ.ಎಂ.ಅರವಿಂದ್ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ಎನ್. ಚಲುವರಾಯಸ್ವಾಮಿ, ಥಾವರಚಂದ್ ಗೆಹಲೋತ್, ಎಲ್.ಎಸ್. ಶಶಿಧರ ಮತ್ತು ಎಸ್.ವಿ.ಸುರೇಶ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

55 ವಿದ್ಯಾರ್ಥಿಗಳಿಗೆ ಚಿನ್ನದ ಪದಕ

2024-25ರಲ್ಲಿ ತೇರ್ಗಡೆಯಾದ ಒಟ್ಟು 1,115 ವಿದ್ಯಾರ್ಥಿಗಳಿಗೆ ಸ್ನಾತಕ, ಸ್ನಾತಕೋತ್ತರ ವಿಷಯಗಳಲ್ಲಿ ಪದವಿ ಪ್ರದಾನ ಮಾಡಲಾಯಿತು.

ಈ ಪೈಕಿ 747 ಮಂದಿ ಸ್ನಾತಕ, 260 ಸ್ನಾತಕೋತ್ತರ, 108 ಮಂದಿ ಪಿಎಚ್.ಡಿ ಪದವಿ ಪಡೆದರು. ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾದ 55 ವಿದ್ಯಾರ್ಥಿಗಳಿಗೆ 140 ಚಿನ್ನದ ಪದಕಗಳನ್ನು ಪ್ರದಾನ ಮಾಡಲಾಯಿತು.

ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡಿದ ಜಿ.ವಿ.ಕೆ. ನಾಯ್ಡು, ಶ್ರೀಕಂಠ, ಅರವಿಂದ ಟಿ.ಎಂ. ಅವರಿಗೆ ಗೌರವ ಡಾಕ್ಟರೇಟ್ ಅನ್ನು ರಾಜ್ಯಪಾಲರು ಪ್ರದಾನ ಮಾಡಿದರು.

ಕ್ವಾಂಟಮ್ ತಂತ್ರಜ್ಞಾನ, ಎ.ಐ, ಇತರ ತಂತ್ರಜ್ಞಾನಗಳ ಬಳಕೆ ಜತೆಗೆ ಸಾಂಪ್ರದಾಯಿಕ ಕೃಷಿ ಪದ್ಧತಿಗಳನ್ನು ಮರುಶೋಧಿಸಿ ಭವಿಷ್ಯದ ಕೃಷಿಯನ್ನು ಇನ್ನಷ್ಟು ಸುಸ್ಥಿರಗೊಳಿಸಬೇಕಿದೆ

ಎಲ್.ಎಸ್. ಶಶಿಧರ, ರಾಷ್ಟ್ರೀಯ ಜೀವ ವಿಜ್ಞಾನ ಕೇಂದ್ರದ ನಿರ್ದೇಶಕ

ಟೆಂಪೊ ಚಾಲಕನ ಮಗನಿಗೆ 15 ಚಿನ್ನ

ಟೆಂಪೊ ಚಾಲಕರೊಬ್ಬರ ಮಗ 15 ಚಿನ್ನದ ಪದಕ ಪಡೆದು ಘಟಿಕೋತ್ಸವದಲ್ಲಿ ಗಮನ ಸೆಳೆದರು. ಬಿ.ಎಸ್‌ಸಿ (ಆನರ್ಸ್) ಕೃಷಿಯಲ್ಲಿ ಶೇ 91.02 ಅಂಕ ಪಡೆದ ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ಕೆ.ಈ. ಪ್ರೇಮ್ ಕುಮಾರ್ ಈ ಸಾಧನೆ ಮಾಡಿದವರು.

ತಂದೆ ಈಶ್ವರ ರಾವ್ ಟೆಂಪೊ ಚಾಲಕ ಆಗಿದ್ದರೆ, ತಾಯಿ ಗೃಹಿಣಿ. ಇಬ್ಬರೂ ಮಗನ ಸಾಧನೆಯನ್ನು ಕಣ್ತುಂಬಿಕೊಂಡರು. ಪ್ರಸ್ತುತ ದೆಹಲಿಯ ಇಂಡಿಯನ್ ಅಗ್ರಿಕಲ್ಚರಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನಲ್ಲಿ ಸೀಡ್ಸ್ ಸೈನ್ಸ್ ಮತ್ತು ಟೆಕ್ನಾಲಜಿ ವಿಭಾಗದಲ್ಲಿ ಎಂಎಸ್‌ಸಿ ಓದುತ್ತಿದ್ದಾರೆ.

'ಸತತ ಪ್ರಯತ್ನ ಹಾಗೂ ಪಾಲಕರ, ಉಪನ್ಯಾಸಕರ ಸಹಕಾರದಿಂದ ಈ ಸಾಧನೆ ಮಾಡಲು ಸಾಧ್ಯವಾಗಿದೆ. ಭವಿಷ್ಯದಲ್ಲಿ ರೈತ ಸಮುದಾಯಕ್ಕೆ ಸಹಾಯವಾಗುವ ಸಂಶೋಧನೆಗಳನ್ನು ನಡೆಸುವ ಗುರಿ ಇದೆ. ಅಪ್ಪ, ಅಮ್ಮ ನನ್ನ ಮೇಲಿಟ್ಟ ನಂಬಿಕೆ ಉಳಿಸಿದ್ದೇನೆ' ಎಂದು ಹರ್ಷ ವ್ಯಕ್ತಪಡಿಸಿದರು.

ಕೃಷಿ ಕಂಪನಿಗಳಲ್ಲಿ ಆಸಕ್ತಿ: ವಿರಾಜಪೇಟೆ ತಾಲ್ಲೂಕಿನ ಕೃಷಿಕ ದಂಪತಿ ಪಿ.ವೈ.ಅಬ್ದುಲ್ ಮತ್ತು ಸರೀನಾ ಅವರ ಪುತ್ರಿ ಪಿ.ಆರ್. ಫಾತಿಮಾ ತಸ್ಲೀಮಾ ಅವರು ಬಿ.ಎಸ್‌ಸಿ (ಆನರ್ಸ್) ಕೃಷಿ ವ್ಯವಹಾರ ನಿರ್ವಹಣೆಯಲ್ಲಿ 11 ಚಿನ್ನದ ಪದಕ ಪಡೆದಿದ್ದಾರೆ.

'ಪೋಷಕರು ಮತ್ತು ಉಪನ್ಯಾಸಕರ ಸಹಕಾರವಿಲ್ಲದಿದ್ದರೆ ಈ ಸಾಧನೆ ಮಾಡಲು ಆಗುತ್ತಿರಲಿಲ್ಲ. ತಂದೆ ಕೃಷಿಕರಾದ ಕಾರಣ ಕೃಷಿ ಕ್ಷೇತ್ರದಲ್ಲಿ ಆಸಕ್ತಿ ಬಂತು. ಎಂಬಿಎ ಓದುತ್ತಿದ್ದೇನೆ. ಮುಂದೆ ಕೃಷಿ ಸಂಬಂಧಿತ ಕಂಪನಿಯಲ್ಲಿ ಕೆಲಸ ಮಾಡುವ ಆಸಕ್ತಿ ಇದೆ' ಎಂದು ಫಾತಿಮಾ ಹೇಳಿದರು.



ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 60ನೇ ಘಟಿಕೋತ್ಸವದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳಾದ ಆರ್. ಕೃಷ್ಣ ಪ್ರಿಯ, ಪಿ. ಆರ್. ಫಾತಿಮಾ ತಸ್ಲೀಮಾ, ಕೆ. ಈ. ಪ್ರೇಮ್ ಕುಮಾರ್, ಜಿ. ಜ್ಯೋತಿ ಮತ್ತು ಟಿ. ಕೆ. ಸ್ಫೂರ್ತಿ ಅವರು ಸಂಭ್ರಮಿಸಿದರು. ಪ್ರಜಾವಾಣಿ ಚಿತ್ರ



ರೇವಾ ವಿಶ್ವವಿದ್ಯಾಲಯದಲ್ಲಿ ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಗೌರವ್ ಯಾದವ್, ಪಿ.ಶ್ಯಾಮರಾಜು, ಎಂ.ಧನಂಜಯ, ಶುಭಾ.ಎ ಇದ್ದರು.

ಭವಿಷ್ಯದ ಉದ್ಯಮಗಳಿಗೆ ಸಿದ್ಧಗೊಳಿಸುವತ್ತ ರೇವಾ ಚಿತ್ತ

ಯಲಹಂಕ: ಭವಿಷ್ಯದ ಉದ್ಯಮಗಳ ಅಗತ್ಯಗಳಿಗೆ ಅನುಗುಣವಾಗಿ ಕೌಶಲಯುತ ಹಾಗೂ ಬಹುಶಿಸ್ತೀಯ ವೃತ್ತಿಪರರನ್ನು ರೂಪಿಸಲು ರೇವಾ ವಿಶ್ವವಿದ್ಯಾಲಯ ಹಲವು ನೂತನ ಶೈಕ್ಷಣಿಕ ಉಪಕ್ರಮಗಳನ್ನು ಘೋಷಿಸಿದೆ.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕುಲಾಧಿಪತಿ ಪಿ.ಶ್ಯಾಮರಾಜು, 'ಭಾರತ, ತಾಂತ್ರಿಕ ಹಾಗೂ ಕೈಗಾರಿಕಾ ಪರಿವರ್ತನೆಯ ಮಹತ್ವದ ಹಾದಿಯಲ್ಲಿದೆ. ವಿವಿಧ ಕ್ಷೇತ್ರಗಳಲ್ಲಿ ಪರಿಣತ ಪ್ರತಿಭೆಗಳ ಕೊರತೆ ಮುಂದುವರಿದಿದ್ದು, ಅದನ್ನು ನಾವು ಸವಾಲಾಗಿ ನೋಡದೆ ಅವಕಾಶವಾಗಿ ಪರಿಗಣಿಸಿದ್ದೇವೆ. ಬಹುಶಿಸ್ತೀಯ ಕಲಿಕೆ, ಎ.ಐ ಸಂಯೋಜಿತ ಪಠ್ಯಕ್ರಮ, ಸೆಂಟರ್ಸ್ ಆಫ್ ಎಕ್ಸಲೆನ್ಸ್, ಉದ್ಯಮ ಸಹಯೋಗ ಹಾಗೂ ವಿದ್ಯಾರ್ಥಿ ವೇತನಗಳ ಮೂಲಕ ವಿದ್ಯಾರ್ಥಿಗಳಿಗೆ ನೈಜ ಜಗತ್ತಿನ ಕೌಶಲ ಮತ್ತು ಜಾಗತಿಕ ದೃಷ್ಟಿಕೋನ ನೀಡುವ ವಾತಾವರಣ ನಿರ್ಮಿಸುತ್ತಿದ್ದೇವೆ' ಎಂದು ಹೇಳಿದರು.

ಸೆಮಿಕಂಡಕ್ಟರ್, ಏರೋಸ್ಪೇಸ್, ಎಲೆಕ್ಟ್ರಿಕ್ ಮೊಬಿಲಿಟಿ, ಸ್ವಚ್ಛ ಇಂಧನ, ಆಟೋಮೇಷನ್, ಡಿಜಿಟಲ್ ಮೂಲಸೌಕರ್ಯ ಹಾಗೂ ಅಡ್ವಾನ್ಸ್ಡ್ ಮ್ಯಾನುಫ್ಯಾಕ್ಚರಿಂಗ್ ಕ್ಷೇತ್ರಗಳಲ್ಲಿ ವೇಗವಾಗಿ ಹೆಚ್ಚುತ್ತಿರುವ ಬೇಡಿಕೆಯನ್ನು ಗಮನದಲ್ಲಿಟ್ಟುಕೊಂಡು, ವಿದ್ಯಾರ್ಥಿಗಳನ್ನು ಭವಿಷ್ಯದ ಉದ್ಯಮಗಳಿಗೆ ಸಿದ್ಧಗೊಳಿಸುವತ್ತ ಒತ್ತು ನೀಡುತ್ತಿದೆ ಎಂದರು.

ಕುಲಸಚಿವ ಎಂ.ಧನಂಜಯ ಮಾತನಾಡಿ, ವಿಶ್ವವಿದ್ಯಾಲಯದ ಪ್ರಮುಖ ಉಪಕ್ರಮಗಳಲ್ಲಿ ಒಂದಾಗಿ 'ದಿವ್ಯಶ್ರೀ ಸಹಯೋಗದಲ್ಲಿ ಪ್ರತಿಷ್ಠಿತ ಪರಿಣತಿ ಕೇಂದ್ರಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಇದರಡಿ ಸಿವಿಲ್, ಮೆಕ್ಯಾನಿಕಲ್ ಮತ್ತು ಆರ್ಕಿಟೆಕ್ಚರ್ ವಿಭಾಗದ ವಿದ್ಯಾರ್ಥಿಗಳು ಹಾಗೂ ಸಂಶೋಧಕರು ಒಟ್ಟಾಗಿ ಕಾರ್ಯನಿರ್ವಹಿಸಲಿದ್ದಾರೆ. ಸುಸ್ಥಿರ ಮೂಲಸೌಕರ್ಯ, ಸ್ಮಾರ್ಟ್ ತಂತ್ರಜ್ಞಾನ, ಅರ್ಬನ್ ಇನೋವೇಷನ್ ಹಾಗೂ 3ಡಿ ಪ್ರಿಂಟಿಂಗ್ ಕ್ಷೇತ್ರಗಳಲ್ಲಿ ಸಂಶೋಧನೆ ಮತ್ತು ಪ್ರಾಯೋಗಿಕ ಕಲಿಕೆಗೆ ಅವಕಾಶ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ರೇವಾ ಬಿಸಿನೆಸ್ ಸ್ಕೂಲ್ ಮತ್ತು ಕಾಮರ್ಸ್ ಮ್ಯಾನೇಜ್‌ಮೆಂಟ್ ವಿಭಾಗದ ಡೀನ್ ಶುಭಾ.ಎ, ದಾಖಲಾತಿ ವಿಭಾಗದ ನಿರ್ದೇಶಕ ಗೌರವ್ ಯಾದವ್ ಉಪಸ್ಥಿತರಿದ್ದರು.

ಕಾಡಾನೆ ದಾಳಿ: ಬಾಳೆ ಫಸಲು ನಾಶ

ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಓಂಕಾರ ವಲಯದ ಮಂಚಹಳ್ಳಿಯ ರೈತ ರವಿ ಅವರ ಜಮೀನಿಗೆ ಬುಧವಾರ ತಡ ರಾತ್ರಿ ದಾಳಿ ಮಾಡಿದ ಕಾಡಾನೆಯು ಬಾಳೆ ಫಸಲನ್ನು ನಾಶಪಡಿಸಿದೆ. ಅವರು ಒಂದು ಎಕರೆಯಲ್ಲಿ ಬಾಳೆ ಬೆಳೆದಿದ್ದರು.

ಕಾಡಂಚಿನ ಗ್ರಾಮದಲ್ಲಿ ಕಾಡಾನೆಗಳ ಹಾವಳಿ ಮೀತಿ ಮೀರಿದೆ. ಅರಣ್ಯ ಇಲಾಖೆ ಹಾವಳಿಯನ್ನು ತಡೆಗಟ್ಟಿ ಸೂಕ್ತ ರಕ್ಷಣೆ ನೀಡಬೇಕು. ರೈತನಿಗೆ ಸೂಕ್ತ ಪರಿಹಾರ ನೀಡಬೇಕು' ಎಂದು ರೈತ ಮುಖಂಡ ಮಂಚಹಳ್ಳಿ ಲೋಕೇಶ್ ಆಗ್ರಹಿಸಿದ್ದಾರೆ.

ನಗರದಲ್ಲಿ ಇಂದು

ರವಿ ಅಂಬೋಜಿ ಅವರ 'ಗುಲಾಬಿ ಸೇನೆ' ಪುಸ್ತಕ ಬಿಡುಗಡೆ: ಎಲ್.ಎನ್. ಮುಕುಂದರಾಜ್, ಪುಸ್ತಕದ ಬಗ್ಗೆ ಮಾತು: ಬೇಲೂರು ರಘುನಂದನ್, ಅಧ್ಯಕ್ಷತೆ: ಎಚ್.ಎಲ್. ಪುಷ್ಪ, ಉದ್ಘಾಟನೆ: ಸವಿತಾ, ಅತಿಥಿಗಳು: ಎಂ. ಪ್ರಕಾಶ್‌ಮೂರ್ತಿ, ಬಿ. ನೀಲಮ್ಮ, ಆರ್.ಕೆ.ಸರೋಜಾ, ಕೆ. ಸೋಮಶೇಖರ ಯಾದಗಿರಿ, ಡಿ. ನಾಗಲಕ್ಷ್ಮಿ, ಗಂಗಪ್ಪ ಎ., ಉಪಸ್ಥಿತಿ: ರಾಧಾಕೃಷ್ಣ ಹೆಗಡೆ, 'ಮಾರ್ಗದಾಳು' ನಾಟಕ ಪ್ರದರ್ಶನ, ಆಯೋಜನೆ: ರಂಗಚಂದಿರ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಕಿದ್ವಾಯಿ ಶಸ್ತ್ರಚಿಕಿತ್ಸಾ ಗ್ರಂಥಿ ವಿಜ್ಞಾನ ಶೃಂಗ: ಅತಿಥಿಗಳು: ಡಾ.ಪಿ.ಎಸ್. ಪ್ರಭಾಕರನ್, ಡಾ.ಕೆ.ಎಸ್. ಗೋಪಿನಾಥ್, ಡಾ.ಎಂ. ವಿಜಯಕುಮಾರ್, ಅಧ್ಯಕ್ಷತೆ: ಡಾ. ನವೀನ್ ಟಿ., ಉಪಸ್ಥಿತಿ: ಡಾ. ಶ್ರೀನಿವಾಸ್ ಸಿ., ಡಾ.ಪ್ರಭಾಕರ್ ಬಿ.ವಿ., ಆಯೋಜನೆ ಹಾಗೂ ಸ್ಥಳ: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಡಾ.ಎಚ್.ಎಂ. ಮರಿಗೌಡ ರಸ್ತೆ, ಬೆಳಿಗ್ಗೆ 11

'ನಾದಾಮೃತ' ಗಾಯನ-ವಾದನ-ಸನ್ಮಾನ: ಹಿಂದೂಸ್ತಾನಿ ಗಾಯಕ ನಂದಕುಮಾರ್ ಕುರುಡಿ ಅವರ 75ನೇ ಜನ್ಮದಿನೋತ್ಸವದ ಅಂಗವಾಗಿ, 'ಲಯ ಸಾರ್ವಭೌಮ' ಪ್ರಶಸ್ತಿ: ರವೀಂದ್ರ ಯಾವಗಲ್, ಅಧ್ಯಕ್ಷತೆ: ಸತೀಶ್ ಹಂಪಿಹೊಳಿ, ಅತಿಥಿ: ಜಿ.ಎಸ್. ಹೆಗಡೆ, ಸಂಗೀತ ಕಛೇರಿ: ನಂದಕುಮಾರ್ ಕುರುಡಿ, ಎಂ. ನಾಗೇಶ್, ವ್ಯಾಸಮೂರ್ತಿ ಕಟ್ಟಿ, ತಬಲಾ ವಾದನ: ರವೀಂದ್ರ ಯಾವಗಲ್, ಸಹಕಾರ: ರಂಜನ್ ಕುಮಾರ್ ಬೇವೂರ್, ಆಯೋಜನೆ: ಪಂಡಿತ್ ನಂದಕುಮಾರ್ ಕುರುಡಿ ಅಮೃತ ಮಹೋತ್ಸವ ಸಮಿತಿ, ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರದ 8ನೇ ಬ್ಲಾಕ್, ಸಂಜೆ 5




ರವೀಂದ್ರ ಯಾವಗಲ್

ವಜ್ರ ಆಭರಣಗಳ ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ಜೋಯಾಲುಕ್ಕಾಸ್, ಕೋರಮಂಗಲ, ಸಂಜೆ 5

ಸ್ನೇಹ ಮಿಲನ: ಅತಿಥಿಗಳು: ಸ್ವಾಮಿ ವೀರೇಶಾನಂದ ಸರಸ್ವತಿ, ಬಿ.ವಿ. ನಾಗರಾಜ್, ಗೌರವಾರ್ಪಣೆ: ಎ.ಎನ್. ರಾಮಮೋಹನ ರೆಡ್ಡಿ, ನಾರಾಯಣರಾವ್ ಆರ್. ಮಾನೆ, ಪಿ.ಎನ್. ಸದಾಶಿವ, ಪ್ರಸನ್ನ ಕುಮಾರ್ ಸಿ., ಕೃಷ್ಣಪ್ಪ, ಎಸ್. ವಿದ್ಯಾಶಂಕರ, ಬಿ. ಸುರೇಶ, ನಿರಂಜನ ರಾವ್, ಡಿ.ಎಸ್. ಶ್ರೀವತ್ಸ, ಶಿವದತ್ತ ಎನ್., ಆಯೋಜನೆ: ಬಿಎಚ್‌ಎಸ್ ಹೈಸ್ಕೂಲ್ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ.ರಸ್ತೆ, ಸಂಜೆ 5

ಕನಕದಾಸರ ಸಮಗ್ರ ಸಾಹಿತ್ಯ ಅನುವಾದ ಸಂಪುಟಗಳ 40 ಕೃತಿಗಳ ಬಿಡುಗಡೆ ಮತ್ತು ಕನಕ ಶಿಲ್ಪವನ ಅನಾವರಣ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ ತಂಗಡಗಿ, ಅಧ್ಯಕ್ಷತೆ: ಆರ್. ಮುನಿರತ್ನ, ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ಎಚ್.ಎಂ. ರೇವಣ್ಣ, ಕೃತಿ ಬಗ್ಗೆ ಮಾತು: ಬಂಜಗೆರೆ ಜಯಪ್ರಕಾಶ್, ಉಪಸ್ಥಿತಿ: ಜೆ. ಮಂಜುನಾಥ್, ಬಿ.ಎಸ್. ಮಂಜುನಾಥಸ್ವಾಮಿ, ಕಾ.ತ.ಚಿಕ್ಕಣ್ಣ, ಆಯೋಜನೆ: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 5.30



ಕನಕ ಶಿಲ್ಪವನ

ಭರತನಾಟ್ಯ ಪ್ರದರ್ಶನ: ಐಶಾನಿ ಕಾಮತ್, ಅನಿಕಾ, ಸ್ಥಳ: ಬನಶಂಕರಿ ದೇವಿ ದೇವಸ್ಥಾನ, ಬನಶಂಕರಿ, ಸಂಜೆ 6

'ಮನ ಮಹರ್ಷುಲು' ತೆಲುಗು ಪ್ರವಚನ: ಸಾಮವೇದಂ ಷಣ್ಮುಖ ಶರ್ಮ, ಆಯೋಜನೆ: ಋಷಿಪೀಠಂ ಸತ್ಸಂಗಂ, ಸ್ಥಳ: ನ್ಯೂ ಹೊರೈಜನ್ ಕಾಲೇಜ್ ಆಫ್ ಎಂಜಿನಿಯರಿಂಗ್ ಸಭಾಂಗಣ, ಹೊರವರ್ತುಲ ರಸ್ತೆ, ಮಾರತಹಳ್ಳಿ, ಸಂಜೆ 6

'ಒಳಚರಂಡಿ ಪುರಾಣ' ನಾಟಕ ಪ್ರದರ್ಶನ: ರಚನೆ: ಗೌರೀಶ್ ಜೋಶಿ, ನಿರ್ದೇಶನ: ಅರ್ಚನಾ ಶ್ಯಾಮ್, ಆಯೋಜನೆ: ಅಂತರಂಗ ತಂಡ, ಸ್ಥಳ: ಸೇವಾಸದನ, ಮಲ್ಲೇಶ್ವರ, ಸಂಜೆ 7.15

ಅರಣ್ಯ ಸೇವೆಗೆ ಹತ್ತು ಮಂದಿ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗವು (ಯುಪಿಎಸ್‌ಸಿ) ನಡೆಸಿದ 2025ನೇ ಸಾಲಿನ ಭಾರತೀಯ ಅರಣ್ಯ ಸೇವೆ (ಐಎಫ್‌ಎಸ್) ಪರೀಕ್ಷೆಯಲ್ಲಿ ಚಂದ್ರಾ ಲೇಔಟ್‌ನಲ್ಲಿರುವ ಗ್ರೇಸ್ ಐ.ಎ.ಎಸ್. ಸಂಸ್ಥೆಯಲ್ಲಿ ತರಬೇತಿ ಪಡೆದ 10 ಅಭ್ಯರ್ಥಿಗಳು ರ್‍ಯಾಂಕ್ ಪಡೆದು ಭಾರತೀಯ ಅರಣ್ಯ ಸೇವೆಗೆ ಆಯ್ಕೆಯಾಗಿದ್ದಾರೆ.

ಬೆಳಗಾವಿ ಜಿಲ್ಲೆಯ ಬಸವರಾಜ ಕೆಂಪವಾಡ ಅವರು ಪ್ರಥಮ ರ್‍ಯಾಂಕ್ ಪಡೆದಿದ್ದಾರೆ. ಎ.ಅನೂಪ್ ರೆಡ್ಡಿ 6ನೇ ರ್‍ಯಾಂಕ್, ಎನ್. ದೀಕ್ಷಿತ್ 14ನೇ ರ್‍ಯಾಂಕ್, ಎಚ್.ಎನ್.ಅಶ್ವಥ್ ನಾರಾಯಣ 86ನೇ ರ್‍ಯಾಂಕ್, ಸೌರಭ್ ಕುಮಾರ್ ಪಾಲ್ 110ನೇ ಮತ್ತು ಸಂಜಯ್ ಬಗಲಿ 114ನೇ ರ್‍ಯಾಂಕ್ ಗಳಿಸಿದ್ದಾರೆ.

ಕಠಿಣ ಪರಿಶ್ರಮ ಮತ್ತು ಸತತ ಪ್ರಯತ್ನದ ಮೂಲಕ ಯಶಸ್ಸು ಗಳಿಸಿರುವ ಅಭ್ಯರ್ಥಿಗಳನ್ನು ಗ್ರೇಸ್ ಐ.ಎ.ಎಸ್. ತರಬೇತಿ ಸಂಸ್ಥೆಯ ನಿರ್ದೇಶಕ ನವೀನ್ ಕುಮಾರ್ ಹಾಗೂ ಅಭ್ಯರ್ಥಿಗಳಿಗೆ ಪರೀಕ್ಷಾ ಸಿದ್ಧತೆಯಲ್ಲಿ ಉತ್ತಮ ಮಾರ್ಗದರ್ಶನ ನೀಡಿದ ನುರಿತ ಮಾರ್ಗದರ್ಶಕಿ ಸಂಜು ಸಿಂಗ್ ಚೌಹಾಣ್ ಅಭಿನಂದಿಸಿದ್ದಾರೆ.

ಗ್ರೇಸ್ ಸಂಸ್ಥೆಯ ಅಭ್ಯರ್ಥಿಗಳು

ಸಂಸ್ಥೆಯಲ್ಲಿ ದೆಹಲಿಯ ನುರಿತ ಐ.ಎ.ಎಸ್. ತರಬೇತುದಾರರು ಆಕಾಂಕ್ಷಿಗಳಿಗೆ ತರಬೇತಿ ನೀಡಲಿದ್ದಾರೆ. ಆನ್‌ಲೈನ್ ಮತ್ತು ಆಫ್‌ಲೈನ್ ಎರಡೂ ಮಾದರಿಯಲ್ಲಿ ತರಬೇತಿ ನೀಡಲಾಗುತ್ತದೆ. ತರಬೇತಿಯ ಜೊತೆಗೆ ಉಚಿತ ಅಧ್ಯಯನ ಸಾಮಗ್ರಿ, ನಿಯಮಿತ ಟೆಸ್ಟ್‌ಗಳ ಮೂಲಕ ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸಿದ್ಧಗೊಳಿಸಲಾಗುತ್ತದೆ.

ಐ.ಎ.ಎಸ್ ಮತ್ತು ಕೆ.ಎ.ಎಸ್ ಪರೀಕ್ಷೆಗೆ ಹೇಗೆ ಸಿದ್ಧತೆ ನಡೆಸಬೇಕು ಎಂಬುದರ ಕುರಿತು ಮೇ 24 ರಂದು ಉಚಿತ ಕಾರ್ಯಾಗಾರ ಏರ್ಪಡಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದ ಹಾಗೂ ಮಹಿಳಾ ಅಭ್ಯರ್ಥಿಗಳಿಗೆ ತರಬೇತಿ ಶುಲ್ಕದಲ್ಲಿ ಶೇಕಡ 30ರವರೆಗೆ ವಿನಾಯಿತಿ ನೀಡಲಾಗುತ್ತದೆ. ಆಸಕ್ತರು ಮೊ. 7899678279 ಸಂಪರ್ಕಿಸಬಹುದು ಎಂದು ನವೀನ್ ಕುಮಾರ್ ತಿಳಿಸಿದ್ದಾರೆ.

ನುಡಿನಮನ ಕಾರ್ಯಕ್ರಮ ಇಂದು

ಬೆಂಗಳೂರು: ಅನಾರೋಗ್ಯದಿಂದ ನಿಧನರಾದ ಬೆಸ್ಕಾಂ ಜಾಗೃತದಳದ ಎಸ್.ಪಿ ಲಾವಣ್ಯ ಅವರಿಗೆ ನುಡಿನಮನ ಸಲ್ಲಿಸುವ ಕಾರ್ಯಕ್ರಮವನ್ನು ಮೇ 15ರಂದು ಹಮ್ಮಿಕೊಳ್ಳಲಾಗಿದೆ.

ಸಂಜೆ 7ಕ್ಕೆ ಯಲಹಂಕದ ಹೋಟೆಲ್ ಅಟ್ರೈಡ್‌ನಲ್ಲಿ ಕಾರ್ಯಕ್ರಮ ನಡೆಯಲಿದೆ. ಲಾವಣ್ಯ ಅವರು ಮೇ 2ರಂದು ನಿಧನರಾಗಿದ್ದರು.

'ಚಿಲಿ ಜತೆ ವಾಣಿಜ್ಯ ಬಾಂಧವ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಗತಿಕವಾಗಿ ಪ್ರವರ್ಧಮಾನಕ್ಕೆ ಬರುತ್ತಿರುವ ತಂತ್ರಜ್ಞಾನ, ಶುದ್ಧ ಇಂಧನ ಮತ್ತು ನವೋದ್ಯಮ ಕ್ಷೇತ್ರಗಳಲ್ಲಿ ಕರ್ನಾಟಕದ ಜತೆಗಿನ ವಾಣಿಜ್ಯ ಬಾಂಧವ್ಯ ಇನ್ನಷ್ಟು ಗಟ್ಟಿಗೊಳಿಸಲು ದಕ್ಷಿಣ ಅಮೆರಿಕದ ಚಿಲಿ ಒಲವು ವ್ಯಕ್ತಪಡಿಸಿದೆ.

ಚಿಲಿಯ ವಿದೇಶಾಂಗ ಸಚಿವ ಫ್ರಾನ್ಸಿಸ್ಕೊ ಪೆರೆಜ್ ಮೆಕೆನ್ನಾ ನೇತೃತ್ವದ ಉನ್ನತ ಮಟ್ಟದ ನಿಯೋಗ ಎಲೆಕ್ಟ್ರಾನಿಕ್ಸ್, ಐಟಿ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಅವರನ್ನು ಗುರುವಾರ ಭೇಟಿಯಾಗಿ ಚರ್ಚೆ ನಡೆಸಿತು.

ಸಾಂಪ್ರದಾಯಿಕ ವಲಯಗಳನ್ನು ಮೀರಿ ನಾವೀನ್ಯತೆ ನೇತೃತ್ವದಲ್ಲಿನ ಬೆಳವಣಿಗೆ, ಪ್ರತಿಭಾ ವಿನಿಮಯ ಮತ್ತು ಮಾರುಕಟ್ಟೆ ವಿಸ್ತರಣೆ ಕ್ಷೇತ್ರಗಳಲ್ಲಿ ಪಾಲುದಾರಿಕೆ ಹೆಚ್ಚಿಸುವ ಸಾಧ್ಯತೆಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಿಯಾಂಕ್ ಖರ್ಗೆ, ನವೋದ್ಯಮ ವಿನಿಮಯ, ಮಾರುಕಟ್ಟೆ ವಿಸ್ತರಣೆ ಕಾರ್ಯಕ್ರಮಗಳು, ಸಂಶೋಧನೆ ಹಾಗೂ ಅಭಿವೃದ್ಧಿ ಕೇಂದ್ರಗಳು, ನವೋದ್ಯಮ ಪೋಷಣಾ ಕೇಂದ್ರಗಳು ಸೇರಿ ಜಂಟಿ ನಾವೀನ್ಯತೆ ಕಾರಿಡಾರ್‌ಗಳನ್ನು ನಿರ್ಮಿಸಲು ಚಿಲಿ ಜತೆ ಕೆಲಸ ಮಾಡಲು ಕರ್ನಾಟಕ ಉತ್ಸುಕತೆ ಹೊಂದಿದೆ. ಲ್ಯಾಟಿನ್ ಅಮೆರಿಕಕ್ಕೆ ಪ್ರವೇಶ ದ್ವಾರವಾಗಿರುವ ಚಿಲಿಯು ಕರ್ನಾಟಕದ ನವೋದ್ಯಮಗಳು ಜಾಗತಿಕವಾಗಿ ತಮ್ಮ ವಹಿವಾಟು ವಿಸ್ತರಿಸಲು ಮಹತ್ವದ ಅವಕಾಶ ಒದಗಿಸಲಿದೆ ಎಂದು ಹೇಳಿದರು.

ಫ್ರಾನ್ಸಿಸ್ಕೊ ಪೆರೆಜ್ ಮೆಕೆನ್ನಾ ಮಾತನಾಡಿ, 'ಜ್ಞಾನ ಮತ್ತು ತಂತ್ರಜ್ಞಾನ ಆಧಾರಿತ ಆರ್ಥಿಕತೆಯತ್ತ ವೇಗವಾಗಿ ಸಾಗುವುದನ್ನು ಚಿಲಿ ಮುಂದುವರಿಸುತ್ತಿದೆ. ತಂತ್ರಜ್ಞಾನ ವಿನಿಮಯ, ಪ್ರತಿಭಾ ಸಹಯೋಗ, ನವೋದ್ಯಮ ಮತ್ತಿತರ ಕ್ಷೇತ್ರಗಳಲ್ಲಿ ಕರ್ನಾಟಕದ ಜತೆ ಪಾಲುದಾರಿಕೆ ಮಾಡಿಕೊಳ್ಳಲು ಚಿಲಿ ಉತ್ಸುಕವಾಗಿದೆ' ಎಂದು ಹೇಳಿದರು.

ಮುಂಗಾರಿಗೆ ಸನ್ನದ್ಧ 'ಪ್ರಹರಿ' ಪರೇಡ್

ಸಮನ್ವಯ ಸಭೆಯಲ್ಲಿ ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಮುಂಗಾರು ಸನ್ನದ್ಧತೆಯನ್ನು ಮತ್ತಷ್ಟು ಬಲಪಡಿಸಲು 'ಪ್ರಹರಿ' ವಾಹನಗಳ ಪರೇಡ್ ಆಯೋಜಿಸಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ತಿಳಿಸಿದರು.

ಗುರುವಾರ ನಡೆದ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, 'ಪ್ರಹರಿ ವಾಹನಗಳಲ್ಲಿರುವ ಎಲ್ಲ ಅಗತ್ಯ ಉಪಕರಣಗಳನ್ನು ಸಮಗ್ರವಾಗಿ ಪರಿಶೀಲಿಸಬೇಕು. ಮಳೆ ಸಂಬಂಧಿತ ತುರ್ತು ಪರಿಸ್ಥಿತಿ ಎದುರಿಸಲು ಸಂಪೂರ್ಣ ಕಾರ್ಯ ಸನ್ನದ್ಧವಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು' ಎಂದು ನಿರ್ದೇಶಿಸಿದರು.

ಮರ ಕಟಾವು ಯಂತ್ರೋಪಕರಣಗಳು, ವಾಹನಗಳು, ಹಾಗೂ ಸಂಬಂಧಿತ ತುರ್ತು ಸೇವಾ ಸಾಧನಗಳನ್ನು ಕೂಡ ವಿವರವಾಗಿ ಪರಿಶೀಲಿಸಿ, ಒಂದು ವಾರದೊಳಗಾಗಿ ಸಮಗ್ರ ಸಿದ್ಧತಾ



ರಸ್ತೆಗಳ ಗುಣಮಟ್ಟ ಕಾಪಾಡಲು, ಸಮನ್ವಯದ ಮೂಲಕ ಕಾಮಗಾರಿಗಳನ್ನು ಖಚಿತಪಡಿಸಲು ಪೂರ್ವಾನುಮತಿ ಇಲ್ಲದೆ ರಸ್ತೆ ಕತ್ತರಿಸುವವರ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಲಾಗುವುದು

ಎಂ. ಮಹೇಶ್ವರ ರಾವ್, ಜಿಬಿಎ ಮುಖ್ಯ ಆಯುಕ್ತ

ವರದಿಯನ್ನು ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಪ್ರವಾಹ ಉಂಟಾಗುವ ಮತ್ತು ನೀರು ನಿಲ್ಲುವ ರೈಲ್ವೆ ತಗ್ಗು ಪ್ರದೇಶಗಳಿಗೆ ಸಂಬಂಧಿತ ನಗರ ಪಾಲಿಕೆ ಅಧಿಕಾರಿಗಳು ಹಾಗೂ ರೈಲ್ವೆ ಅಧಿಕಾರಿಗಳು ಭೇಟಿ ನೀಡಿ ಜಂಟಿಯಾಗಿ ಪರಿಶೀಲಿಸಬೇಕು. ಸಮಸ್ಯೆಗಳನ್ನು ಸಮನ್ವಯದಿಂದ ಪರಿಹರಿಸಬೇಕು. ಬಾಕಿ ಉಳಿದಿರುವ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಬೇಕು ಎಂದು ತಿಳಿಸಿದರು.

ನಿಯಂತ್ರಣ ಕೊಠಡಿಗಳನ್ನು ಪರಿಶೀಲಿಸಿ, ಭಾರಿ ಮಳೆ ಹಾಗೂ ಪ್ರವಾಹ ಪರಿಸ್ಥಿತಿಗಳಿಗೆ ಪರಿಣಾಮಕಾರಿಯಾಗಿ ಸ್ಪಂದಿಸಲು ಅಗತ್ಯ ಸೌಲಭ್ಯಗಳು, ತುರ್ತು ವ್ಯವಸ್ಥೆಗಳು ಹಾಗೂ ಸಿಬ್ಬಂದಿ ಸಿದ್ಧವಾಗಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ನಗರದ ಎಲ್ಲ ಪ್ರವಾಹ ಪೀಡಿತ ಪ್ರದೇಶಗಳನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಬೇಕು. ಪ್ರವಾಹ ನಿಯಂತ್ರಣಕ್ಕಾಗಿ ಮುನ್ನೆಚ್ಚರಿಕೆ ಮತ್ತು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

ವಿಶೇಷ ಆಯುಕ್ತರಾದ ಸುಷಮಾ ಗೋಡಬೋಲೆ, ಘನತ್ಯಾಜ್ಯ ನಿರ್ವಹಣಾ ನಿಯಮಿತದ ಸಿಇಒ ಕರೀಗೌಡ, ನಗರ ಪಾಲಿಕೆಗಳ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳು, ರೈಲ್ವೆ, ಜಲಮಂಡಳಿ, ಬಿಡಿಎ ಅಧಿಕಾರಿಗಳು ಉಪಸ್ಥಿತರಿದ್ದರು.

'ಅಪಾಯಕಾರಿ ಮರ: ಅನುಮತಿ ಪಡೆದು ತೆರವು ಮಾಡಿ'

ಬೆಂಗಳೂರು: ನಗರದಲ್ಲಿ ಯಾವುದೇ ಸಂಸ್ಥೆಗಳ ಆವರಣದಲ್ಲಿ ಒಣಗಿರುವ, ಅಪಾಯದ ಸ್ಥಿತಿಯಲ್ಲಿರುವ, ಶಿಥಿಲಾವಸ್ಥೆಯಲ್ಲಿರುವ ಮರಗಳು, ರೆಂಬೆಗಳಿದ್ದರೆ ಅನುಮತಿ ಪಡೆದು ತೆರವು ಮಾಡುವಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸೂಚಿಸಿದೆ.

ಜಿಬಿಎ ವ್ಯಾಪ್ತಿಯಲ್ಲಿರುವ ಸರ್ಕಾರಿ, ಸರ್ಕಾರೇತರ ಸಂಘ ಸಂಸ್ಥೆಗಳು, ಕಾರ್ಖಾನೆಗಳು, ಕೈಗಾರಿಕೆಗಳು, ಖಾಸಗಿ ಕಂಪನಿಗಳ ಆವರಣದಲ್ಲಿರುವ ಇಂಥ ಮರ, ರೆಂಬೆ ಕೊಂಬೆಗಳ ಮೇಲ್ವಿಚಾರಣೆಯು ಆಯಾ ಸಂಸ್ಥೆಗಳದ್ದೇ ಆಗಿರುತ್ತದೆ. ಯಾವುದೇ ಪ್ರಾಣ ಹಾನಿ, ಆಸ್ತಿ–ಪಾಸ್ತಿಗಳ ಹಾನಿಯಾಗುವುದನ್ನು ತಡೆಗಟ್ಟಲು ಅಪಾಯದ ಸ್ಥಿತಿಯಲ್ಲಿರುವ ಹಾಗೂ ಒಣಗಿರುವ ಮರ, ರೆಂಬೆ–ಕೊಂಬೆಗಳ ತೆರವಿಗೆ ಅನುಮತಿ ಕೋರಿ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಬೇಕು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ 5 ನಗರ ಪಾಲಿಕೆ ವ್ಯಾಪ್ತಿಯ ಅರಣ್ಯ ಘಟಕದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ನಮೂನೆ(1)ರಂತೆ ಅರ್ಜಿ ಸಲ್ಲಿಸಬೇಕು ಎಂದು ತಿಳಿಸಲಾಗಿದೆ. ಮಾಹಿತಿಗೆ ಮೊ.ಸಂ. 9480683047, 9945038877, 9900245013 ಸಂಪರ್ಕಿಸಬಹುದು.

'ಅಗತ್ಯವಿದ್ದರೆ ಇನ್ನಷ್ಟು ಖರೀದಿಸಿ'

ನಗರದ ಸ್ವಚ್ಛತೆ ಮತ್ತು ತ್ಯಾಜ್ಯ ನಿರ್ವಹಣೆಯನ್ನು ಮತ್ತಷ್ಟು ಬಲಪಡಿಸಲು ಅಗತ್ಯ ಸಂಖ್ಯೆಯಲ್ಲಿ ಲಿಟ್ಟರ್ ಪಿಕ್ಕರ್‌ಗಳನ್ನು (ಕಸ ಎತ್ತುವ ಯಂತ್ರ) ಖರೀದಿಸುವ ಕುರಿತು ಪರಿಶೀಲನೆ ನಡೆಸಬೇಕು. ರಸ್ತೆ ತಡೆ ಗೋಡೆಗಳ ಸ್ವಚ್ಛತೆ, ಸಮರ್ಪಕ ನಿರ್ವಹಣೆ ಹಾಗೂ ಅಗತ್ಯವಿದ್ದಲ್ಲಿ ಹೊಳೆತ್ತುವಿಕೆ ಕಾರ್ಯ ಕೈಗೊಳ್ಳಬೇಕು. ನಗರದಲ್ಲಿರುವ ಶಿಥಿಲಾವಸ್ಥೆಯ ಕಟ್ಟಡಗಳು ಹಾಗೂ ಅಪಾಯಕಾರಿ ಕಾಂಪೌಂಡ್‌ಗಳನ್ನು ತೆರವುಗೊಳಿಸಬೇಕು ಎಂದು ನಿರ್ದೇಶನ ನೀಡಿದರು.

ಮನೆಗಣತಿ ಪೂರ್ಣಗೊಳಿಸಿದ ಜಿಬಿಎ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಗಣತಿಗೆ ಇನ್ನೂ ಒಂದು ದಿನ ಬಾಕಿ ಇರುವಂತೆ ಗಣತಿ ಕಾರ್ಯವನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರ ಹಾಗೂ ಬೆಂಗಳೂರು ನಗರ ಜಿಲ್ಲಾಡಳಿತ ಮುಗಿಸಿವೆ. ಬೀಗ ಹಾಕಿರುವ ಮನೆಗಳಿಗೆ ಕೊನೇ ದಿನ ಮತ್ತೊಮ್ಮೆ ಭೇಟಿ ನೀಡಿ ಪರಿಶೀಲಿಸಲು ಗಣತಿದಾರರಿಗೆ ಅಧಿಕಾರಿಗಳು ಸೂಚಿಸಿದ್ದಾರೆ.

'ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಲ್ಲಿ ಗಣತಿ ಮಾಡುವಾಗ 46 ಸಾವಿರ ಮನೆಗಳಿಗೆ ಬೀಗ ಹಾಕಿರುವುದು ಕಂಡು ಬಂದಿತ್ತು. ಪದೇ ಪದೇ ಭೇಟಿ ನೀಡಿದ್ದರಿಂದ ಸುಮಾರು 30 ಸಾವಿರ ಮನೆಗಳ ವಿವರ ಸಂಗ್ರಹಿಸಲು ಸಾಧ್ಯವಾಗಿದೆ. ಉಳಿದ 16 ಸಾವಿರ ಮನೆಗಳಲ್ಲಿ ಗುರುವಾರ ಎಷ್ಟು ಮನೆಗಳ ನಿವಾಸಿಗಳ ವಿವರ ಪತ್ತೆಯಾಗಿದೆ ಎಂಬುದನ್ನು ನೋಡಿ, ಉಳಿದ ಮನೆಗಳಿಗೆ ಶುಕ್ರವಾರ ಗಣತಿದಾರರು ಭೇಟಿ ನೀಡಲಿದ್ದಾರೆ' ಎಂದು ಜಿಲ್ಲಾಧಿಕಾರಿ ಜಿ. ಜಗದೀಶ್ ಮಾಹಿತಿ ನೀಡಿದ್ದಾರೆ.

'ಜಿಬಿಎ ವ್ಯಾಪ್ತಿಯಲ್ಲಿ ಗಣತಿ ಕಾರ್ಯವನ್ನು ಮುಗಿಸಿದ್ದೇವೆ. ಬೀಗ ಹಾಕಿರುವ ಮನೆಗಳಿಗೆ ಸಂಬಂಧಿಸಿದಂತೆ ಎಸ್‌ಎಂಎಸ್, ಕರೆಗಳ ಮೂಲಕ ಮಾಹಿತಿ ಸಂಗ್ರಹಿಸಲಾಗುತ್ತಿದೆ' ಎಂದು ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದ್ದಾರೆ.

ಜನಸೇವೆಗಾಗಿ ಸಂಕಲ್ಪ: ಡಿ.ಕೆ.ಮೋಹನ್

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಜನರು ತೋರಿದ ಪ್ರೀತಿ, ವಿಶ್ವಾಸ ಮತ್ತು ಆಶೀರ್ವಾದವು ಮತ್ತಷ್ಟು ಜವಾಬ್ದಾರಿಯೊಂದಿಗೆ ಸಮಾಜಸೇವೆಯ ದಾರಿಯಲ್ಲಿ ನಡೆಯಲು ಪ್ರೇರಣೆಯಾಗಿದೆ. ಜನಸೇವೆಯ ಸಂಕಲ್ಪ ತೊಟ್ಟಿದ್ದೇನೆ' ಎಂದು ಬೆಂಗಳೂರು ಪೂರ್ವ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹಾಗೂ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಕೆ.ಮೋಹನ್ ತಿಳಿಸಿದರು.

ಜನ್ಮದಿನದ ಪ್ರಯುಕ್ತ ದೇವಸಂದ್ರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿದರು.

ಶಿಬಿರದಲ್ಲಿ ಹಲವರು ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ನೂರಾರು ಸ್ವಯಂ ಸೇವಕರು ರಕ್ತದಾನ ಮಾಡಿದರು. ರಾಜ್ಯಸಭೆ ಮಾಜಿ ಸದಸ್ಯ ರಾಜೀವ್ ಗೌಡ, ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ನಲ್ಲೂರಹಳ್ಳಿ ಟಿ.ನಾಗೇಶ್, ಅಗರ ಪ್ರಕಾಶ್, ಡಿ.ಕೆ. ರಮೇಶ್, ಕೊದಂಡಪ್ಪ ಇದ್ದರು.



ಡಿ.ಕೆ.ಮೋಹನ್ ಅವರಿಗೆ ಮುಖಂಡರು ಶುಭಾಶಯ ಕೋರಿದರು

ರೋಬೋಟಿಕ್ ತಂತ್ರಜ್ಞಾನ: 399 ಕಡೆ ರಸ್ತೆ ಅಗೆಯುವುದಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಜಲಮಂಡಳಿ ಅಳವಡಿಸಿಕೊಂಡಿರುವ ರೋಬೋಟಿಕ್ ತಂತ್ರಜ್ಞಾನ ಮೂಲಕ ಆರು ತಿಂಗಳಲ್ಲಿ 32.66 ಕಿ.ಮೀ. ಪರಿಶೀಲನೆ ನಡೆಸಿ 399 ಸ್ಥಳಗಳಲ್ಲಿ ರಸ್ತೆ ಅಗೆಯುವುದನ್ನು ತಪ್ಪಿಸಲಾಗಿದೆ.

ನಗರದ ಸಂಚಾರ ದಟ್ಟಣೆಗೆ ಕಿರಿಕಿರಿ ಆಗದಂತೆ, ವಾಹನ ಸವಾರರಿಗೆ ತೊಂದರೆ ಆಗದಂತೆ ಎಚ್ಚರ ವಹಿಸಿರುವ ಜಲಮಂಡಳಿ, ಕಳೆದ ನವೆಂಬರ್‌ನಲ್ಲಿ ರೋಬೋಟಿಕ್ ತಂತ್ರಜ್ಞಾನ ಬಳಸಿ ಪೈಪ್‌ಲೈನ್, ಒಳಚರಂಡಿ ದೋಷಗಳನ್ನು ಪತ್ತೆಹಚ್ಚುವ ಚಟುವಟಿಕೆ ಆರಂಭಿಸಿತ್ತು. ರೋಬೋಟಿಕ್ ತಪಾಸಣೆ ವೇಳೆ ದೋಷಗಳನ್ನು ಅತ್ಯಂತ ನಿಖರವಾಗಿ ಗುರುತಿಸಿ, ರಸ್ತೆಗಳಿಗೆ ಹೆಚ್ಚು ಹಾನಿಯಾಗದಂತೆ ಕರಾರುವಕ್ಕಾಗಿ ಪರಿಹಾರ ಕಲ್ಪಿಸಲಾಗಿದೆ.

'ಈ ಅವಧಿಯಲ್ಲಿ ಬಂದಿದ್ದ ಒಟ್ಟು 404 ದೂರುಗಳ ಪೈಕಿ 399 ಇತ್ಯರ್ಥಪಡಿಸಲಾಗಿದೆ. ಬಾಕಿ ಉಳಿದಿರುವ ಕೇವಲ ಐದು ದೂರುಗಳನ್ನು ಆದ್ಯತೆ ಮೇರೆಗೆ ಬಗೆಹರಿಸಲಾಗುವುದು. ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸುವ ಜೊತೆಗೆ ಮೂಲ ಸೌಕರ್ಯಗಳಿಗೆ ಧಕ್ಕೆ ಆಗದಂತೆ ಎಚ್ಚರವಹಿಸುವುದು ಜಲಮಂಡಳಿಯ ಬದ್ಧತೆಯಾಗಿದೆ' ಎಂದು ಜಲಮಂಡಳಿ ಅಧ್ಯಕ್ಷ ಡಾ.ರಾಮಪ್ರಸಾತ್ ಮನೋಹರ್ ತಿಳಿಸಿದ್ದಾರೆ.



ನೀರಿನ ಸೋರಿಕೆ ಪತ್ತೆಗೆ ಬಳಸುವ ರೋಬೋಟಿಕ್ ಯಂತ್ರ

ಅಮೆರಿಕ: ಅದಾನಿ ವಿರುದ್ಧದ ಆರೋಪ ಕೈಬಿಡುವ ಸಾಧ್ಯತೆ

ವಾಷಿಂಗ್ಟನ್(ರಾಯಿಟರ್ಸ್): ಭಾರತದ ಕೋಟ್ಯಧೀಶ ಉದ್ಯಮಿ ಗೌತಮ ಅದಾನಿ ಅವರ ವಿರುದ್ಧದ ಭ್ರಷ್ಟಾಚಾರ ಆರೋಪಗಳನ್ನು ಕೈಬಿಡಲು ಅಮೆರಿಕದ ನ್ಯಾಯಾಂಗ ಇಲಾಖೆ ಮುಂದಾಗಿದೆ.



ಗೌತಮ ಅದಾನಿ

'ಅದಾನಿ ವಿರುದ್ಧದ ಆರೋಪಗಳನ್ನು ಕೈಬಿಡುವ ಕುರಿತಂತೆ ನ್ಯಾಯಾಂಗ ಇಲಾಖೆಯು ಈ ವಾರ ಘೋಷಣೆ ಮಾಡಬಹುದು' ಎಂದು ಮೂಲಗಳನ್ನು ಉಲ್ಲೇಖಿಸಿ ಬ್ಲೂಮ್‌ಬರ್ಗ್ ವರದಿ ಮಾಡಿದೆ.

ಅದಾನಿ ಅವರು ರಾಬರ್ಟ್ ಜೆ.ಗಿಯುಫ್ರಾ ಜೂನಿಯರ್ ನೇತೃತ್ವದ ವಕೀಲರ ತಂಡವನ್ನು ಹೊಸದಾಗಿ ನೇಮಕ ಮಾಡಿಕೊಂಡ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. ರಾಬರ್ಟ್ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪರ ವಕೀಲರಲ್ಲಿ ಒಬ್ಬರಾಗಿದ್ದಾರೆ.

ಭಾರತದ ಸರ್ಕಾರಿ ಸ್ವಾಮ್ಯದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸೌರ ವಿದ್ಯುತ್ ಪೂರೈಸುವ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಅಮೆರಿಕದ ಬ್ಯಾಂಕ್ ಹಾಗೂ ಅಂತರರಾಷ್ಟ್ರೀಯ ಸಂಸ್ಥೆಗಳಿಂದ ಅದಾನಿ ಸಮೂಹದ ಅದಾನಿ ಗ್ರೀನ್ ಎನರ್ಜಿ ಲಿ. 2021–2024ರ ಮಧ್ಯೆ 300 ಕೋಟಿ ಡಾಲರ್‌ಗೂ (₹25 ಸಾವಿರ ಕೋಟಿಗೂ) ಹೆಚ್ಚು ಬಂಡವಾಳ ಸಂಗ್ರಹಿಸಿದ್ದು, ಇದರಲ್ಲಿ 25 ಕೋಟಿ ಡಾಲರ್ (₹2,100 ಕೋಟಿ) ಮೊತ್ತವನ್ನು ಭಾರತದ ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡಿದ ಅಥವಾ ನೀಡುವ ಉದ್ದೇಶಕ್ಕೆ ಬಳಸಿಕೊಳ್ಳಲಾಗಿದೆ ಎಂದು ಆರೋಪಿಸಲಾಗಿದೆ.

ನ್ಯೂಯಾರ್ಕ್‌ನ ಪೂರ್ವ ಜಿಲ್ಲೆಯ ಜಿಲ್ಲಾ ನ್ಯಾಯಾಲಯದಲ್ಲಿ ಸಲ್ಲಿಸಲಾದ ಆರೋಪಪಟ್ಟಿಯಲ್ಲಿ ಗೌತಮ್ ಅದಾನಿ ಹಾಗೂ ಇತರರ ಹೆಸರು ಉಲ್ಲೇಖಿಸಲಾಗಿದೆ.

'ಟೌನ್‌ಶಿಪ್: ರೈತರ ದಾರಿ ತಪ್ಪಿಸುತ್ತಿರುವ ದಲ್ಲಾಳಿಗಳು'

ಬಿಡದಿ: ಬಿಡದಿ ಟೌನ್‌ಶಿಪ್ ಯೋಜನೆಗೆ ಸಂಬಂಧಿಸಿದಂತೆ ರೈತರನ್ನು ದಿಕ್ಕು ತಪ್ಪಿಸಲಾಗುತ್ತಿದೆ. ಸರ್ಕಾರ ಅಧಿಸೂಚನೆ ಹೊರಡಿಸಿದ್ದರೂ ಅದು ಸುಳ್ಳು ಎಂದು ಹೇಳಿಕೊಂಡು ಕೆಲವರು ರಿಯಲ್ ಎಸ್ಟೇಟ್ ವಹಿವಾಟು ನಡೆಸಲು ಹುನ್ನಾರ ನಡೆಸುತ್ತಿದ್ದಾರೆ ಎಂದು ಕಾಂಗ್ರೆಸ್‌ನ ಎಚ್.ಸಿ. ರಾಜಣ್ಣ ಆರೋಪಿಸಿದರು.

ಹೊಸೂರಿನಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಚಿವ ಸಂಪುಟದಲ್ಲಿ ಅನುಮೋದನೆ ಪಡೆದ ಯೋಜನೆ ಅನುಷ್ಠಾನ ಅಂತಿಮ ಹಂತದಲ್ಲಿದೆ. ಜಿಲ್ಲಾಧಿಕಾರಿ ಅಂತಿಮ ಅಧಿಸೂಚನೆ ಹೊರಡಿಸಲು ಸಜ್ಜಾಗಿದ್ದಾರೆ. ಈ ನಡುವೆ ರೈತರ ಮುಖವಾಡ ಧರಿಸಿದ ಕೆಲವರು ರೈತರ ಮನೆಗೆ ತೆರಳಿ ಭೂಮಿ ಕೊಡಬೇಡಿ ಎಂದು ಅವರನ್ನು ಒಕ್ಕಲೆಬ್ಬಿಸುವ ಕೆಲಸ ಮಾಡುತ್ತಿದ್ದಾರೆ' ಎಂದು ದೂರಿದರು.

ಔಷಧ ಗುಣಮಟ್ಟದ ಮೇಲೆ ನಿಗಾ

ಔಷಧ ಆಡಳಿತ ಇಲಾಖೆ ಸಿದ್ಧಪಡಿಸಿದ ಪೋರ್ಟಲ್‌ಗೆ ಆರೋಗ್ಯ ಸಚಿವ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಮಾಣಿತ ಗುಣಮಟ್ಟ ಹೊಂದಿರದ ಔಷಧಗಳಿಗೆ ಕಡಿವಾಣ ಹಾಕಲು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯು ಆನ್‌ಲೈನ್ ಆಧಾರಿತ ನಿಗಾ ವ್ಯವಸ್ಥೆ ಜಾರಿ ಮಾಡಿದೆ.

ಗುರುವಾರ ಈ ವ್ಯವಸ್ಥೆಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಚಾಲನೆ ನೀಡಿದರು.

‘ಪೂರೈಕೆಯಾದ ಔಷಧಗಳ ಮೇಲೆ ನಿಯಂತ್ರಣ ಸಾಧಿಸಲು ದೇಶದಲ್ಲೇ ಮೊದಲ ಬಾರಿಗೆ ಇಂತಹ ವ್ಯವಸ್ಥೆ ಪರಿಚಯಿಸಲಾಗಿದೆ. ಇದಕ್ಕಾಗಿ, ಪ್ರತ್ಯೇಕ ಪೋರ್ಟಲ್ ರೂಪಿಸಲಾಗಿದೆ. ಗುಣಮಟ್ಟ ಇರದ ಔಷಧಗಳ ನಿಗದಿತ ಬ್ಯಾಚ್‌ಗಳನ್ನು ಮಾರುಕಟ್ಟೆಯಿಂದ ಕೂಡಲೇ ಹಿಂಪಡೆಯಲು ಇದು ಸಹಕಾರಿಯಾಗಲಿದೆ. ಈ ಹಿಂದೆ ಹೀಗೆ ಮಾಡುವುದು ಕಷ್ಟವಾಗಿತ್ತು’ ಎಂದು ದಿನೇಶ್ ಹೇಳಿದರು.

‘ಪ್ರಮಾಣಿತ ಗುಣಮಟ್ಟ ಇರದ ಔಷಧಗಳನ್ನು ಮಾರುಕಟ್ಟೆಯಿಂದ ಹಿಂಪಡೆಯಲು ಕ್ರಮ ವಹಿಸುವಂತೆ ಕೇಂದ್ರ ಆರೋಗ್ಯ ಸಚಿವರಿಗೆ ಕಳೆದ ವರ್ಷವೇ ಪತ್ರ ಬರೆಯಲಾಗಿತ್ತು. ಅವರು ಕ್ರಮ ಕೈಗೊಂಡಿಲ್ಲದ ಕಾರಣ ನಮ್ಮ ಹಂತದಲ್ಲಿ ಹೊಸ ವ್ಯವಸ್ಥೆ ರೂಪಿಸಿದ್ದೇವೆ. ಕಳೆದ ವರ್ಷ ಔಷಧ ಆಡಳಿತ ಇಲಾಖೆಯಿಂದ ಇ-ಸಹಿ ಸೌಲಭ್ಯ ಜಾರಿಗೆ ತರಲಾಗಿದ್ದು, ಇದರಿಂದ ಪ್ರಮಾಣಿತ ಗುಣಮಟ್ಟ ಹೊಂದಿರದ ಔಷಧಗಳ ನಿಗದಿತ ಬ್ಯಾಚ್‌ನ ಮಾಹಿತಿ ಪಡೆಯಲು ಸಾಧ್ಯವಾಯಿತು. ಪರಿಣಾಮ ₹1.85 ಕೋಟಿ ಮೌಲ್ಯದ ಔಷಧ ಹಿಂಪಡೆಯಲಾಗಿದೆ’ ಎಂದರು.

‘ಪ್ರಮಾಣಿತ ಗುಣಮಟ್ಟ ಹೊಂದಿರದಿದ್ದಲ್ಲಿ ಪೋರ್ಟಲ್‌ನಲ್ಲಿ ಆ ಬಗ್ಗೆ ಸೂಕ್ತ ಕಾರಣ ಸಹಿತ ಮಾಹಿತಿ ನಮೂದಿಸಲಾಗುವುದು. ಆ ಸಂದೇಶ ಎಲ್ಲ ಸಗಟು ವ್ಯಾಪಾರಿಗಳಿಗೆ ರವಾನೆಯಾಗಲಿದ್ದು, ಅವರು ಮುಂದೆ ಅದನ್ನು ಮಾರಾಟ ಮಾಡಲು ಸಾಧ್ಯವಾಗುವುದಿಲ್ಲ’ ಎಂದು ವಿವರಿಸಿದರು.

‘ನಮ್ಮಲ್ಲಿರುವ ಸುಮಾರು 15 ಸಾವಿರ ಔಷಧ ಸಗಟು ವರ್ತಕರ ಮಾಹಿತಿಯನ್ನು ಈ ಪೋರ್ಟಲ್‌ನಲ್ಲಿ ಅಳವಡಿಸಿಕೊಳ್ಳಲಾಗಿದೆ. ರಾಜ್ಯದಲ್ಲಿ 45 ಸಾವಿರ ಚಿಲ್ಲರೆ ಔಷಧ ವರ್ತಕರಿದ್ದು, ಅವರ ಮಾಹಿತಿಯನ್ನು ಪೋರ್ಟಲ್‌ನಲ್ಲಿ ಅಳವಡಿಸಲಾಗುವುದು’ ಎಂದರು.

ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆ ಆಯುಕ್ತ ಕೆ.ಶ್ರೀನಿವಾಸ್ ಉಪಸ್ಥಿತರಿದ್ದರು.



ನಿಯಮ ಬಾಹಿರವಾಗಿ ಮಾದಕ ಔಷಧಗಳ ಮಾರಾಟಕ್ಕೆ ಸಂಬಂಧಿಸಿದಂತೆ ಕಳೆದ ವರ್ಷ 1,309 ಔಷಧ ಮಳಿಗೆಗಳನ್ನು ಪರೀಶಿಲನೆ ನಡೆಸಿ, 457 ಔಷಧ ಮಳಿಗೆಗಳ ಪರವಾನಗಿ ರದ್ದು ಮಾಡಲಾಗಿದೆ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

‘ಮಾದಕ ಔಷಧಗಳ ದುರ್ಬಳಕೆಗೆ ಕಡಿವಾಣ’

‘ನೂತನ ಪೋರ್ಟಲ್ ನೆರವಿನಿಂದ ಮಾದಕ ಔಷಧಗಳ ದುರ್ಬಳಕೆಗೂ ಕಡಿವಾಣ ಹಾಕಲಾಗುವುದು. ಈ ಮೊದಲು ಔಷಧ ವ್ಯಾಪಾರಿಗಳು ವೈದ್ಯರು ನೀಡಿದ ಔಷಧದ ಚೀಟಿ ಅನುಸಾರ ವೈದ್ಯರ ಹಾಗೂ ರೋಗಿಯ ಮಾಹಿತಿ ಮಾತ್ರ ದಾಖಲು ಮಾಡಿಕೊಳ್ಳುತ್ತಿದ್ದರು. ಔಷಧ ಮಳಿಗೆಗಳಿಗೆ ಭೇಟಿ ನೀಡಿ ಪರಿಶೀಲಿಸಿದಾಗ ಮಾತ್ರ ಆ ಔಷಧಗಳ ಮಾರಾಟ ಹಾಗೂ ಪ್ರಮಾಣದ ಮಾಹಿತಿ ಲಭ್ಯವಾಗುತ್ತಿತ್ತು. ನೂತನ ವ್ಯವಸ್ಥೆಯಡಿ ಔಷಧ ವ್ಯಾಪಾರಿಗಳು ರೋಗಿಯ ಹಾಗೂ ವೈದ್ಯರ ಹೆಸರು, ಔಷಧ ಚೀಟಿಯ ವಿವರ ಹಾಗೂ ಪ್ರಮಾಣವನ್ನು ದಾಖಲಿಸಬೇಕು’ ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

‘ಈ ವ್ಯವಸ್ಥೆಯಿಂದ ಯಾವುದಾದರೂ ಒಬ್ಬ ವೈದ್ಯ ಮಾದಕ ಔಷಧಕ್ಕೆ ಶಿಫಾರಸು ಮಾಡುತ್ತಿದ್ದರೆ ಅಥವಾ ರೋಗಿ ಅಧಿಕ ಪ್ರಮಾಣದಲ್ಲಿ ಪಡೆಯುತ್ತಿದ್ದರೆ ಗೊತ್ತಾಗಲಿದೆ. ಇದರಿಂದ ಮುಂದಿನ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತದೆ’ ಎಂದರು.

‘ಜನೌಷಧ ಮಳಿಗೆ ಮೇಲೆ ಕ್ರಮ’

‘ರಾಜ್ಯದಲ್ಲಿ 1,321 ಜನೌಷಧ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಔಷಧ ಗುಣಮಟ್ಟಕ್ಕೆ ಸಂಬಂಧಿಸಿದಂತೆ ನಡೆಸಲಾದ ವಿಶೇಷ ಅಭಿಯಾನದಲ್ಲಿ 230 ಕೇಂದ್ರಗಳಿಂದ ಔಷಧಗಳ ಮಾದರಿ ಸಂಗ್ರಹಿಸಲಾಗಿದ್ದು, 35 ಮಾದರಿಗಳು ಪ್ರಮಾಣಿತ ಗುಣಮಟ್ಟ ಹೊಂದಿರದ ಬಗ್ಗೆ ವರದಿ ಬಂದಿದೆ. ಜನರಿಕ್ ಔಷಧಗಳನ್ನು ಮಾತ್ರ ಮಾರಾಟ ಮಾಡಬೇಕಾದ ಈ ಕೇಂದ್ರಗಳು, ಬ್ರ್ಯಾಂಡೆಡ್ ಔಷಧಗಳನ್ನು ಮಾರಾಟ ಮಾಡುತ್ತಿವೆ. ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು’ ಎಂದು ದಿನೇಶ್ ಗುಂಡೂರಾವ್ ಎಚ್ಚರಿಸಿದರು.

23ಕ್ಕೆ ಭೂಮಿಪೂಜೆ: ಕೆಎಚ್‌ಬಿ ಅಧ್ಯಕ್ಷ ಶಿವಲಿಂಗೇಗೌಡ

ಕ್ರೀಡಾಂಗಣ: 3 ವರ್ಷದಲ್ಲಿ ಪೂರ್ಣ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಇಂಡ್ಲವಾಡಿಯ ಸೂರ್ಯಸಿಟಿ 4ನೇ ಹಂತದಲ್ಲಿ 75 ಎಕರೆಯಲ್ಲಿ ನಿರ್ಮಾಣವಾಗಲಿರುವ ಸುಸಜ್ಜಿತ ಅಂತರರಾಷ್ಟ್ರೀಯ ಕ್ರೀಡಾಂಗಣ ಮುಂದಿನ ಮೂರು ವರ್ಷಗಳಲ್ಲಿ ಪೂರ್ಣಗೊಳ್ಳಲು ಕ್ರಿಯಾಯೋಜನೆ ರೂಪಿಸಲಾಗಿದೆ ಎಂದು ಕರ್ನಾಟಕ ಗೃಹ ಮಂಡಳಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ತಿಳಿಸಿದರು.

ಉದ್ದೇಶಿತ ಕ್ರೀಡಾಂಗಣ ನಿರ್ಮಾಣ ಜಾಗಕ್ಕೆ ಗುರುವಾರ ಭೇಟಿ ನೀಡಿ ಮಾತನಾಡಿದ ಅವರು, ದೇಶದ ಎರಡನೇ ಅತಿ ದೊಡ್ಡ ಕ್ರೀಡಾಂಗಣ ನಿರ್ಮಾಣಕ್ಕೆ ಮೇ 23ರಂದು ಭೂಮಿ ಪೂಜೆ ನಡೆಯಲಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಸಚಿವರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಅಂತರರಾಷ್ಟ್ರೀಯ ಕ್ರೀಡಾಂಗಣವು ಕರ್ನಾಟಕದ ಹೆಮ್ಮೆ. ಈ ಭಾಗದ ಸಮಗ್ರ ಅಭಿವೃದ್ಧಿಗೆ ಕ್ರೀಡಾಂಗಣ ಪೂರಕವಾಗಲಿದೆ. ಮುಂದಿನ ದಿನಗಳಲ್ಲಿ ಕ್ರೀಡಾ ಸಂಕೀರ್ಣ ನಿರ್ಮಿಸಲು ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದರು.

ಕ್ರೀಡಾಂಗಣ ಕಾಮಗಾರಿ ನಡೆಯುವುದಿಲ್ಲ ಎಂದು ವಿರೋಧ ಪಕ್ಷಗಳು ಟೀಕೆ ಮಾಡುತ್ತಿದ್ದವು. ಈ ಎಲ್ಲರಿಗೂ ಸಚಿವ ಸಂಪುಟ ಸಭೆಯ ಅನುಮತಿ ಮತ್ತು ಭೂಮಿಪೂಜೆ ಮೂಲಕ ಸರ್ಕಾರ ದಿಟ್ಟ ಉತ್ತರ ನೀಡಿದೆ ಎಂದು ಶಾಸಕ ಬಿ.ಶಿವಣ್ಣ ಹೇಳಿದರು.

ಉದ್ಘಾಟನಾ ಕಾರ್ಯಕ್ರಮಕ್ಕೆ ವಾಹನ ನಿಲುಗಡೆ, ಪೊಲೀಸ್ ಭದ್ರತೆ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಕಾರ್ಯಕ್ರಮದಲ್ಲಿ ಇಂಡ್ಲವಾಡಿ 4ನೇ ಹಂತದಲ್ಲಿ ನಾಲ್ಕು ಸಾವಿರ ನಿವೇಶನಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲಾಟರಿ ಮೂಲಕ ಹಂಚಿಕೆ ಮಾಡಲಿದ್ದಾರೆ ಎಂದು ತಿಳಿಸಿದರು.

ಕರ್ನಾಟಕ ಗೃಹ ಮಂಡಳಿಯ ಆಯುಕ್ತ ಕೆ.ಎ.ದಯಾನಂದ್, ಎನ್.ಬಿ.ಐ. ನಾಗರಾಜು, ದೊಡ್ಡಹಾಗಡೆ ಹರೀಶ್, ಅಚ್ಯುತರಾಜು, ಅರೇಹಳ್ಳಿ ಮಧು, ಮಹದೇವ್ ಇದ್ದರು.



ಸೂರ್ಯಸಿಟಿ 4ನೇ ಹಂತದಲ್ಲಿ ಉದ್ದೇಶಿತ ಅಂತರರಾಷ್ಟ್ರೀಯ ಕ್ರೀಡಾಂಗಣ ನಿರ್ಮಾಣದ ಜಾಗವನ್ನು ಕೆಎಚ್‌ಬಿ ಅಧ್ಯಕ್ಷ ಕೆ.ಎಂ.ಶಿವಲಿಂಗೇಗೌಡ ಮತ್ತು ಶಾಸಕ ಬಿ.ಶಿವಣ್ಣ ಪರಿಶೀಲನೆ ನಡೆಸಿದರು

ಬೆಂಗಳೂರು- ಮುಂಬೈ ಎಕ್ಸ್‌ಪ್ರೆಸ್ ರೈಲು 17ಕ್ಕೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಮುಂಬೈಯ ಲೋಕಮಾನ್ಯ ತಿಲಕ್ ಟರ್ಮಿನಲ್ ನಡುವೆ ಹೊಸದಾಗಿ ವಾರಕ್ಕೆರಡು ದಿನ ಎಕ್ಸ್‌ಪ್ರೆಸ್ ರೈಲು ಸಂಚಾರಕ್ಕೆ ರೈಲ್ವೆ ಸಚಿವಾಲಯವು ಅನುಮೋದನೆ ನೀಡಿದೆ. ಮೇ 17ರಂದು ಮೊದಲ ರೈಲು ಸಂಚರಿಸಲಿದೆ.

ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳ ನಡುವೆ ಹೆಚ್ಚುತ್ತಿರುವ ಪ್ರಯಾಣಿಕರ ಬೇಡಿಕೆಯನ್ನು ಪೂರೈಸಲು ಹಾಗೂ ಬೆಂಗಳೂರು, ಉತ್ತರ ಕರ್ನಾಟಕದ ಹುಬ್ಬಳ್ಳಿ-ಧಾರವಾಡ, ಬೆಳಗಾವಿ ಮತ್ತು ಮಹಾರಾಷ್ಟ್ರದ ಪುಣೆ, ಮುಂಬೈ ನಗರಗಳ ನಡುವೆ ಸಂಪರ್ಕವನ್ನು ಸುಧಾರಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಉದ್ಘಾಟನಾ ವಿಶೇಷ ರೈಲು ಮೇ 17ರಂದು ಬೆಳಿಗ್ಗೆ 10ಕ್ಕೆ ಎಸ್‌ಎಂವಿಟಿ ನಿಲ್ದಾಣದಿಂದ ಹೊರಡಲಿದೆ. ಮರುದಿನ ಬೆಳಿಗ್ಗೆ 10.30ಕ್ಕೆ ಲೋಕಮಾನ್ಯ ತಿಲಕ್ ಟರ್ಮಿನಲ್ (ಎಲ್‌ಟಿಟಿ) ತಲುಪಲಿದೆ.

ಆನಂತರ ನಿಯಮಿತ ರೈಲು ಸಂಚಾರ ಮೇ 23ಕ್ಕೆ ಎಸ್‌ಎಂವಿಟಿಯಿಂದ ಹಾಗೂ ಮೇ 24ಕ್ಕೆ ಎಲ್‌ಟಿಟಿ ಮುಂಬೈಯಿಂದ ಆರಂಭಗೊಳ್ಳಲಿದೆ. ಶನಿವಾರ, ಮಂಗಳವಾರ ಎಸ್‌ಎಂವಿಟಿ ಬೆಂಗಳೂರಿನಿಂದ ರಾತ್ರಿ 10.35ಕ್ಕೆ ಹೊರಡುವ ರೈಲು ಮರುದಿನ ರಾತ್ರಿ 10.40ಕ್ಕೆ ಎಲ್‌ಟಿಟಿ ತಲುಪಲಿದೆ. ಪ್ರತಿ ಭಾನುವಾರ, ಬುಧವಾರ ರಾತ್ರಿ 21.15ಕ್ಕೆ ಎಲ್‌ಟಿಟಿಯಿಂದ ಹೊರಡಲಿರುವ ರೈಲು ಮರುದಿನ ರಾತ್ರಿ 10.30ಕ್ಕೆ ಎಸ್‌ಎಂವಿಟಿಗೆ ತಲುಪಲಿದೆ.

ಒಟ್ಟು 17 ಎಲ್.ಎಚ್.ಬಿ ಬೋಗಿಗಳನ್ನು ಹೊಂದಿರುವ ಈ ರೈಲುಗಳು ದಾವಣಗೆರೆ, ಎಸ್‌ಎಸ್‌ಎಸ್ ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ಮೀರಜ್ ಜಂಕ್ಷನ್, ಸಾಂಗ್ಲಿ, ಕರಾಡ್, ಸತಾರಾ, ಲೋನಾಂಡ್, ಪುಣೆ, ಲೋನಾವಾಲಾ, ಕರ್ಜತ್, ಕಲ್ಯಾಣ್ ಮತ್ತು ಥಾಣೆ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿರಲಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

ವಿಶೇಷ ಭೂಸ್ವಾಧೀನಾಧಿಕಾರಿಗಳು, ನಂ.14/3, 1ನೇ ಮಹಡಿ, ಅರವಿಂದ ಭವನ, ನೃಪತುಂಗ ರಸ್ತೆ, ಬೆಂಗಳೂರು–1

ಸಂಖ್ಯೆ: ಕೆಐಎಡಿಬಿ/ಕೆಆರ್‌ಐಡಿಇ/ಭೂಸ್ವಾ/155/2026–27 ದಿನಾಂಕ:11.05.2026

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(2) ರನ್ವಯ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ /ಗ್ರಾಮ ಪಂಚಾಯಿತಿಯ ವ್ಯಾಪ್ತಿಯಲ್ಲಿನ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳನ್ನು **“ಬೆಂಗಳೂರು ಉಪ-ನಗರ ರೈಲ್ವೆ ಯೋಜನೆಗಾಗಿ”** ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ 1966 ರ ವಿಧಿ 28(1) ರಡಿ ಪ್ರಾಥಮಿಕ ಅಧಿಸೂಚನೆಯನ್ನು ಸಂಖ್ಯೆ: ಸಿಐ 25 ಎಸ್‌ಪಿಕ್ಯೂ 2026 ದಿನಾಂಕ 18.04.2026ನ್ನು ಸರ್ಕಾರವು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ:23–04–2026 ರಂದು ಪ್ರಕಟಣೆ ಹೊರಡಿಸಿದೆ ಈ ಕೆಳಗೆ ವಿವರಿಸಿರುವ ಸ್ವತ್ತುಗಳ ಸಂಬಂಧಪಟ್ಟ ಖಾತೆದಾರರ/ ಅನುಭವದಾರರುಗಳಿಗೆ/ಹಿತಾಸಕ್ತ ವ್ಯಕ್ತಿಗಳಿಗೆ ವಿಧಿ 28(2) ರನ್ವಯ ನೋಟಿಸ್ ನೀಡಲಾಗಿದೆ. ಆದರೆ, ಕೆಲವರು ನೋಟಿಸ್ ಪಡೆಯಲು ನಿರಾಕರಿಸಿರುವ ಕಾರಣ ಹಾಗೂ ಕೆಲವು ಸ್ವತ್ತಿನ ಮಾಲೀಕರು ವಾಸವಾಗಿರುವ ನಿಖರವಾದ ವಿಳಾಸ ತಿಳಿಯದ ಕಾರಣ ನೋಟೀಸುಗಳನ್ನು ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲ. ಆದ ಕಾರಣ ಸ್ವತ್ತಿನ ಮಾಲೀಕರು/ ಹಿತಾಸಕ್ತಿಯುಳ್ಳವರಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡುವ ಉದ್ದೇಶದಿಂದ **ವಿಶೇಷ ಭೂಸ್ವಾಧೀನಾಧಿಕಾರಿಗಳು, ಕೆಐಎಡಿಬಿ (ಕೆ.ಆರ್.ಐ.ಡಿ.ಇ.,) ನಂ.14/3, 1ನೇ ಮಹಡಿ, ಅರವಿಂದಭವನ, ನೃಪತುಂಗ ರಸ್ತೆ, ಬೆಂಗಳೂರು–1 ರವರ ಕಛೇರಿಯಲ್ಲಿ ದಿನಾಂಕ:25.05.2026 ರಂದು ಬೆಳಿಗ್ಗೆ 11.00 ಗಂಟೆಗೆ** ವಿಚಾರಣೆ ನಿಗದಿಪಡಿಸಿದೆ. ಸದರಿ ದಿನಾಂಕದಂದು ಸ್ವತ್ತಿನ ಮಾಲೀಕರು/ ಹಿತಾಸಕ್ತಿಯುಳ್ಳವರು ಸದರಿ ಭೂಸ್ವಾಧೀನ ಪ್ರಕ್ರಿಯೆಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಕೆಳಕಂಡ ಅಧಿಕಾರಿಗಳ ರೂಬು ರೂಬು ಖುದ್ದಾಗಿ ಅಥವಾ ಅಧಿಕಾರ ಪಡೆದ ತಮ್ಮ ಪ್ರತಿನಿಧಿಗಳ ಮುಖಾಂತರ ವಾಗಲಿ ಹಾಜರಾಗಿ ಆಕ್ಷೇಪಣೆ ಸಲ್ಲಿಸಬಹುದು. ನಂತರದ ಅವಧಿಯಲ್ಲಿ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ವಿಚಾರಣೆಗೆ ಗೈರು ಹಾಜರಾದಲ್ಲಿ ಅಥವಾ ಲಿಖಿತ ಆಕ್ಷೇಪಣೆಯನ್ನು ಸಲ್ಲಿಸದಿದ್ದಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ತಮ್ಮ ಆಕ್ಷೇಪಣೆ ಏನೂ ಇಲ್ಲವೆಂದು ಪರಿಭಾವಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಕಲಂ 28(1) ರಲ್ಲಿ ಅಧಿಸೂಚನೆ ಹೊರಡಿಸಿದ ನಂತರ ಸೂಕ್ತ ಪ್ರಾಧಿಕಾರದ ಅನುಮತಿ ಇಲ್ಲದೆ ಸದರಿ ಸ್ವತ್ತುಗಳನ್ನು ಕ್ರಯ, ಕರಾರು, ಭೋಗ್ಯ, ಲೀಸ್, ಅದಲು–ಬದಲು, ಆಧಾರ, ಹಕ್ಕುಬಿಡುಗಡೆ ವಗೈರೆ ಮಾಡುವಂತಿಲ್ಲ ಮತ್ತು ಸದರಿ ಸ್ವತ್ತುಗಳಲ್ಲಿ ಕಟ್ಟಡ–ನಿರ್ಮಾಣ ಮತ್ತಿತರ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ನಿಷೇಧಿಸಿರುತ್ತದೆ. ಒಂದು ವೇಳೆ ಅಂತಹ ಕಾರ್ಯಗಳನ್ನು ಕೈಗೊಂಡಲ್ಲಿ 1966ರ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಕಾಯ್ದೆ ವಿಧಿ 30 ಅನ್ನು ಓದಿಕೊಳ್ಳುವ ಮೇರೆಗೆ (ಪರಿಹಾರ ಧನ ನಿಗಧಿ ಮಾಡುವಾಗ ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ) ಮತ್ತು ಅಂತಿಮವಾಗಿ ಸ್ವತ್ತುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗುವುದು ಹಾಗೂ ಕಾನೂನಿನನ್ವಯ ಕ್ರಮ ಜರುಗಿಸಲಾಗುವುದು.

ಷೆಡ್ಯೂಲ್ ಸ್ವತ್ತುಗಳು

ಕ್ರ ಸಂ	ಗುರುತಿನ ಸಂಖ್ಯೆ	ಖಾತಾದಾರರ ಹೆಸರು	ಎಲ್‌ಎ/ ಸಿಟಿಎಸ್ ಸರ್ವೆ ನಂಬರ್	ಸ್ವತ್ತಿನ ಒಟ್ಟು ವಿಸ್ತೀರ್ಣ	ಭೂಸ್ವಾಧೀನಕ್ಕೆ ಒಳಪಟ್ಟ ವಿಸ್ತೀರ್ಣ ಚ.ಮೀ.
ವಿಚಾರಣೆ ದಿನಾಂಕ:25–05–2026 ವಿಚಾರಣೆ ಸಮಯ: ಬೆಳಿಗ್ಗೆ 11.00 ರಿಂದ ಗ್ರಾಮ: ಅದ್ದಿಗಾನಹಳ್ಳಿ ಹೋಬಳಿ: ಹೆಸರಘಟ್ಟ ತಾಲ್ಲೂಕು:ಯಲಹಂಕ ಜಿಲ್ಲೆ: ಬೆಂಗಳೂರು ನಗರ					
1	C4/R/45/5-6/ ADDIGANAHALLI/01A	ಸರ್ಕಾರಿ ಖರಾಬು ತೋಪು	24		6.05
2	C4/R/45/5-6/ ADDIGANAHALLI/02A	ಸರ್ಕಾರಿ ಖರಾಬು ತೋಪು	24		21.9
3	C4/R/45/5-6/ ADDIGANAHALLI/03A	ಸರ್ಕಾರಿ ಖರಾಬು ತೋಪು	24		32.96
4	C4/R/45/5-6/ ADDIGANAHALLI/04A	ಸರ್ಕಾರಿ ಖರಾಬು ತೋಪು	24		41.03
5	C4/R/45/5-6/ ADDIGANAHALLI/5A	ಸರ್ಕಾರಿ ಖರಾಬು ತೋಪು	24		47.8
6	C4/R/45/5-6/ ADDIGANAHALLI/06A	ಸರ್ಕಾರಿ ಖರಾಬು ತೋಪು	24	9004.13	47.65
7	C4/R/45/5-6/ ADDIGANAHALLI/07A	ಸರ್ಕಾರಿ ಖರಾಬು ತೋಪು	24		47.49
8	C4/R/45/5-6/ ADDIGANAHALLI/08A	ಸರ್ಕಾರಿ ಖರಾಬು ತೋಪು	24		30.19
		ರಾಮಯ್ಯ ಬಿನ್ ನರಸಿಂಹಯ್ಯ	24		20.30
9	C4/R/45/5-6/ ADDIGANAHALLI/09A	ಕೆಂಪಣ್ಣ ಬಿನ್ ಮುನಿಹನುಮಯ್ಯ	24		50.19
10	C4/R/45/5-6/ ADDIGANAHALLI/10A	ಮುನಿಯಮ್ಮ ಕೋಂ ಮುನಿತಿಮ್ಮಯ್ಯ	24		20.15
11	C4/R/45/6/ADDIGANAHALLI/01A	ಸರ್ಕಾರಿ ಖರಾಬು ತೋಪು	25		13.61
12	C4/R/45/6/ADDIGANAHALLI/02A	ಸರ್ಕಾರಿ ಖರಾಬು ತೋಪು	25	303.51	17.71
13	C4/R/45/6/ADDIGANAHALLI/03A	ಸರ್ಕಾರಿ ಖರಾಬು ತೋಪು	25		45.46
14	C4/R/45/6-7/ADDIGANAHALLI/01A	ಖರಾಬು	26	3540.95	159.78
15	C4/R/45/6/ADDIGANAHALLI/01A	ಖರಾಬು	27		31.94
16	C4/R/45/6/ADDIGANAHALLI/02A	ಖರಾಬು	27		11.68
17	C4/R/45/6/ADDIGANAHALLI/03A	ಖರಾಬು	27		41.34
18	C4/R/45/6ADDIGANAHALLI/04A	ಖರಾಬು	27		23.37
19	C4/R/45/6/ADDIGANAHALLI/05	ಖರಾಬು	27	2529.25	6.3
20	C4/R/45/6/ADDIGANAHALLI/06	ಖರಾಬು	27		17.59
21	C4/R/45/6/ADDIGANAHALLI/07	ಖರಾಬು	27		7.19
22	C4/R/45/6/ADDIGANAHALLI/08	ಖರಾಬು	27		3.32
23	C4/R/45/6/ADDIGANAHALLI/09	ಖರಾಬು	27		641.64
ಗ್ರಾಮ: ರಾಜಾನುಕುಂಟೆ ಹೋಬಳಿ: ಹೆಸರಘಟ್ಟ ತಾಲ್ಲೂಕು: ಯಲಹಂಕ ಜಿಲ್ಲೆ: ಬೆಂಗಳೂರು ನಗರ					
24	C4/R/45/2-5/RAJANAKUNTE/01A	ರತ್ನಮ್ಮ ಕೋಂ ಲೇ॥ ಚೌಡಪ್ಪ	6/1		98.12
25	C4/R/45/2-5/RAJANAKUNTE/02A	ಚಂದ್ರಪ್ಪ.ಕೆ ಬಿನ್ ಕೃಷ್ಣಪ್ಪ	6/1		52.04
26	C4/R/45/2-5/RAJANAKUNTE/03A	ನರಸಪ್ಪ ಬಿನ್ ಬಸಪ್ಪ	6/1		29.83
27	C4/R/45/2-5/RAJANAKUNTE/04A	ಗೋಪಿರಾಜು ಬಿನ್ ಪಿ.ಗಂಗರಾಜು	6/1		14.84
28	C4/R/45/2-5/RAJANAKUNTE/05A	ಕಮಲಮ್ಮ ಕೋಂ ಜಿ.ಸುಬ್ರಾಮುಲು	6/1		8.3
29	C4/R/45/2-5/RAJANAKUNTE/06A	ರಸ್ತೆ	6/1	11482.79	369.59
30	C4/R/45/2-5/RAJANAKUNTE/07A	ಗೋಪಿರಾಜು ಬಿನ್ ಪಿ.ಗಂಗರಾಜು	6/1		103.88
31	C4/R/45/2-5/RAJANAKUNTE/08A	ಹನುಮೇಗೌಡ ಬಿನ್ ಆರ್.ಎಂ.ಹನುಮಂತಪ್ಪ	6/1		8.66
32	C4/R/45/2-5/RAJANAKUNTE/09A	ಕೃಷ್ಣಮೂರ್ತಿ ಎಲ್.ಎಸ್ ಬಿನ್ ಶ್ರೀರಾಮಯ್ಯ	6/1		72.43
33	C4/R/45/2-5/RAJANAKUNTE/10A	ರಸ್ತೆ	6/1		36.07
34	C4/R/45/2-5/RAJANAKUNTE/11A	ಎನ್.ಆರ್.ನಾಗರಾಜು ಬಿನ್ ರಾಮಕೃಷ್ಣಪ್ಪ	6/1		55.75
35	C4/R/45/2-5/RAJANAKUNTE/12A	ಎನ್.ಆರ್.ಮಂಜುನಾಥ ಬಿನ್ ರಾಮಕೃಷ್ಣಪ್ಪ	6/1		1.64
36	C4/R/45/2-5/RAJANAKUNTE/13A	ಕೆ. ಮೋಹಿತ್ ಬಿನ್ ಎಂ. ಕೃಷ್ಣ ಕೆ ಕಿರಣ್ ಬಿನ್ ಎಂ.ಕೃಷ್ಣ	6/1		252.23
37	C4/R/45/2-5/RAJANAKUNTE/14A	ನಾಗರತ್ನಮ್ಮ	6/1		11.93
38	C4/R/45/2-5/RAJANAKUNTE/15A	1. ಲೋಕೇಶ್ ಬಿನ್ ವೆಂಕಟಾಚಲಪತಿ, 2. ದೇವರಾಜು ಬಿನ್ ವೆಂಕಟಾಚಲಪತಿ 3. ಪುಷ್ಪರಾಜು ಬಿನ್ ವೆಂಕಟಾಚಲಪತಿ	6/1		37.06
39	C4/R/45/2-5/RAJANAKUNTE/16A	ರಂಜಿತ್ ಕುಮಾರ್.ಎ.ಎಸ್ ಬಿನ್ ಸುರೇಶ್.ಕೆ	6/1		28.67
40	C4/R/45/2-5/RAJANAKUNTE/17A	1. ಲೋಕೇಶ್ ಬಿನ್ ವೆಂಕಟಾಚಲಪತಿ, 2. ದೇವರಾಜು ಬಿನ್ ವೆಂಕಟಾಚಲಪತಿ 3. ಪುಷ್ಪರಾಜು ಬಿನ್ ವೆಂಕಟಾಚಲಪತಿ	6/1		78.00
41	C4/R/45/2-5/RAJANAKUNTE/18A	ಎಲ್.ಎಸ್.ಕೃಷ್ಣಮೂರ್ತಿ ಬಿನ್ ಪಿ. ಶ್ರೀರಾಮಯ್ಯ	6/1		9.38
42	C4/R/45/2-5/RAJANAKUNTE/19A	ಎಲ್.ಎಸ್.ಕೃಷ್ಣಮೂರ್ತಿ ಬಿನ್ ಪಿ.ಶ್ರೀರಾಮಯ್ಯ	6/1		15.14
43	C4/R/45/2-5/RAJANAKUNTE/20A	ಗಿರಿರಾಜ್ ಆರ್.ಎಸ್ ಬಿನ್ ದಿ॥ ಸುಬ್ಬಣ್ಣ ಮತ್ತು ಶ್ರೀಮತಿ ಚೌಡಮ್ಮ ಪದ್ಮ ಆರ್.ವಿ ಕೋಂ ಗಿರಿರಾಜ್.ಆರ್.ಎಸ್	6/2	2023.4	105.79
ಗ್ರಾಮ: ಹೊನ್ನೇನಹಳ್ಳಿ ಹೋಬಳಿ: ಯಲಹಂಕ ತಾಲ್ಲೂಕು: ಯಲಹಂಕ ಜಿಲ್ಲೆ: ಬೆಂಗಳೂರು ನಗರ					
44	C4/R/44/2-4/HONNENAHALLI/01	ಕೃಷ್ಣಪ್ಪ ಬಿನ್ ಮುನಿಪಾತಪ್ಪ	17/2	505.85	52.29
45	C4/R/44/2-4/HONNENAHALLI/02	ಕೃಷ್ಣಪ್ಪ ಬಿನ್ ಲಕ್ಷ್ಮಯ್ಯ	17/11	101.17	46.50
46	C4/R/44/2-4/HONNENAHALLI/03	ಎಂ. ದೊರೈ ಮುರುಗನ್ ಬಿನ್ ಲೇ॥ ಮುರುಗೇಶನ್.ಜಿ	17/14	404.68	7.41
47	C4/R/44/2-4/HONNENAHALLI/04	ಸಿ.ವಿ. ಶೇಖರ್ ಬಿನ್ ಕೆ. ವೆಂಕಟ ರಮಣಪ್ಪ	17/15	607.02	62.47
48	C4/R/44/1-2/HONNENAHALLI/01A	ಡಿ.ವಿ.ಪವಮಾನ ಬಿನ್ ಲೇ॥ ಡಿ.ವಾಮನಮೂರ್ತಿ	21/1	1821.06	53.14
49	C4/R/44/1-2/HONNENAHALLI/02A	ಹೆಚ್.ಕೆ.ಮೋಹನ್ ಬಾಬು ಬಿನ್ ಕೃಷ್ಣಪ್ಪ	21/2	1327.35	143.96
50	C4/R/44/1-2/HONNENAHALLI/03A	ಎಂ. ದೊರೈ ಮುರುಗನ್ ಬಿನ್ ಲೇ॥ ಮುರುಗೇಶನ್.ಜಿ	21/3	611.06	24.55
ಗ್ರಾಮ: ಸಿಂಗನಾಯಕನಹಳ್ಳಿ ಹೋಬಳಿ: ಯಲಹಂಕ ತಾಲ್ಲೂಕು: ಯಲಹಂಕ ಜಿಲ್ಲೆ: ಬೆಂಗಳೂರು ನಗರ					
51	C4/R/43/3-1/ SINGANAYAKANAHALLI/01A	ರಸ್ತೆ	21/12	5260.84	106.45
52	C4/R/43/3-1/ SINGANAYAKANAHALLI/02A	ವೆಂಕಟಪ್ಪ	21/12		23.67
53	C4/R/43/3-1/ SINGANAYAKANAHALLI/03A	ರಸ್ತೆ	21/13	20638.68	35.85
54	C4/R/43/3-1/ SINGANAYAKANAHALLI/04A	ಎಸ್.ಸಿ.ರಾಮಚಂದ್ರರೆಡ್ಡಿ	21/13		29.99
55	C4/R/43-42/1-8/ SINGANAYAKANAHALLI/01A	1. ಅಕ್ಕಯ್ಯಮ್ಮ ಕೋಂ ಲೇ॥ ನರಸಿಂಹಯ್ಯ, 2. ಎಸ್.ಎನ್.ಮುನೇಗೌಡ ಬಿನ್ ಲೇ॥ ನರಸಿಂಹಯ್ಯ, 3. ಎನ್.ರಾಜಣ್ಣ ಬಿನ್ ಲೇ॥ ನರಸಿಂಹಯ್ಯ, 4. ತಾಯಮ್ಮ ಕೋಂ ಲೇ॥ ಎಸ್.ಎನ್.ಗೋಪಾಲಗೌಡ	22/1	3035.1	157.2
56	C4/R/43-42/1-8/ SINGANAYAKANAHALLI/02A	ಎಸ್.ಎಂ.ರಾಮಕೃಷ್ಣಪ್ಪ ಬಿನ್ ಲೇ॥ ದೊಡ್ಡ ಅಂಜಿನಪ್ಪ	22/2	5362.01	102.96
57	C4/R/43-42/1-8/ SINGANAYAKANAHALLI/03A	ಎಸ್.ಎನ್.ಶುಭಶಂಕರ್ ಬಿನ್‌ಎಸ್.ಬಿ.ನಂಜಪ್ಪ	22/15	2529.25	66.04
58	C4/R/43-42/1-8/ SINGANAYAKANAHALLI/04A	ರಸ್ತೆ	22/15		19.63
59	C4/R/43-42/1-8/ SINGANAYAKANAHALLI/05A	ಎಸ್.ಎ.ರಾಮಕೃಷ್ಣಪ್ಪ ಬಿನ್ ಲೇ॥ ದೊಡ್ಡಅಂಜಿನಪ್ಪ	22/16	404.68	24.2
60	C4/R/43-42/1-8/ SINGANAYAKANAHALLI/06A	ರಸ್ತೆ	22/16		12.24
61	C4/R/43-42/1-8/ SINGANAYAKANAHALLI/07A	ಎಸ್.ಎಂ.ಕೃಷ್ಣಪ್ಪ ಬಿನ್ ಲೇ॥ ಮುನಿಯಪ್ಪ	22/3	3844.46	149.63
62	C4/R/43-42/1-8/ SINGANAYAKANAHALLI/08A	ರಸ್ತೆ	22/3		74.56
63	C4/R/43-42/1-8/ SINGANAYAKANAHALLI/09A	1. ಎಸ್.ಎಂ.ಕೃಷ್ಣಪ್ಪ ಬಿನ್ ಮುನಿಯಪ್ಪ, 2. ಎಸ್.ಎಂ.ಕೃಷ್ಣಪ್ಪ ಬಿನ್ ಲೇ॥ ಮುನಿಯಪ್ಪ, 3. ಎಸ್.ಕೆ.ಅಶೋಕ್ ಬಿನ್ ಎಸ್.ಎಂ.ಕೃಷ್ಣಪ್ಪ	22/4	505.85	141
64	C4/R/43-42/1-8/ SINGANAYAKANAHALLI/10A	ರಸ್ತೆ	22/4		50.32
65	C4/R/43-42/1-8/ SINGANAYAKANAHALLI/11A	ಎಸ್.ಎಂ.ಕೃಷ್ಣಪ್ಪ ಬಿನ್ ಲೇ॥ ಮುನಿಯಪ್ಪ & ಎಸ್.ಕೆ.ಅಶೋಕ್ ಬಿನ್ ಎಸ್.ಎಂ.ಕೃಷ್ಣಪ್ಪ	22/8ಬಿ	2225.74	17.1
66	C4/R/43-42/1-8/ SINGANAYAKANAHALLI/12A	ಎಂ.ನರಸಿಂಹಯ್ಯ	22/5	101.17	2.01
67	C4/R/43-42/1-8/ SINGANAYAKANAHALLI/13A	ರಸ್ತೆ	22/5		4.12
68	C4/R/43-42/1-8/ SINGANAYAKANAHALLI/14A	ರಸ್ತೆ	22/11ಎ2	2428.08	104.28
69	C4/R/43-42/1-8/ SINGANAYAKANAHALLI/15A	ಅಂಜನಪ್ಪ ಬಿನ್ ಎಂ.ಬಿ.ವೆಂಕಟರಮಣಪ್ಪ	22/11ಎ2		1.61
70	C4/R/43-42/1-8/ SINGANAYAKANAHALLI/16A	ತಿಮ್ಮೆಗೌಡ ನಾಗರತ್ನಮ್ಮ ಕೋಂ ಲೇ॥ ಎಸ್.ಕೃಷ್ಣಾರೆಡ್ಡಿ	22/11ಎ1	1112.87	11.86
ಗ್ರಾಮ: ಕೆಂಚನಹಳ್ಳಿ ಹೋಬಳಿ: ಯಲಹಂಕ ತಾಲ್ಲೂಕು: ಯಲಹಂಕ ಜಿಲ್ಲೆ: ಬೆಂಗಳೂರು ನಗರ					
71	C4/R/39/KENCHANAHALLI/01A	ಬಿಬಿಎಂಪಿ ರಸ್ತೆ	32	38950.45	246.4
72	C4/R/39/KENCHANAHALLI/02A	ಅರುಣ್ ಪ್ಯಾಟಿಯೊಸ್ ಓನರ್ಸ್ ಅಸೋಷಿಯೇಷನ್	32		41.07

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿ, ಕೆ.ಐ.ಎ.ಡಿ.ಬಿ (ಕೆ.ಆರ್.ಐ.ಡಿ.ಇ.,) ನೃಪತುಂಗ ರಸ್ತೆ, ಬೆಂಗಳೂರು.

ವಾಸಾಸಂಇ/ಉನಿ–ಸಿ.ಪಿ/652/ಕೆಎಸ್‌ಎಂಸಿಎ/2026–27



ಉಮೇಶ ಮೇಟಿ ಮತ್ತು ಸಮರ್ಥ್ ಶಾಮನೂರು ಅವರು ಶಾಸಕರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಯು.ಟಿ. ಖಾದರ್ ಪ್ರಮಾಣ ವಚನ ಬೋಧಿಸಿದರು

ಉಮೇಶ, ಸಮರ್ಥ್ ಪ್ರಮಾಣ ಸ್ವೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಆಯ್ಕೆಯಾದ ಉಮೇಶ ಹುಲ್ಲಪ್ಪ ಮೇಟಿ ಮತ್ತು ಸಮರ್ಥ್ ಶಾಮನೂರು ಅವರು ಗುರುವಾರ ವಿಧಾನಸಭಾ ಸದಸ್ಯರಾಗಿ ಪ್ರಮಾಣ ವಚನ ಸ್ವೀಕಾರ ಮಾಡಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮ ಆಯೋಜಿಸಲಾಗಿತ್ತು. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ಪ್ರಮಾಣ ವಚನ ಬೋಧಿಸಿದರು.

ಉಪಸಭಾಧ್ಯಕ್ಷ ರುದ್ರಪ್ಪ ಲಮಾಣಿ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ದಾವಣಗೆರೆ ಸಂಸದೆ ಪ್ರಭಾ ಮಲ್ಲಿಕಾರ್ಜುನ ಮತ್ತಿತರರು ಹಾಜರಿದ್ದರು.

‘ಜನಿವಾರ, ಹಿಜಾಬ್‌ಗೆ ಪ್ರತ್ಯೇಕ ನಿಲುವು ಏಕೆ?’

ಶಿಕ್ಷಣವೇ ಒಂದು ಧರ್ಮ: ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿದಾಗ ಒಂದು ಸಮುದಾಯಕ್ಕೆ ನೋವಾಗುತ್ತದೆ. ಹಾಗೆಯೇ, ಹಿಜಾಬ್ ತೆಗೆಸಿದಾಗ ಮತ್ತೊಂದು ಸಮುದಾಯಕ್ಕೂ ನೋವಾಗುತ್ತದೆ ಎಂದು ಬಿಜೆಪಿ ನಾಯಕರು ಏಕೆ ಯೋಚಿಸುವುದಿಲ್ಲ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಪ್ರಶ್ನಿಸಿದರು.



ಮಧು ಬಂಗಾರಪ್ಪ

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್) ರದ್ದು ಮಾಡಿದ್ದರಿಂದ ಶೇ 95ರಷ್ಟು ಹಿಂದೂ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಕರ್ನಾಟಕದ ಒಂದೂವರೆ ಲಕ್ಷ ಮಕ್ಕಳು ಸೇರಿದಂತೆ ವೈದ್ಯರಾಗುವ ಕನಸು ಕಂಡು, ಪರೀಕ್ಷೆ ಬರೆದಿದ್ದ ದೇಶದ ಸುಮಾರು 25 ಲಕ್ಷ ಮಕ್ಕಳು ಪರಿತಪಿಸುತ್ತಿದ್ದಾರೆ. ಕೇಂದ್ರ ಮಾಡಿದ ಅನ್ಯಾಯದ ವಿರುದ್ಧ ಬಿಜೆಪಿ ನಾಯಕರು ಧ್ವನಿ ಎತ್ತದೇ ಮೌನವಾಗಿದ್ದಾರೆ’ ಎಂದು ದೂರಿದರು.

‘ಎರಡು ವರ್ಷಗಳ ಕಠಿಣ ಅಭ್ಯಾಸ ಮಾಡಿ, ಪರೀಕ್ಷೆ ಬರೆದಿದ್ದ ವಿದ್ಯಾರ್ಥಿಗಳ ಕನಸುಗಳನ್ನೇ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಕೊಂದಿದ್ದಾರೆ. ಅದನ್ನು ಪ್ರಶ್ನಿಸಿ, ವಿದ್ಯಾರ್ಥಿಗಳಿಗೆ ನ್ಯಾಯ ಕೊಡಿಸುವ ಬದಲು ರಾಜ್ಯ ಬಿಜೆಪಿ ನಾಯಕರು ಹಿಜಾಬ್‌ನಂತಹ ಧಾರ್ಮಿಕ ವಿಷಯಗಳನ್ನು ಕೆದಕುವುದರಲ್ಲೇ ಕಾಲ ಕಳೆಯುತ್ತಿದ್ದಾರೆ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಆರೋಪದ ಮೇಲೆ ರಾಜಸ್ಥಾನ, ಗುಜರಾತ್‌ನಲ್ಲಿ ಬಿಜೆಪಿ ಮುಖಂಡರನ್ನು ಬಂಧಿಸಲಾಗಿದೆ. ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದವರು ಹಾಗೂ ಅಲ್ಪಸಂಖ್ಯಾತರು ಓದಿನಲ್ಲಿ ಸಾಧನೆ ಮಾಡುತ್ತಿರುವುದನ್ನು ಅವರಿಗೆ ಸಹಿಸಲು ಆಗುತ್ತಿಲ್ಲ’ ಎಂದು ಟೀಕಿಸಿದರು.

‘ಶಿಕ್ಷಣವೇ ಒಂದು ಧರ್ಮ. ಎಲ್ಲ ವಿದ್ಯಾರ್ಥಿಗಳನ್ನೂ ಒಂದೇ ರೀತಿ ನೋಡಬೇಕು ಎನ್ನುವುದು ಸಿದ್ದರಾಮಯ್ಯ ಅವರ ಆಶಯ. ಶಿಕ್ಷಣ ಸಚಿವರಾಗಿದ್ದ ಬಿ.ಸಿ. ನಾಗೇಶ್, ಎಸ್.ಸುರೇಶ್ ಕುಮಾರ್, ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಶಿಕ್ಷಣದ ಆಶಯಗಳನ್ನೇ ಹಾಳು ಮಾಡಿದರು’ ಎಂದು ಆರೋಪಿಸಿದರು.



ವಿದ್ಯಾರ್ಥಿಗಳು ಜನಿವಾರ, ಹಿಜಾಬ್, ರುದ್ರಾಕ್ಷಿ ಸೇರಿ ಈಗಾಗಲೇ ಸಾಂಪ್ರದಾಯಿಕವಾಗಿ ಅನುಸರಿಸುವ ಧಾರ್ಮಿಕ ಸಂಕೇತಗಳನ್ನು ಧರಿಸಬಹುದು. ಕೇಸರಿ ಶಾಲಿಗೆ ಅವಕಾಶವಿಲ್ಲ

ಸಿದ್ದರಾಮಯ್ಯ, ಮುಖ್ಯಮಂತ್ರಿ

ಕೇಸರಿ ಶಾಲಿಗೆ ಉದ್ಯೋಗ ಸಿಗುತ್ತ?: ಪ್ರಿಯಾಂಕ್ ಖರ್ಗೆ

‘ವಿದ್ಯಾರ್ಥಿಗಳು ಕೇಸರಿ ಶಾಲು ಹಾಕಿಕೊಂಡರೆ, ಗೋ ರಕ್ಷಣೆ, ಧರ್ಮ ರಕ್ಷಣೆ ಮಾಡಿದರೆ ಉದ್ಯೋಗ ಸಿಗುತ್ತದೆಯೇ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಬಿಜೆಪಿ ನಾಯಕರ ಮಕ್ಕಳಿಗೆ ಹನುಮಾನ್ ಚಾಲೀಸಾ ಬರುತ್ತದೆಯೇ? ಬಡವರ ಮಕ್ಕಳಲ್ಲಿ ಕೋಮು ಭಾವನೆ ಬಿತ್ತುವ ಅವರು ತಮ್ಮ ಮಕ್ಕಳನ್ನು ವಿದೇಶಗಳಲ್ಲಿ ಓದಿಸುತ್ತಾರೆ ಎಂದು ಟೀಕಿಸಿದರು.

‘ಎಲ್ಲ ಧರ್ಮಗಳ ಆಚರಣೆಗೂ ಸಂವಿಧಾನ ಅವಕಾಶ ನೀಡಿದೆ. ಕೆಲವರು ಆದೇಶವನ್ನು ಅರ್ಥ ಮಾಡಿಕೊಳ್ಳದೆ ಟೀಕೆ ಮಾಡುತ್ತಾರೆ. ಮುಸ್ಲಿಮರು ಜನಿವಾರ, ಕುಂಕುಮ, ವಿಭೂತಿ ಹಾಕುತ್ತಾರಾ? ಹಿಂದೂಗಳು ಕುಂಕುಮ ಇಡುವುದನ್ನು ನಿಷೇಧಿಸಲು ಆಗುತ್ತದೆಯೇ’ ಎಂದು ಪ್ರಶ್ನಿಸಿದರು.



ಪ್ರಿಯಾಂಕ್ ಖರ್ಗೆ

ನೀಟ್ ವಿರುದ್ಧ ಬಿಜೆಪಿ ಹೋರಾಡಲಿ: ದಿನೇಶ್



ದಿನೇಶ್ ಗುಂಡೂರಾವ್

‘ಕೋಮುವಾದದ ವಾತಾವರಣ ನಿರ್ಮಾಣ ಮಾಡುವುದೇ ಬಿಜೆಪಿ ಕಾರ್ಯಸೂಚಿಯಾಗಿದ್ದು, ಆ ಪಕ್ಷದವರಿಗೆ ವಿದ್ಯಾರ್ಥಿಗಳ ಮೇಲೆ ಕಾಳಜಿ ಇದ್ದರೆ ನೀಟ್ ಪರೀಕ್ಷೆ ವಿರುದ್ಧ ಹೋರಾಟ ಮಾಡಲಿ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

‘ಹಿಜಾಬ್ ಅಂದರೆ ಒಂದು ಸ್ಕಾರ್ಫ್ ಅಷ್ಟೆ. ಅದಕ್ಕೆ ವಿಶೇಷ ಅರ್ಥ ನೀಡಬೇಕಾಗಿಲ್ಲ. ವಿದ್ಯಾರ್ಥಿಗಳು ವಿಭೂತಿ, ಕುಂಕುಮ ಇಟ್ಟುಕೊಂಡು ಬಂದರೆ ಅದು ತಪ್ಪೆಂದು ಹೇಳಲು ಸಾಧ್ಯವಿಲ್ಲ. 2022ಕ್ಕಿಂತ ಮೊದಲು ಈ ಬಗ್ಗೆ ಯಾವುದೇ ರೀತಿಯ ಸಮಸ್ಯೆಗಳು ಆಗಿರಲಿಲ್ಲ. ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಈ ಸಮಸ್ಯೆಯಾಗಿದೆ. ನಾವು ಯಾವುದೇ ಒಂದು ಸಮುದಾಯದವರನ್ನು ಓಲೈಕೆ ಮಾಡುವ ಕೆಲಸ ಮಾಡುತ್ತಿಲ್ಲ’ ಎಂದು ಹೇಳಿದರು.

‘ದಾವಣಗೆರೆ ಫಲಿತಾಂಶಕ್ಕೆ ಬೆದರಿದ ಕಾಂಗ್ರೆಸ್’


ಬೆಂಗಳೂರು: ‘ದಾವಣಗೆರೆ ಉಪ ಚುನಾವಣೆಯ ಫಲಿತಾಂಶದ ನಂತರ ಕಾಂಗ್ರೆಸ್ ಹಿಜಾಬ್ ವಿಷಯವನ್ನು ಮತ್ತೆ ಮುನ್ನೆಲೆಗೆ ತಂದಿದೆ. ಪಕ್ಷದಿಂದ ದೂರ ಸರಿಯುತ್ತಿರುವ ಮುಸ್ಲಿಮರ ಓಲೈಕೆಗೆ ಮುಂದಾಗಿದೆ’ ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಆರೋಪ ಮಾಡಿದರು.

‘ಇವರು ಅಧಿಕಾರಕ್ಕೆ ಬಂದು 3 ವರ್ಷ ಹಿಜಾಬ್ ವಿಷಯದಲ್ಲಿ ಏನು ಮಾಡುತ್ತಿದ್ದರು? ದಾವಣಗೆರೆಯಲ್ಲಿ ಮುಸ್ಲಿಮರು ಮತ ಚಲಾಯಿಸಿದ ರೀತಿಗೆ ಗಾಬರಿಯಾಗಿದ್ದಾರೆ. ಮೇ 16ರಂದು ನಡೆಯುವ ಮುಸ್ಲಿಂ ಸಮಾವೇಶಕ್ಕೆ ಹೆದರಿ ಇಂತಹ ನಿರ್ಧಾರ ಮಾಡಿದ್ದಾರೆ’ ಎಂದು ದೂರಿದರು. ‘ಸಿಇಟಿ ಪರೀಕ್ಷೆಯಲ್ಲಿ ಜನಿವಾರ ತೆಗೆಸಿದ್ದನ್ನು ಸಮರ್ಥನೆ ಮಾಡಲು ಆಗುತ್ತದೆಯೇ? ಎಲ್ಲವನ್ನು ರಾಜಕೀಯಕ್ಕಾಗಿ ಮಾಡುತ್ತಿ ದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ರಾಜಕೀಯ ಲಾಭ ಬಿಟ್ಟರೆ ಸಮಾಜದ ಶಾಂತಿ ಮುಖ್ಯವಲ್ಲ’ ಎಂದು ಟೀಕಿಸಿದರು.

‘ಸಮಾನತೆ ಅಳಿಸಲು ‘ಹಿಜಾಬ್’ ಹೇರಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶೈಕ್ಷಣಿಕ ಕೇಂದ್ರಗಳಲ್ಲಿ ಸಮಾನತೆ ಮತ್ತು ಶಾಲಾ ಮಕ್ಕಳಲ್ಲಿ ಏಕತೆಯನ್ನು ತರುವ ಉದ್ದೇಶದಿಂದ ಬಿಜೆಪಿ ಸರ್ಕಾರ ಜಾರಿಗೆ ತಂದಿದ್ದ ಶಿಸ್ತುಬದ್ಧ ಸಮವಸ್ತ್ರ ನಿಯಮವನ್ನು ಹಿಂಪಡೆದಿರುವ ಕಾಂಗ್ರೆಸ್ ಸರ್ಕಾರದ ನಿರ್ಧಾರ ಖಂಡನೀಯ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.



ಬಿ.ವೈ. ವಿಜಯೇಂದ್ರ

ಈ ಕುರಿತು ‘ಎಕ್ಸ್’ನಲ್ಲಿ ಅವರು ಪೋಸ್ಟ್ ಮಾಡಿದ್ದಾರೆ. ‘ಸಮವಸ್ತ್ರದ ಮೂಲ ಆಶಯವೇ ಮಕ್ಕಳಲ್ಲಿ ಮೇಲು–ಕೀಳು, ಜಾತಿ–ಮತದ ಭೇದ ಮರೆಸಿ ಸಮಾನತೆಯ ದೀಕ್ಷೆ ನೀಡುವುದಾಗಿದೆ. ಮಕ್ಕಳ ಮನಸ್ಸಿನಲ್ಲಿ ‘ನಾವೆಲ್ಲರೂ ಒಂದು’ ಎಂಬ ಭಾವನೆ ಬಿತ್ತುವ ಬದಲು, ಕೇವಲ ಅವರ ವೋಟ್ ಬ್ಯಾಂಕ್ ವರ್ಗದ ಓಲೈಕೆಗಾಗಿ ಶಾಲಾ ಆವರಣದಲ್ಲೂ ಮತೀಯ ವಿಭಜನೆಗೆ ಸರ್ಕಾರ ಕೈ ಹಾಕಿದೆ’ ಎಂದು ಟೀಕಿಸಿದ್ದಾರೆ.

‘ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಶೈಕ್ಷಣಿಕ ಪಾವಿತ್ರ್ಯಕ್ಕಿಂತ ವೋಟ್ ಬ್ಯಾಂಕ್ ರಾಜಕಾರಣಕ್ಕೇ ಆದ್ಯತೆ ನೀಡುತ್ತದೆ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ಮಕ್ಕಳಿಗೆ ಹಿಜಾಬ್ ಧರಿಸಲು ಅವಕಾಶ ನೀಡಿ, ಕೇಸರಿ ಶಾಲು ಧರಿಸುವುದಕ್ಕೆ ನಿರ್ಬಂಧ ವಿಧಿಸಿರುವ ತುಘಲಕ್ ಆದೇಶವನ್ನು ಕೂಡಲೇ ಹಿಂಪಡೆಯಬೇಕು’ ಎಂದು ಅವರು ಆಗ್ರಹಿಸಿದ್ದಾರೆ.

‘ಶಿಕ್ಷಣ ಸಂಸ್ಥೆಗಳು ಜ್ಞಾನ ಸರೋವರವಿದ್ದಂತೆ. ಇಲ್ಲಿ ವಸ್ತ್ರಸಂಹಿತೆಯು (ಸಮವಸ್ತ್ರ) ಶಿಸ್ತು, ಸಮಭಾವ ಹಾಗೂ ಸಹೋದರತ್ವ ಭಾವವನ್ನು ಮೂಡಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ವಿದ್ಯಾರ್ಥಿಗಳಲ್ಲಿ ಕೋಮು ಸಂಕೇತ ಪ್ರತಿನಿಧಿಸುವ ವಸ್ತ್ರ ಧರಿಸಲು ಅವಕಾಶ ನೀಡುವುದು ಹಾಗೂ ಪ್ರೇರಣೆ ನೀಡುವುದು ಶಿಕ್ಷಣ ಸರೋವರಕ್ಕೆ ಕೆಸರು ತುಂಬುವ ಕೆಟ್ಟ ನಡೆಯಾಗುತ್ತದೆ. ಸರ್ಕಾರದ ನಿರ್ಧಾರ ಅವಿವೇಕಿತನದ ಪರಮಾವಧಿ’ ಎಂದಿದ್ದಾರೆ.

‘ಸುಪ್ರೀಂಗೆ ಅಪಚಾರ’

‘ಹಿಜಾಬ್ ನಿಷೇಧ ಪ್ರಶ್ನಿಸಿರುವ ಅರ್ಜಿ ಸುಪ್ರೀಂಕೋರ್ಟ್‌ನಲ್ಲಿದ್ದು, ಅದಿನ್ನೂ ಇತ್ಯರ್ಥವಾಗಿಲ್ಲ. ಈ ಮಧ್ಯೆ ಒಂದು ಸಮುದಾಯವನ್ನು ಓಲೈಸಲು ಮತ್ತೆ ಹಿಜಾಬ್ ಧರಿಸಲು ಆದೇಶ ಮಾಡಿರುವುದು ದೊಡ್ಡ ತಪ್ಪು. ಈ ನಡೆ ಕೋರ್ಟ್‌ಗೆ ಮಾಡಿದ ಅಪಚಾರ’ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಹಿಜಾಬ್‌ಗೆ ಅವಕಾಶ ನೀಡಿದರೆ ಮುಸ್ಲಿಮರು ನಮ್ಮ ಜೊತೆಯಾಗುತ್ತಾರೆ. ಮುಸ್ಲಿಮರಿಗೆ ಹಣ ನೀಡಿದರೆ, ಮನೆ ಕೊಟ್ಟರೆ ಅವರೆಲ್ಲ ನಮ್ಮ ಜೊತೆಗೆ ನಿಲ್ಲುತ್ತಾರೆ ಎಂದು ಕಾಂಗ್ರೆಸ್ ಭಾವಿಸಿದೆ. ಇವೆಲ್ಲ ಬಹುಸಂಖ್ಯಾತರನ್ನು ಮುಸ್ಲಿಮರ ವಿರುದ್ಧವಾಗಿ ಎತ್ತಿಕಟ್ಟುವ ಕೆಲಸ. ಈ ರೀತಿ ಮಾಡಿ ಮುಸ್ಲಿಮರಿಗೆ ಕಾಂಗ್ರೆಸ್ ತೊಂದರೆ ಕೊಡುತ್ತಿದೆ’ ಎಂದು ಹೇಳಿದರು.

‘ಕೈ’ಗೆ ಮುಸ್ಲಿಂ ಭಯ’

‘ಮುಂದಿನ ಚುನಾವಣೆಗಳಲ್ಲಿ ಮುಸ್ಲಿಮರು ಕಾಂಗ್ರೆಸ್‌ಗೆ ಕೈಕೊಡುತ್ತಾರೆ ಎಂಬ ಆತಂಕ ಕಾಂಗ್ರೆಸ್‌ಗೆ ಕಾಡುತ್ತಿದೆ. ಎಐಎಂಐಎಂ ಅಥವಾ ಮುಸ್ಲಿಂ ಲೀಗ್ ಮೂಲಕ ಮುಸ್ಲಿಮರು ಸಂಘಟಿತರಾಗಿ ಕಾಂಗ್ರೆಸ್‌ಗೆ ಸಡ್ಡು ಹೊಡೆಯುವ ಭಯದ ವಾತಾವರಣ ನಿರ್ಮಾಣವಾಗಿದೆ. ಹೀಗಾಗಿ ಹಿಜಾಬ್ ಮತ್ತೆ ಜಾರಿಗೆ ತಂದಿದ್ದಾರೆ’ ಎಂದು ಬಿಜೆಪಿ ಶಾಸಕ ಯಶ್‌ಪಾಲ್ ಸುವರ್ಣ ಹೇಳಿದ್ದಾರೆ.

‘ಹಿಜಾಬ್ ಪ್ರಕರಣ ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವಾಗ ಸರ್ಕಾರ ನಿರ್ಧಾರ ತೆಗೆದುಕೊಳ್ಳಲು ಆಗುವುದಿಲ್ಲ. ಇದು ನ್ಯಾಯಾಂಗ ನಿಂದನೆ ಆಗುತ್ತದೆ’ ಎಂದೂ ಹೇಳಿದರು.

ಬೆಂಗಾವಲು ಪಡೆ ಕಡಿತ; ಸರಿಯಾದ ಕ್ರಮವಲ್ಲ

ಮೈಸೂರು: ‘ಪ್ರಧಾನಿ ನರೇಂದ್ರ ಮೋದಿ ಪೆಟ್ರೋಲ್- ಡೀಸೆಲ್ ಬಳಕೆಯನ್ನು ತಗ್ಗಿಸುವ ಉದ್ದೇಶದಿಂದ ತಮ್ಮ ಬೆಂಗಾವಲು ಪಡೆಯನ್ನು ಕಡಿತಗೊಳಿಸಿರುವುದು ತಾತ್ಕಾಲಿಕವಷ್ಟೇ. ಅದು ಸರಿಯಾದ ಕ್ರಮವಲ್ಲ. ಅದರ ಬದಲು ಬೇರೆ ದೇಶಗಳೊಂದಿಗೆ ಮಾತನಾಡಿ ಒಮ್ಮತಕ್ಕೆ ಬರುವುದು ಸೂಕ್ತ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ನಗರದ ತಮ್ಮ ನಿವಾಸದಲ್ಲಿ ಗುರುವಾರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು. ‘ಮೇ 15ರಂದು ಹೈಕಮಾಂಡ್ ಭೇಟಿ ಮಾಡಲು ದೆಹಲಿಗೆ ಹೋಗುತ್ತಿದ್ದೀರಾ’ ಎಂಬ ಪ್ರಶ್ನೆಯಿಂದ ಸಿಟ್ಟಾದ ಸಿದ್ದರಾಮಯ್ಯ ‘ನಿಮಗೆ ಹೇಳಿದ್ದಾರ’ ಎಂದು ಮರುಪ್ರಶ್ನಿಸಿದರು.

‘ಸಂಪುಟ ಪುನರ್ ರಚನೆ ಮಾಡುವ ಉದ್ದೇಶವಿದೆ. ತೀರ್ಮಾನ ಕೈಗೊಳ್ಳುತ್ತೇವೆ’ ಎಂದರು. ‘ಕೇಂದ್ರವು ನೀಟ್ ಪರೀಕ್ಷೆಯನ್ನು ಸರಿಯಾಗಿ ಮಾಡಿಲ್ಲ. ಕಷ್ಟಪಟ್ಟು ಓದಿ, ಪರೀಕ್ಷೆ ಬರೆದವರ ಕಥೆ ಏನು’ ಎಂದು ಪ್ರಶ್ನಿಸಿದರು.

ಲೈಂಗಿಕ ದೌರ್ಜನ್ಯದ ಆರೋಪ; ಪೊಲೀಸ್ ಠಾಣೆಗೆ ಹಾಜರಾದ ಸ್ವಾಮೀಜಿ

ವಚನಾನಂದ ಶ್ರೀ ಸುದೀರ್ಘ ವಿಚಾರಣೆ

ಪ್ರಜಾವಾಣಿ ವಾರ್ತೆ

ಹರಿಹರ: ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ (ಪೋಕ್ಸೊ) ಆರೋಪ ಎದುರಿಸುತ್ತಿರುವ ವೀರಶೈವ ಲಿಂಗಾಯತ ಪಂಚಮಸಾಲಿ ಗುರುಪೀಠದ ಪದಚ್ಯುತ ಪೀಠಾಧ್ಯಕ್ಷ ವಚನಾನಂದ ಸ್ವಾಮೀಜಿ ಅವರನ್ನು ಪೊಲೀಸರು ಗುರುವಾರ ಸುದೀರ್ಘ ವಿಚಾರಣೆ ನಡೆಸಿದರು.

ಭಕ್ತರ ಕಾರಿನಲ್ಲಿ ಗ್ರಾಮಾಂತರ ಪೊಲೀಸ್ ಠಾಣೆಗೆ ಬೆಳಿಗ್ಗೆ 9ಕ್ಕೆ ಹಾಜರಾದ ಸ್ವಾಮೀಜಿ ಅವರನ್ನು ಮಧ್ಯಾಹ್ನ 2.50 ರವರೆಗೆ ಡಿವೈಎಸ್‌ಪಿ ಬಿ.ಎಸ್. ಬಸವರಾಜ್ ನೇತೃತ್ವದ ಪೊಲೀಸರ ತಂಡ ವಿಚಾರಣೆಗೆ ಒಳಪಡಿಸಿತು.

ಬಳಿಕ ಪೊಲೀಸರ ಸೂಚನೆಯಂತೆ ಸ್ವಾಮೀಜಿ ನೇರವಾಗಿ ಇಲ್ಲಿನ ಸಾರ್ವಜನಿಕ ಆಸ್ಪತ್ರೆಗೆ ತೆರಳಿದರು. ಅವರಿಗೆ ‘ಪೋಕ್ಸೊ’ ಪ್ರಕರಣದ ಆರೋಪಿಗಳಿಗೆ ನಡೆಸುವ ವೈದ್ಯಕೀಯ ಪರೀಕ್ಷೆಗಳನ್ನು ನಡೆಸಲಾಯಿತು. ನಿರೀಕ್ಷಣಾ ಜಾಮೀನಿಗೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದ ತನಿಖಾ ತಂಡ, ಸ್ವಾಮೀಜಿಗೆ ಮಠಕ್ಕೆ ಮರಳಲು ಅವಕಾಶ ನೀಡಿತು.

ಆಸ್ಪತ್ರೆಯಿಂದ ಹೊರಬಂದ ಸ್ವಾಮೀಜಿ, ‘ಕಾನೂನು ಗೌರವಿಸುತ್ತೇನೆ; ಕಾನೂನು ಪರಿಪಾಲಿಸುತ್ತೇನೆ’ ಎಂದಷ್ಟೇ ಪ್ರತಿಕ್ರಿಯಿಸಿದರು. ಬಂದ ಕಾರಿನಲ್ಲೇ ಮಠಕ್ಕೆ ಮರಳಿದರು.

‘ಮಠದ ವಸತಿ ನಿಲಯದಲ್ಲಿದ್ದ ಬಾಲಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪಡಿ ಲಕ್ಷ್ಮೇಶ್ವರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ‘ಪೋಕ್ಸೊ’ ಪ್ರಕರಣ ಹರಿಹರ ಗ್ರಾಮಾಂತರ ಠಾಣೆಗೆ ವರ್ಗಾವಣೆಯಾಗಿದೆ. ವಿಚಾರಣೆಗೆ ಹಾಜರಾಗುವಂತೆ ವಚನಾನಂದ ಸ್ವಾಮೀಜಿ ಅವರಿಗೆ ಪೊಲೀಸರು ನೋಟಿಸ್ ಜಾರಿ ಮಾಡಿದ್ದರು.



ಹರಿಹರದ ಗ್ರಾಮಾಂತರ ಪೊಲೀಸ್ ಠಾಣೆಗೆ ಗುರುವಾರ ಹಾಜರಾದ ವಚನಾನಂದ ಸ್ವಾಮೀಜಿ ಅವರು ವಿಚಾರಣೆ ಮುಗಿಸಿ ಹೊರಬಂದರು

ವಚನಾನಂದ ಸ್ವಾಮೀಜಿ ಹೇಳಿಕೆ ದಾಖಲಿಸಿಕೊಂಡು, ವೈದ್ಯಕೀಯ ಪರೀಕ್ಷೆ ನಡೆಸಲಾಗಿದೆ. ನಿರೀಕ್ಷಣಾ ಜಾಮೀನು ಪಡೆದಿದ್ದರಿಂದ ಬಂಧಿಸಿಲ್ಲ

ಡಾ.ಎಚ್‌.ಟಿ.ಶೇಖರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಪುರುಷತ್ವ ಪರೀಕ್ಷೆಗೆ ಮಾದರಿ ಸಂಗ್ರಹ

ವಚನಾನಂದ ಸ್ವಾಮೀಜಿ ಅವರ ಪುರುಷತ್ವ ಪರೀಕ್ಷೆಗೆ ಅಗತ್ಯವಿರುವ ಮಾದರಿಗಳನ್ನು ವೈದ್ಯರು ಸಂಗ್ರಹಿಸಿದರು. ತಜ್ಞ ವೈದ್ಯ ಡಾ.ರಾಘವೇಂದ್ರ ದುರ್ಗೋಜಿ ನೇತೃತ್ವದ ವೈದ್ಯರ ತಂಡ ಸ್ವಾಮೀಜಿ ಅವರ ಆರೋಗ್ಯ ತಪಾಸಣೆ ಮಾಡಿತು. ರಕ್ತದೊತ್ತಡ, ನಾಡಿಮಿಡಿತ ಪರೀಕ್ಷಿಸಿತು.

‘ವಚನಾನಂದ ಸ್ವಾಮೀಜಿ ಅವರ ರಕ್ತದ ಮಾದರಿ, ಉಗುರು ಹಾಗೂ ರೋಮಗಳನ್ನು ಸಂಗ್ರಹಿಸಲಾಗಿದೆ. ಒಳ ಉಡುಪು ಸೇರಿದಂತೆ ಅವರು ತೊಟ್ಟಿದ್ದ ಬಟ್ಟೆಗಳನ್ನು ಪಡೆಯಲಾಗಿದೆ. ಇವುಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ರವಾನಿಸಿ ವರದಿ ಪಡೆಯಲಾಗುತ್ತದೆ. ಲೈಂಗಿಕ ಸಾಮರ್ಥ್ಯಕ್ಕೆ ಸಂಬಂಧಿಸಿದ ವಿವಿಧ ಪರೀಕ್ಷೆಗಳನ್ನು ನಡೆಸಲಾಗಿದೆ’ ಎಂದು ವೈದ್ಯ ಡಾ.ರಾಘವೇಂದ್ರ ದುರ್ಗೋಜಿ ತಿಳಿಸಿದ್ದಾರೆ.

‘ಆರೋಪಿಯ ಮಾನಸಿಕ ಸ್ಥಿತಿ, ವಯಸ್ಸಿನ ದೃಢೀಕರಣಕ್ಕೆ ಸಂಬಂಧಿಸಿದ ಮಾಹಿತಿ ಪಡೆಯಲಾಗುತ್ತದೆ. ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಆಧರಿಸಿ ಅಭಿಪ್ರಾಯ ನೀಡಲಾಗುವುದು’ ಎಂದು ವೈದ್ಯರು ಪ್ರತಿಕ್ರಿಯಿಸಿದರು.

ತಾಯ್ನುಡಿಗೆ ದಂಡ: ಶಾಲೆಗಳ ವಿರುದ್ಧ ಕ್ರಮಕ್ಕೆ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಾಯ್ನುಡಿಯಲ್ಲಿ ಮಾತನಾಡುವುದು ಮಗುವಿನ ಜನ್ಮಸಿದ್ಧ ಹಕ್ಕಾಗಿದ್ದು, ಈ ಹಕ್ಕನ್ನು ಕಸಿದುಕೊಳ್ಳುವ ಅಥವಾ ಕನ್ನಡವನ್ನು ಅಪರಾಧದಂತೆ ಕಾಣುವ ಶಾಲೆಗಳ ವಿರುದ್ಧ ಕಾನೂನಿನಡಿ ಕಠಿಣ ಕ್ರಮ ಜರುಗಿಸಬೇಕು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.



ಪುರುಷೋತ್ತಮ ಬಿಳಿಮಲೆ

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆದಿದ್ದಾರೆ.

‘ರಾಜ್ಯದ ಕೆಲವು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ತಮ್ಮ ತಾಯ್ನುಡಿಯಾದ ಕನ್ನಡದಲ್ಲಿ ಮಾತನಾಡಿದರೆ, ಶಾಲಾ ಆಡಳಿತ ಮಂಡಳಿಗಳು ದಂಡ ವಿಧಿಸುತ್ತಿರುವುದು ಪ್ರಾಧಿಕಾರದ ಗಮನಕ್ಕೆ ಬಂದಿದೆ. ಈ ಕ್ರಮವು ಶಿಕ್ಷಣ ವಿರೋಧಿಯಲ್ಲದೆ, ಸಾಂವಿಧಾನಿಕ ಹಕ್ಕುಗಳ ಉಲ್ಲಂಘನೆಯೂ ಆಗಿದೆ’ ಎಂದು ಪುರುಷೋತ್ತಮ ಬಿಳಿಮಲೆ ಹೇಳಿದ್ದಾರೆ.

‘ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆ 2022ರ ಪ್ರಕಾರ ಕರ್ನಾಟಕದ ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಕನ್ನಡ ಭಾಷೆಯ ಬಳಕೆಗೆ ಮತ್ತು ಪ್ರಸಾರಕ್ಕೆ ಪೂರಕವಾದ ವಾತಾವರಣವಿರಬೇಕು. ತಾಯ್ನುಡಿಯಲ್ಲಿ ಮಾತನಾಡುವುದನ್ನು ನಿರ್ಬಂಧಿಸುವುದು ಅಥವಾ ದಂಡ ವಿಧಿಸುವುದು ಕಾನೂನುಬಾಹಿರ ಕ್ರಮ’ ಎಂದಿದ್ದಾರೆ.

‘ಈ ಹಿಂದೆ ಬೆಂಗಳೂರಿನ ಸಿಂಧಿ ಶಾಲೆಯಲ್ಲಿ ನಡೆದ ಪ್ರಕರಣದಲ್ಲಿ ಪ್ರಾಧಿಕಾರವು ಮಧ್ಯ ಪ್ರವೇಶಿಸಿ, ಸಮಸ್ಯೆಯನ್ನು ಬಗೆಹರಿಸಿದೆ. ಇಂತಹ ಘಟನೆಗಳು ಮರುಕಳಿಸಬಾರದು. ರಾಜ್ಯದ ಎಲ್ಲಾ ಇಂಗ್ಲಿಷ್ ಮಾಧ್ಯಮ ಶಾಲೆಗಳೂ ಸೇರಿದಂತೆ ಪ್ರತಿಯೊಂದು ಶಿಕ್ಷಣ ಸಂಸ್ಥೆ ಕೂಡಲೇ ಜಾರಿಗೆ ಬರುವಂತೆ ಕನ್ನಡ ಮಾತನಾಡುವ ವಿದ್ಯಾರ್ಥಿಗಳಿಗೆ ದಂಡ ವಿಧಿಸುವ ಅಮಾನವೀಯ ಪದ್ಧತಿಯನ್ನು ಕೈಬಿಡಬೇಕು. ಈ ಬಗ್ಗೆ ಶಿಕ್ಷಣ ಇಲಾಖೆಯ ಅಧಿಕಾರಿಗಳ ಮೂಲಕ ಎಲ್ಲಾ ಶಾಲೆಗಳಿಗೆ ಸುತ್ತೋಲೆ ಹೊರಡಿಸಬೇಕು’ ಎಂದು ಆಗ್ರಹಿಸಿದ್ದಾರೆ.

ಕಾಲೇಜಿಗೆ ಮರಳುವರೇ ವಿದ್ಯಾರ್ಥಿನಿಯರು?

ಪ್ರಜಾವಾಣಿ ವಾರ್ತೆ

ಹಿಜಾಬ್

ಮಂಗಳೂರು/ಉಡುಪಿ: ರಾಜ್ಯ ಸರ್ಕಾರ 2022ರಲ್ಲಿ ಶಾಲಾ ಕಾಲೇಜುಗಳಲ್ಲಿ ಹಿಜಾಬ್ ನಿಷೇಧಿಸಿದ ನಂತರ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಸರ್ಕಾರಿ ಹಾಗೂ ಅನುದಾನಿತ ಪದವಿ ಕಾಲೇಜುಗಳಲ್ಲಿ ಅಂದಾಜು 145 ಮುಸ್ಲಿಂ ವಿದ್ಯಾರ್ಥಿನಿಯರು ಶಿಕ್ಷಣವನ್ನು ಮೊಟಕುಗೊಳಿಸಿದ್ದರು.

ಈಗ ರಾಜ್ಯ ಸರ್ಕಾರದ ಹೊಸ ಆದೇಶದಿಂದಾಗಿ ಹಿಜಾಬ್‌ಗೆ ಅವಕಾಶ ದೊರೆತಿದ್ದು, ಈ ವಿದ್ಯಾರ್ಥಿನಿಯರು ಶಿಕ್ಷಣವನ್ನು ಮತ್ತೆ ಮುಂದುವರಿಸುತ್ತಾರೆಯೇ ಎಂಬ ಚರ್ಚೆ ನಡೆದಿದೆ.

‘ಈ ವಿವಾದದ ಸಂದರ್ಭದಲ್ಲಿ ಶಿಕ್ಷಣವನ್ನು ಮೊಟಕುಗೊಳಿಸಿದ್ದ ಮುಸ್ಲಿಂ ವಿದ್ಯಾರ್ಥಿನಿಯರ ಪೈಕಿ ಅರ್ಧದಷ್ಟು ವಿದ್ಯಾರ್ಥಿನಿಯರು ಮದುವೆಯಾಗಿದ್ದಾರೆ. ಅವರು ಈಗ ಶಿಕ್ಷಣ ಮುಂದುವರಿಸಲು ಸಾಧ್ಯವಾಗುವುದೋ ಇಲ್ಲವೋ ತಿಳಿಯದು’ ಎನ್ನುತ್ತಾರೆ ಕಾಲೇಜೊಂದರ ಪ್ರಾಂಶುಪಾಲರು.

‘ಕಾವೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಥಮ ವರ್ಷದ ಬಿ.ಕಾಂ ಓದುತ್ತಿದ್ದ ಜಾಸ್ಮೀನ್, ಹಿಜಾಬ್‌ಗೆ ನಿರ್ಬಂಧ ಹೇರಿದ ನಂತರ ಶಿಕ್ಷಣ ತೊರೆದಿದ್ದಳು. ಆಕೆಗೆ ವರ್ಷದ ಹಿಂದೆ ವಿವಾಹವಾಗಿದೆ’ ಎಂದು ಜಾಸ್ಮೀನ್ ಅವರ ತಂದೆ ಕೆ.ಮೊಹಮ್ಮದ್ ಉಸ್ಮಾನ್ ತಿಳಿಸಿದರು.

‘ಈ ವಿವಾದದ ಕಾರಣಕ್ಕಾಗಿ ಕಾಲೇಜು ಬಿಟ್ಟಿರುವ ಅಮೀನಮ್ಮ ಕೂಡ ಶಿಕ್ಷಣ ಮುಂದುವರಿಸುವ ಸಾಧ್ಯತೆ ಕಡಿಮೆ. ಆಕೆಗೆ ಇನ್ನು ಕೆಲವು ವಾರಗಳಲ್ಲಿ ಮದುವೆಯಾಗಲಿದೆ’ ಎಂದು ಆಕೆಯ ತಾಯಿ ತಿಳಿಸಿದರು.

‘ಸರ್ಕಾರಿ ಮತ್ತು ಅನುದಾನಿತ ಪದವಿ ಕಾಲೇಜುಗಳಲ್ಲಿ ಹಿಜಾಬ್ ನಿಷೇಧದ ಕಾರಣಕ್ಕೆ ಶಿಕ್ಷಣವನ್ನು ಮೊಟಕುಗೊಳಿಸಿದ್ದ ಇತರ ಮುಸ್ಲಿಂ ವಿದ್ಯಾರ್ಥಿನಿಯರು, ಹಿಜಾಬ್ ಧರಿಸುವುದನ್ನು ಸಂಪೂರ್ಣವಾಗಿ ನಿಷೇಧಿಸದ ಖಾಸಗಿ ಕಾಲೇಜುಗಳಿಗೆ ದಾಖಲಾಗಿದ್ದರು’ ಎಂದು ಮುಸ್ಲಿಂ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ರಿಯಾಜ್ ಅಹ್ಮದ್ ತಿಳಿಸಿದರು.

‘2022ರ ಹಿಜಾಬ್ ನಿಷೇಧದ ಆದೇಶವನ್ನು ವಿದ್ಯಾರ್ಥಿಗಳಲ್ಲಿ ವಿಭಜನೆ ಸೃಷ್ಟಿಸುವ ಸಾಧನವಾಗಿ ಬಳಸಲಾಯಿತು’ ಎನ್ನುತ್ತಾರೆ ಮಂಗಳೂರಿನ ಪಿ. ದಯಾನಂದ ಪೈ - ಪಿ. ಸತೀಶ್ ಪೈ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಪ್ರಾಂಶುಪಾಲ ರಾಜಶೇಖರ್ ಹೆಬ್ಬಾರ್. ಆ ಕಾಲೇಜಿನ 35 ವಿದ್ಯಾರ್ಥಿನಿಯರು ಶಿಕ್ಷಣ ಮೊಟಕುಗೊಳಿಸಿದ್ದರು.

ಉಪ ಮುಖ್ಯಮಂತ್ರಿ ದಾಕ್ಷಿಣ್ಯಕ್ಕೆ ದಲ್ಲಾಳಿಯಾಗಿರುವ ಮುಖ್ಯಮಂತ್ರಿ: ಎಚ್‌ಡಿಕೆ

‘ಸರ್ಕಾರದಿಂದ ರಿಯಲ್ ಎಸ್ಟೇಟ್ ವ್ಯವಹಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಡದಿ ಟೌನ್‌ಶಿಪ್ ಹೆಸರಿನಲ್ಲಿ ರಾಜ್ಯದ ಕಾಂಗ್ರೆಸ್ ಸರ್ಕಾರವು ಸ್ವತಃ ರಿಯಲ್ ಎಸ್ಟೇಟ್ ವ್ಯವಹಾರ ನಡೆಸಲು ಹೊರಟಿದೆ. ಇದನ್ನು ನಿಲ್ಲಿಸದಿದ್ದರೆ ಹೋರಾಟ ನಡೆಸುತ್ತೇವೆ’ ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ.ಕುಮಾರಸ್ವಾಮಿ ಎಚ್ಚರಿಕೆ ನೀಡಿದರು.



ಕುಮಾರಸ್ವಾಮಿ

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿಡದಿ ಟೌನ್‌ಶಿಪ್‌ನಲ್ಲಿ ನಿವೇಶನ ಮಾರಾಟ, ತೆರಿಗೆ ಮತ್ತಿತರ ಮೂಲಗಳಿಂದ 15 ವರ್ಷಗಳಲ್ಲಿ ₹33,000 ಕೋಟಿ ಆದಾಯ ಬರುತ್ತದೆ ಎಂದು ಅಧ್ಯಯನ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ಸಚಿವ ಸಂಪುಟ ಸಭೆಯಲ್ಲೂ ಇದನ್ನು ಒಪ್ಪಿದ್ದಾರೆ. ಇದು ರಿಯಲ್ ಎಸ್ಟೇಟ್ ವ್ಯವಹಾರವಲ್ಲದೆ ಮತ್ತೇನು’ ಎಂದು ಪ್ರಶ್ನಿಸಿದರು.

‘ಉಪ ಮುಖ್ಯಮಂತ್ರಿಯ ದಾಕ್ಷಿಣ್ಯಕ್ಕೆ ಬಲಿಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಿಯಲ್ ಎಸ್ಟೇಟ್ ದಲ್ಲಾಳಿ ಆಗಿದ್ದಾರೆ. ಇನ್ನೂ ಎರಡು ವರ್ಷ ತಮ್ಮ ಕುರ್ಚಿ ಉಳಿಯಬಹುದು ಎಂದು ಸಿದ್ದರಾಮಯ್ಯ ಹೀಗೆ ಮಾಡುತ್ತಿದ್ದಾರೆ’ ಎಂದರು.

‘2006ರಲ್ಲಿ ನಾನು ಬೆಂಗಳೂರಿನ ಸುತ್ತ ಐದು ಟೌನ್‌ಶಿಪ್‌ಗಳನ್ನು ನಿರ್ಮಾಣಕ್ಕೆ ಆದೇಶ ಹೊರಡಿಸಿದ್ದೆ. ಅದರ ವಿರುದ್ಧ ಕಾಂಗ್ರೆಸ್‌ನ ಎಚ್‌.ಕೆ. ಪಾಟೀಲರ ಅಧ್ಯಕ್ಷತೆಯಲ್ಲಿ ಸತ್ಯಶೋಧನಾ ಸಮಿತಿ ರಚಿಸಿ, ಒಂದು ವರದಿ ಸಿದ್ಧಪಡಿಸಿದ್ದರು. ಆಗ ಅದನ್ನು ವಿರೋಧಿಸಿದ್ದವರು ಈಗ ತಾವೇ ಬಿಡದಿ ಟೌನ್‌ಶಿಪ್ ನಿರ್ಮಿಸಲು ಹೊರಟಿದ್ದಾರೆ. ಕಾನೂನು ತಜ್ಞ ಎಚ್‌.ಕೆ. ಪಾಟೀಲರು ತಮ್ಮ ಸತ್ಯಶೋಧನಾ ಸಮಿತಿ ವರದಿಯನ್ನು ಜನರ ಮುಂದೆ ಇಡಲಿ’ ಎಂದು ಸವಾಲು ಹಾಕಿದರು.

‘ಬಿಡದಿ ರೈತರು, ರೈತರೇ ಅಲ್ಲ ಎಂದು ಉಪ ಮುಖ್ಯಮಂತ್ರಿ ಹೇಳುತ್ತಿದ್ದಾರೆ. ಜತೆಗೆ ಶೇ 80ರಷ್ಟು ರೈತರು ಒಪ್ಪಿಗೆ ನೀಡಿದ್ದಾರೆ ಎಂದೂ ಹೇಳುತ್ತಿದ್ದಾರೆ. ರೈತರೇ ಅಲ್ಲ ಎಂದಾದ ಮೇಲೆ ಶೇ 80ರಷ್ಟು ರೈತರು ಒಪ್ಪಿಗೆ ನೀಡಿದ್ದು ಹೇಗೆ? ಈ ವಿಚಾರದಲ್ಲಿ ಚರ್ಚಿಸಲು ಜಿಲ್ಲಾಧಿಕಾರಿ ಕಚೇರಿಗೆ ಬಂದಿದ್ದ ರೈತರನ್ನು ಒಳಗೆ ಬಿಡಲೇ ಇಲ್ಲ. ಜಿಲ್ಲಾಧಿಕಾರಿಯು ರಿಯಲ್ ಎಸ್ಟೇಟ್ ದಂಧೆಕೋರರ ಮಾತಿಗೆ ಕುಣಿಯುತ್ತಿದ್ದಾರೆ. ಈ ಬಗ್ಗೆ ಪ್ರಶ್ನಿಸಲು ನಾನು ಕರೆ ಮಾಡಿದರೂ ಜಿಲ್ಲಾಧಿಕಾರಿ ಕರೆ ಸ್ವೀಕರಿಸುವುದಿಲ್ಲ’ ಎಂದು ಆರೋಪಿಸಿದರು.

‘ಯಾವುದೇ ಕಾರಣಕ್ಕೂ ಭೂಮಿ ಕೊಡುವುದಿಲ್ಲ ಎನ್ನುತ್ತಿರುವ ರೈತರನ್ನು ಬೆದರಿಸುವ ಕೆಲಸ ಆಗುತ್ತಿದೆ. ಬೆದರಿಕೆಯ ಆಟ ನಮ್ಮ ಮುಂದೆ ನಡೆಯುವುದಿಲ್ಲ. ಭೂಮಿ ಬಿಟ್ಟು ಕೊಡುವ ಪ್ರಶ್ನೆಯೇ ಇಲ್ಲ. ಅದು ಹೇಗೆ ಭೂಮಿ ವಶಪಡಿಸಿಕೊಳ್ಳುತ್ತಾರೋ ಬಂದು ವಶಪಡಿಸಿಕೊಳ್ಳಲಿ’ ಎಂದು ಸವಾಲು ಹಾಕಿದರು.

‘ಹರಾಜು ಮನೆ’: ‘ಬೆಂಗಳೂರಿನಲ್ಲಿ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಸರ್ಕಾರದಲ್ಲಿ ಹಣವಿಲ್ಲ. ಹೀಗಾಗಿ ನಾಗರಿಕ ಬಳಕೆ ನಿವೇಶನ ಮತ್ತು ಸರ್ಕಾರಿ ಜಮೀನುಗಳನ್ನು ಅಡಮಾನಕ್ಕೆ ಇರಿಸಲು ಸಂಪುಟ ಸಭೆ ಒಪ್ಪಿಗೆ ನೀಡಿದೆ. ಸಂಪುಟ ಸಭೆಯನ್ನು ‘ಹರಾಜು ಮನೆ’ ಎಂದು ಕರೆಯಬೇಕಾದ ಸ್ಥಿತಿ ಬಂದಿದೆ’ ಎಂದು ಕುಮಾರಸ್ವಾಮಿ ಲೇವಡಿ ಮಾಡಿದರು.

‘1,570 ಎಕರೆ ಸರ್ಕಾರಿ ಜಮೀನು ಎಲ್ಲಿ?’

‘ಬಿಡದಿ ಟೌನ್‌ಶಿಪ್‌ಗೆ ಭೂಮಿ ಗುರುತಿಸುವ ಮುನ್ನ ಸಿದ್ಧಪಡಿಸಿದ್ದ ವರದಿಯಲ್ಲಿ, ಎಂಟು ಹಳ್ಳಿಗಳ ವ್ಯಾಪ್ತಿಯಲ್ಲಿ ಒಟ್ಟು 2,320 ಎಕರೆ ಸರ್ಕಾರಿ ಜಮೀನು ಇದೆ ಎಂದು ಉಲ್ಲೇಖಿಸಲಾಗಿತ್ತು. ಈಗ ಅಧಿಸೂಚನೆಯಲ್ಲಿ 750 ಎಕರೆ ಸರ್ಕಾರಿ ಜಮೀನು ಇದೆ ಎಂದಷ್ಟೇ ಉಲ್ಲೇಖಿಸಿದೆ. ಉಳಿದ 1,570 ಎಕರೆ ಸರ್ಕಾರಿ ಜಮೀನು ಯಾರ ಹೆಸರಿಗೆ ಹೋಯಿತು? ಅಧಿಕಾರಿಗಳಿಗೆ ಎಷ್ಟು ಭೂಮಿ ಹೋಗಿದೆ ಮತ್ತು ಶಾಸಕರಿಗೆ ಎಷ್ಟು ಜಮೀನು ಹೋಗಿದೆ? ಅದೆಲ್ಲವನ್ನೂ ತಮ್ಮ ಹೆಸರಿಗೆ ಮಾಡಿಕೊಂಡು ಸರ್ಕಾರದಿಂದ ಪರಿಹಾರ ಪಡೆಯಲು ಹೊರಟಿದ್ದಾರೆ’ ಎಂದು ಕುಮಾರಸ್ವಾಮಿ ಆರೋಪಿಸಿದರು.

‘ಬಿಡದಿಯ ಈಗಲ್‌ಟನ್ ರೆಸಾರ್ಟ್ ಸುತ್ತಮುತ್ತಲಿನ ಗ್ರಾಮಗಳನ್ನೇ ಟೌನ್‌ಶಿಪ್‌ಗೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ರೆಸಾರ್ಟ್ ಒಟ್ಟು 77 ಎಕರೆ ಸರ್ಕಾರಿ ಜಮೀನು ಒತ್ತುವರಿ ಮಾಡಿಕೊಂಡಿತ್ತು. ಆ ಜಮೀನಿಗೆ ತಲಾ ಎಕರೆಗೆ ₹12 ಕೋಟಿಯಂತೆ ಸರ್ಕಾರಕ್ಕೆ ₹980 ಕೋಟಿ ಪಾವತಿ ಮಾಡಬೇಕು ಎಂದು ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಯಿತು. 10 ವರ್ಷಗಳ ಹಿಂದೆ ಎಕರೆಗೆ ₹12 ಕೋಟಿ ನಿಗದಿ ಮಾಡಿ, ಈಗ ಪಕ್ಕದ ರೈತರ ಜಮೀನಿಗೆ ಎಕರೆಗೆ ₹2 ಕೋಟಿ ನಿಗದಿ ಮಾಡಿದ್ದಾರೆ. ಇದು ಯಾವ ನ್ಯಾಯ’ ಎಂದು ಪ್ರಶ್ನಿಸಿದರು.

‘ಸಮಾಜ ಕೂಡಿಸಿದ ನಾರಾಯಣ ಗುರು’

ನಾರಾಯಣ ಗುರು ನಿಗಮದ ನೂತನ ಕಚೇರಿ ಉದ್ಘಾಟಿಸಿದ ಸಭಾಧ್ಯಕ್ಷ ಖಾದರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ರಹ್ಮಶ್ರೀ ನಾರಾಯಣ ಗುರುಗಳ ತತ್ವ ಮತ್ತು ಆದರ್ಶಗಳು ಇಡೀ ಸಮಾಜವನ್ನು ಒಟ್ಟುಗೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಯಾವ ಜಾತಿ, ಧರ್ಮ, ಪಂಥ ದೊಡ್ಡದಲ್ಲ ಚಿಕ್ಕದೂ ಅಲ್ಲ ಎನ್ನುವ ಅವರ ಉದ್ಘೋಷ ಇಂದಿಗೂ ಪ್ರಸ್ತುತ ಎಂದು ವಿಧಾನಸಭಾ ಅಧ್ಯಕ್ಷ ಯು.ಟಿ. ಖಾದರ್ ಹೇಳಿದರು.



ಯು.ಟಿ. ಖಾದರ್

ಕರ್ನಾಟಕ ಗೃಹ ಮಂಡಳಿಯ ಕಟ್ಟಡದಲ್ಲಿ ನಾರಾಯಣ ಗುರು ನಿಗಮದ ನೂತನ ಕಚೇರಿಯನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

ನಿಗಮಕ್ಕೆ ನೀಡಿರುವ ಅನುದಾನವನ್ನು ಬಳಸಿಕೊಂಡು ಸಮಾಜದ ಕಟ್ಟ ಕಡೆಯ ವ್ಯಕ್ತಿಯನ್ನು ಮೇಲೆತ್ತುವ ಕಾರ್ಯಕ್ಕೆ ಮುನ್ನುಡಿ ಬರೆಯುವ ಕೆಲಸವನ್ನು ನಿಗಮದ ಅಧ್ಯಕ್ಷ ಮಂಜುನಾಥ್ ಪೂಜಾರಿ ಮಾಡಬೇಕು ಎಂದು ಸಲಹೆ ನೀಡಿದರು.

> ನಾರಾಯಣ ಗುರು ನಿಗಮವನ್ನು ಸ್ಥಾಪಿಸುವ ವಾಗ್ದಾನವನ್ನು ಕಾಂಗ್ರೆಸ್ ನೀಡಿತ್ತು. ಆ ಭರವಸೆಯನ್ನು ಈಡೇರಿಸಿದೆ. ಸರ್ವರನ್ನೂ ಮೇಲೆತ್ತುವ ಕೆಲಸಕ್ಕೆ ಇದು ದೊಡ್ಡ ಮುನ್ನುಡಿಯಾಗಲಿದೆ
> **ಮಧು ಬಂಗಾರಪ್ಪ,** ಶಿಕ್ಷಣ ಸಚಿವ

ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಮಾತನಾಡಿ, ‘ಮಹಾತ್ಮ ಗಾಂಧಿ ಅವರು ಅತ್ಯಂತ ಗೌರವದಿಂದ ನಾರಾಯಣ ಗುರುಗಳನ್ನು ಕಂಡಿದ್ದರು. ಅವರ ಹೆಸರಿನ ನಿಗಮವು ಸಮಸ್ತ ಜಾತಿ, ವರ್ಗ ಮತ್ತು ಪಂಥ ಒಂದುಗೂಡಿಸುವ ಕಾರ್ಯಕ್ಕೆ ಮುನ್ನುಡಿಯಾಗಲಿ’ ಎಂದು ಹಾರೈಸಿದರು.

ಮಾಜಿ ಸಚಿವ ರಮಾನಾಥ ರೈ, ಕೆಪಿಸಿಸಿ ಕಾರ್ಯಾಧ್ಯಕ್ಷ ವಿನಯ ಕುಮಾರ್ ಸೊರಕೆ, ಯುವ ಮುಖಂಡ ರಕ್ಷಿತ್ ಶಿವರಾಂ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ತುಳಸಿ ಮದ್ದಿನೇನಿ, ನಿಗಮದ ವ್ಯವಸ್ಥಾಪಕ ನಿರ್ದೇಶಕ ರಾಜೀವ್ ಕೂಲೆರ, ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎಂ.ಎ. ಗಫೂರ್, ಪತ್ರಕರ್ತ ದಿನೇಶ್ ಅಮಿನ್ ಮಟ್ಟು ಉಪಸ್ಥಿತರಿದ್ದರು.

‘ಮೂರ್ತೇದಾರರ ಪುನರ್ವಸತಿಗಾಗಿ ಪೈಲಟ್ ಯೋಜನೆ ಜಾರಿಗೆ’

‘ಮೂರ್ತೇದಾರರ ಪುನರ್ವಸತಿಗಾಗಿ ನಾರಾಯಣ ಗುರು ಅಭಿವೃದ್ಧಿ ನಿಗಮದಿಂದ ಪೈಲಟ್ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮೊದಲ ಹಂತದಲ್ಲಿ ಯೋಜನೆ ಜಾರಿಗೆ ತರಲಾಗುತ್ತಿದೆ. ಇಲ್ಲಿ ಯಶಸ್ವಿಯಾದ ಬಳಿಕ ಉಳಿದ ಜಿಲ್ಲೆಗಳಲ್ಲಿ ಜಾರಿಗೆ ತರಲಾಗುವುದು. ಒಟ್ಟು ಈ ಯೋಜನೆಗಾಗಿ ₹ 1.50 ಕೋಟಿ ತೆಗೆದಿರಿಸಲಾಗಿದ್ದು, ಸ್ವಂತ ಉದ್ಯೋಗಕ್ಕಾಗಿ ಫಲಾನುಭವಿಗಳಿಗೆ ₹ 5 ಲಕ್ಷ ನೀಡಲಾಗುತ್ತಿದೆ’ ಎಂದು ನಾರಾಯಣ ಗುರು ಅಭಿವೃದ್ಧಿ ನಿಗಮದ ಅಧ್ಯಕ್ಷ ಮಂಜುನಾಥ್ ಪೂಜಾರಿ ಅವರು ತಿಳಿಸಿದರು.

‘ನಿಗಮಕ್ಕೆ ರಾಜ್ಯ ಸರ್ಕಾರ ₹ 10 ಕೋಟಿ ರೂ ವಾರ್ಷಿಕ ಅನುದಾನ ನೀಡಿದೆ. ಅರಿವು ಶಿಕ್ಷಣ ಕಾರ್ಯಕ್ರಮಕ್ಕೆ ₹ 4 ಕೋಟಿ ಮತ್ತು ಗಂಗಾ ಕಲ್ಯಾಣ ಯೋಜನೆಗೆ ₹ 2.5 ಕೋಟಿ ತೆಗೆದಿರಿಸಲಾಗಿದೆ’ ಎಂದು ಮಾಹಿತಿ ನೀಡಿದರು.

ತರೀಕೆರೆ: ಕೊಳೆತ ಸ್ಥಿತಿಯಲ್ಲಿದ್ದ 30 ಚೀಲ ಗೋಧಿ ಪತ್ತೆ

ಪ್ರಜಾವಾಣಿ ವಾರ್ತೆ

ತರೀಕೆರೆ (ಚಿಕ್ಕಮಗಳೂರು): ಪಟ್ಟಣದ ರಾಷ್ಟ್ರೀಯ ಹೆದ್ದಾರಿ 206ರ ಬೈಪಾಸ್ ಸಮೀಪದ ಭದ್ರಾ ಮೇಲ್ದಂಡೆ ನಾಲೆ ಬಳಿ ಕೊಳೆತ ಸ್ಥಿತಿಯಲ್ಲಿದ್ದ 30ಕ್ಕೂ ಅಧಿಕ ಚೀಲ ಗೋಧಿ ಪತ್ತೆಯಾಗಿದೆ.

‘ತಾಲ್ಲೂಕಿನ ದೋರನಾಳು ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆಯ ಬಳಿ ಸುಮಾರು 80 ಚೀಲ ಗೋಧಿ ಹೂತಿಟ್ಟಿದ್ದ ಪ್ರಕರಣ ಕಳೆದ ತಿಂಗಳು ಪತ್ತೆಯಾಗಿತ್ತು. ಇದು ತನಿಖಾ ಹಂತದಲ್ಲಿ ಇರುವಾಗಲೇ ಮತ್ತೊಂದು ಪ್ರಕರಣ ಗೊತ್ತಾಗಿದೆ. ಆ ಶಾಲೆಯಿಂದ ನಾಲ್ಕೈದು ಕಿ.ಮೀ. ಅಂತರದಲ್ಲಿ ಈ ಪ್ರಕರಣ ನಡೆದಿದೆ’ ಎಂದು ಮುಖಂಡ ರಮೇಶ್ ಗೋವಿಂದೇಗೌಡ ತಿಳಿಸಿದ್ದಾರೆ.

‘ಈ ಗೋಧಿ ಸರ್ಕಾರಿ ವಸತಿ ಶಾಲೆಗಳಿಗೆ ಸಂಬಂಧಿಸಿದೆ. ಈ ಬಗ್ಗೆ ತನಿಖೆ ನಡೆಸಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಅವರು ಒತ್ತಾಯಿಸಿದ್ದಾರೆ.

37 ಮಂದಿ ಜೀತದಾಳುಗಳ ರಕ್ಷಣೆ

ಮರಿಯಮ್ಮನಹಳ್ಳಿ ಬಳಿ ಶೆಡ್‌ನಲ್ಲಿ ಕೂಡಿ ಹಾಕಿ ಕೆಲಸ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ತಾಲ್ಲೂಕಿನ ಮರಿಯಮ್ಮನಹಳ್ಳಿ ಹೋಬಳಿಯ ನಂದಿಬಂಡಿ ಎಂಬಲ್ಲಿ ಇಟ್ಟಿಗೆ ಬಟ್ಟಿಯಲ್ಲಿ ಜೀತದಾಳುಗಳಾಗಿದ್ದ ಒಡಿಶಾದ 37 ಮಂದಿಯನ್ನು ಜಿಲ್ಲಾಡಳಿತ ರಕ್ಷಿಸಿದ್ದು, ಗುರುವಾರ ರೈಲಿನಲ್ಲಿ ಅವರ ರಾಜ್ಯಕ್ಕೆ ಕಳುಹಿಸಿತು.

‘ಜೀತ ಪದ್ಧತಿ ಕುರಿತು ಸ್ಪಂದನ ಅಸೋಸಿಯೇಷನ್ ಎಂಬ ಸ್ವಯಂ-ಸೇವಾ ಸಂಘಟನೆಯಿಂದ ಮಾಹಿತಿ ಸಿಕ್ಕಿತು. ಶೆಡ್‌ಗಳಲ್ಲಿ ಕೆಲಸ ಮಾಡುತ್ತಿದ್ದ 37 ಜನರನ್ನು ಮಂಗಳವಾರ ರಕ್ಷಿಸಿ, ನಗರದ ಸರ್ಕಾರಿ ಹಾಸ್ಟೆಲ್ ಒಂದರಲ್ಲಿ ಇರಿಸಲಾಗಿತ್ತು. ಗುರುವಾರ ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಸ್. ಜಾಹ್ನವಿ, ಉಪವಿಭಾಗಾಧಿಕಾರಿ ಪಿ.ವಿವೇಕಾನಂದ ಹಾಗೂ ಇತರ ಅಧಿಕಾರಿಗಳು ಸಮ್ಮುಖದಲ್ಲಿ ರೈಲಿನಲ್ಲಿ ಒಡಿಶಾಕ್ಕೆ ಕಳುಹಿಸಲಾಯಿತು’ ಎಂದು ಜಿಲ್ಲಾಡಳಿತದ ಅಧಿಕಾರಿಯೊಬ್ಬರು ತಿಳಿಸಿದರು.

ಇಟ್ಟಿಗೆ ಕೆಲಸ ಮಾಡಿ, ಕಾರ್ಮಿಕರು ಶೆಡ್‌ನಲ್ಲಿ ಇರುತ್ತಿದ್ದರು. ಕಾರ್ಮಿಕ ಇಲಾಖೆಯ ನಿರೀಕ್ಷಕ ಜಿ.ಬಿ.ದೂಪದ್ ಅವರು ನೀಡಿದ ದೂರಿನನ್ವಯ ಮರಿಯಮ್ಮನಹಳ್ಳಿ ಠಾಣೆ ಪೊಲೀಸರು ಕಾರ್ಯಾಚರಣೆ ನಡೆಸಿದರು. ಶ್ರೀನಿವಾಸ್, ಮಹಾದೇವ ರಾವ್ ಮತ್ತು ವೆಂಕಟ ಪ್ರಸಾದ್ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ.



ಹೊಸಪೇಟೆ ರೈಲು ನಿಲ್ದಾಣದಲ್ಲಿ ಗುರುವಾರ ಒಡಿಶಾದ ಜೀತದಾಳುಗಳನ್ನು ಅವರ ಊರಿಗೆ ಕಳುಹಿಸಿಕೊಟ್ಟ ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ –ಪ್ರಜಾವಾಣಿ ಚಿತ್ರ

ಚುಟುಕು ಸುದ್ದಿ

ತುಂಡಾದ ಬೆರಳು ಮರುಜೋಡಣೆ

ಹೊಳೆನರಸೀಪುರ (ಹಾಸನ ಜಿಲ್ಲೆ): ಕುಡುಗೋಲಿನಲ್ಲಿ ಜೋಳದ ಕಡ್ಡಿ ಕತ್ತರಿಸುವಾಗ ಆಕಸ್ಮಿಕವಾಗಿ ತುಂಡಾದ ಬಾಲಕಿಯ ಬೆರಳನ್ನು ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಬುಧವಾರ ಮರು ಜೋಡಿಸಲಾಯಿತು.

ತಾಲ್ಲೂಕಿನ ಶ್ರವಣೂರು ಗ್ರಾಮದಲ್ಲಿ ಇರುವ ದೊಡ್ಡಪ್ಪನ ಮನೆಗೆ ಬಂದಿದ್ದ 13 ವರ್ಷದ ಬಾಲಕಿ ಸುಶ್ಮಿತಾ ಅವರ ಬೆರಳಿಗೆ ಡಾ.ಪ್ರತಿಭಾ ಅವರು ಒಂದು ಗಂಟೆ ಕಾಲ ಶಸ್ತ್ರಚಿಕಿತ್ಸೆ ಮಾಡಿ ಯಶಸ್ವಿಯಾಗಿ ಜೋಡಿಸಿದರು.

ಕಾಡುಕೋಣ ಸೆರೆ ಕಾರ್ಯಾಚರಣೆ ಆರಂಭ

ಕೊಪ್ಪ (ಚಿಕ್ಕಮಗಳೂರು): ಮಾನವ-ಪ್ರಾಣಿ ಸಂಘರ್ಷ ಕಡಿಮೆ ಮಾಡುವ ಭಾಗವಾಗಿ ರಾಜ್ಯದಲ್ಲಿ ಮೊದಲ ಬಾರಿಗೆ ಕಾಡುಕೋಣ ಸೆರೆ ಹಿಡಿದು ಸ್ಥಳಾಂತರ ಮಾಡಲು ಪ್ರಾಯೋಗಿಕ ಕಾರ್ಯಾಚರಣೆ ಕೈಗೊಳ್ಳಲಾಗಿದೆ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕ ಕುಮಾರ್ ಪುಷ್ಕರ್ ಹೇಳಿದರು.

ಕಾರ್ಯಾಚರಣೆಯನ್ನು ಕೊಪ್ಪ ಎಸ್ಟೇಟ್‌ನಲ್ಲಿ ಗುರುವಾರ ಆರಂಭಿಸಲಾಯಿತು. ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಸಾಮಾನ್ಯವಾಗಿ ಪುಂಡಾನೆ ಸೆರೆ ಹಿಡಿಯಲು ಸಾಕಾನೆಗಳನ್ನು ಬಳಸಲಾಗುತ್ತಿತ್ತು. ಇದೀಗ ಕಾಡುಕೋಣ ಸೆರೆಗೆ ಎರಡು ಆನೆಗಳನ್ನು ಬಳಸಲಾಗುತ್ತಿದೆ’ ಎಂದರು.

‘ಈ ತಂಡದಲ್ಲಿ ನನ್ನನ್ನು ಒಳಗೊಂಡಂತೆ ಹಿರಿಯ ಅಧಿಕಾರಿಗಳು, 6 ಮಂದಿ ತಜ್ಞ ವೈದ್ಯರು ಇದ್ದಾರೆ. ತುಂಬಾ ಎಚ್ಚರಿಕೆಯಿಂದ ಇದನ್ನು ನಿರ್ವಹಿಸಬೇಕಿದೆ’ ಎಂದರು.

ಶಾಸಕ ಟಿ.ಡಿ.ರಾಜೇಗೌಡ, ಕೆಪಿಸಿಸಿ ವಕ್ತಾರ ಸುಧೀರ್ ಕುಮಾರ್ ಮುರೊಳ್ಳಿ, ಚಿಕ್ಕಮಗಳೂರು ಸಿಸಿಎಫ್ ಯಶ್‌ಪಾಲ್ ಕ್ಷೀರಸಾಗರ, ಕೊಪ್ಪ ಅರಣ್ಯ ವಿಭಾಗದ ಡಿಸಿಎಫ್ ಶಿವಶಂಕರ್, ಇಲಾಖೆ ಸಿಬ್ಬಂದಿ ಇದ್ದರು. ಮಳೆ ಕಾರಣಕ್ಕೆ ಕಾರ್ಯಾಚರಣೆ ಶುಕ್ರವಾರಕ್ಕೆ ಮುಂದೂಡಲಾಯಿತು.

ಕೈಚೀಲದೊಳಗೆ ಸಿಲುಕಿದ ಮಂಗ



ಪ್ಲಾಸ್ಟಿಕ್ ಕವರ್‌ನೊಳಗೆ ಸಿಲುಕಿದ್ದ ಕೋತಿ

ಗುಂಡ್ಲುಪೇಟೆ: ತಾಲ್ಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಪ್ರವಾಸಿಗರು ಎಸೆದ ಕೈಚೀಲವನ್ನು ಧರಿಸಿದ ಮಂಗ ನಡೆಯಲಾಗದೆ ನಿಂತ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಗುರುವಾರ ಹರಿದಾಡಿತ್ತು.

‘ಅರಣ್ಯ ಹಾಗೂ ರಾಷ್ಟ್ರೀಯ ಹೆದ್ದಾರಿ ಸಾಗುವ ಮಾರ್ಗದಲ್ಲಿ ಪ್ರವಾಸಿಗರ ಬೇಜವಾಬ್ದಾರಿ ವರ್ತನೆಯು ಕಾಡುಪ್ರಾಣಿಗಳಿಗೆ ಕಂಟಕವಾಗಿ ಪರಿಣಮಿಸಿದೆ’ ಎಂದು ಪರಿಸರವಾದಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ತಮಿಳುನಾಡು ಹಾಗೂ ಕೇರಳ ಗಡಿಯ ಚೆಕ್‌ಪೋಸ್ಟ್‌ಗಳಲ್ಲಿ ಬಿಗಿ ತಪಾಸಣೆ ಇರುವುದರಿಂದ ದಂಡ ತಪ್ಪಿಸಿಕೊಳ್ಳಲು ಊಟಿ, ಕೊಯಮತ್ತೂರಿಗೆ ಬಂಡೀಪುರ ಮಾರ್ಗವಾಗಿ ತೆರಳುವವರಿಂದ ಇಂಥ ಕೃತ್ಯ ಹೆಚ್ಚಾಗಿದೆ.

‘ಮೇಲುಕಾಮನಹಳ್ಳಿ ಹಾಗೂ ಕೇರಳ ರಸ್ತೆಯ ಮದ್ದೂರು ಚೆಕ್‌ಪೋಸ್ಟ್ ಬಳಿ ತಿಂಗಳಿನಿಂದ ವಾಹನ ತಪಾಸಣೆ ಸಮರ್ಪಕವಾಗಿಲ್ಲ. ಹಸಿರು ಶುಲ್ಕ ಸಂಗ್ರಹಿಸುತ್ತಿರುವುದರಿಂದ ಪ್ರವಾಸಿಗರಿಗೆ ಅಂಜಿಕೆಯೇ ಇಲ್ಲದಂತಾಗಿದೆ’ ಎಂದು ಪರಿಸರಪ್ರೇಮಿ ಶ್ರೀಕಂಠ ಅಸಮಾಧಾನ ವ್ಯಕ್ತಪಡಿಸಿದರು.

ಹಿಮವಾದ್ ಗೋಪಾಲ ಸ್ವಾಮಿ ಬೆಟ್ಟದ ತಪ್ಪಲಿನ ಅಂಗಡಿಗಳಲ್ಲಿ ಪ್ಲಾಸ್ಟಿಕ್ ಬಾಟಲ್‌ಗಳನ್ನು ಮಾರಾಟ ಮಾಡದಂತೆ ನಿರ್ಬಂಧವಿದ್ದರೂ ಬಂಡೀಪುರದಲ್ಲಿ ಪ್ಲಾಸ್ಟಿಕ್ ಬಾಟಲಿಗಳ ಬಳಕೆಗೆ ಅವಕಾಶ ಮಾಡಿಕೊಡಲಾಗಿದೆ ಎಂಬ ದೂರುಗಳಿವೆ.

ತುಂಗಭದ್ರಾ ಅಣೆಕಟ್ಟೆ: ಚೈನ್ ಅಳವಡಿಕೆ ಆರಂಭ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯ ಹೊಸ ಕ್ರೆಸ್ಟ್‌ಗೇಟ್‌ಗಳಿಗೆ ಹೊಸ ಚೈನ್‌ಲಿಂಕ್ ಅಳವಡಿಸುವ ಕಾರ್ಯ ಗುರುವಾರ 33ನೇ ಕ್ರೆಸ್ಟ್‌ಗೇಟ್‌ನಿಂದ ಆರಂಭಿಸಲಾಯಿತು.

ಒಂದು ಕ್ರೆಸ್ಟ್‌ಗೇಟ್‌ಗೆ ಎರಡು ಚೈನ್‌ಗಳು ಬೇಕಿದ್ದು, ಚೆನ್ನೈಯಿಂದ ಬುಧವಾರ ಸಂಜೆ ಒಂದು ಸೆಟ್ ಚೈನ್ ಬಂದಿತ್ತು ‘ಈ ತಿಂಗಳಲ್ಲಿ ಎಲ್ಲಾ 33 ಸೆಟ್ ಚೈನ್‌ಗಳ (ಒಟ್ಟು 66) ಅಳವಡಿಕೆ ಪೂರ್ಣಗೊಳ್ಳಲಿದೆ. ಕಳೆದ ವರ್ಷ ಡಿ.24ರಿಂದ ಕ್ರೆಸ್ಟ್‌ಗೇಟ್ ಅಳವಡಿಕೆ ಆರಂಭವಾಗಿ, ಈ ವರ್ಷ ಏ.25ರಂದು ಪೂರ್ಣಗೊಂಡಿತ್ತು. ಈಗ ಎಲ್ಲವೂ ಅಂತಿಮ ಹಂತಕ್ಕೆ ಬಂದಿದೆ’ ಎಂದು ತುಂಗಭದ್ರಾ ಮಂಡಳಿಯ ಅಧಿಕಾರಿಗಳು ತಿಳಿಸಿದ್ದಾರೆ.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ ಸಾಮಾಜಿಕ ಅರಣ್ಯ ವಿಭಾಗ, ರಾಯಚೂರು

ಸಂಖ್ಯೆ:ಸಅಸಂ–ಸಾಅವಿರಾ– KPPP.ಪೋ.ಟೆಂಡರ– ಸಿಆರ್– /2026–27 ದಿನಾಂಕ:13–05–2026

ಸಂಕ್ಷಿಪ್ತ ಅಲ್ಪಾವಧಿ ಟೆಂಡರ ಪ್ರಕಟಣೆ

(**KPPP** ಎರಡನೇ ಆವೃತ್ತಿಯಲ್ಲಿನ ಪೋರ್ಟಲ್ ಮೂಲಕ)\ (ಎರಡನೇಯ ಬಾರಿಗೆ)

2026–27 ನೇ ಸಾಲಿನಲ್ಲಿ ರಾಯಚೂರು ಸಾಮಾಜಿಕ ಅರಣ್ಯ ವಿಭಾಗದ ವ್ಯಾಪ್ತಿಗೆ ಒಳಪಡುವ ಎಲ್ಲಾ ವಲಯಗಳಲ್ಲಿ 2026–27 ನೇ ಸಾಲಿನಲ್ಲಿ ಪ್ರಾದೇಶಿಕ ಅರಣ್ಯ ವಿಭಾಗದಲ್ಲಿ ನೊಂದಾಯಿತ ಅರಣ್ಯ ಗುತ್ತಿಗೆದಾರರಿಂದ ಸಾಮಾಜಿಕ ಅರಣ್ಯ ಯೋಜನೆ ಹಾಗೂ ಆರ್.ಕೆ.ವಿ.ವೈ ಯೋಜನೆಯಡಿಯಲ್ಲಿ ಯೋಜನೆಯಡಿಯ ಲೆಕ್ಕ ಶೀರ್ಷಿಕೆಗಳಡಿಯಲ್ಲಿ ನೆಡುತೋಪು ಪೋಷಣೆ, ನೆಡುತೋಪು ನಿರ್ಮಾಣ, ಸಸಿಗಳ ಪೋಷಣೆ ಹಾಗೂ ಸಸಿಗಳನ್ನು ಬೆಳಸಲು ಅರಣ್ಯೀಕರಣ ಕಾಮಗಾರಿಗಳಿಗಾಗಿ :http://kppp.karnataka.gov.in) ಪೋರ್ಟಲ್ ನಲ್ಲಿ ದಿನಾಂಕ: 13–05–2026 ರಿಂದ ದಿನಾಂಕ:22–05–2026 ರವರೆಗೆ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ ಕರೆಯಲಾಗಿದೆ. ದಿನಾಂಕ:25–05–2026 ರಂದು ತಾಂತ್ರಿಕ ಬಿಡ್. ಆರ್ಥಿಕ ಬಿಡ್ ದಿನಾಂಕ:26–05–2026 ರಂದು ತೆರೆಯಲಾಗುವುದು.

ಹೆಚ್ಚಿನ ವಿವರಗಳಿಗೆ ಕಛೇರಿಯ ನಾಮಫಲಕಕ್ಕೆ ಲಗತ್ತಿಸಿರುವ ಟೆಂಡರ ಪ್ರಕಟಣೆಯನ್ನು ಕಛೇರಿ ಸಮಯದಲ್ಲಿ ನೋಡಬಹುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು
ಸಾಮಾಜಿಕ ಅರಣ್ಯ ವಿಭಾಗ, ರಾಯಚೂರು

DIP/RCR/66/KSMC&A/68/2026-27

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬಾಗಲಕೋಟೆ

ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ

ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ:126, ನವನಗರ, ಬಾಗಲಕೋಟೆ
ದೂರವಾಣಿ: 08354- 235042 ಇ–ಮೇಲ್: bgkeezpe@yahoo.com ಫ್ಯಾಕ್ಸ್: 08354-235043

ಸಂ:ಕಾನಿಇಂ/ಪಂರಾಇವಿ/ಬಿಜಿಕೆ/ಪಿಬಿ–2,3/ಟೆಂಡರ್/2026–27/292 ದಿನಾಂಕ:14.05.2026

ಅಲ್ಪಾವಧಿ ಇ–ಪ್ರೊಕ್ಯೂರ್‌ಮೆಂಟ್ ಏಕ & ದ್ವಿ–ಲಕೋಟೆ ಟೆಂಡರ್ ಪ್ರಕಟಣೆ
ಕೆ.ಡಬ್ಲ್ಯೂ–1,2 & 3 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ ಸನ್ 2025–26ನೇ ಸಾಲಿನ ವಿವಿಧ ಲೆಕ್ಕಶೀರ್ಷಿಕೆಗಳಡಿ ಮಂಜೂರಾದ ಅನುದಾನದ ಅಡಿಯಲ್ಲಿ ಆಯ್ಕೆಯಾದ ಬಾಗಲಕೋಟೆ ಜಿಲ್ಲೆ ಬಾಗಲಕೋಟೆ, ಜಮಖಂಡಿ, ಬೀಳಗಿ, ಬಾದಾಮಿ ಹಾಗೂ ತೇರದಾಳ ವಿಧಾನಸಭಾ ಮತಕ್ಷೇತ್ರದ ಗ್ರಾಮೀಣ ರಸ್ತೆ, ಸೇತುವೆ ಕಾಮಗಾರಿಗಳಿಗೆ Standard Tender Document KW–2&3 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆಧ್ಯಾದೇಶ 1999–2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಏಕ & ದ್ವಿ–ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆ ಇಂಡೆಂಟ್ ನಂ: 23746, 25527, 24910, 25559, 25552, 25563, 25561, 24945, 25506, 25360, 26302, 24119/CALL–2, 22138/CALL–4, 22156/CALL–4 24948/CALL–2, 22521/CALL–3
ಪ್ರವರ್ಗ–2 (ಎ) ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ: 25581, 25508, 25361
ಪ್ರವರ್ಗ–1 ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ: 25636,
ಪರಿಶಿಷ್ಟ ಜಾತಿ ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ: 25557, 25554, 25568, 25585, 25507
ಪರಿಶಿಷ್ಟ ಪಂಗಡ ವರ್ಗದ ಗುತ್ತಿಗೆಯ ಇಂಡೆಂಟ್ ಸಂಖ್ಯೆ: 23745

ಇದ್ದು, ಕಾಮಗಾರಿಗಳ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (**ರೂ.10.00 ದಿಂದ 95.00** ಲಕ್ಷಗಳ ಮಿತಿಗೊಳಪಟ್ಟು), ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತ ಎಲ್ಲ ವಿವರಗಳು ಇ–ಪೋರ್ಟಲ್‌ನಲ್ಲಿ ಇದ್ದಂತೆ.

ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್–ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **03.06.2026 ರ ಸಾಯಂಕಾಲ 5.30 ಗಂಟೆಯವರೆಗೆ.**

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: **05.06.2026 ರಂದು ಮುಂಜಾನೆ 11.00 ಗಂಟೆಯ** ನಂತರ.

ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: ತಾಂತ್ರಿಕ ಬಿಡ್ ಅನುಮೋದನೆ ನಂತರ

ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಚೇರಿಗೆ ಅಥವಾ ವೆಬ್‌ಸೈಟ್ **karnataka.gov.in** ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಪಂಚಾಯತ ರಾಜ್ (ಇಂ)ವಿಭಾಗ,
ಬಾಗಲಕೋಟೆ.

ವಾ.ಸಾ.ಸಂಇ/ಬಾಗಲಕೋಟ/39/ದೇಶಪಾಂಡೆಪಬ್ಲಿಸಿಟಿ/2026–27

ಕರ್ನಾಟಕ ಗೃಹ ಮಂಡಳಿ

3, 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.

Karnataka Housing Board
Building communities

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಸೂರ್ಯನಗರ4ನೇ ಹಂತ/2026–27 ದಿನಾಂಕ: 14–05–2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯ ವತಿಯಿಂದ **ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಕಾಡುಜಕ್ಕನಹಳ್ಳಿ, ಇಂಡ್ಲವಾಡಿ, ಬಗ್ಗನದೊಡ್ಡಿ ಗ್ರಾಮಗಳ** ವಿವಿಧ ಸರ್ವೆ ನಂಬರ್ ಜಮೀನುಗಳಲ್ಲಿ ಅಭಿವೃದ್ಧಿಪಡಿಸಿರುವ ಸೂರ್ಯನಗರ 4ನೇ ಹಂತ ಬಡಾವಣೆಯ ಮಧ್ಯಂತರ ನಿವೇಶನಗಳನ್ನು ಇ–ಲಾಟರಿ ಮೂಲಕ ಹಂಚಿಕೆ ಮಾಡಲು ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

ಪರಿಷ್ಕೃತ ಅಂತಿಮ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿ ಪ್ರಕಟಣೆಯ ದಿನಾಂಕ ಮತ್ತು ಸ್ಥಳ	ಇ–ಲಾಟರಿ ನಡೆಯುವ ದಿನಾಂಕ ಮತ್ತು ಸ್ಥಳ	ಮಂಡಳಿಯ ಪ್ರಸ್ತುತ ದರ ಪ್ರತಿ ಚ.ಅ ಗೆ (ರೂ. ಗಳಲ್ಲಿ)
ದಿನಾಂಕ: 16–05–2026 ಸ್ಥಳ: 1) ಸೂರ್ಯನಗರ 4ನೇ ಹಂತ ಯೋಜನಾ ಕಛೇರಿ, ಜಿಗಣಿ, ಬೆಂಗಳೂರು – 560105. 2) ಕೇಂದ್ರ ಕಚೇರಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು – 09. 3) ಮಂಡಳಿಯ ವೆಬ್‌ಸೈಟ್: https://www.khb.karnataka.gov.in	ದಿನಾಂಕ: 23–05–2026 ಸ್ಥಳ: ಸೂರ್ಯನಗರ 4ನೇ ಹಂತ ಬಡಾವಣೆ, ಇಂಡ್ಲವಾಡಿ ಗ್ರಾಮ, ಬೆಂಗಳೂರು – 560105.	EWS - 1,425/- LIG - 2,850/- MIG - 2,900/- HIG-I - 2,950/- HIG-II - 2,975/-

ದಿನಾಂಕ: 23–05–2026 ರಂದು ಸೂರ್ಯನಗರ 4ನೇ ಹಂತ ಬಡಾವಣೆ, ಇಂಡ್ಲವಾಡಿ ಗ್ರಾಮ, ಬೆಂಗಳೂರು–560105, ಇಲ್ಲಿ ನಡೆಯುವ ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು ರವರ ಕಾರ್ಯಕ್ರಮದ ಸ್ಥಳದಲ್ಲಿ ಇ–ಲಾಟರಿ ಕಾರ್ಯಕ್ರಮವನ್ನು ನಡೆಸಲಾಗುವುದು.

ಪರಿಷ್ಕೃತ ಅಂತಿಮ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿಯನ್ನು ಮಂಡಳಿಯ ವೆಬ್‌ಸೈಟ್ https://www.khb.karnataka.gov.in ನಲ್ಲಿ ಪ್ರಕಟಿಸಲಾಗುವುದು.

ಹೆಚ್ಚಿನ ವಿವರಗಳಿಗಾಗಿ **ಕಾರ್ಯಪಾಲಕ ಅಭಿಯಂತರರು ಮತ್ತು ಸಹಾಯಕ ಕಂದಾಯ ಅಧಿಕಾರಿಗಳು, ಕರ್ನಾಟಕ ಗೃಹ ಮಂಡಳಿ, ಸೂರ್ಯನಗರ 4ನೇ ಹಂತ,** ಸ್ವಾಮಿ ವಿವೇಕಾನಂದ ಯೋಗ ವಿಶ್ವವಿದ್ಯಾಲಯ ರಸ್ತೆ, ನಂ.52, ಬಿ.ಎಸ್.ಆರ್. ಲೇಔಟ್, ಕೋನಸಂದ್ರ, ಜಿಗಣಿ, ಬೆಂಗಳೂರು–560105 ಇವರನ್ನು ಖುದ್ದಾಗಿ ಅಥವಾ ಮೊಬೈಲ್ ಸಂಖ್ಯೆ: **9845139612, 9448214736, 7892908417, 9513801127** ಹಾಗೂ **ಕಂದಾಯ ಅಧಿಕಾರಿಗಳು, ಹಂಚಿಕೆ ಶಾಖೆ,** ಕೇಂದ್ರ ಕಛೇರಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–9 ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: **080-22273511 Extn 306, 309** ರಲ್ಲಿ ಸಂಪರ್ಕಿಸಬಹುದು.

ಸಹಿ/–
ಗೃಹ ಆಯುಕ್ತರು
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು

ವಾಸಾಸಂಇ/ವಾಪ್ರ/675/ಎಂಎಎ/2026–27

ಉಡುಪಿ ನಗರಸಭೆ,
ಕವಿ ಮುದ್ದಣ್ಣ ಮಾರ್ಗ, ಉಡುಪಿ–576101
ದೂರವಾಣಿ ಸಂಖ್ಯೆ: 0820–2520306
ಇ–ಮೇಲ್:ka.udupi.cmc@gmail.com

ಸಂಖ್ಯೆ: UCMC/HS/SG-PKs/CR-94/2025-26 ದಿನಾಂಕ: 14–05–2026
UCMC/HS/MRF-33TPD/BO/CR-130/2024-25
UCMC/HS2/BP/CR-03/2026-27

ಟೆಂಡರ್ ಪ್ರಕಟಣೆ

ಕೆ.ಟಿ.ಟಿ.ಪಿ.ಕಾಯ್ದೆ 1999 ಮತ್ತು ನಿಯಮಗಳು 2000ರನ್ವಯ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಉಡುಪಿ ನಗರಸಭೆಯ ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ 29/05/2026 ವರೆಗೆ, ಅರ್ಹ ಗುತ್ತಿಗೆದಾರರು/ ಏಜನ್ಸಿಯವರು ಹೆಚ್ಚಿನ ವಿವರಗಳಿಗೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ https://kppp.karnataka.gov.in ಅಪ್‌ಲೋಡ್ ಮಾಡಿರುವ ಟೆಂಡರ್ ಡಾಕ್ಯುಮೆಂಟ್‌ನಲ್ಲಿ ಪಡೆಯಬಹುದು.

ಕ್ರ ಸಂ.	ಕೆಲಸದ ಹಸರು	ಟೆಂಡರ್ ಸಂಖ್ಯೆ	ಟೆಂಡರಿಗಿಟ್ಟ ಮೊತ್ತ	ಇ.ಎಂ.ಡಿ. ಮೊತ್ತ
1.	Supply of Safety Gears to Powra Karmikas of City Z Municipal Council, Udupi.	DMA/2026-27/IND6231	Rs. 12,07,941.56	As per KPP Portal
2.	Procurement of 01 number of Bag Opener	DMA/2026-27 /IND6229	Rs.21.56 Lakhs	
3.	Purchase of Bleaching Powder to Sewage treatment plant and Sanitation work of City Municipal Council, Udupi.	DMA/2026-27/IND6238	Rs. 14,16,000.00	

ಸಹಿ/– ಪೌರಾಯುಕ್ತರು, ಉಡುಪಿ ನಗರಸಭೆ

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ–571 401
(Autonomous Medical Institution, Government of Karnataka)
(Phone: 08232-231003, 222086, 231197, 224040,
Fax: 08232-231001)
E-Mail Address: mimsmandya@gmail.com

ಇ–ಟೆಂಡರ್ ಪ್ರಕಟಣೆ (ದ್ವಿಲಕೋಟೆ ಪದ್ಧತಿ)

ಸಂಖ್ಯೆ: ಮಿಮ್ಸ್/ಸರಬ(D)ಇ–ಟೆಂ/Suture/1/2026–27,
ದಿನಾಂಕ: 12.05.2026

ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಗೆ ಅವಶ್ಯವಿರುವ ವಿವಿಧ Suture Materials ಗಳನ್ನು (ಅಂದಾಜು ಮೊತ್ತ ರೂ.150.00 ಲಕ್ಷಗಳು) ಸರಬರಾಜು ಮಾಡಲು ಉತ್ಪಾದಕರವರಿಂದ/ ನೊಂದಾಯಿಸಲ್ಪಟ್ಟ ಅಧಿಕೃತ ಮಾರಾಟಗಾರರಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಟೆಂಡರ್ ಟೆಂಡರ್ ಪ್ರಕ್ರಿಯೆ ಮತ್ತಿತ್ತರ ವಿವರಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಸಿಸ್ಟಮ್ ಮುಖಾಂತರ https://kppp.karnataka.gov.in ವೆಬ್ ಸೈಟ್‌ನಲ್ಲಿ ವೀಕ್ಷಿಸಬಹುದು.

ಸಹಿ/– ನಿರ್ದೇಶಕರು, ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಮಂಡ್ಯ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/113/2025–26

ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮ ನಿಯಮಿತ
#1, ಸಿದ್ದಯ್ಯ ಪುರಾಣಿಕ್ ರಸ್ತೆ, ಕೆ.ಹೆಚ್.ಬಿ ಕಾಲೋನಿ, ಮಾಗಡಿ ರಸ್ತೆ, ಬೆಂಗಳೂರು 560079
ದೂರವಾಣಿ ಸಂಖ್ಯೆ: +91–80–29619801 ಇ–ಮೇಲ್: md.ksmscl@gmail.com

No: KSMSCL/EQPT/HFW/NQAS/TND/01/2026-27 Date: 14.05.2026

ಟೆಂಡರ್ ಪ್ರಕಟಣೆ

ಉಲ್ಲೇಖ : ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ :
1. KSMSCL/2026-27/IND0396 Date: 14.05.2026
2. KSMSCL/2026-27/SE0033 Date: 14.05.2026

ಇ–ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ಈ ಕೆಳಕಂಡ ರಾಷ್ಟ್ರವ್ಯಾಪ್ತಿ ಇ–ಟೆಂಡರ್ ಕರೆಯಲಾಗಿದೆ.

1. QUALITY ASSURANCE ಕಾರ್ಯಕ್ರಮದಡಿಯಲ್ಲಿ ಉಪಕರಣಗಳನ್ನು ಖರೀದಿಸಿ ಪೂರೈಸುವ ಟೆಂಡರ್–IND 0396"
2. KSMSCL ಕೇಂದ್ರ ಕಛೇರಿ ಹಾಗು ಜಿಲ್ಲಾ ಉಗ್ರಾಣಗಳಿಗೆ ಹೊರಗುತ್ತಿಗೆ ಆಧಾರದ ಮೇರೆಗೆ ಮಾನವ ಸಂಪನ್ಮೂಲ ಸೇವೆಗಳ ಪೂರೈಕೆಯ ಟೆಂಡರ್ -SE0033

ತಾಂತ್ರಿಕ ವಿವರಣೆ, ಇ.ಎಮ್.ಡಿ, ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಈ–ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ: https://kppp.karnataka.gov.in ನಲ್ಲಿ ಟೆಂಡರ್‌ಗಳ ದಾಸ್ತಾವೇಜುಗಳನ್ನು ಡೌನ್ ಲೋಡ್ ಮಾಡಬಹುದಾಗಿದ್ದು, ಹೆಚ್ಚಿನ ವಿವರಣೆಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/–
ಪ್ರಧಾನ ವ್ಯವಸ್ಥಾಪಕರು
ಕೆ.ಎಸ್.ಎಂ.ಎಸ್.ಸಿ.ಎಲ್, ಬೆಂಗಳೂರು

ವಾಸಾಸಂಇ/ವಾ.ಪ್ರ/676/ಎಸ್‌ಎಸ್‌ಸಿ/2026–27

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ

ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.ಕಾನಿಇಂಹಾ/ಪಿಬಿ/ಗುತ್ತಿಗೆ/5054–3054–4059/2026–27/571 ದಿನಾಂಕ : 12–05–2026

ಇ–ಟೆಂಡರ್ ಪ್ರಕಟಣೆ

ದಿನಾಂಕ:12–05–2026ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ 34923 & 35366ರ ಕಾಮಗಾರಿಗಳ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **22–06–2026** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ಮತ್ತು ಕಾಮಗಾರಿಗಳ ಇಂಡೆಂಟ್ ಸಂಖ್ಯೆ 33686–2ನೇ ಕರೆ, 34538–2ನೇ ಕರೆ, 34804–2ನೇ ಕರೆ, 34805–2ನೇ ಕರೆ, 34815–2ನೇ ಕರೆ ಮತ್ತು 34083ರ ಕಾಮಗಾರಿಗಳ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : **21–05–2026** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ http://www.kppp.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.

ಸೂಚನೆ : ಕಾರಣಾಂತರಗಳಿಂದ ಕೆಳಗೆ ತಿಳಿಪಡಿಸಿದ ಗುತ್ತಿಗೆ ದಿನಾಂಕಗಳು ಬದಲಾದಲ್ಲಿ, ಮರು ಗುತ್ತಿಗೆ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.

ಸಹಿ/– (ಎಸ್.ಎಸ್.ಪಾಟೀಲ) ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.

ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/92/2026–27

ಕರ್ನಾಟಕ ಸರ್ಕಾರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ವಿಜಯನಗರ
E-mail:dhovijayanagara21@gmail.com. Telephone: 08394-227040

ಸಂಖ್ಯೆ:ಜಿಆಕುಕ/ಟೆಂಡರ್ ಪ್ರಕಟಣೆ/ಜಿ.ಆ/04/2025–26 ದಿನಾಂಕ:13.05.2026

ಅಲ್ಪಾವಧಿ ಮರು–ಟೆಂಡರ್ ಪ್ರಕಟಣೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ ವಿಜಯನಗರ ಇದರ ಅಧಿನದ ನೂತನ 250 ಹಾಸಿಗೆ ಸಾಮರ್ಥ್ಯದ ಜಿಲ್ಲಾ ಆಸ್ಪತ್ರೆ, ಹೊಸಪೇಟೆಗೆ 2024–25 ನೇ ಸಾಲಿನ ಕೆ.ಕೆ.ಆರ್.ಡಿ.ಬಿ. ಅನುದಾನದಡಿಯಲ್ಲಿ **O.B.G, ORTHOPEDIC, OPTHALMOLOGY, DENTAL& ENT** ವಿಭಾಗಗಳಿಗೆ ಅವಶ್ಯವಿರುವ ವಿವಿದ ವೈದ್ಯಕೀಯ ಉಪಕರಣಗಳನ್ನು ಸರಬರಾಜು ಮಾಡಲು ಇ–ಸಂಗ್ರಹಣ ಕೋಶದ ವೆಬ್ ಸೈಟ್**(https://kppp.karnataka.gov.in)** ಮೂಲಕ ಅಲ್ಪಾವದಿ ಮರು ಟೆಂಡರನ್ನು ಆಹ್ವಾನಿಸಲಾಗಿದೆ. ಆಸಕ್ತ ಅರ್ಹ ಟೆಂಡರ್ ದಾರರು ದಿನಾಂಕ:13.05.2026 ರಿಂದ ದಿನಾಂಕ:20..05.2026 ರ ಸಮಯ ಸಾಯಂಕಾಲ 05:00ಗಂಟೆಯವರೆಗೆ ಟೆಂಡರನ್ನು ಅಪ್‌ಲೋಡ್ ಮಾಡಬಹುದಾಗಿದೆ. (ಟೆಂಡರ್ ಮೊತ್ತ ರೂ.141.99ಲಕ್ಷ) **(INDENT NUMBER:DHFWS/2025-26/IND2112/CALL-2)**

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 08394–227040 ಕಛೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ ಅಥವಾ ಮುದ್ದಾಂ ಪಡೆಯಬಹುದಾಗಿದೆ.

ಸಹಿ/–ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ವಿಜಯನಗರ

ವಾ.ಸಾ.ಸಂ.ಇ/ವಿಜಯನಗರ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/75

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಬೆವಿಕಂ ವಿಚಾರಣೆ ಸಂಖ್ಯೆ: **ಬೆವಿಕಂ/2026–27/ಐಎನ್‌ಡಿ0259**ರ ಮೂಲಕ ಬೆವಿಕಂನ ಪಶ್ಚಿಮ ವೃತ್ತ ಪ್ರದೇಶಕ್ಕೆ ಅವಶ್ಯಕವಿರುವ 100ಕೆವಿಎ ಮತ್ತು 250ಕೆವಿಎ ವಿತರಣಾ ಪರಿವರ್ತಕಗಳಿಗೆ ಸೂಕ್ತವಾದ **ಎಲ್.ಟಿ ಡಿಸ್ಟ್ರಿಬ್ಯೂಷನ್ ಬಾಕ್ಸ್ ಗಳನ್ನು** ಟೆಂಡರ್ ನಿರ್ದಿಷ್ಟತೆ ಪ್ರಕಾರ ಖರೀದಿಸಲು ಟೆಂಡರ್‌ಗಳನ್ನು ಆಹ್ವಾನಿಸಿದೆ.

ಬಿಡ್ ದಾಸ್ತಾವೇಜು ಲಭ್ಯತೆಯ ದಿನಾಂಕ: **15.05.2026.** ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **14.06.2026 ಸಂಜೆ 5:00 ಗಂಟೆವರೆಗೆ.** ಬಿಡ್ ದಾಸ್ತಾವೇಜು ತೆರೆಯುವಿಕೆ ದಿನಾಂಕ: **15.06.2026 ರಂದು ಸಂಜೆ 5:15 ಗಂಟೆಗೆ.**

ಟೆಂಡರಿನ ಸಂಬಂಧಿಸಿದ ವಿಚಾರಣೆ ಬಗ್ಗೆ ವಿವರಗಳನ್ನು ಕೆಪಿಪಿ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in.** ನಲ್ಲಿ ಪಡೆಯಬಹುದು. ಆಸಕ್ತ ಬಿಡ್ಡುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಾಗಿ ಬಿಡ್ಡುದಾರರು ಕೆಪಿಪಿ ಸಹಾಯವಾಣಿ: **(+91-8046010000, +91-8068948777)** ಸಂಪರ್ಕಿಸಿ ಅಥವಾ ಇ–ಮೇಲ್: **support@eprochelpdesk.com** ನಿಂದ ಸಹಾಯವನ್ನು ಪಡೆದುಕೊಳ್ಳಬಹುದು.

ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಚೇರಿಯಿಂದ ಪಡೆಯಬಹುದು.

ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು (ವಿದ್ಯುತ್),
ಖರೀದಿ, ನಿಗಮ ಕಾರ್ಯಾಲಯ,
ಬೆ.ವಿ.ಕಂ, 2ನೇ ಮಹಡಿ, ಕೆ.ಆರ್. ವೃತ್ತ,
ಬೆಂಗಳೂರು– 560001.

ವಿದ್ಯುತ್ ಸಂಬಂಧಿತ ದೂರಗಳಿಗೆ ಕರೆಮಾಡಿ : 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಉನ್ನತ ಶಿಕ್ಷಣ ಇಲಾಖೆ
6ನೇ ಮಹಡಿ, 2ನೇ ಗೇಟ್, ಬಹುಮಹಡಿಗಳ ಕಟ್ಟಡ,
ಡಾ॥ ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು–560001

ಸಂ.: ಇಡಿ 18 ಯುಎನ್‌ಇ 2026 ದಿನಾಂಕ: 14.05.2026

ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯ ನೇಮಕಾತಿ

ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ, 2000ರ ಪ್ರಕರಣ 14(2)ರನ್ವಯ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ಸರ್ಕಾರ ಉನ್ನತ ಶಿಕ್ಷಣ ಇಲಾಖೆಯು ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಗೆ ಅರ್ಜಿ ಆಹ್ವಾನಿಸಿದೆ. ಈ ಅಧಿಸೂಚನೆಯ ದಿನಾಂಕದಿಂದ 30 ದಿನಗಳ ಒಳಗಾಗಿ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿ ನಮೂನೆ ಮತ್ತು ಈ ಸಂಬಂಧ ಹೆಚ್ಚಿನ ವಿವರಗಳನ್ನು ಉನ್ನತ ಶಿಕ್ಷಣ ಇಲಾಖೆಯ https://hed.karnataka.gov.in ಅಧಿಕೃತ ಜಾಲತಾಣದಿಂದ ಪಡೆಯಬಹುದು.

ಸಹಿ/–
ಸರ್ಕಾರದ ಉಪ ಕಾರ್ಯದರ್ಶಿ (ವಿಶ್ವವಿದ್ಯಾಲಯಗಳು)
ಉನ್ನತ ಶಿಕ್ಷಣ ಇಲಾಖೆ

DIPR/CP/651/SA//2026-27

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೈಸೂರು ವಿಭಾಗ, ಮೈಸೂರು.
www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810

ಈ ಕಛೇರಿ ಅಲ್ಪಾವಧಿ ಐಟಂವಾರು ಟೆಂಡರ್ ಪ್ರಕಟಣೆ
ಸಂ:36/2025–26/2ನೇ ಕರೆ ದಿನಾಂಕ:12.05.2026

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಲೆಕ್ಕಶೀರ್ಷಿಕೆ: 5054–80–190–0–01–132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ – ಬಂಡವಾಳ ವೆಚ್ಚಗಳಡಿ ಅನುಮೋದನೆಯಾಗಿರುವ ಈ ವಿಭಾಗದಡಿಯಲ್ಲಿನ ತಿ.ನರಸೀಪುರ ಉಪವಿಭಾಗ ವ್ಯಾಪ್ತಿಯ “ಟಿ ನರಸೀಪುರ ತಾಲ್ಲೂಕು, ಶ್ರೀರಂಗಪಟ್ಟಣ ಮಲೈಮಹದೇಶ್ವರ ಬೆಟ್ಟ ರಸ್ತೆ (ರಾಜ್ಯ ಹೆದ್ದಾರಿ 79)ರ ಸರಪಳಿ 35.20 ಕಿಮೀ ನಲ್ಲಿ ರಾಮಸ್ವಾಮಿ ನಾಲೆಗೆ (ವ್ಯಾಸರಾಜಪುರ ಗ್ರಾಮದ ಹತ್ತಿರ) ಅಡ್ಡಲಾಗಿ ಸೇತುವೆಯ ಮರು ನಿರ್ಮಾಣ ಕಾಮಗಾರಿಗೆ” ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–4ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟ್‌ಲ್ ನಲ್ಲಿ ನೊಂದಾಯಿಸಿರುವ “ಅರ್ಹ” ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟ್‌ಲ್‌ನಲ್ಲಿ (viz https://kppp.karnataka.gov.in/) ದಿ:12.05.2026 ರಿಂದ 20.05.2026ರ ಸಂಜೆ 17:00 ರವರೆಗೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಕನಿಷ್ಟ ಮೊತ್ತ ರೂ.201.77 ಲಕ್ಷಗಳು ಹಾಗೂ ಇ.ಎಂ.ಡಿ ರೂ.3.03 ಲಕ್ಷಗಳಾಗಿರುತ್ತದೆ. ಕಾಮಗಾರಿಯನ್ನು ಪೂರ್ಣಗೊಳಿಸುವ ಕಾಲಮಿತಿ: 05 ತಿಂಗಳುಗಳು(ಮಳೆಗಾಲ ಸೇರಿದಂತೆ) ಸದರಿ ಕಾಮಗಾರಿಯ ಪೂರ್ವಭಾವಿ ಸಭೆಯನ್ನು ದಿ:16.05.2026ರ ಬೆಳಿಗ್ಗೆ 11.00 ಗಂಟೆಗೆ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಏರ್ಪಡಿಸಲಾಗಿದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸೂಚನೆ: 1) ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. **2)** ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್

DIPR/DDMYS/176/KSMCA/136/2026-27

ಬಳಕೆದಾರರ ಮೇಲೂ ಬೀಳುತ್ತೆ 'ಕೇಸ್'

ಮಾದಕ ವಸ್ತು ಮಾರಾಟ ಕಡಿವಾಣಕ್ಕೆ ಪಣ ● ಪೇಯಿಂಗ್ ಗೆಸ್ಟ್, ಹಾಸ್ಟೆಲ್, ಕಾಲೇಜುಗಳ ಮೇಲೂ ದಿಢೀರ್ ದಾಳಿಗೆ ನಿರ್ಧಾರ

● ಆದಿತ್ಯ ಕೆ.ಎ.

ಪ್ರಕರಣಗಳ ವಿವರ...

ವರ್ಷ	ಪೆಡ್ಲರ್ ವಿರುದ್ಧದ ಪ್ರಕರಣ	ಗ್ರಾಹಕರ ವಿರುದ್ಧದ ಪ್ರಕರಣ	ಒಟ್ಟು
2024	498	32	530
2025	502	900	1,402
2026*	256	1,800	2,056

(*ಮೇ 12ರ ವರೆಗೆ)

ಬೆಂಗಳೂರು: ಮಾದಕ ವಸ್ತುಗಳ ಮಾರಾಟಕ್ಕೆ ಕಡಿವಾಣ ಹಾಕಲು ಪಣ ತೊಟ್ಟಿರುವ ನಗರ ಪೊಲೀಸರು, ಬರೀ ಡ್ರಗ್ ಪೆಡ್ಲರ್‌ಗಳು ಹಾಗೂ ಖರೀದಿದಾರರ ಮೇಲಷ್ಟೇ ಪ್ರಕರಣ ದಾಖಲಿಸುತ್ತಿಲ್ಲ. ಅವರೊಂದಿಗೆ 'ಡ್ರಗ್ಸ್ ಬಳಕೆದಾರರ'(ಗ್ರಾಹಕರು) ಮೇಲೂ ಹದ್ದಿನ ಕಣ್ಣಿಟ್ಟು, ಪ್ರಕರಣ ದಾಖಲಿಸುತ್ತಿದ್ದಾರೆ.

ಕಳೆದ ನಾಲ್ಕೂವರೆ ತಿಂಗಳಲ್ಲಿ ಪೆಡ್ಲರ್‌ಗಳ ವಿರುದ್ಧ ದಾಖಲಾದ ಪ್ರಕರಣಗಳಿಗಿಂತಲೂ 'ಬಳಕೆದಾರರ' ವಿರುದ್ಧವೇ ಹೆಚ್ಚಿನ ಪ್ರಕರಣಗಳನ್ನು ದಾಖಲು ಮಾಡಿಕೊಂಡು ಬಿಸಿ ಮುಟ್ಟಿಸಿದ್ದಾರೆ.

ಡ್ರಗ್ಸ್ ತೆಗೆದುಕೊಂಡು ಮೊದಲ ಬಾರಿಗೆ ಪೊಲೀಸರಿಗೆ ಸಿಕ್ಕಿಬಿದ್ದರೆ ಎಚ್ಚರಿಕೆ ನೀಡಿ ಮನೆಗೆ ಕಳುಹಿಸುತ್ತಾರೆ. ಎರಡು ಅಥವಾ ಮೂರನೇ ಬಾರಿ ಸಿಕ್ಕಿಬಿದ್ದರೆ ಜೈಲಿಗೆ ಹೋಗಬೇಕಾದ ಪರಿಸ್ಥಿತಿಯೂ ಬರಲಿದೆ. ಡ್ರಗ್ಸ್ ದಂಧೆಗೆ ಕಡಿವಾಣ ಹಾಕಲು, ಬಳಕೆದಾರರ ಮೇಲೂ ನಿಗಾ ಇಡಲಾಗುತ್ತಿದೆ ಎಂದು ಸಿಸಿಬಿ ಮೂಲಗಳು ಹೇಳಿವೆ.

2023ರಲ್ಲಿ ಡ್ರಗ್ಸ್ ಬಳಕೆದಾರರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳುತ್ತಿರಲಿಲ್ಲ. 2024ರಲ್ಲಿ ಬಳಕೆದಾರರ ಮೇಲೂ ಪ್ರಕರಣ ದಾಖಲಿಸಲು ಆರಂಭಿಸಲಾಗಿತ್ತು. ಆ ವರ್ಷ ಕೇವಲ 32 ಪ್ರಕರಣಗಳನ್ನಷ್ಟೇ ದಾಖಲು ಮಾಡಲಾಗಿತ್ತು. ಆದರೆ, ಈ ವರ್ಷ(2026) ಬಳಕೆದಾರರ ಮೇಲೆ ಹೆಚ್ಚಿನ ನಿಗಾ ಇಡುವಂತೆ ಹಿರಿಯ ಅಧಿಕಾರಿಗಳು ಸೂಚನೆ ನೀಡಿದ್ದು, ಜನವರಿ 1ರಿಂದ ಮೇ 12ರ ತನಕ ಬಳಕೆದಾರರ ವಿರುದ್ಧವೇ 1,800 ಪ್ರಕರಣ ದಾಖಲು ಮಾಡಲಾಗಿದೆ. ಸಾಫ್ಟ್‌ವೇರ್ ಉದ್ಯೋಗಸ್ಥರು, ಕಾಲೇಜು ವಿದ್ಯಾರ್ಥಿಗಳು ಮತ್ತು ಶ್ರೀಮಂತ ಕುಟುಂಬದಿಂದ ಬಂದ ಯುವಕ–ಯುವತಿಯರನ್ನೇ ಗುರಿ ಆಗಿಸಿಕೊಂಡು ಡ್ರಗ್ಸ್ ಜಾಲ ಕೆಲಸ ಮಾಡುತ್ತಿದೆ. ಕಾಲೇಜು, ಪೇಯಿಂಗ್ ಗೆಸ್ಟ್‌ಗಳು ಹಾಗೂ ಹಾಸ್ಟೆಲ್‌ಗಳ ಬಳಿ ಮಾದಕ ವಸ್ತುಗಳ ಮಾರಾಟ ದಂಧೆ ನಡೆಯುತ್ತಿದೆ. ಪೆಡ್ಲರ್‌ಗಳು ಕದ್ದುಮುಚ್ಚಿ ಮಧ್ಯವರ್ತಿಗಳಿಗೆ ಡ್ರಗ್ಸ್ ಪೂರೈಸುತ್ತಾರೆ. ಅವರು ವಿದ್ಯಾರ್ಥಿಗಳು ಹಾಗೂ ಟೆಕಿಗಳಿಗೆ ಮಾರಾಟ ಮಾಡುತ್ತಾರೆ.

ದಿಢೀರ್ ದಾಳಿಗೆ ಸಿದ್ಧತೆ: ಪಶ್ಚಿಮ ವಿಭಾಗದ ಆರು ಶಿಕ್ಷಣ ಸಂಸ್ಥೆಗಳು, ಎರಡು ಹಾಸ್ಟೆಲ್‌ಗಳ ಮೇಲೆ ಕಳೆದ ಮಾರ್ಚ್‌ನಲ್ಲಿ ದಾಳಿ ನಡೆಸಿ ವಿದ್ಯಾರ್ಥಿಗಳನ್ನು ತಪಾಸಣೆಗೆ ಒಳಪಡಿಸಲಾಗಿತ್ತು. 1,200 ವಿದ್ಯಾರ್ಥಿಗಳ ಮೂತ್ರದ ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಲಾಗಿತ್ತು. ಆ ಪೈಕಿ 31 ವಿದ್ಯಾರ್ಥಿಗಳು ಡ್ರಗ್ಸ್ ತೆಗೆದುಕೊಂಡಿರುವುದು ವೈದ್ಯಕೀಯ ಪರೀಕ್ಷೆಯಿಂದ ದೃಢಪಟ್ಟಿತ್ತು. ಮುಂದಿನ ದಿನಗಳಲ್ಲಿ ಪೂರ್ವ, ಆಗ್ನೇಯ, ಉತ್ತರ, ದಕ್ಷಿಣ, ಈಶಾನ್ಯ, ವಾಯವ್ಯ ವಿಭಾಗಗಳ ವ್ಯಾಪ್ತಿಯ ಶಿಕ್ಷಣ ಸಂಸ್ಥೆಗಳು, ಹಾಸ್ಟೆಲ್‌ಗಳು ಹಾಗೂ ಪೇಯಿಂಗ್ ಗೆಸ್ಟ್‌ಗಳ ಮೇಲೂ ಇದೇ ಮಾದರಿಯಲ್ಲಿ ದಾಳಿ ನಡೆಸಿ ಅಲ್ಲಿನ ನಿವಾಸಿಗಳನ್ನು ತಪಾಸಣೆಗೆ ಒಳಪಡಿಸಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಿದೇಶಗಳಿಂದಲೇ ಹೆಚ್ಚು ಪೂರೈಕೆ: ಬೆಂಗಳೂರಿಗೆ ಹೆಚ್ಚಿನ ಪ್ರಮಾಣದಲ್ಲಿ ಸಿಂಥೆಟಿಕ್ ಮಾದರಿಯ ಡ್ರಗ್ಸ್ ವಿದೇಶದಿಂದ ಪೂರೈಕೆ ಆಗುತ್ತಿದೆ. ವಿಮಾನದ ಕಾರ್ಗೊ ಸೇವೆಯಲ್ಲಿ ಕಳ್ಳ ಸಾಗಣೆಯ ಮೂಲಕ ಬೆಂಗಳೂರಿಗೆ ಡ್ರಗ್ಸ್ ತಂದು, ಇಲ್ಲಿಂದ ದೇಶದ ಬೇರೆ ಬೇರೆ ನಗರಗಳಿಗೆ ಪೂರೈಕೆ ಮಾಡಲಾಗುತ್ತಿದೆ ಎಂದು ತನಿಖಾಧಿಕಾರಿಯೊಬ್ಬರು ಹೇಳಿದರು.

ಥಾಯ್ಲೆಂಡ್‌ನಲ್ಲಿ ನೆಲಸಿರುವ ಕೆಲವು ಭಾರತೀಯರು ಅಲ್ಲಿಂದ ನೇರವಾಗಿ ಬೆಂಗಳೂರಿಗೆ ಮಾದಕ ವಸ್ತುಗಳನ್ನು ಪೂರೈಸುತ್ತಿದ್ದಾರೆ. ಥಾಯ್ಲೆಂಡ್‌ನಲ್ಲಿ ಸುಲಭವಾಗಿ ಸಿಗುವ ಹೈಡ್ರೊ ಗಾಂಜಾವನ್ನು 'ಎಂಜಿನಿಯರಿಂಗ್ ಪ್ಯಾಕಿಂಗ್' ಮೂಲಕ ಕಾರ್ಗೊ ಸೇವೆಯ ಮೂಲಕ ಸಾಗಿಸಲಾಗುತ್ತಿದೆ. ಚಿನ್ನದ ಕಳ್ಳ ಸಾಗಣೆಯ ಮೇಲೆ ಕಂದಾಯ ಗುಪ್ತಚರ ನಿರ್ದೇಶನಾಲಯ(ಡಿಆರ್‌ಐ) ಹಾಗೂ ಕಸ್ಟಮ್ಸ್ ಅಧಿಕಾರಿಗಳು ಹೆಚ್ಚಿನ ನಿಗಾ ವಹಿಸಿದ್ದಾರೆ. ಹೀಗಾಗಿ, ಚಿನ್ನ ಕಳ್ಳ ಸಾಗಣೆ ಮಾಡುತ್ತಿದ್ದವರು ಇದೀಗ ಮಾದಕ ವಸ್ತುಗಳ ಪೂರೈಕೆ ದಂಧೆಗೆ ಇಳಿದಿದ್ದಾರೆ. ಹೀಗಾಗಿ, ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲೇ ತಪಾಸಣೆ ಬಿಗಿಗೊಳಿಸಲಾಗಿದೆ ಎಂದು ಕಸ್ಟಮ್ಸ್ ಅಧಿಕಾರಿಯೊಬ್ಬರು ತಿಳಿಸಿದರು.



ಹಿಂದೆ ಡ್ರಗ್ಸ್ ಬಳಕೆದಾರರ ಮೇಲೆ ಕ್ರಮ ತೆಗೆದುಕೊಳ್ಳುತ್ತಿರಲಿಲ್ಲ. ಇದೀಗ ಡ್ರಗ್ಸ್ ಬಳಕೆದಾರರ ವಿರುದ್ಧವೂ ಕ್ರಮ ಕೈಗೊಳ್ಳಲಾಗುತ್ತಿದೆ

ಜಿ.ಪರಮೇಶ್ವರ, ಗೃಹ ಸಚಿವ



ಪೆಡ್ಲರ್‌ಗಳಿಂದ ವಶಕ್ಕೆ ಪಡೆದಿರುವ ವಿವಿಧ ಮಾದರಿಯ ಡ್ರಗ್ಸ್

₹190 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಈ ವರ್ಷ ಬೆಂಗಳೂರಿನಲ್ಲಿ ಡ್ರಗ್ಸ್ ವಿರುದ್ಧ ಕಾರ್ಯಾಚರಣೆಯನ್ನು ತೀವ್ರಗೊಳಿಸಲಾಗಿದೆ. ಅದರ ಪರಿಣಾಮವೇ ಹೆಚ್ಚು ಪ್ರಕರಣ ದಾಖಲಾಗಿವೆ ಎಂದು ಸಿಸಿಬಿ ಮೂಲಗಳು ಹೇಳಿವೆ.

2026ರ ಜನವರಿ 1ರಿಂದ ಮೇ 12ರ ತನಕ ನಗರದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ₹190.18 ಕೋಟಿ ಮೌಲ್ಯದ ನೈಸರ್ಗಿಕ ಹಾಗೂ ಸಿಂಥೆಟಿಕ್ ಮಾದರಿ ಡ್ರಗ್ಸ್ ಜಪ್ತಿ ಮಾಡಲಾಗಿದೆ. ಸ್ಥಳೀಯ ಹಾಗೂ ವಿದೇಶದ ಪ್ರಜೆಗಳೂ ಸೇರಿ ಒಟ್ಟು 2,639 ಆರೋಪಿಗಳನ್ನು ಈಗಾಗಲೇ ಬಂಧಿಸಲಾಗಿದೆ. ಅಂದಾಜು 1,128 ಕೆ.ಜಿ ಮಾದಕ ವಸ್ತು ಜಪ್ತಿ ಮಾಡಲಾಗಿದೆ. ಕಳೆದ 15 ದಿನಗಳಲ್ಲಿ ₹65 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

'ಸನ್ಮಿತ್ರ': ವ್ಯಸನಿಗಳಿಗೆ ಕೌನ್ಸೆಲಿಂಗ್

'ಮಾದಕ ಪದಾರ್ಥಗಳ ಸೇವನೆ ಮಾಡುವವರನ್ನು ಪತ್ತೆ ಹಚ್ಚಿ ವ್ಯಸನದಿಂದ ಮುಕ್ತಗೊಳಿಸಲು ಪೊಲೀಸ್ ಇಲಾಖೆ 'ಸನ್ಮಿತ್ರ' ಯೋಜನೆ ರೂಪಿಸಿದೆ. ಯಾರೇ ಡ್ರಗ್ಸ್ ವ್ಯಸನಿ ಆಗಿದ್ದರೂ 'ಸನ್ಮಿತ್ರ'ದ ಮೂಲಕ ಕೌನ್ಸೆಲಿಂಗ್‌ಗೆ ಒಳಪಡಿಸಲಾಗುವುದು. ಈಗಾಗಲೇ ಹಲವು ವಿದ್ಯಾರ್ಥಿಗಳನ್ನು ಕೌನ್ಸೆಲಿಂಗ್‌ಗೆ ಒಳಪಡಿಸಲಾಗಿದೆ. ಯಾವ ಕಾರಣಕ್ಕೆ ಮಾದಕ ಪದಾರ್ಥಗಳಿಗೆ ದಾಸರಾಗಿದ್ದಾರೆ, ಅವರಿಗೆ ಡ್ರಗ್ಸ್ ಎಲ್ಲಿ ಸಿಗುತ್ತಿದೆ ಎಂಬುದನ್ನೂ ತಿಳಿದುಕೊಂಡು ಅವರನ್ನು ಸರಿದಾರಿಗೆ ತರಲು ಪ್ರಯತ್ನಿಸಲಾಗು ತ್ತಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಸುದ್ದಿ 2 ನಿಮಿಷ

ಬೆಂಕಿ ಅವಘಡ: ಗುಜರಿ ಸಾಮಗ್ರಿಗಳು ಭಸ್ಮ

ಬೆಂಗಳೂರು: ಬ್ಯಾಟರಾಯನಪುರ ಪೊಲೀಸ್ ಠಾಣಾ ವ್ಯಾಪ್ತಿಯ ನಾಯಂಡಹಳ್ಳಿಯ ಪ್ಲಾಸ್ಟಿಕ್ ಗೋದಾಮಿನಲ್ಲಿ ಗುರುವಾರ ಬೆಳಿಗ್ಗೆ ಬೆಂಕಿ ಅವಘಡ ಸಂಭವಿಸಿ, ಗುಜರಿ ಸಾಮಗ್ರಿಗಳು ಭಸ್ಮವಾಗಿವೆ.

ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಅವಘಡ ಸಂಭವಿಸಿದೆ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದ್ದು, ತನಿಖೆ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

ತಮಿಳುನಾಡಿನ ಕುಂದನ್ ಎಂಬುವರಿಗೆ ಸೇರಿದ ಗೋದಾಮಿನಲ್ಲಿ ಬೆಂಕಿ ಅವಘಡ ಸಂಭವಿಸಿದೆ. ಬೆಳಿಗ್ಗೆ 8 ಗಂಟೆ ಸುಮಾರಿಗೆ ಸಣ್ಣ ಪ್ರಮಾಣದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ನಂತರ ಬೆಂಕಿ ವ್ಯಾಪಿಸಿ ಗೋದಾಮು ಧಗಧಗನೇ ಹೊತ್ತಿ ಉರಿದಿದೆ. ಗೋದಾಮಿನಲ್ಲಿ ಯಾರೂ ಇರಲಿಲ್ಲ. ಯಾವುದೇ ಪ್ರಾಣಹಾನಿಯೂ ಆಗಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಬೆಂಕಿ ಬಿದ್ದ ತಕ್ಷಣವೇ ಸ್ಥಳೀಯರು ಅಗ್ನಿಶಾಮಕ ದಳದ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಸಿಬ್ಬಂದಿ ಸ್ಥಳಕ್ಕೆ ಬಂದು ಮೂರು ವಾಹನಗಳಲ್ಲಿ ನಿರಂತರ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ.

ಹೆಚ್ಚಾಗಿ ಪ್ಲಾಸ್ಟಿಕ್ ವಸ್ತುಗಳಿದ್ದ ಕಾರಣ ಬೆಂಕಿಯಿಂದ ದೊಡ್ಡಮಟ್ಟದ ಹೊಗೆ ಆವರಿಸಿಕೊಂಡಿತ್ತು. ಪಕ್ಕದಲ್ಲಿಯೇ ಇದ್ದ ಕಬ್ಬಿಣದ ರಾಡ್‌ಗಳು, ಡ್ರಮ್‌ಗಳನ್ನು ಶೇಖರಿಸಿದ್ದ ಗೋದಾಮಿಗೂ ಬೆಂಕಿ ವ್ಯಾಪಿಸಿದೆ. ಹೀಗಾಗಿ, ಅಲ್ಲಿಯೂ ಕೆಲವು ವಸ್ತುಗಳು ಸುಟ್ಟು ಹೋಗಿವೆ ಎಂದು ಪೊಲೀಸರು ಹೇಳಿದ್ದಾರೆ.

ಕುಂದನ್ ಅವರು ಎರಡು ವರ್ಷದಿಂದ ಗೋದಾಮು ನಡೆಸುತ್ತಿದ್ದರು. ಬುಧವಾರ ಸಂಜೆ ತಮಿಳುನಾಡಿಗೆ ತೆರಳಿದ್ದರು. ಗುರುವಾರ ಬೆಳಿಗ್ಗೆ ಬೆಂಕಿ ಅವಘಡ ಸಂಭವಿಸಿದೆ ಎಂದು ಮೂಲಗಳು ಹೇಳಿವೆ.

₹65 ಲಕ್ಷ ಮೌಲ್ಯದ ಆಸ್ತಿ ವಶ



ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ), ಅಂಜನಾಪುರ ಬಡಾವಣೆಯ 11ನೇ ಬ್ಲಾಕ್‌ನಲ್ಲಿ ಅನಧಿಕೃತ ಕಟ್ಟಡ ತೆರವುಗೊಳಿಸಿ, ₹65 ಲಕ್ಷ ಮೌಲ್ಯದ ಆಸ್ತಿಯನ್ನು ವಶಕ್ಕೆ ಪಡೆದಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಉತ್ತರ ಹಳ್ಳಿ ಹೋಬಳಿಯ ಕೆಂಬತ್ತಹಳ್ಳಿ ಗ್ರಾಮದ ಸರ್ವೆ ನಂ.4/4ರಲ್ಲಿ 752 ಚದರ ಅಡಿ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಕಟ್ಟಡವನ್ನು ತೆರವುಗೊಳಿಸಿದೆ. ಈ ಕಾರ್ಯಾಚರಣೆಯಲ್ಲಿ ಪ್ರಾಧಿಕಾರದ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕ, ಎಂಜಿನಿಯರ್‌ಗಳು, ಅಧಿಕಾರಿಗಳು ಮತ್ತು ಸ್ಥಳೀಯ ಪೊಲೀಸ್ ಸಿಬ್ಬಂದಿ ಭಾಗವಹಿಸಿದ್ದರು.

ರಸ್ತೆ ಅಪಘಾತ: ಕಂಟೈನರ್ ಚಾಲಕ ಸ್ಥಳದಲ್ಲಿಯೇ ಸಾವು

ಬೆಂಗಳೂರು: ದೇವನಹಳ್ಳಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಹೆದ್ದಾರಿ ಬದಿಯಲ್ಲಿ ಕಂಟೈನರ್ ವಾಹನವನ್ನು ನಿಲ್ಲಿಸಿ ಚಾಲಕ ಕೆಳಗೆ ಇಳಿದಾಗ ವೇಗವಾಗಿ ಬಂದ ವಾಹನವೊಂದು ಡಿಕ್ಕಿ ಹೊಡೆದ ಪರಿಣಾಮ ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಚಿಕ್ಕಬಳ್ಳಾಪುರದ ಶ್ರೀಧರ್(34) ಮೃತಪಟ್ಟವರು.

ಪ್ರಕರಣ ದಾಖಲಿಸಿಕೊಂಡಿರುವ ದೇವನಹಳ್ಳಿ ಸಂಚಾರ ಪೊಲೀಸರು ಅಪರಿಚಿತ ವಾಹನದ ಚಾಲಕನ ಪತ್ತೆಗೆ ಕ್ರಮ ಕೈಗೊಂಡಿದ್ದಾರೆ. ಎನ್‌ಎಚ್–648 ಮುಖ್ಯರಸ್ತೆಯ ಹೊಸಕೋಟೆ ಕಡೆಯಿಂದ ದೊಡ್ಡಬಳ್ಳಾಪುರ ಕಡೆಗೆ ಸಾಗುವ ನಿಲೇರಿ ಗ್ರಾಮದ ಸೇತುವೆಯ ಬಳಿ ಅಪಘಾತ ಸಂಭವಿಸಿದೆ.

ಕಂಟೈನರ್ ಚಾಲಕ ಶ್ರೀಧರ್ ಅವರು ಬುಧವಾರ ರಾತ್ರಿ 10.50 ಸುಮಾರಿಗೆ ವಾಹನ ನಿಲ್ಲಿಸಿ ಕೆಳಗೆ ಇಳಿದಿದ್ದರು. ಆಗ ಹೊಸಕೋಟೆ ಕಡೆಯಿಂದ ದೊಡ್ಡಬಳ್ಳಾಪುರದ ಕಡೆಗೆ ಅತಿವೇಗವಾಗಿ ಬಂದ ವಾಹನವೊಂದು, ಟಾಟಾ ಕಂಟೈನರ್ ವಾಹನಕ್ಕೆ ಡಿಕ್ಕಿ ಹೊಡೆದಿದೆ. ನಂತರ, ಚಾಲಕನ ಮೇಲೆ ಹರಿದ ಪರಿಣಾಮ ಚಾಲಕ ಶ್ರೀಧರ್ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಅಪಘಾತ ಎಸಗಿ ಪರಾರಿ ಆಗಿರುವ ಚಾಲಕನ ಪತ್ತೆಗೆ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ರ್‍ಯಾಪಿಡೊ ಬೈಕ್ ಸವಾರನ ವಿರುದ್ಧ ಎಫ್‌ಐಆರ್ ದಾಖಲು

ಅಪಹರಿಸಿ, ಅತ್ಯಾಚಾರ ಎಸಗುವ ಬೆದರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಹರಿಸಿ ಅತ್ಯಾಚಾರ ಎಸಗುವುದಾಗಿ ಗೂಗಲ್ ಪೇ ಮೂಲಕ ಬೆದರಿಕೆ ಸಂದೇಶ ಕಳುಹಿಸಿದ್ದ ರ್‍ಯಾಪಿಡೊ ಬೈಕ್ ಸವಾರನ ವಿರುದ್ಧ ಎಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ನಗರದ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಉತ್ತರಾಖಂಡದ 26 ವರ್ಷದ ಯುವತಿ ನೀಡಿದ ದೂರಿನ ಮೇಲೆ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ನಲ್ಲೂರುಹಳ್ಳಿಯಲ್ಲಿ ಇರುವ ಮನೆಗೆ ತೆರಳಲು ಯುವತಿ ಮೇ 11ರಂದು ರ್‍ಯಾಪಿಡೊ ಬೈಕ್ ಬುಕ್ ಮಾಡಿದ್ದರು. ಪ್ರಯಾಣದ ವೇಳೆ ಸವಾರ, ಅಸಭ್ಯವಾಗಿ ನಡೆದುಕೊಂಡಿದ್ದ. ವಾಹನವನ್ನು ವೇಗವಾಗಿ ಚಾಲನೆ ಮಾಡಿದ್ದ. ದೊಡ್ಡನೆಕುಂದಿ ಬಳಿ ಬೈಕ್ ನಿಲುಗಡೆ ಮಾಡುವಂತೆ ದೂರುದಾರೆ ಸೂಚಿಸಿದ್ದರು.

ಸ್ಥಳದಲ್ಲೇ ಗೂಗಲ್ ಪೇ ಮೂಲಕ ಹಣ ಪಾವತಿಸಿದ್ದರು. ಅದಾದ ಮೇಲೆ ರ್‍ಯಾಪಿಡೊ ಆ್ಯಪ್ ಮೂಲಕ ಸವಾರನ ವಿರುದ್ಧ ಯುವತಿ ದೂರು ನೀಡಿದ್ದರು. ರ್‍ಯಾಪಿಡೊ ಸಂಸ್ಥೆ ಸವಾರನ ವಿರುದ್ಧ ಕ್ರಮ ಕೈಗೊಂಡಿತ್ತು ಎಂದು ಮೂಲಗಳು ಹೇಳಿವೆ.

ಮುಖ್ಯಾಂಶಗಳು

- ಗೂಗಲ್ ಪೇ ಮೂಲಕ ಬೆದರಿಕೆ ಸಂದೇಶ
- ಎಚ್‌ಎಎಲ್ ಠಾಣೆಯಲ್ಲಿ ಪ್ರಕರಣ ದಾಖಲು
- ದೂರು ಸಲ್ಲಿಸಿದ್ದ ಐಟಿ ಕಂಪನಿಯ ಮಹಿಳಾ ಉದ್ಯೋಗಿ

ದೂರು ನೀಡಿದ್ದಕ್ಕೆ ಯುವತಿ ವಿರುದ್ಧ ಕೋಪಗೊಂಡಿದ್ದ ಸವಾರ, ಗೂಗಲ್ ಪೇ ಆ್ಯಪ್ ಮೂಲಕ ಅಸಭ್ಯ ಹಾಗೂ ಬೆದರಿಕೆ ಸಂದೇಶಗಳನ್ನು ಕಳುಹಿಸಲು ಆರಂಭಿಸಿದ್ದ. ಅಪಹರಿಸಿ ಅತ್ಯಾಚಾರ ಎಸಗುವುದಾಗಿಯೂ ಬೆದರಿಕೆ ಹಾಕಿದ್ದ ಎಂದು ಮೂಲಗಳು ಹೇಳಿವೆ.

ದೂರು ಆಧರಿಸಿ ತನಿಖೆ ನಡೆಸಲಾಗುತ್ತಿದೆ. ಯುವತಿ ನೀಡಿದ ಡಿಜಿಟಲ್ ಸಾಕ್ಷ್ಯ ಹಾಗೂ ಬೆದರಿಕೆ ಸಂದೇಶಗಳನ್ನು ಪರಿಶೀಲನೆ ನಡೆಸಲಾಗಿದೆ. ಗೂಗಲ್ ಪೇ ಆ್ಯಪ್‌ನಲ್ಲಿ ಬಸವರಾಜ್ ಮೇಟಿ ಹಾಗೂ ರ್‍ಯಾಪಿಡೊ ಆ್ಯಪ್‌ನಲ್ಲಿ ಸವಾರನ ಹೆಸರು ಹಿಮಾಂಶು ಮೆಗಲೂರು ಎಂದು ತೋರಿಸುತ್ತಿದೆ. ಶಂಕಿತನ ಪತ್ತೆ ಕಾರ್ಯ ಮುಂದುವರಿದಿದೆ ಎಂದು ಪೊಲೀಸರು ಹೇಳಿದರು.

ಜೈಲಿನ ಮೇಲೆ ದಾಳಿ: ಮೊಬೈಲ್, ಸಿಮ್‌ಕಾರ್ಡ್, ಚಾರ್ಜರ್ ಪತ್ತೆ

ಬೆಂಗಳೂರು: ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಿವಿಧ ಬ್ಯಾರಕ್‌ಗಳ ಮೇಲೆ ಜೈಲಿನ ಅಧಿಕಾರಿಗಳು ದಿಢೀರ್ ದಾಳಿ ನಡೆಸಿ ತಪಾಸಣೆ ನಡೆಸಿದಾಗ ಮೊಬೈಲ್ ಫೋನ್, ಸಿಮ್ ಕಾರ್ಡ್‌ಗಳು ಹಾಗೂ ಚಾರ್ಜರ್‌ಗಳು ಪತ್ತೆಯಾಗಿವೆ.

ಜೈಲಿನ ಕೊಠಡಿ ಸಂಖ್ಯೆ 10, 13 ಹಾಗೂ 16ರಲ್ಲಿ ಮೊಬೈಲ್ ಸಿಕ್ಕಿದೆ. ಮೇ 12ರ ರಾತ್ರಿ 7.45ರ ಸುಮಾರಿಗೆ ವಿವಿಧ ಬ್ಯಾರಕ್‌ಗಳಲ್ಲಿ ಪರಿಶೀಲನೆ ನಡೆಸಿದಾಗ ಮೊಬೈಲ್‌ಗಳು ಪತ್ತೆಯಾಗಿವೆ. ವಿವಿಧ ಕಂಪನಿಯ ಮೂರು ಮೊಬೈಲ್ ಗಳು ಹಾಗೂ ಸೀಮ್ ಕಾರ್ಡ್ ಗಳನ್ನು ವಶಕ್ಕೆ ಪಡೆಯಲಾಗಿದೆ. ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೈಲಿನಲ್ಲಿ ಈಗ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗಿದೆ. ಪರಪ್ಪನ ಅಗ್ರಹಾರ ಜೈಲಿನ ವಿವಿಧೆಡೆ ಸಿ.ಸಿ. ಟಿ.ವಿ ಕ್ಯಾಮೆರಾ ಅಳವಡಿಸಲಾಗಿದೆ. ಕಟ್ಟುನಿಟ್ಟಿನ ಭದ್ರತೆಯ ನಡುವೆಯೂ ಕೈದಿಗಳಿಗೆ ಮೊಬೈಲ್ ಕೊಟ್ಟವರು ಯಾರು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ. ಅಕ್ರಮಕ್ಕೆ ಸಹಕರಿಸಿದವರು ಹಾಗೂ ಮೊಬೈಲ್ ಬಳಕೆ ಮಾಡಿದ ಆರೋಪಿಗಳ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ಬೆಂಗಳೂರು ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿ

ಚುನಾವಣಾ ಆಯೋಗಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ಶೇ 100ರಷ್ಟು ಅರ್ಹ ಮತದಾರರ ಸೇರ್ಪಡೆ ಮಾಡಲು, ಚುನಾವಣಾ ಅಧಿಕಾರಿಗೆ ನಿರ್ದೇಶನ ನೀಡಬೇಕೆಂಬ ಅರ್ಜಿಗೆ ಸಂಬಂಧಿಸಿದಂತೆ ಕೇಂದ್ರ ಚುನಾವಣಾ ಆಯೋಗಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಬೆಂಗಳೂರು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಎನ್.ಲಕ್ಷ್ಮಣ ಸ್ವಾಮಿ ಸಲ್ಲಿಸಿರುವ ಈ ಕುರಿತ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರ ರಜಾಕಾಲದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಆದಿನಾರಾಯಣ ಅವರ ವಾದ ಆಲಿಸಿದ ನ್ಯಾಯಪೀಠ, ಪ್ರತಿವಾದಿಗಳಾದ ಕೇಂದ್ರ ಚುನಾವಣಾ ಆಯೋಗ, ಮುಖ್ಯ ಚುನಾವಣಾ ಅಧಿಕಾರಿ ಹಾಗೂ ಮತಪಟ್ಟಿ ನೋಂದಣಿ ಅಧಿಕಾರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಕೇಂದ್ರ ಚುನಾವಣಾ ಆಯೋಗದ ಪರ ಎಸ್.ಆರ್.ದೊಡವಾಡ ಹಾಜರಿದ್ದರು.

ಹೈಕೋರ್ಟ್ ಸುದ್ದಿ

ಕೋರಿಕೆ ಏನು?: 'ಪ್ರಕಟಿತ ಪಟ್ಟಿಯಲ್ಲಿನ ಕಾಲಂ ನಂ 4ರಲ್ಲಿ ಮತದಾರರಾದ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಣ ಸಂಸ್ಥೆಗಳ ಪೂರ್ಣ ವಿಳಾಸ ನಮೂದಾಗುವಂತೆ ನೋಡಿಕೊಳ್ಳಬೇಕು. ಈ ಕುರಿತು ಹೆಚ್ಚುವರಿ ಪಟ್ಟಿ ಬಿಡುಗಡೆ ಮಾಡಲು ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

ಹೇಬಿಯಸ್ ಕಾರ್ಪಸ್: ತಲಾ ₹25 ಸಾವಿರ ದಂಡ

ಬೆಂಗಳೂರು: 'ನಮ್ಮ ಪುತ್ರಿಯನ್ನು ಅನಾಮಿಕರು ಒತ್ತೆ ಇಟ್ಟುಕೊಂಡಿದ್ದಾರೆ' ಎಂದು ಆರೋಪಿಸಿದ್ದ ಪೋಷಕರ ವಾದ ಸುಳ್ಳು ಎಂದು ಕಂಡುಬಂದ ಹಿನ್ನೆಲೆಯಲ್ಲಿ ಹೈಕೋರ್ಟ್, ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದ ಪೋಷಕರಿಗೆ ₹25 ಸಾವಿರ ದಂಡ ವಿಧಿಸಿದೆ.

ಈ ಕುರಿತ ಅರ್ಜಿಯೊಂದನ್ನು ನ್ಯಾಯಮೂರ್ತಿ ಎಚ್.ಪಿ.ಸಂದೇಶ್ ನೇತೃತ್ವದ ರಜಾಕಾಲದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಮನವಿಯನ್ನು ಅಲ್ಲಗಳೆದ ರಾಜ್ಯ ಸರ್ಕಾರದ ಪರ ವಕೀಲರು, 'ಯುವತಿಯು ತನ್ನ ರಕ್ಷಣೆಗೆ ಈಗಾಗಲೇ ಪೊಲೀಸರಿಗೆ ಮನವಿ ಮಾಡಿದ್ದಾಳೆ. ಹೈಕೋರ್ಟ್‌ನ ಸಮನ್ವಯ ನ್ಯಾಯಪೀಠ ಯುವತಿಯ ರಕ್ಷಣೆಗೆ ಆದೇಶಿಸಿದೆ' ಎಂದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಇದು ಕಾನೂನು ಪ್ರಕ್ರಿಯೆಯ ದುರ್ಬಳಕೆಯಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ ಅರ್ಜಿ ವಜಾಗೊಳಿಸಿತು. ಪುತ್ರಿಯ ತಂದೆಗೆ ₹25 ಸಾವಿರ ದಂಡ ವಿಧಿಸಿ, 'ವಾರದಲ್ಲಿ ದಂಡದ ಮೊತ್ತವನ್ನು ರಿಜಿಸ್ಟ್ರಿಗೆ ಪಾವತಿಸಬೇಕು' ಎಂದು ನಿರ್ದೇಶಿಸಿತು.

ಮತ್ತೊಂದು ಪ್ರಕರಣ: 'ನನ್ನ ಪತ್ನಿ ಕರೆದೊಯ್ದಿರುವ ನನ್ನ ಮಗುವನ್ನು ಹಾಜರುಪಡಿಸಲು ನಿರ್ದೇಶಿಸಬೇಕು' ಎಂದು ಕೋರಿ ಪತಿ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಇದೇ ನ್ಯಾಯಪೀಠ ಗುರುವಾರ ವಜಾಗೊಳಿಸಿ ಅರ್ಜಿದಾರ ಪತಿಗೆ ₹25 ಸಾವಿರ ದಂಡ ವಿಧಿಸಿದೆ.

ವಿಚಾರಣೆ ವೇಳೆ ಸರ್ಕಾರದ ವಕೀಲರು, 'ಇದು ಪತಿ-ಪತ್ನಿಯರ ಕೌಟುಂಬಿಕ ಕಲಹದ ವಿಚಾರವಾಗಿದೆ. ಮಗು ತಾಯಿಯ ಜೊತೆ ಇದೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದನ್ನು ಪರಿಗಣಿಸಿದ ನ್ಯಾಯಪೀಠ, 'ಇಂತಹ ವಿಚಾರದಲ್ಲಿ ಹೇಬಿಯಸ್ ಕಾರ್ಪಸ್ ಊರ್ಜಿತವಾಗುತ್ತದೆಯೇ' ಎಂದು ಕಿಡಿ ಕಾರಿತು. 'ಅರ್ಜಿದಾರರು ಕಾನೂನು ಪ್ರಕ್ರಿಯೆಯನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ' ಎಂದು ಅರ್ಜಿ ವಜಾಗೊಳಿಸಿ ₹25 ಸಾವಿರ ದಂಡ ವಿಧಿಸಿತು.

ಶಿವಂ ಅಸೋಸಿಯೇಟ್ಸ್ ಮೇಲೆ ದಾಳಿ

ಉದ್ಯಮಿ ಶಿವಾನಂದ ನೀಲಣ್ಣವರ ಕಚೇರಿಗಳಲ್ಲಿ ಶೋಧ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಉದ್ಯಮಿ ಶಿವಾನಂದ ನೀಲಣ್ಣವರಗೆ ಸೇರಿದ ಶಿವಂ ಅಸೋಸಿಯೇಟ್ಸ್‌ನ ಶಿವಬಸವ ನಗರದ ಎರಡು ಕಚೇರಿಗಳ ಮೇಲೆ ಗುರುವಾರ ಉಪವಿಭಾಗಾಧಿಕಾರಿ ಶ್ರವಣ ನಾಯಕ ನೇತೃತ್ವದ ತಂಡ ದಾಳಿ ನಡೆಸಿ ದಾಖಲೆಗಳ ಪರಿಶೀಲಿಸಿತು.

ಸಹಕಾರ ಸಂಘಗಳ ಉಪ ನಿಬಂಧಕರ ಕಚೇರಿ ಅಧಿಕಾರಿಗಳು ತಡರಾತ್ರಿವರೆಗೂ ಕಚೇರಿಯಲ್ಲೇ ಠಿಕಾಣಿ ಹೂಡಿ ಹಣಕಾಸು ವ್ಯವಹಾರ, ಹೂಡಿಕೆ ಹಾಗೂ ಆರ್ಥಿಕ ಸಂಪನ್ಮೂಲ ಕ್ರೂಢೀಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ತಪಾಸಣೆ ಮಾಡಿತು.

'ಸಾರ್ವಜನಿಕರು ಹಾಗೂ ಮಾಜಿ ಸೈನಿಕರಿಗೆ ಶಿವಂ ಅಸೋಸಿಯೇಟ್ಸ್ ಹೆಚ್ಚಿನ ಬಡ್ಡಿ ದರದ ಭರವಸೆ ನೀಡಿ ಸಾವಿರಾರು ಕೋಟಿ ರೂಪಾಯಿ ಹಣ ಹೂಡಿಕೆ ಮಾಡಿದೆ ಎಂಬ ಅನುಮಾನ ವ್ಯಕ್ತವಾಗಿದೆ. ಇದೇ ಕಾರಣಕ್ಕೆ ದಾಳಿ ನಡೆದಿದೆ' ಎಂದು ಮೂಲಗಳು ತಿಳಿಸಿವೆ. ಸಂಸ್ಥೆಯ ಸಂಸ್ಥಾಪಕ ಶಿವಾನಂದ ನೀಲಣ್ಣವರ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು.

'ನಮ್ಮ ಬಳಿ 15 ಸಾವಿರ ಬಂದೂಕುಗಳಿವೆ, ದೊಡ್ಡ ಸಾಮ್ರಾಜ್ಯ ಕಟ್ಟಿದ್ದೇನೆ. ನಾನು ಯಾರಿಗೂ ಹೆದರಲ್ಲ. 2028ರಲ್ಲಿ 224 ಸ್ಥಾನ ಗೆದ್ದು ಸಿಎಂ ಆಗುತ್ತೇನೆ' ಎಂದು ಅವರು ಹೇಳಿದ ವಿಡಿಯೊ ಚರ್ಚೆಗೆ ಒಳಗಾಗಿತ್ತು. ಈ ಎಲ್ಲವೂ ದಾಳಿಗೆ ಪ್ರೇರಣೆಯಾಗಿವೆ ಎಂದು ಹೇಳಲಾಗಿದೆ.

'ಜಿಲ್ಲಾಧಿಕಾರಿ ಅವರು, ಕರ್ನಾಟಕ ಠೇವಣಿದಾರರ ಹಿತಾಸಕ್ತಿ ರಕ್ಷಣಾ ಕಾಯ್ದೆ, 2004ರ ಸೆಕ್ಷನ್ 3(1), 3(2) ಮತ್ತು 4ರಡಿ ಠೇವಣಿ ಸಂಗ್ರಹ, ಚರಾಸ್ತಿ, ಸ್ಥಿರಾಸ್ತಿ ಹಾಗೂ ಬ್ಯಾಂಕ್ ವ್ಯವಹಾರ ಸೇರಿದಂತೆ ಇನ್ನಿತರ ಹಣಕಾಸಿನ ವಹಿವಾಟಿಗೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸುವಂತೆ ನೀಡಿದ್ದ ಆದೇಶದ ಮೇರೆಗೆ ಈ ಖಲೆಗಳ ಪರಿಶೀಲನೆ ನಡೆಸಲಾಗಿದೆ' ಎಂದೂ ತಂಡದಲ್ಲಿದ್ದ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ತೆರವು: ನೀಲಣ್ಣವರ ನೇತೃತ್ವದಲ್ಲಿ ಮೇ 17ರಂದು 25 ಸಾವಿರ ಜನರನ್ನು ಸೇರಿಸಿ 'ಸ್ವಚ್ಛ ಬೆಳಗಾವಿ' ಅಭಿಯಾನ ಹಾಗೂ ಸರದಾರ್ಸ್ ಮೈದಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆಗೆ ಸಿದ್ಧತೆ ನಡೆದಿತ್ತು. ಕಾರ್ಯಕ್ರಮಕ್ಕೆ ಸಂಬಂಧಿಸಿ ನಗರದಲ್ಲಿ ಅಳವಡಿಸಿದ್ದ ಕಟೌಟ್‌ಗಳನ್ನು ನಿಯಮಬಾಹಿರ ಎಂದು ಮಹಾನಗರ ಪಾಲಿಕೆ ತೆರವುಗೊಳಿಸಿತು.



ಬೆಳಗಾವಿಯಲ್ಲಿ ಶಿವಾನಂದ ನೀಲಣ್ಣವರ ನೇತೃತ್ವದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದ ಪೋಸ್ಟರ್‌ಗಳನ್ನು ಗುರುವಾರ ಅಧಿಕಾರಿಗಳು ತೆರವು ಮಾಡಿದರು

ಸಮವಸ್ತ್ರ ನೀತಿ: ಆದೇಶಕ್ಕೆ ಸ್ವಾಗತ

ಬೆಂಗಳೂರು: ಸಮವಸ್ತ್ರ ನೀತಿಗೆ ಧಕ್ಕೆಯಾಗದಂತೆ ಸೀಮಿತ ಹಾಗೂ ಪದ್ಧತಿ ಆಧಾರಿತ ಸಾಂಪ್ರದಾಯಿಕ ಉಡುಗೆ ತೊಡುಗೆಗಳನ್ನು ಧರಿಸಲು ಅವಕಾಶ ಕಲ್ಪಿಸಿ ರಾಜ್ಯ ಸರ್ಕಾರ ಹೊರಡಿಸಿರುವ ಆದೇಶವನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಸ್ವಾಗತಿಸಿದೆ.

'ಶಾಲಾ - ಕಾಲೇಜುಗಳಲ್ಲಿ ವಸ್ತ್ರ ಸಂಹಿತೆ ನಿಗದಿಪಡಿಸಿ 2022ರಲ್ಲಿ ಬಿಜೆಪಿ ಸರ್ಕಾರ ಹೊರಡಿಸಿದ್ದ ಆದೇಶವನ್ನು ರಾಜ್ಯ ಸರ್ಕಾರ ವಾಪಸ್ ಪಡೆದಿದ್ದು, ಹಿಜಾಬ್ ಹಾಗೂ ಜನಿವಾರ, ಟರ್ಬನ್ ಮುಂತಾದ ನಂಬಿಕೆ, ಆಚರಣೆಗೆ ಸಂಬಂಧಿಸಿದ ಸಂಕೇತಗಳನ್ನು ಧರಿಸಲು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿರುವ ಸರ್ಕಾರದ ನಡೆಯನ್ನು ಸಂಘಟನೆ ಅಧ್ಯಕ್ಷೆ ಚಂದ್ರಕುಮಾರಿ ಸ್ವಾಗತಿಸಿದ್ದಾರೆ.

'ಸಾಂಪ್ರದಾಯಿಕ ಹಾಗೂ ಆಚರಣೆ ಆಧರಿಸಿದ ಸಂಕೇತಗಳನ್ನು ಧರಿಸುವಂತೆ ಅಥವಾ ತೆಗೆಯುವಂತೆ ವಿದ್ಯಾರ್ಥಿಗಳನ್ನು ಒತ್ತಾಯ ಮಾಡುವಂತಿಲ್ಲ. ನಿಗದಿತ ಸಮವಸ್ತ್ರದೊಂದಿಗೆ ಸಮಾನ ಸ್ವರೂಪದ ಸಾಂಪ್ರದಾಯಿಕ, ಆಚರಣೆ ಆಧರಿಸಿದ ಸಂಕೇತಗಳನ್ನು ಧರಿಸಬಹುದು. ಅಂತಹ ವಿದ್ಯಾರ್ಥಿಗಳಿಗೆ ಶಿಕ್ಷಣ ಸಂಸ್ಥೆ ತರಗತಿ ಅಥವಾ ಪರೀಕ್ಷಾ ಕೊಠಡಿ ಪ್ರವೇಶಕ್ಕೆ ಅವಕಾಶ ನಿರಾಕರಿಸುವಂತಿಲ್ಲ ಎಂದು ಸೂಚಿಸಿರುವ ನಿಯಮವನ್ನು ಎಲ್ಲ ಶಾಲಾ - ಕಾಲೇಜುಗಳಲ್ಲಿ ಕಟ್ಟು ನಿಟ್ಟಾಗಿ ಜಾರಿ ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

ಶಾಲಾ, ಕಾಲೇಜಿನ ಸಮವಸ್ತ್ರದ ಹೆಸರಿನಲ್ಲೂ ರಾಜಕಾರಣ ಮಾಡಿ, ಗಲಭೆ ಸೃಷ್ಟಿಸಲು ಪ್ರಯತ್ನಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲು ಪ್ರಧಾನ ಕಾರ್ಯದರ್ಶಿ ದೇವಿ ಒತ್ತಾಯಿಸಿದ್ದಾರೆ.

ಹೈಕೋರ್ಟ್ ಮಧ್ಯಂತರ ತಡೆ

ಟಿ.ಎನ್. ಸೀತಾರಾಮ್ ವಿರುದ್ಧದ ಕ್ರಿಮಿನಲ್ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಮೀನು ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಅತಿಕ್ರಮ ಪ್ರವೇಶ ಮಾಡಿ, ದೌರ್ಜನ್ಯ ನಡೆಸಿದ ಆರೋಪಕ್ಕೆ ಸಂಬಂಧಿಸಿದಂತೆ ಕಿರುತೆರೆ ನಿರ್ದೇಶಕ ಟಿ.ಎನ್.ಸೀತಾರಾಮ್ ಮತ್ತು ಇತರರ ವಿರುದ್ಧ ದಾಖಲಿಸಲಾಗಿರುವ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಪ್ರಕರಣ ರದ್ದು ಕೋರಿ ಟಿ.ಎನ್. ಸೀತಾರಾಮ್ ಮತ್ತು ಅವರ ಸಹೋದರಿ ಕೆ.ಎಸ್.ವಿಜಯಲಕ್ಷ್ಮಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ಜಿ. ಎಸ್.ಕಮಲ್ ಅವರ ರಜಾಕಾಲದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸೀತಾರಾಮ್ ಪರ ಪದಾಂಕಿತ ಹಿರಿಯ ವಕೀಲ ಕೆ.ದಿವಾಕರ ಅವರು, 'ಅರ್ಜಿದಾರರು ವಕೀಲರು ಮತ್ತು ಖ್ಯಾತ ಕಿರುತೆರೆ ನಿರ್ದೇಶಕರು. ಅವರಿಗೆ ಸಂಬಂಧಿಸಿದ ಆಸ್ತಿ ವಿಚಾರದಲ್ಲಿ ಈ ಸುಳ್ಳು ದೂರು ದಾಖಲಾಗಿದ್ದು ಇದಕ್ಕೆ ತಡೆ ನೀಡಬೇಕು' ಎಂದು ಕೋರಿದರು.

ಇದಕ್ಕೆ ದೂರುದಾರ ಎಂ.ಎ. ಅರವಿಂದ ಕುಮಾರ್ ಪರ ಹಾಜರಾಗಿದ್ದ ಹೈಕೋರ್ಟ್ ವಕೀಲ ಜೆ.ಆರ್.ಜಗದೀಶ್ ಆಕ್ಷೇಪ ವ್ಯಕ್ತಪಡಿಸಿದರಾದರೂ, ನ್ಯಾಯಪೀಠ ಸೀತಾರಾಮ್ ಮತ್ತು ಇತರರ ವಿರುದ್ಧ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್‌ಗೆ ತಡೆ ನೀಡಿ ಆದೇಶಿಸಿತು.

ಪ್ರಕರಣವೇನು?: 'ದೊಡ್ಡಬಳ್ಳಾಪುರ ತಾಲ್ಲೂಕಿನ ಹಸನಘಟ್ಟ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿನ ಒಟ್ಟು 5 ಎಕರೆಗೂ ಹೆಚ್ಚು ವಿಸ್ತೀರ್ಣದ ಜಮೀನಿನಲ್ಲಿ ಒಂದಷ್ಟು ಭಾಗ ತಮ್ಮ ಹೆಸರಿಗೆ ಇದೆ' ಎಂಬ ಟಿ.ಎನ್. ಸೀತಾರಾಮ್ ಅವರ ದಾವೆಗೆ ಸಂಬಂಧಿಸಿದಂತೆ ಎಂ.ಎ.ಅರವಿಂದ ಕುಮಾರ್ ಮತ್ತು ಸೀತಾರಾಮ್ ನಡುವೆ ತಕರಾರು ನಡೆದಿದೆ.

ಈ ಸಂಬಂಧ ಎಂ.ಎ. ಅರವಿಂದ ಕುಮಾರ್ ಅವರು, ಟಿ.ಎನ್. ಸೀತಾರಾಮ್, ಕೆ.ಎಸ್.ವಿಜಯಲಕ್ಷ್ಮಿ, ರಾಕೇಶ್ ಮತ್ತು ಶಶಾಂಕ ವಿರುದ್ಧ ದೊಡ್ಡಬಳ್ಳಾಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು.

ದೂರಿನ ಅನ್ವಯ ನಾಲ್ವರೂ ಆರೋಪಿಗಳ ವಿರುದ್ಧ ವಿವಿಧ ಕಲಂಗಳ ಅಡಿ ಎಫ್‌ಐಆರ್ ದಾಖಲಿಸಲಾಗಿದೆ. 'ಈ ಕುರಿತಾದ ತನಿಖೆಯನ್ನು ರದ್ದುಪಡಿಸಬೇಕು' ಎಂದು ಕೋರಿ ಸೀತಾರಾಮ್ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ವಾಸಯೋಗ್ಯವಲ್ಲದ ನಗರವಾಗುತ್ತಿದೆ ಬೆಂಗಳೂರು: ಟಿ.ವಿ.ರಾಮಚಂದ್ರ ಆತಂಕ

'ಕೆರೆ ಸಂರಕ್ಷಣೆಗೆ ಸಮುದಾಯದ ಬೆಂಬಲ ಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮುದಾಯದ ಸಹಭಾಗಿತ್ವದೊಂದಿಗೆ ಪ್ರತಿ ಗ್ರಾಮಗಳಲ್ಲೂ ಕೆರೆಗಳ ಒತ್ತುವರಿ ತಡೆದು ಅವುಗಳ ರಕ್ಷಣೆಗೆ ಒತ್ತು ನೀಡಿದರೆ ಪರಿಸರದ ಸಮತೋಲನಕ್ಕೆ ದೊಡ್ಡ ಕೊಡುಗೆ ನೀಡಿದಂತಾಗಲಿದೆ' ಎಂದು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ (ಐಐಎಸ್ಸಿ) ಪರಿಸರ ವಿಜ್ಞಾನಿ ಟಿ.ವಿ.ರಾಮಚಂದ್ರ ಸಲಹೆ ನೀಡಿದರು.

ರಾಜ್ಯ ರೈತ ಸಂಘಟನೆಗಳ ಒಕ್ಕೂಟ, ಕರ್ನಾಟಕದ ನೆಲ ಜಲ ಪರಿಸರ ಸಂರಕ್ಷಣಾ ಸಮಿತಿ ಗಾಂಧಿ ಭವನದಲ್ಲಿ ಗುರುವಾರ ಆಯೋಜಿಸಿದ್ದ ಚಿಂತನ ಮಂಥನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ಬೆಂಗಳೂರಿನಲ್ಲಿ ಕೆಂಪೇಗೌಡರ ಕಾಲದಲ್ಲಿ ನಿರ್ಮಿಸಿದ್ದ 1,452 ಕೆರೆಗಳಿದ್ದವು. ಈಗ 214 ಕೆರೆಗಳು ಮಾತ್ರ ಉಳಿದಿದ್ದು ಎಲ್ಲವನ್ನೂ ನುಂಗಿ ಹಾಕಲಾಗಿದೆ. ರಾಜ್ಯದ ಹಲವು ಭಾಗಗಳಲ್ಲೂ ಇಂತಹದೇ ಸ್ಥಿತಿಯಿದೆ.

ನೆಲ, ಜಲ, ಪರಿಸರ ಸಂರಕ್ಷಣೆ ವಿಚಾರದಲ್ಲಿ ಈ ವರ್ಷದ ಪರಿಸರ ದಿನದಂದು ಎಲ್ಲಾ ಜಿಲ್ಲೆಗಳಲ್ಲೂ ಜನ ಜಾಗೃತಿ ಕಾರ್ಯಕ್ರಮಗಳನ್ನು ಆರಂಭಿಸುತ್ತಿದ್ದೇವೆ

ಕುರುಬೂರು ಶಾಂತಕುಮಾರ್, ರಾಜ್ಯಾಧ್ಯಕ್ಷ, ರೈತ ಸಂಘಟನೆಗಳ ಒಕ್ಕೂಟ

ಶೇ 98ರಷ್ಟು ಕೆರೆಗಳಿಗೆ ತ್ಯಾಜ್ಯ ಸೇರುತ್ತಿರುವುದರಿಂದ ಬಹುತೇಕ ಕಲುಷಿತಗೊಂಡಿವೆ. ಕೆರೆಗಳ ಬಫರ್ ವಲಯ ರಕ್ಷಣೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಇಲ್ಲದೇ ಜಲ ಮೂಲಗಳನ್ನು ಉಳಿಸಿಕೊಳ್ಳಲು ಆಗುವುದಿಲ್ಲ' ಎಂದು ಹೇಳಿದರು.

'ಬೆಂಗಳೂರಿನಲ್ಲಿ ಶೇ 4ರಷ್ಟು ಮಾತ್ರ ಹಸಿರು ಪ್ರದೇಶ ಉಳಿದಿದೆ. ಶೇ 80ರಷ್ಟು ರಸ್ತೆಗಳು ಕಾಂಕ್ರಿಟ್ ರಸ್ತೆಗಳಾಗಿ ಮಾರ್ಪಟ್ಟಿವೆ. ಇದೆಲ್ಲವೂ ಪರಿಸರದ ಮೇಲೆ ಪರಿಣಾಮ ಬೀರುತ್ತಿದ್ದು, ವಾಸಕ್ಕೆ ಯೋಗ್ಯವಲ್ಲದ ನಗರವಾಗಿ ಬೆಂಗಳೂರು ಮಾರ್ಪಡುತ್ತಿರುವುದು ಆತಂಕಕಾರಿ ವಿಚಾರ. ಬೆಂಗಳೂರಿನ ಒಟ್ಟು ಜನ ಸಂಖ್ಯೆಯಲ್ಲಿ ಶೇ 3.5ರಷ್ಟು ಮಂದಿಗೆ ಮಾತ್ರವೇ ಪರಿಸರ ಕಾಳಜಿ ಇದೆ. ಇನ್ನುಳಿದವರಿಗೆ ಇದರ ಪರಿಜ್ಞಾನವೇ ಇಲ್ಲ' ಎಂದು ಹೇಳಿದರು.

ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಮಾತನಾಡಿ, 'ನೆಲ, ಜಲ, ಪರಿಸರ ಸಂರಕ್ಷಣೆ ಹಿಂದೆಂದಿಗಿಂತಲೂ ಈಗ ತುರ್ತಾಗಿ ಆಗಬೇಕಾಗಿರುವ ಕೆಲಸ. ಯುವ ಪೀಳಿಗೆಯ ಜತೆಗೆ ರಾಜಕೀಯ ಪಕ್ಷಗಳು, ಸಂಘ ಸಂಸ್ಥೆಗಳನ್ನು ಸೇರಿಸಿಕೊಂಡು ಮಾಡಬೇಕಾಗಿದೆ. ರಾಜಕೀಯದಲ್ಲಿರುವ ವ್ಯಕ್ತಿಗಳು, ವ್ಯವಸ್ಥೆ ಶುದ್ಧೀಕರಣವಾಗದೇ ಇವೆಲ್ಲವೂ ಕಷ್ಟವಾಗಲಿದೆ' ಎಂದರು.

ಸಂಯುಕ್ತ ಜನತಾದಳದ ರಾಜ್ಯ ಘಟಕದ ಅಧ್ಯಕ್ಷ ಮಹಿಮ ಪಟೇಲ್ ಮಾತನಾಡಿ, 'ಜಲ ಸಂರಕ್ಷಣೆ ವಿಚಾರದಲ್ಲಿ ಸರ್ವೋದಯ ಸಂಘಟನೆಗಳೊಂದಿಗೆ ಶೃಂಗೇರಿಯಿಂದ ಹರಿಹರವರೆಗೂ ಪಾದಯಾತ್ರೆ ನಡೆಸಿ ಜನ ಜಾಗೃತಿ ಮೂಡಿಸಿದ್ದೇವೆ. ವ್ಯವಸ್ಥೆಯನ್ನು ದೂರಿಕೊಂಡು ಕೂರುವ ಬದಲು ಇಂತಹ ಜಾಗೃತಿ ಚಟುವಟಿಕೆಗಳು ಹೆಚ್ಚಬೇಕು' ಎಂದು ತಿಳಿಸಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣ ಅಭಿವೃದ್ಧಿ ಯೋಜನೆಯ ಯೋಜನಾಧಿಕಾರಿ ಸಂಧ್ಯಾ ವಿ.ಶೆಟ್ಟಿ, ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್, ಪ್ರಧಾನ ಕಾರ್ಯದರ್ಶಿ ಮಹೇಶ್ ಬೆಳಗಾಂವ್ಕರ್, ಸಂಘಟನಾ ಕಾರ್ಯದರ್ಶಿ ಅತ್ತಹಳ್ಳಿ ದೇವರಾಜ್, ಬಲ್ಲೂರು ರವಿಕುಮಾರ್ ಉಪಸ್ಥಿತರಿದ್ದರು.

3ನೇ ಹಂತದ ಸಂಸ್ಕರಣೆ ಮಾಡಿ: ರಾಮಪ್ರಸಾದ್

'ಬೆಂಗಳೂರಿನಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರನ್ನು ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಯ ಹಲವು ಭಾಗಗಳಲ್ಲಿ ಕೆರೆ ತುಂಬಿಸಲು ಬಳಸುತ್ತಿದ್ದು, ಇದು ಬಳಸಲು ಯೋಗ್ಯವಲ್ಲ ಎನ್ನುವ ವರದಿಗಳು ಬರುತ್ತಿವೆ. ಮೂರನೇ ಹಂತದ ಸಂಸ್ಕರಣೆ ಮಾಡಿದ ಬಳಿಕ ಈ ನೀರನ್ನು ಕೆರೆಗಳಿಗೆ ತುಂಬಿಸುವುದು ಒಳ್ಳೆಯದು' ಎಂದು ಬೆಂಗಳೂರು ಕೆರೆಗಳ ಒಕ್ಕೂಟದ ಅಧ್ಯಕ್ಷ ರಾಮಪ್ರಸಾದ್ ತಿಳಿಸಿದರು.

ಚಿಂತನ ಮಂಥನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸಂಸ್ಕರಿಸಿದ ನೀರು ಬಳಸಿ ಬೆಳೆಯುವ ತರಕಾರಿಯಲ್ಲೂ ವಿಷಕಾರಕ ವಸ್ತುಗಳು ಪತ್ತೆಯಾಗುತ್ತಿರುವುದು ಆತಂಕಕಾರಿ. ದೇಶದ 70ಕ್ಕೂ ಹೆಚ್ಚು ನಗರಗಳಲ್ಲಿ ನೀರನ್ನು ಸಂಸ್ಕರಿಸಿ ಕೆರೆಗಳಿಗೆ ತುಂಬಿಸಲಾಗುತ್ತಿದೆ. ಕರ್ನಾಟಕದ ಮೈಸೂರು, ಹಾಸನ, ಶಿವಮೊಗ್ಗ ನಗರಗಳೂ ಇದರಲ್ಲಿ ಸೇರಿವೆ. ಅನಾಹುತಕ್ಕೂ ಮುನ್ನ ಸಂಸ್ಕರಣೆಯನ್ನು ಇನ್ನಷ್ಟು ವೈಜ್ಞಾನಿಕಗೊಳಿಸಬೇಕು' ಎಂದರು.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ


ಬೆಳೆದರೆ ಬಾಳು, ಬೆಳೆಯದಿದ್ದರೆ ಹಾಳು.

-ಜಿ.ಪಿ. ರಾಜರತ್ನಂ

ಸಂಪಾದಕೀಯ

ಬೆಂಬಲ ನೀಡುವ ಬದಲು ನಿರ್ಬಂಧ ವಿನೇಶ್ ವಿರುದ್ಧ ‘ರಾಜಕೀಯ ಕುಸ್ತಿ’

ದೇಶದ ಅತ್ಯಂತ ಪ್ರಸಿದ್ಧ ಕುಸ್ತಿಪಟುಗಳಲ್ಲಿ ಒಬ್ಬರಾದ ವಿನೇಶ್ ಫೋಗಟ್ ಹಾಗೂ ‘ಭಾರತ ಕುಸ್ತಿ ಫೆಡರೇಷನ್’ (ಡಬ್ಲ್ಯುಎಫ್‌ಐ) ನಡುವಿನ ಸಂಘರ್ಷವು, ರಾಜಕೀಯ ಮತ್ತು ಪುರುಷಪ್ರಾಧಾನ್ಯ ಮನಃಸ್ಥಿತಿ ಮೇಲುಗೈ ಸಾಧಿಸಿರುವ ವ್ಯವಸ್ಥೆಯಲ್ಲಿ ಮಹಿಳಾ ಕ್ರೀಡಾಪಟುಗಳು ಎದುರಿಸಬೇಕಾದ ಸಂಕಷ್ಟಕ್ಕೆ ಮತ್ತೊಂದು ನಿದರ್ಶನವಾಗಿದೆ. ಡಬ್ಲ್ಯುಎಫ್‌ಐ ಮತ್ತು ಅದರ ಮಾಜಿ ಮುಖ್ಯಸ್ಥ, ಬಿಜೆಪಿ ಮುಖಂಡ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಧ್ವನಿಯೆತ್ತಿದ ನಂತರ, ಎರಡು ಕಡೆಯಿಂದಲೂ ವಿನೇಶ್ ಅವರ ಮೇಲೆ ದಾಳಿ ನಡೆದಿದೆ. ತಾಯ್ತನದ ವಿರಾಮದ ನಂತರ ಸ್ಪರ್ಧಾತ್ಮಕ ಕುಸ್ತಿಕಣಕ್ಕೆ ಮರಳಲು ವಿನೇಶ್ ಪ್ರಯತ್ನಿಸುತ್ತಿದ್ದು, ‘ರಾಷ್ಟ್ರೀಯ ಓಪನ್ ರ‍್ಯಾಂಕಿಂಗ್ ಟೂರ್ನಿ’ಯಲ್ಲಿ ಭಾಗವಹಿಸಲು ಡಬ್ಲ್ಯುಎಫ್‌ಐ ಅವರಿಗೆ ಅವಕಾಶ ನಿರಾಕರಿಸಿತು. ನಿವೃತ್ತ ಆಟಗಾರರು ಸ್ಪರ್ಧಾಕಣಕ್ಕೆ ಮರಳಲು ನಿರ್ಧರಿಸಿದಲ್ಲಿ, ಆ ವಿಷಯವನ್ನು ‘ವಿಶ್ವ ಕುಸ್ತಿ ಸಂಸ್ಥೆ’ಗೆ (ಯುಡಬ್ಲ್ಯುಡಬ್ಲ್ಯು) ಆರು ತಿಂಗಳ ಮೊದಲು ತಿಳಿಸಿರಬೇಕು. ಆ ನಿಯಮವನ್ನು ಪಾಲಿಸದೆ ಹೋದುದೇ ವಿನೇಶ್ ಅನರ್ಹತೆಗೆ ಕಾರಣ ಎಂದು ಡಬ್ಲ್ಯುಎಫ್‌ಐ ಹೇಳುತ್ತಿದೆ. ಆದರೆ, ನಿಯಮಾನುಸಾರ ಯುಡಬ್ಲ್ಯುಡಬ್ಲ್ಯುಗೆ ಸಾಕಷ್ಟು ಮೊದಲೇ ಮಾಹಿತಿ ನೀಡಿರುವುದಾಗಿ ವಿನೇಶ್ ಸ್ಪಷ್ಟಪಡಿಸಿದ್ದಾರೆ. ಶಿಸ್ತು–ನಿಯಮಗಳ ಉಲ್ಲಂಘನೆ ಹಾಗೂ ಡೋಪಿಂಗ್ ಪರೀಕ್ಷಾ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಡಬ್ಲ್ಯುಎಫ್‌ಐ ವಿನೇಶ್ ಅವರಿಗೆ ನೋಟಿಸ್ ನೀಡಿದ್ದು, ಅರ್ಹತಾ ಪ್ರಕ್ರಿಯೆಯ ಹೊರತಾಗಿ ಉಳಿದ ಯಾವುದರ ಬಗ್ಗೆಯೂ ಅವರು ಉತ್ತರಿಸಿಲ್ಲ ಎಂದು ಒಕ್ಕೂಟ ಆರೋಪಿಸಿದೆ.



ಕುಸ್ತಿಕಣಕ್ಕೆ ಮರಳಲು ಪ್ರಯತ್ನಿಸುತ್ತಿರುವ ವಿನೇಶ್ ಫೋಗಟ್ ವಿರುದ್ಧದ ಡಬ್ಲ್ಯುಎಫ್‌ಐ ಶಿಸ್ತುಕ್ರಮದಲ್ಲಿ ಆಟದ ಹಿತಾಸಕ್ತಿಗಿಂತಲೂ ರಾಜಕಾರಣದ ಪಾತ್ರವೇ ಹೆಚ್ಚಾಗಿದೆ.

ಉತ್ತರಪ್ರದೇಶದ ಗೊಂಡಾದಲ್ಲಿ ನಡೆದ ‘ರಾಷ್ಟ್ರೀಯ ಓಪನ್ ರ‍್ಯಾಂಕಿಂಗ್ ಟೂರ್ನಿ’ಯಲ್ಲಿ ಭಾಗವಹಿಸಲು ವಿಧಿಸಿದ ನಿಷೇಧ ಹಾಗೂ ಡಬ್ಲ್ಯುಎಫ್‌ಐ ನೀಡಿರುವ ನೋಟಿಸ್ ಹಿಂದೆ ದುರುದ್ದೇಶವಿದೆ; ವಿನೇಶ್ ಅವರು ಸ್ಪರ್ಧಾತ್ಮಕ ಕುಸ್ತಿಕಣಕ್ಕೆ ಮರಳುವುದನ್ನು ತಡೆಯುವುದಕ್ಕಾಗಿ ಹಾಗೂ 2028ರ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವುದನ್ನು ತಪ್ಪಿಸಲಿಕ್ಕಾಗಿ ಪಿತೂರಿ ನಡೆಸಲಾಗುತ್ತಿದೆ ಎಂದು ಅವರ ಬೆಂಬಲಿಗರು ಹೇಳಿದ್ದಾರೆ. ವಿನೇಶ್ ಮತ್ತು ಇತರ ಕುಸ್ತಿಪಟುಗಳು 2023ರಲ್ಲಿ ಒಕ್ಕೂಟದ ಅಧ್ಯಕ್ಷರಾಗಿದ್ದ ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪಗಳನ್ನು ಮಾಡಿದ್ದರು. ಬ್ರಿಜ್ ಭೂಷಣ್ ಸಿಂಗ್‌ರ ಲೈಂಗಿಕ ದೌರ್ಜನ್ಯಕ್ಕೆ ಬಲಿಯಾದವರಲ್ಲಿ ತಾವೂ ಒಬ್ಬರು ಎಂದು ಇತ್ತೀಚೆಗಷ್ಟೇ ವಿನೇಶ್ ಹೇಳಿಕೊಂಡಿದ್ದರು. ಈಗಿನ ಡಬ್ಲ್ಯುಎಫ್‌ಐ ಅಧ್ಯಕ್ಷ ಸಂಜಯ್ ಸಿಂಗ್ ಅವರು ಬ್ರಿಜ್ ಭೂಷಣ್‌ರ ಆಪ್ತವರ್ಗಕ್ಕೆ ಸೇರಿದ್ದಾರೆ. ಪ್ರಸ್ತುತ ವಿನೇಶ್ ಅವರ ಮೇಲೆ ಡಬ್ಲ್ಯುಎಫ್‌ಐ ತೆಗೆದುಕೊಂಡಿರುವ ಶಿಸ್ತುಕ್ರಮಗಳು ಜನರು ನಂಬುವಂತಿರದೆ, ಆಟಗಾರ್ತಿಯನ್ನು ಗುರಿಯಾಗಿಸಿಕೊಂಡು ಸಂಚು ನಡೆಯುತ್ತಿರುವ ಅನುಮಾನ ಉಂಟುಮಾಡುವಂತಿವೆ. ಡಬ್ಲ್ಯುಎಫ್‌ಐ ಶಿಸ್ತುಕ್ರಮದ ವಿರುದ್ಧ ಕಾನೂನು ಹೋರಾಟ ನಡೆಸಲು ಅವರು ಸಿದ್ಧತೆ ನಡೆಸಿದ್ದಾರೆ. ಈ ಪ್ರಕರಣದಲ್ಲಿ ಸರ್ಕಾರ ಮಧ್ಯಪ್ರವೇಶಿಸಬೇಕು ಎಂದು ಕೆಲವು ಅಥ್ಲೀಟ್‌ಗಳು ಒತ್ತಾಯಿಸಿದ್ದಾರೆ. ಆದರೆ, ಮಹಿಳಾ ಕುಸ್ತಿಪಟುಗಳು ಬೀದಿಗಿಳಿದು ಪ್ರತಿಭಟಿಸಿದಾಗಲೇ ತಮ್ಮ ಪಕ್ಷದ ಪ್ರಬಲ ನಾಯಕನ ವಿರುದ್ಧ ಕ್ರಮ ತೆಗೆದುಕೊಳ್ಳಲು ನಿರಾಕರಿಸಿದ ಸರ್ಕಾರ, ಈಗ ಅಥ್ಲೀಟ್‌ಗಳ ನೆರವಿಗೆ ಬರುತ್ತದೆಂದು ನಿರೀಕ್ಷಿಸುವುದು ಸಾಧ್ಯವಿಲ್ಲ.

ಹದಿನೈದು ಅಂತರರಾಷ್ಟ್ರೀಯ ಪದಕಗಳನ್ನು ಜಯಿಸಿರುವ ವಿನೇಶ್ ದೇಶಕ್ಕೆ ಕೀರ್ತಿ ತಂದಿರುವ ಆಟಗಾರ್ತಿ. 2024ರ ಪ್ಯಾರಿಸ್ ಒಲಿಂಪಿಕ್ಸ್‌ನ 50 ಕೆ.ಜಿ. ವಿಭಾಗದಲ್ಲಿ ಅವರು ಫೈನಲ್ಸ್ ಪ್ರವೇಶಿಸಿದ್ದರು. ವಿಶ್ವದ ಅತ್ಯುತ್ತಮ ಮಹಿಳಾ ಕುಸ್ತಿಪಟುಗಳ ಸಾಲಿನಲ್ಲಿ ಅವರನ್ನು ಗುರ್ತಿಸಲಾಗುತ್ತಿದೆ. ಇಂಥ ಆಟಗಾರ್ತಿ ಸ್ಪರ್ಧಾಕಣಕ್ಕೆ ಮರಳಲು ಬಯಸಿದಾಗ, ಅವರ ಬೆಂಬಲಕ್ಕೆ ಒಕ್ಕೂಟ ನಿಲ್ಲಬೇಕು. ಆದರೆ, ರಾಜಕೀಯ ಹಾಗೂ ವ್ಯಕ್ತಿಗತ ಕಾರಣಗಳಿಗಾಗಿ ಅವರನ್ನು ವಿರೋಧಿಸಲಾಗುತ್ತಿದೆ. ಈ ವಿರೋಧದ ಹಿನ್ನೆಲೆಯಲ್ಲಿ, ಹರಿಯಾಣದಲ್ಲಿ ಅವರು ಕಾಂಗ್ರೆಸ್‌ನ ಶಾಸಕಿ ಆಗಿರುವುದನ್ನೂ ಗಮನಿಸಬೇಕಾಗಿದೆ. ಯಾವುದೇ ಕ್ರೀಡೆಗೆ ಸಂಬಂಧಿಸಿದ ಆಡಳಿತವು ವೃತ್ತಿಪರವಾಗಿ, ಪಾರದರ್ಶಕವಾಗಿ ಹಾಗೂ ವಿಶ್ವಾಸಾರ್ಹವಾಗಿ ಇರುವುದು ಅಗತ್ಯ. ಆಗಷ್ಟೇ ಅದರ ಬಗ್ಗೆ ಆಟಗಾರರಿಗೆ ನಂಬಿಕೆ ಹಾಗೂ ಸುರಕ್ಷತೆಯ ಭಾವನೆ ಮೂಡುವುದು ಸಾಧ್ಯ. ವಿನೇಶ್ ಫೋಗಟ್ ಅವರಂಥ ವಿಶ್ವದರ್ಜೆಯ ಆಟಗಾರ್ತಿಯನ್ನೇ ಹೀನಾಯವಾಗಿ ನಡೆಸಿಕೊಳ್ಳುವುದಾದರೆ, ಸಾಮಾನ್ಯ ಕ್ರೀಡಾಪಟುಗಳು ಏನನ್ನು ತಾನೆ ನಿರೀಕ್ಷಿಸಬಹುದು?

ಪ್ರತಿಹಿಂಸೆಯಿಲ್ಲದ ಬಿಡುಗಡೆ ದಾರಿ



ವಿಶ್ಲೇಷಣೆ

ಸಬಿತಾ ಬನ್ನಾಡಿ

> ಸುಖ, ಅಭಿವೃದ್ಧಿಯ ಹೆಸರಿನಲ್ಲಿ ನಮ್ಮನ್ನು ಆವರಿಸಿಕೊಂಡಿರುವ ಸವಲತ್ತು ಹಾಗೂ ಸಿದ್ಧಾಂತಗಳು ನಮ್ಮ ಅಂತರಂಗವನ್ನೇ ಬರಿದು ಮಾಡುತ್ತಿವೆ. ಭಸ್ಮಾಸುರ ಹಸ್ತದಂತಿರುವ ಸುಖದ ಪರಿಕಲ್ಪನೆ, ಮನುಷ್ಯ ಸಹಮನುಷ್ಯನನ್ನೇ ದ್ವೇಷಿಸುವ ಸ್ಥಿತಿ ರೂಪಿಸಿದೆ.

ಸೌಂದರ್ಯ ನೋಡಿ ನೆಟ್ಟ ಹೂಗಿಡದ ಬಳ್ಳಿಯೊಂದು ಇಂದು ತೋಟವನ್ನೆಲ್ಲ ಆಕ್ರಮಿಸಿಕೊಂಡಿದೆ. ಕಳೆಗಿಡಗಳನ್ನು ಮಾತ್ರವಲ್ಲ, ಔಷಧಿ ಗಿಡಗಳನ್ನೂ ನೆಲಸಮ ಮಾಡಿದೆ. ಈಗ ಏನು ಮಾಡಿದರೂ ಅದನ್ನು ನಾಶಮಾಡಲು ಆಗುತ್ತಿಲ್ಲ.

ವೇಷ ನವನವೀನವಾಗಿದ್ದರೂ ಆಕ್ರಮಣ ಎನ್ನುವುದು ಯಾವ್ಯಾವ ರೀತಿಯಲ್ಲಿರುತ್ತದಲ್ಲ ಎಂದು ಅಚ್ಚರಿಯಾಗುತ್ತದೆ. ಜೊತೆಗೆ ಈ ಆಕ್ರಮಣಗಳ ಕಾರಣ ಮತ್ತು ಪರಿಣಾಮಗಳು ಅದೇ ಹಳೆಯವೇ ಆಗಿರುತ್ತದೆ. ನೂರಿನ್ನೂರು ವರ್ಷಗಳ ಹೋರಾಟದಿಂದ ಬಿಡುಗಡೆ ಪಡೆದುಕೊಂಡ ಫಲಾನುಭವಿಗಳು ಐವತ್ತು ಅರವತ್ತು ವರ್ಷಗಳಲ್ಲೇ ಮಹಾಮರೆವೆಗೆ ತುತ್ತಾಗಿಬಿಡುವುದು ಇನ್ನೊಂದು ವೈಚಿತ್ರ್ಯ. ಸಂಪತ್ತಿನ ಮೇಲಿನ ಹಿಡಿತ ಬಿಗಿಯಾಗಲು ಯಾವ ಮಾಯಾವೇಷದಲ್ಲಿ ಬಂದು ಯಾವಾಗ ಕುತ್ತಿಗೆ ಹಿಡಿದಿದ್ದಾರೆ ಎಂದೇ ತಿಳಿಯದ ರೀತಿಯಲ್ಲಿ ನಮ್ಮ ಬೆನ್ನ ಹಿಂದೆ ನೆರಳಿನಂತೆ ದಾಳಿಕೋರರು ನಿಂತಿರುತ್ತಾರೆ. ಅವರು ಎಲ್ಲ ಖದೀಮತನವನ್ನೂ ‘ಅದಿರೋದೇ ಹಾಗೆ’ ಎಂಬಂತೆ ತೆಳುಗೊಳಿಸುತ್ತಾ ಹೋಗುತ್ತಾರೆ.

ನಾವಿವತ್ತು ಇಂಟರ್ನೆಟ್, ಎಐ ಅನ್ನು ಒಂದೆಡೆ ಪ್ರೀತಿಸುತ್ತಾ, ಇನ್ನೊಂದೆಡೆ ದೂಷಿಸುತ್ತಾ ಇದ್ದೇವಲ್ಲ, ಇದನ್ನು ಆಗುಮಾಡಿದವರು ಯಾರು? ಯಾಕೆ? ಇದನ್ನು ಅನಿವಾರ್ಯಗೊಳಿಸಿದ್ದು ಹೇಗೆ? ಎಲ್ಲಿ? ಇದರ ಮೂಲಕ ಜಗತ್ತಿನ ಮನುಷ್ಯರೆಲ್ಲಾ ಹತ್ತಿರವಾಗುತ್ತಾರೆ ಎನ್ನುತ್ತಲೇ ಮನುಷ್ಯ ಸಂಬಂಧಗಳು ದೂರವಾಗಿರುವುದು ಯಾವ ಮಾಯಕದಲ್ಲಿ? ಇದರ ಹಿಂದಿರುವುದು ಯಂತ್ರತಂತ್ರಗಳೆ? ಕುತಂತ್ರಗಳೆ? ಇವುಗಳನ್ನು ಮನುಷ್ಯರ ವಿರುದ್ಧ ನಿಯಂತ್ರಿಸುತ್ತಿರುವವರು ಇವುಗಳ ಮೂಲಕ ಮತ್ತೆ ಚಲಾವಣೆಗೆ ತರುತ್ತಿರುವುದು ಅದೇ ದ್ವೇಷಾಧಾರಿತ, ತಾರತಮ್ಯವನ್ನೇ ತಳಪಾಯವಾಗಿಸಿಕೊಂಡಿರುವ, ಗುಲಾಮರ ಸೃಷ್ಟಿಯೇ ಪರಮ ಧ್ಯೇಯವಾದ ಪ್ರಪಂಚವನ್ನೇ ಅಲ್ಲವೇ? ಕರುಣೆ, ಮೈತ್ರಿಗಳನ್ನು ಹನನ ಮಾಡುವ ಮೂಲಕ, ಮೂರ್ಖರನ್ನು ಪ್ರಾಜ್ಞರೆಂಬಂತೆ ಬಿಂಬಿಸುವ ಮೂಲಕ, ದಾಳಿಕೋರರನ್ನು ನಾಯಕರೆಂಬಂತೆ ಹೊತ್ತುಕೊಳ್ಳುವ ಮೂಲಕ ಹತಾರುಗಳನ್ನು ಹರಿತಗೊಳಿಸಲಾಗುತ್ತದೆ. ಸರಳತೆ ಎಂದಿಗೂ ಆಕರ್ಷಕವಾದುದಲ್ಲ. ಗುಲಾಮಿತನದಿಂದ ಬಿಡುಗಡೆಗೊಂಡವರಿಗೂ ದೌಲತ್ತಿನ ಹಪಹಪಿ ಹುಟ್ಟಿಸಿಬಿಟ್ಟರೆ ಆಕ್ರಮಣ ಸುಲಭ.

ಇಪ್ಪತ್ತೊಂದನೇ ಶತಮಾನದ ಕಾಲು ದಶಕಗಳು ಮುಗಿದ ಈ ಹೊತ್ತಿನಲ್ಲಿ ಕಾಮ, ಮದ ಮತ್ತು ಮತ್ಸರಗಳೇ ಮೌಲ್ಯಗಳು ಎಂಬುದನ್ನು ದಾಟಿಸಿಯಾಗಿದೆ. ನಂಜು ಯಾವ್ಯಾವ ರೂಪದಲ್ಲಿ ಯಾರ‍್ಯಾರನ್ನು ಆವರಿಸಿಕೊಂಡಿದೆ ಎಂದು ಹೇಳಲಾಗುವುದಿಲ್ಲ. ಬೆಂಗಳೂರಿನಲ್ಲಿ ಹೋದ ತಿಂಗಳು ನಡೆದ ಒಂದು ಘಟನೆ ನನ್ನನ್ನು ಈಗಲೂ ಕಾಡುತ್ತಿದೆ. ಯುವತಿಯೊಬ್ಬಳು ಪ್ರೇಮ ನಿವೇದನೆಯ ಹೆಸರಿನಲ್ಲಿ ಯುವಕನ ಕೈಕಾಲು ಕಟ್ಟಿ ಪೆಟ್ರೋಲ್ ಸುರಿದು ಸುಟ್ಟು ಹಾಕಿದಳು. ಅವಳಿಗೆ ಹೀಗೆ ಮಾಡಲು ಹೇಗೆ ಸಾಧ್ಯವಾಯಿತು? ಇದು ಯಾಕೆ ಹೀಗಾಯಿತು? ಜಗತ್ತಿನ ಯಾವ ಭಾಗದಲ್ಲೂ ಈ ರೀತಿಯ ಪ್ರೇಮ ನಿವೇದನೆ ಅಧಿಕೃತವಾಗಿ ಇಲ್ಲ. ಆಕೆ ನಂಬಿಸಿದಳು. ಅವ ಮೂರ್ಖ, ನಂಬಿದ. ಅವ ತನ್ನನ್ನು ನಿರ್ಲಕ್ಷಿಸುತ್ತಿದ್ದಾನೆ ಎಂದವಳು ಅವನನ್ನೂ ಕೊಂದು ಸಾಯೋಣ ಅಂದುಕೊಂಡಿದ್ದಳಂತೆ. ಅವನ ‘ಕೇಂದ್ರ’ ಬಿಟ್ಟು ಅವಳಿಗೆ ಇನ್ನೊಂದು ಪ್ರಪಂಚ ಯಾಕೆ ಕಾಣಲಿಲ್ಲ?


ಗಂಡು ಹೆಣ್ಣಿಗೆ ವಿಧಿಸಿದ್ದ ಗುಲಾಮಿತನದಿಂದ ಬಿಡುಗಡೆ ಬಯಸಿ ಮಾಡಿದ ಹೋರಾಟ ಎಂದೂ ಪ್ರತಿಹಿಂಸೆಯನ್ನು ಪ್ರತಿಪಾದಿಸಲಿಲ್ಲ. ಅವನನ್ನು ಮಾನವೀಯಗೊಳಿಸು ಎಂದಷ್ಟೇ ಹೇಳಿತ್ತು. ಆದರೆ, ಆ ಚಿಂತನೆಗಳ ಸಾರವನ್ನೇ ನಾವು ಮಕ್ಕಳಿಗೆ ದಾಟಿಸುತ್ತಿಲ್ಲ. ಬಿಡುಗಡೆಯೆಂದರೆ ಸ್ವಚ್ಛಂದ ಕಾಮದ ಮೆರೆದಾಟ ಎಂಬ ಮಂಕು ತುಂಬಿಕೊಂಡು ಯುವಕ, ಯುವತಿಯರು ಹಳ್ಳಕ್ಕೆ ಬೀಳುತ್ತಿದ್ದಾರೆ. ಇನ್ನೊಂದೆಡೆ, ರಾಜಕೀಯವೆಂದರೆ ಮನಸ್ಸುಗಳನ್ನು ಕಟ್ಟುವುದಲ್ಲ, ದಿನದ ಇಪ್ಪತ್ತನಾಲ್ಕು ಗಂಟೆಯೂ ವಿರೋಧಿಸುವವರನ್ನು ‘ಶತ್ರು’ಗಳನ್ನಾಗಿಸಿ ಹಣಿಯುವುದು ಎಂಬಂತಾಗಿ, ಮನುಷ್ಯರು ಪರಸ್ಪರರನ್ನು ಪ್ರೀತಿಸುವುದು, ಗೌರವಿಸುವುದು ಎಂಬುದೆಲ್ಲಾ ಮೂಲೆಗುಂಪಾಗಿ, ಲಾಭಕ್ಕಾಗಿ ಜೊತೆಗಿರುವುದು ಎಂಬಷ್ಟಕ್ಕೆ ಕೆಳಗಿಳಿಸಿದೆ.

ನಾವು ಎಷ್ಟೆಲ್ಲ ಹಿಂಸೆಗೆ ಒಳಗಾದರೂ ಅಹಿಂಸಾತ್ಮಕ ಹೋರಾಟ ಮಾಡಿದೆವೇ ಹೊರತು ಎಂದೂ ಶೋಷಕರನ್ನು ಕೊಲ್ಲಲಿಲ್ಲ, ಆಕ್ರಮಿಸಲಿಲ್ಲ ಎಂದು ದೇವನೂರ ಮಹಾದೇವರಾದಿಯಾಗಿ ಕನ್ನಡದ ಹಲವು ದಲಿತ ಸಾಹಿತಿಗಳು ಹೆಮ್ಮೆಯಿಂದ ಹೇಳುವುದನ್ನು ಕೇಳಿದ್ದೇನೆ. ಆದರೆ, ಅಹಿಂಸಾತ್ಮಕ ಹೋರಾಟ ಮಾಡುವವರನ್ನೆಲ್ಲ ‘ನಗರ ನಕ್ಸಲರು’ ಎಂದು ಕರೆದು ಅಮಾನ್ಯ ಮಾಡುವ ಕ್ಷುಲ್ಲಕ ಜೀವಿಗಳು ಇಂದು ಹೀರೋಗಳಾದರೆ, ಮನೆ ಮನೆಯೂ ಕುಲುಮೆಗಳಾಗಿ ‘ಮಣಿಪುರ’ಗಳಾಗದೇ ಇರುತ್ತವೆಯೆ?

1822ರಿಂದ 1913ರ ತನಕ ಜೀವಿಸಿದ್ದ ಹ್ಯಾರಿಯೆಟ್ ಟಬ್‌ಮ್ಯಾನ್ ಗುಲಾಮಗಿರಿಯ ವಿರುದ್ಧ ಹೋರಾಡಿದ ಅಸಾಮಾನ್ಯ ಕಪ್ಪು ಮಹಿಳೆ. ಯಜಮಾನ ತನ್ನನ್ನು ಮಾರಾಟ ಮಾಡಲು ಹೊರಟಾಗ ರಾತ್ರೋರಾತ್ರಿ ತೊಂಬತ್ತು ಮೈಲಿ ಕಾಲ್ನಡಿಗೆಯಲ್ಲಿ ಕ್ರಮಿಸಿ, ಸಿಕ್ಕಿಹಾಕಿಕೊಳ್ಳುವ ಸಂದರ್ಭದಲ್ಲಿ ನದಿಗೆ ಧುಮುಕಿ ಜೀವ ಉಳಿಸಿಕೊಂಡು ಪರಾರಿಯಾದವಳು. ನಿರಕ್ಷರಿಯಾಗಿದ್ದ ಆಕೆ ‘ಸ್ವಾತಂತ್ರ್ಯ, ಇಲ್ಲವೇ ಸಾವು’ ಎಂಬ ನೆಲೆಯಲ್ಲಿ ಅತ್ಯಂತ ದಿಟ್ಟವಾಗಿ, ಯೋಜಿತವಾಗಿ, ಒಂಟಿಯಾಗಿ ಹೋಗಿ ಗುಲಾಮರಿಗೆ ಧೈರ್ಯ ತುಂಬಿ ಓಡಿಸಿಕೊಂಡು ಫ್ರೀಲ್ಯಾಂಡ್ ಅನ್ನಿಸಿಕೊಂಡ ಪೆನ್ಸಿಲ್ವೇನಿಯಾ, ಕೆನಡಾಗಳಿಗೆ ಕರೆತರುತ್ತಿದ್ದಳು. ತನ್ನ ರಕ್ಷಣೆಗಾಗಿ ಪಿಸ್ತೂಲೊಂದನ್ನು ಇಟ್ಟುಕೊಳ್ಳುತ್ತಿದ್ದಳು. ಗುಲಾಮರ ಬಿಡುಗಡೆಗಾಗಿ ಹೋರಾಡುವ ಗುಂಪು ಇವಳನ್ನು ಗುರ್ತಿಸಿ ತಮ್ಮೊಂದಿಗೆ ಮುಂಚೂಣಿಯಲ್ಲಿ ಇಟ್ಟುಕೊಂಡಿತ್ತು. 1863ರ ಹೊತ್ತಿಗೆ ಸಭೆಯೊಂದರಲ್ಲಿ ‘ಗುಲಾಮರನ್ನು ಈಗ ಕರೆತರುವುದು ಅಪಾಯಕಾರಿ, 600 ಮೈಲಿ ದೂರದಲ್ಲಿದ್ದಾರೆ. ಅದಕ್ಕಾಗಿ ಯೋಜನೆ ಹಾಕಿಕೊಳ್ಳಬೇಕು, ಈಗ ನಡೆಯುತ್ತಿರುವ ಸಿವಿಲ್ ವಾರ್ ಮುಗಿಯಬೇಕು’ ಎಂದಾಗ ಸಿಡಿದೆದ್ದು ಆಕೆ ಹೇಳುವ ಮಾತುಗಳು ಗಮನಾರ್ಹ. ‘ಇಲ್ಲಿರುವ ನೀವೆಲ್ಲ ಸ್ವತಂತ್ರ ಶಿಶುಗಳಾಗಿ ಜನಿಸಿದವರು. ನಿಮಗೆ ಹುಟ್ಟುವಾಗಲೇ ಗುಲಾಮರಾದವರ ಬದುಕಿನ ಕಚ್ಚಾ ಅನುಭವವಿಲ್ಲ. ಹುಟ್ಟುವಾಗಲೇ ಸ್ವತಂತ್ರರಾದ ನಿಮಗೆ ಬದುಕಿನ ಕಂಫರ್ಟ್‌ಗಳು ಅಭ್ಯಾಸವಾಗಿ ಹೋಗಿದೆ. ನಿಮಗೆ ಸುಂದರ ಮನೆಗಳು, ಹೆಂಡತಿಯರು, ಮಕ್ಕಳು ಇದ್ದಾರೆ. ನನಗಿನ್ನೂ ನೆನಪಿದೆ. ಪುಟ್ಟ ಮಕ್ಕಳು ಕೆಲಸ ಸರಿ ಮಾಡುತ್ತಿಲ್ಲ ಎಂದು ಹೊಡೆಸಿಕೊಳ್ಳುವುದು, ಮೈನೆರೆಯುತ್ತಿದ್ದಂತೆಯೇ ಹುಡುಗಿಯರು ಮೀಸಲು ಮುರಿಸಿಕೊಳ್ಳಲು ಅತ್ಯಾಚಾರಕ್ಕೊಳಗಾಗುವುದು, ಅಣ್ಣತಮ್ಮಂದಿರು ಚಾಟಿ ಏಟಿನಿಂದ ನರಳುವುದು, ಹಸುಗೂಸುಗಳಿಂದ ಬೇರ್ಪಡಿಸಿಕೊಂಡು ಅಕ್ಕತಂಗಿಯರು ಕಣ್ಣು ಕಾಣದ ಪ್ರದೇಶಕ್ಕೆ ಮಾರಾಟವಾಗುವುದು... ನಾನು ಅವರನ್ನು ಇದರಿಂದ ಬಿಡುಗಡೆಗೊಳಿಸಲು ನನ್ನ ಕೊನೆಯ ಹನಿರಕ್ತವನ್ನೂ ಕೊಡಬಲ್ಲೆ’ ಎಂದವಳು ಮತ್ತೆ ಹೊರಟು, ಕಾಂಬ್‌ಹೀ ರಿವರ್ ರೈಡ್ ಆಯೋಜಿಸಿ 700 ಗುಲಾಮರನ್ನು ಮುಕ್ತಿಗೊಳಿಸಿದಳು. ಈ ಹಂತದಲ್ಲಿ ಆಕೆಯ ಹಳೆಯ ಯಜಮಾನ ಅವಳನ್ನು ಜೀವಂತವಾಗಿ ಹಿಡಿಯಲು ಹುಡುಕುತ್ತಿದ್ದಾಗ, ಕಾಡಲ್ಲಿ ಅವನೇ ಅವಳಿಗೆ ಸೆರೆ ಸಿಕ್ಕುತ್ತಾನೆ. ಅವಳು ಅವನನ್ನು ಕೊಲ್ಲಬಹುದಾಗಿತ್ತು. ‘ಈಗ ನಮ್ಮ ಕಾಲ ಬಂದಿದೆ’ ಎನ್ನುತ್ತ ಅವನನ್ನು ನಿಶ್ಶಸ್ತ್ರಗೊಳಿಸಿ ಬಿಟ್ಟುಬಿಡುತ್ತಾಳೆ. ಅವಳಿಗೆ ಬೇಕಿರುವುದು ಪ್ರತಿಹಿಂಸೆಯ ಅನುಕರಣೆಯಲ್ಲ, ಬಿಡುಗಡೆಯ ಮುಕ್ತ ಹೊಸದಾರಿ. (ಹ್ಯಾರಿಯೆಟ್ ಟಬ್‌ಮನ್ ಹೆಸರಿನ ಸಿನಿಮಾ ಕೂಡ ಲಭ್ಯವಿದೆ.) ಇದೇ ನಿಜ ನಾಯಕತ್ವದ ಮಾದರಿ.

ಹಾಗೆಲ್ಲ ಹೋರಾಡಿ ಬಿಡುಗಡೆಯ ನವಿರು ಭಾವವನ್ನು ಕಟ್ಟಿದ ಜಗತ್ತಿನಲ್ಲೀಗ ಮತ್ತೆ ಮೂರ್ಖರ ದರ್ಬಾರು. ಹಾಗೆ ಹೋರಾಡುವುದೇ ಎಡಪಂಥವಾಗಿತ್ತು. ಅದು ಬಯಸುವುದು ಸರ್ವರ ಉದಯವಾಗಿತ್ತು. ಆದರೀಗ ಅದಕ್ಕೆ ವಿರುದ್ಧವಾದ ಬಲಪಂಥವನ್ನು ಬಲಗೊಳಿಸಲಾಗುತ್ತಿದೆ. ಬಲಪಂಥವೆಂದರೆ ಖಾಸಗೀಕರಣದ ಮಹಾಪರ್ವ. ಇದು ಕೊನೆಗೂ ಎಂತಹ ಲೋಕ ನಿರ್ಮಾಣ ಮಾಡಬಹುದು? ಫ್ರಾನ್ಸ್ ನಿರ್ಮಿತ ‘ಕಿಕಾ’ ಸಿನಿಮಾವು ಇದರ ದಿವ್ಯದರ್ಶನ ಮಾಡಿಸಿದಾಗ ನಾನು ಅವಾಕ್ಕಾದೆ. ನಮ್ಮ ನಡುವೆಯೇ ಇವೆಲ್ಲವೂ ಇದೆಯೇ ಎಂದು ಆಘಾತವಾಗುವಂತಿದೆ ಬದುಕಿನ ಓಟ. ಫ್ರಾನ್ಸ್‌ನ ಸುಶಿಕ್ಷಿತ ಮಧ್ಯಮವರ್ಗಕ್ಕೆ ಸೇರಿದ ಒಬ್ಬಾಕೆ ವಿಚ್ಛೇದನದ ನಂತರ ಮಗಳು ಮತ್ತು ತನಗಾಗಿ ಒಂದು ಪುಟ್ಟ ಬಾಡಿಗೆ ಮನೆಗಾಗಿ ಹುಡುಕಾಟ ಮಾಡುತ್ತಿರುತ್ತಾಳೆ. ದುಬಾರಿ ಮುಂಗಡ ಹಣ ಹೊಂದಿಸಲು ಹಲವು ಶಿಫ್ಟ್‌ಗಳಲ್ಲಿ ಕೆಲಸ ಮಾಡುತ್ತಾಳೆ. ಆದರೂ ಸಾಕಾಗುವುದಿಲ್ಲ. ಒಮ್ಮೆ ಒಬ್ಬಳು ಕ್ಲೈಂಟ್, ಹಣ ಹೊಂದಿಸಲು ತನ್ನ ಬಳಸಿದ ಒಳ ಉಡುಪನ್ನು ಒಗೆಯದೇ ಸೇಲ್ ಮಾಡ್ತೀನಿ ಅಂದಾಗ ಇವಳಿಗೆ ಶಾಕ್ ಆಗುತ್ತೆ. ಈಗ ಕಷ್ಟಕಾಲದಲ್ಲಿ ಅದು ನೆನಪಾಗಿ ಇಂಟರ್ನೆಟ್ ಮೂಲಕ ಆ ವ್ಯಕ್ತಿಯ ಸಂಪರ್ಕಕ್ಕೆ ಬರುತ್ತಾ ತೆರೆದುಕೊಳ್ಳುವ ಅದರ ವ್ಯಾಪ್ತಿಯಿಂದ ದಂಗಾಗುತ್ತಾಳೆ. ವಿಪರೀತ ದುಡ್ಡಿದ್ದರೂ ನೆಮ್ಮದಿ ಇಲ್ಲದ ಕೆಲವರು, ತನ್ನನ್ನು ಕೆಟ್ಟಾ ಕೊಳಕು ಬಯ್ಯಬೇಕು, ನಾನು ನಿನ್ನ ಬೂಟು ನೆಕ್ಕುವಂತೆ ನೀನು ನನ್ನನ್ನು ಪೀಡಿಸಬೇಕು, ನನ್ನ ಚರ್ಮ ಕೀಳುವಂತೆ ಚಾಟಿಯಲ್ಲಿ ಹೊಡೆಯಬೇಕು... ಹೀಗೆ ಹಿಂಸೆ, ಅವಮಾನ ಹೆಚ್ಚು ಮಾಡಿದಷ್ಟೂ ಅವಳಿಗೆ ಅವರು ಕೊಡುವ ಮೊತ್ತ ಹೆಚ್ಚುತ್ತಾ ಹೋಗುತ್ತದೆ! ದುಡ್ಡಿಗಾಗಿ ಮನಸ್ಸು ಕಲ್ಲಾಗಿಸಿಕೊಂಡು ಇದನ್ನೆಲ್ಲಾ ಮಾಡುವ ಅವಳು ತನಗೆ ಬೇಕಾದಷ್ಟು ಹಣ ಹೊಂದಿಕೆಯಾದಾಗ ಅದನ್ನು ಅಲ್ಲಿಗೇ ನಿಲ್ಲಿಸುತ್ತಾಳೆ. ಆದರೆ, ತನ್ನ ಗೆಳತಿಗೆ ಹೇಳಿ ಚಾಟಿಯಿಂದ ಹೊಡೆಸಿಕೊಳ್ಳುತ್ತಾಳೆ. ಓಹ್! ಇದು ನಿಜವೇ? ಅಂದರೆ ಇದು ಸುಳ್ಳಾಗಿರಲಿಕ್ಕಿಲ್ಲ. ಹೌದು, ಹಗೆತನ, ಕಾಮ, ಮದ, ಮತ್ಸರ, ತಾರತಮ್ಯದ ಅಮಲುಗಳ ವ್ಯವಸ್ಥೆಯ ಪೋಷಣೆ ಮಾಡಿದರೆ ಇದಕ್ಕಿಂತ ಉನ್ನತ ಬದುಕು ಸಿಗಲಿಕ್ಕಿಲ್ಲ. ನೆನಪಿಡಿ, ಮೇಲ್ನೋಟಕ್ಕೆ ಆಕೆ ಬದುಕುತ್ತಿರುವ ಸಮಾಜ ಮಹಾನ್ ಸಭ್ಯ, ಸ್ವಚ್ಛ, ಸುಂದರ. ಅಭಿವೃದ್ಧಿಯಿಂದ ಹೊಳೆಯುತ್ತಿರುವ ಬಿಳಿ ಚರ್ಮದವರ ಆಗರ. ಮತ್ತು ನಮಗೆ ಅದೇ ಸಾಧಿಸಬೇಕಾದ ಆದರ್ಶ!

ನಮಗೆ ಬಡತನದ ಗುಡಿಸಲಾದರೂ ಇರಲಿ, ಅಲ್ಲಿ ಪ್ರೀತಿ ಮಮತೆಯ ಹಣತೆ ಬೆಳಗಲಿ. ನಿಮ್ಮ ಅಭಿವೃದ್ಧಿಯ ಅಗ್ನಿಕುಂಡದ ಮುಖವಾಡಕ್ಕಿಷ್ಟು ಬೆಂಕಿ ಬೀಳಲಿ.



ವಾಚಕರ ವಾಣಿ

ಮಿತವ್ಯಯದ ಮಾತು: ಗೂಳಿಗೂ ಅಪಥ್ಯ

‘**ಫ್ರಾನ್ಸ್** ಸೀನಿದರೆ ಇಡೀ ಯುರೋಪ್‌ಗೆ ಚಳಿ ಹಿಡಿಯುತ್ತದೆ’ ಎನ್ನುವುದು ಪ್ರಸಿದ್ಧ ನಾಣ್ಣುಡಿ. ಈ ಮಾತು ಭಾರತದ ಷೇರು ಮಾರುಕಟ್ಟೆಗಳಿಗೂ ಅನ್ವಯಿಸುತ್ತದೆ. ಅಮೆರಿಕದ ಅಧ್ಯಕ್ಷರು ಕೋಪಗೊಂಡರೆ ಷೇರುಪೇಟೆ ಕುಸಿಯುತ್ತದೆ; ಸಂತೋಷದಿಂದ ಕುಣಿದಾಡಿದರೆ ಗೂಳಿ ಓಡತೊಡಗುತ್ತದೆ. ಪ್ರಧಾನಿ ಮೋದಿಯವರ ಮಿತವ್ಯಯದ ಬುದ್ಧಿಮಾತಿನಿಂದಲೂ ಹೂಡಿಕೆದಾರರ ಕೋಟ್ಯಂತರ ರೂಪಾಯಿ ಕರಗಿ ಹೋಗಿದೆ. ‘ಉಳಿಸಿ, ಬೆಳಸಿ, ಮಿತವಾಗಿ ಬಳಸಿ’ ಎನ್ನುವುದು ಜೀವನದ ಅನುದಿನದ ನಿಯಮವಾಗಬೇಕೆ ಹೊರತು ಯಾವುದೋ ವಿಶೇಷ ಸಂದರ್ಭಕ್ಕಷ್ಟೆ ಪಾಲಿಸಬೇಕಾದ ನಿಯಮವಲ್ಲ. ಕೆಲವರು ಸೀನಿದರೆ, ಕೆಮ್ಮಿದರೆ ಬಿದ್ದು ಹೋಗುವ ಮಾರುಕಟ್ಟೆಯಲ್ಲಿ ಅರಿತು ಹೂಡಿಕೆ ಮಾಡಬೇಕು ಎನ್ನುವ ಹೂಡಿಕೆ ತಜ್ಞರ ಮಾತು ಎಷ್ಟೋ ಸಂದರ್ಭಗಳಲ್ಲಿ ನಗೆಪಾಟಲಿಗೆ ತುತ್ತಾಗುತ್ತದೆ. ‘ದೀರ್ಘಾವಧಿಯಲ್ಲಿ ನಾವೆಲ್ಲರೂ ಸತ್ತಿರುತ್ತೇವೆ’ ಎಂಬ ಬ್ರಿಟಿಷ್ ಆರ್ಥಿಕ ತಜ್ಞ ಜಾನ್ ಮೆನಾರ್ಡ್ ಕೇನ್ಸ್‌ನ ಮಾತುಗಳನ್ನು ಎಲ್ಲರೂ ನೆನಪಿಡಬೇಕು.

ಜಗದೀಶ್ ಎಚ್.ಬಿ., ಹುಬ್ಬಳ್ಳಿ

ನೀಟ್ ವೈಫಲ್ಯ: ಪ್ರಧಾನಿಯ ಮೌನವೇಕೆ?

‘**ನೀಟ್**’ ಅಕ್ರಮ ತಡೆಯುವಲ್ಲಿ ಕೇಂದ್ರ ಸರ್ಕಾರ ಸೂಕ್ತ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವಲ್ಲಿ ಪದೇ ಪದೇ ವೈಫಲ್ಯ ಅನುಭವಿಸುತ್ತಿದೆ. ಇದು ದೇಶದ ಯುವಜನರಿಗೆ ಮಾಡುತ್ತಿರುವ ಅನ್ಯಾಯ. 2017ರಿಂದಲೂ ಸತತವಾಗಿ ಒಂದಿಲ್ಲೊಂದು ವಿವಾದವು ಈ ಪರೀಕ್ಷೆಗೆ ಸುತ್ತಿಕೊಳ್ಳುತ್ತಿದೆ. ಹೀಗಿದ್ದರೂ ನಿರ್ಲಕ್ಷ್ಯ ಧೋರಣೆ ಸರಿಯಿಲ್ಲ. ಹಳೆಯ ಪ್ರಕರಣಗಳ ಸೂಕ್ತ ತನಿಖೆ ಆಗದಿರುವಿಕೆ, ಭದ್ರತಾಲೋಪಕ್ಕೆ ಕೇಂದ್ರವೇ ನೇರ ಹೊಣೆ. ಇಷ್ಟೆಲ್ಲಾ ಆದರೂ ಕೇಂದ್ರ ಶಿಕ್ಷಣ ಸಚಿವರು ವಿದ್ಯಾರ್ಥಿಗಳಿಗೆ ಧೈರ್ಯ ತುಂಬುವ ಕೆಲಸ ಮಾಡಿಲ್ಲ. ರಾಜೀನಾಮೆ ನೀಡುವ ನೈತಿಕತೆಯನ್ನೂ ಪ್ರದರ್ಶಿಸಿಲ್ಲ. ಇತ್ತ ಪರೀಕ್ಷಾ ಅಕ್ರಮದ ಕುರಿತು ಪ್ರಧಾನಿಯವರು ಮೌನ ತಾಳಿದ್ದಾರೆ. ಇವೆಲ್ಲ ನೋಡಿದರೆ ಪ್ರಧಾನಿ ಅವರಿಗೆ ಚುನಾವಣೆ ಮೇಲಿರುವ ಆಸಕ್ತಿ, ಇಂತಹ ವಿಷಯಗಳ ಮೇಲೆ ಇದ್ದಂತಿಲ್ಲ.

ಸುರೇಂದ್ರ ಪೈ, ಭಟ್ಕಳ

ಮಿತವ್ಯಯಿಗಳೆಂಬ ಸಿಗ್ಗೇಕೆ; ಸೊಕ್ಕಿರಲಿ

ಪ್ರಸ್ತುತ ಮಿತವ್ಯಯದ ಬಗ್ಗೆ ದೇಶದಾದ್ಯಂತ ಚರ್ಚೆಯಾಗುತ್ತಿದೆ. ಸರಳ ಹಾಗೂ ಮಿತವ್ಯಯಿ ಜೀವನ ನಮ್ಮ ಪೂರ್ವಜರ ಸೊತ್ತು ಹಾಗೂ ಸೊಕ್ಕು. 30–40 ವರ್ಷಗಳ ಹಿಂದೆ ಶ್ರೀಮಂತರೂ ಹಣ ಖರ್ಚು ಮಾಡಲು ಹಿಂದೆಮುಂದೆ ನೋಡುತ್ತಿದ್ದರು. ಮಧ್ಯಮವರ್ಗದವರಂತೂ ಆಗೊಮ್ಮೆ ಈಗೊಮ್ಮೆ ಒಂದು ತೀರ್ಥಕ್ಷೇತ್ರದ ದರ್ಶನವಾದರೆ, ಯುಗಾದಿಗೊಂದು ಮಾರ್ನಾಮಿಗೊಂದು ಜೊತೆ ಬಟ್ಟೆಗೆ ಹಣ ಹೊಂದಿಸಿಬಿಟ್ಟರೆ ಸಾಧನೆ ಮಾಡಿದಂತೆ ಸಂಭ್ರಮಿಸುತ್ತಿದ್ದರು. ಕಿರಾಣಿ ಅಂಗಡಿಯಿಂದ ದಿನಸಿ, ವಾರದ ಸಂತೆಯಲ್ಲಿ ಖರೀದಿಸಿದ ತರಕಾರಿ, ಬಾಳೆಹಣ್ಣು ಬಿಟ್ಟರೆ ಹಿತ್ತಲಲ್ಲಿದ್ದ ಪರಂಗಿ ಗಿಡದಲ್ಲಿ ಬಿಡುತ್ತಿದ್ದ ಹಣ್ಣು, ಮನೆಯ ಆಕಳ ಹಾಲು–ಮೊಸರು, ಹೊಲಕ್ಕೆ ಗೊಬ್ಬರ ಇಷ್ಟರಲ್ಲಿ ಬದುಕು ಸುತ್ತುತ್ತಿತ್ತು. ಈಗಿನ ಪರಿಸ್ಥಿತಿ ಅವಲೋಕಿಸಿದರೆ ಮಿತವ್ಯಯಿ ಜೀವನ ಅನಿವಾರ್ಯವಾಗಿದೆ. ಮಿತವ್ಯಯಿಗಳೆಂಬ ಸಿಗ್ಗು ಬೇಡ; ಸೊಕ್ಕಿರಲಿ!

ಆಶಾ ನಾಗರಾಜ್, ಬೆಂಗಳೂರು

ಬಂಜಾರರ ನಿರ್ಧಾರ ಸ್ಫೂರ್ತಿದಾಯಕ

‘**ವರದಕ್ಷಿಣೆ** ವಿರೋಧ: ಬಂಜಾರ ಮಾದರಿ!’ ಲೇಖನ (ಲೇ: ವಿಜಯಲಕ್ಷ್ಮಿ, ಪ್ರ.ವಾ., ಮೇ 13) ಸಕಾಲಿಕವಾಗಿದೆ. 17 ಬಂಜಾರ ತಾಂಡಾಗಳು ಒಗ್ಗೂಡಿ ವರದಕ್ಷಿಣೆ ವಿರುದ್ಧ ತೆಗೆದುಕೊಂಡಿರುವ ನಿರ್ಧಾರ ಇಡೀ ರಾಜ್ಯಕ್ಕೆ ಸ್ಫೂರ್ತಿದಾಯಕ. ‘ಹೆಣ್ಣು ಸಮಾಜದ ಕಣ್ಣು’ ಎಂಬ ಮಾತು ಭಾಷಣಕ್ಕೆ ಸೀಮಿತವಾಗದೆ ವಾಸ್ತವ ಆಗಬೇಕಾದರೆ, ಹೆಣ್ಣುಮಕ್ಕಳ ಆಸೆ–ಆಕಾಂಕ್ಷೆಗಳನ್ನು ಬಲಿ ಪಡೆಯುತ್ತಿರುವ ವರದಕ್ಷಿಣೆಯನ್ನು ಬೇರುಸಹಿತ ಕಿತ್ತೊಗೆಯಬೇಕಿದೆ. ಇದರ ನಿರ್ಮೂಲನೆಗಾಗಿ ಯುವಕ ಮತ್ತು ಯುವತಿಯರು ಎಚ್ಚೆತ್ತುಕೊಳ್ಳಬೇಕು.

ಮೌನೇಶ್ ಚವಾಣ್, ರಾಯಚೂರು

ಮುಸ್ಲಿಂ ಮತಬ್ಯಾಂಕ್ ಉಳಿವಿಗೆ ಸರ್ಕಸ್

ಶಾಲಾ–ಕಾಲೇಜುಗಳಲ್ಲಿ ಹಿಜಾಬ್ ನಿಷೇಧ ಆದೇಶವನ್ನು ರಾಜ್ಯ ಸರ್ಕಾರ ರದ್ದುಪಡಿಸಿದೆ. ಕಾಂಗ್ರೆಸ್‌ಗೆ ಈಗ ಮುಸ್ಲಿಮರ ನೋವುಗಳು ಅರ್ಥವಾಗುತ್ತಿವೆ ಎನಿಸುತ್ತಿದೆ. ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಕೈಪಾಳಯದ ಲೆಕ್ಕಾಚಾರ ಮೀರಿ ಎಸ್‌ಡಿಪಿಐಗೆ ಹೆಚ್ಚು ಮತ ಬಿದ್ದಿವೆ. ಹಾಗಾಗಿ, ಪಕ್ಷದ ವೋಟ್‌ಬ್ಯಾಂಕ್ ಉಳಿಸಿಕೊಳ್ಳುವ ನಿರ್ಧಾರ ಇದರ ಹಿಂದೆ ಇದ್ದಂತಿದೆ. ಹಾಗಾಗಿಯೇ, ಮೂರು ವರ್ಷಗಳ ಹಿಂದಿನ ಹಿಜಾಬ್ ವಿವಾದಕ್ಕೆ ತೆರೆ ಎಳೆದು ನಾವು ಮುಸ್ಲಿಂ ಹಿತೈಷಿಗಳು ಎಂದು ತೋರಿಸಿಕೊಳ್ಳಲು ಕಾಂಗ್ರೆಸ್ ಹೊರಟಿದೆ. ಇದು ಇಷ್ಟಕ್ಕೆ ಸೀಮಿತಗೊಂಡರೆ ಸಾಕೆ? ಮುಸ್ಲಿಂ ಸಮುದಾಯ ಶಿಕ್ಷಣ ಹಾಗೂ ಉದ್ಯೋಗದಲ್ಲಿ ಹಿಂದುಳಿದಿದೆ. ಸಮುದಾಯದ ಅಶಕ್ತರಿಗೆ ಆರ್ಥಿಕ ನೆರವು ನೀಡುವ ಬಗ್ಗೆಯೂ ಸರ್ಕಾರ ಕಾಳಜಿ ತೋರಲಿ.

ಹುಸೇನಬಾಷಾ ತಳೇವಾಡ, ಹುಬ್ಬಳ್ಳಿ

ಸಮವಸ್ತ್ರ ರಾಜಕೀಯ; ಮಕ್ಕಳು ಪರಕೀಯ

ಶಿಕ್ಷಣದಲ್ಲಿ ಶಿಸ್ತು ಅತಿಮುಖ್ಯ. ಸಮವಸ್ತ್ರವು ಅದರ ಭಾಗ. ಸಮವಸ್ತ್ರ ವಿಚಾರದಲ್ಲಿ ಎಸ್‌ಡಿಎಂಸಿ ಹಾಗೂ ಆಡಳಿತ ಮಂಡಳಿಗಳಿಗೆ ಸ್ವಾತಂತ್ರ್ಯ ನೀಡುವುದು ಸೂಕ್ತ. ಅದರಲ್ಲಿ ಸರ್ಕಾರ ಮೂಗು ತೂರಿಸುವುದು ಸರಿಯಲ್ಲ. ಒಂದು ಸರ್ಕಾರ ಬಂದಾಗ ಒಂದು ನೀತಿ, ಮತ್ತೊಂದು ಸರ್ಕಾರ ಬಂದಾಗ ಮತ್ತೊಂದು ನೀತಿ ತರುವುದು ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರಲಿದೆ. ಶಿಕ್ಷಣ ತಜ್ಞರ ಸಮಿತಿ ನೇಮಿಸಿ ಚರ್ಚಿಸಿದ ಬಳಿಕ ಸಮವಸ್ತ್ರ ನೀತಿ ಜಾರಿಗೊಳಿಸಲಿ. ಮಕ್ಕಳಲ್ಲಿ ನಾಡು, ದೇಶದ ಬಗ್ಗೆ ಅಭಿಮಾನ ಮೂಡುವಂತಹ ವಾತಾವರಣ ಸೃಷ್ಟಿಸಬೇಕು. ಜಾತ್ಯತೀತ ಹಾಗೂ ವೈಚಾರಿಕತೆ ಬಿತ್ತುವುದು ಸರ್ಕಾರದ ಗುರಿಯಾಗಲಿ. ಆ ಗುರಿ ಪ್ರಾಥಮಿಕ ಶಿಕ್ಷಣದಿಂದಲೇ ಆರಂಭವಾಗಲಿ.

ಸಿ. ಸಿದ್ದರಾಜು ಆಲಕೆರೆ, ಮಂಡ್ಯ

ಚಾಟಿ

ಕೇಂದ್ರಕ್ಕೇಕೆ ‘ನೀಟ್’ ಚಿಂತೆ?



ವೈದ್ಯಕೀಯ ಪದವಿ ಪ್ರವೇಶ ಪರೀಕ್ಷೆಗಳನ್ನು ಕೇಂದ್ರ ಸರ್ಕಾರ ಸುಪರ್ದಿಗೆ ತೆಗೆದುಕೊಂಡಿರುವುದು ಒಕ್ಕೂಟ ವ್ಯವಸ್ಥೆಯ ಅಣಕ. ದಕ್ಷಿಣದ ರಾಜ್ಯಗಳಲ್ಲಿ ಅಪಾರ ಸಂಖ್ಯೆಯಲ್ಲಿರುವ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ಉತ್ತರ ಭಾರತದ ವಿದ್ಯಾರ್ಥಿಗಳಿಗೆ ಅವಕಾಶ ಕೊಡಿಸಲೆಂದೇ ರೂಪಿತವಾದ ವ್ಯವಸ್ಥೆಯಿದು.

ಜಿ.ಟಿ. ನರೇಂದ್ರ, ವಕೀಲ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ಬಿಜೆಪಿಯ ಕೊಡುಗೆ ಇಲ್ಲದೆ ದೇಶದಲ್ಲಿ ಯಾವ ಹಗರಣಗಳೂ ಪೂರ್ಣಗೊಳ್ಳುವುದಿಲ್ಲ! ಡ್ರಗ್ಸ್ ಪೆಡ್ಲಿಂಗ್‌ನಿಂದ ಹಿಡಿದು, ಪಿಎಸ್‌ಐ ಹಗರಣದಿಂದ ನೀಟ್ ಪ್ರಶ್ನೆಪತ್ರಿಕೆಯ ಸೋರಿಕೆಯವರೆಗೆ, ಎಲ್ಲದರಲ್ಲೂ ದೇಶದ ಯುವ ಸಮುದಾಯದ ಕನಸುಗಳ ಮೇಲೆ, ಭವಿಷ್ಯದ ಮೇಲೆ ಸರ್ಜಿಕಲ್ ಸ್ಟ್ರೈಕ್ ಮಾಡುತ್ತಲೇ ಇದೆ ಬಿಜೆಪಿ.

ಪ್ರಿಯಾಂಕ್ ಖರ್ಗೆ, ಐ.ಟಿ–ಬಿ.ಟಿ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 15-5-2001

• **ಬರಗೂರು ವರದಿ ಜಾರಿಗೆ ಸಾಹಿತಿಗಳ ಆಗ್ರಹ**

ಧಾರವಾಡ, ಮೇ 14– ಒಂದನೇ ತರಗತಿಯಿಂದ ಏಳನೇ ತರಗತಿವರೆಗೆ ಕನ್ನಡ ಮಾಧ್ಯಮ ಕಡ್ಡಾಯ ಮಾಡಬೇಕೆಂಬ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬರಗೂರು ರಾಮಚಂದ್ರಪ್ಪ ಸಮಿತಿಯ ವರದಿಯನ್ನು ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಜಾರಿಗೆ ತರಬೇಕು ಎಂದು ಕನ್ನಡದ ಹಿರಿಯ ಕವಿ ಚೆನ್ನವೀರ ಕಣವಿ ಸೇರಿದಂತೆ ಹಲವು ಲೇಖಕರು ಸರ್ಕಾರವನ್ನು ಆಗ್ರಹಿಸಿದ್ದಾರೆ.

ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಎಂದು ಕರೆದುಕೊಳ್ಳುವ ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕರ್ನಾಟಕ ವಿದ್ಯಾವರ್ಧಕ ಸಂಘ, ಕನ್ನಡ ಶಕ್ತಿ ಕೇಂದ್ರ ಹಾಗೂ ಕನ್ನಡ ಕ್ರಿಯಾ ಸಮಿತಿಗಳು ಬರಗೂರು ವರದಿಯನ್ನು ಜಾರಿ ಮಾಡುವಂತೆ ಸರ್ಕಾರದ ಮೇಲೆ ಒತ್ತಡ ಹೇರುವ ಕೆಲಸ ಮಾಡಬೇಕಿತ್ತು ಎಂದು ಕಣವಿ ಅವರು ತಿಳಿಸಿದರು.

• **ಜಯಾ ತಮಿಳುನಾಡು ಮುಖ್ಯಮಂತ್ರಿ**

ಚೆನ್ನೈ, ಮೇ 14 (ಪಿಟಿಐ, ಯುಎನ್‌ಐ)– ಎಐಎಡಿಎಂಕೆ ನಾಯಕಿ ಜೆ. ಜಯಲಲಿತಾ ಅವರು ಮುಖ್ಯಮಂತ್ರಿಯಾಗಿ ಇಂದು ಸಂಜೆ ಪ್ರಮಾಣ ವಚನ ಸ್ವೀಕರಿಸುವ ಮೂಲಕ ಇದುವರೆಗೆ ಇದ್ದ ಗೊಂದಲ ಮತ್ತು ಊಹಾಪೋಹಗಳಿಗೆ ತೆರೆಬಿದ್ದಿತು.

75 ವರ್ಷಗಳ ಹಿಂದೆ

ಮಂಗಳವಾರ, 15-5-1951

• **ಜನಪ್ರಾತಿನಿಧ್ಯ ಮಸೂದೆ: 9 ವಿಧಿಗಳಿಗೆ ಒಪ್ಪಿಗೆ**

ದೆಹಲಿ, ಮೇ 14– ಜನತಾ ಪ್ರಾತಿನಿಧ್ಯ ದ್ವಿತೀಯ ಮಸೂದೆಯ 169 ವಿಧಿಗಳ ಪೈಕಿ ಒಂಭತ್ತು ವಿಧಿಗಳಿಗೆ ಪಾರ್ಲಿಮೆಂಟಿನಲ್ಲಿ ಅಂಗೀಕಾರ ಮುದ್ರೆ ಬಿತ್ತು. ಸದಸ್ಯರ ಅನರ್ಹತೆಗೆ ಸಂಬಂಧಪಟ್ಟ ಹಲವು ವಿರುದ್ಧಾಭಿಪ್ರಾಯ ಪೂರಿತ ವಿಧಿಗಳನ್ನು ಬುಧವಾರಕ್ಕೆ ಮುಂದೆ ಹಾಕಲಾಯಿತು.

ಚುನಾವಣೆಗಳು ನಡೆಯುವ ಮುನ್ನ ಎಲ್ಲಾ ಮಂತ್ರಿಗಳೂ ರಾಜೀನಾಮೆ ಕೊಡಬೇಕೆಂಬ ರಾಮನಾರಾಯಣ ಸಿಂಗ್ ಮತ್ತು ಪ್ರೊ. ಎನ್. ರಂಗಾರವರ ಸಲಹೆಯನ್ನು ಘಟನಾತ್ಮಕ ರೀತ್ಯಾ ಕಾರ್ಯರೂಪಕ್ಕಿಳಿಸಲು ಸಾಧ್ಯವೆಂದು ನ್ಯಾಯಾಂಗ ಸಚಿವ ಡಾ. ಅಂಬೇಡ್ಕರ್‌ರವರು ತಿಳಿಸಿದರು.

ಚುರುಮುರಿ



ಬ್ರಹ್ಮಾಂಡ ಜ್ಯೋತಿಷ!

• ಬಿ.ಎನ್. ಮಲ್ಲೇಶ್

‘**ಹಲೋ...** ಬ್ರಹ್ಮಾಂಡ ಜ್ಯೋತಿಷಿಗಳಾ? ನಾನು ಟೀವಿ ರಿಪೋರ್ಟ್ರು ತೆಪರೇಸಿ ಮಾತಾಡ್ತಿರೋದು...’

‘ಓ... ಏನಯ್ಯಾ, ಬೆಳಬೆಳಗ್ಗೆ ಫೋನು? ಏನು ನಿನ್ ಡೌಟು?’

‘ನನ್ ತಲೇಲಿ ಡೌಟಿದೆ ಅಂತ ನಿಮಗೆಂಗೆ ಗೊತ್ತಾತು?’

‘ಮುಂಡಾಮೋಚ್ತು... ನಾನು ತ್ರಿಕಾಲ ಜ್ಞಾನಿ ಕಣಯ್ಯ, ಮೂರು ಲೋಕದಲ್ಲಿ ಏನೇನು ನಡೆಯುತ್ತೆ ಎಲ್ಲ ನಂಗೆ ಗೊತ್ತಾಗುತ್ತೆ. ಅದೇನ್ ಕೇಳು...’

‘ಅಲ್ಲ, ತಮಿಳುನಾಡಲ್ಲಿ ಜ್ಯೋತಿಷಿ ಒಬ್ರು ಯಾರು ಸಿಎಂ ಆಗ್ತಾರೆ ಅಂತ ಚುನಾವಣೆಗೆ ಮೊದ್ಲೇ ಹೇಳಿದ್ರಂತೆ. ಕರ್ನಾಟಕದಲ್ಲಿ ಈಗ ಮೊದ್ಲು ಸಂಪುಟ ವಿಸ್ತರಣೆ ಆಗುತ್ತೋ ಸಿಎಂ ಬದಲಾವಣೆ ಆಗುತ್ತೋ ಅವರು ಹೇಳ್ತಾರಾ?’

‘ಅದ್ನ ನಾನೇ ಹೇಳ್ತೀನಿ, ಸಂಪುಟ ವಿಸ್ತರಣೆ ಆದ್ರೆ ಸಿಎಂ ಬದಲಾವಣೆ ಆಗಲ್ಲ, ಬರೆದಿಟ್ಕೋ...’

‘ನಿಮ್ತಲೆ, ಅದು ಎಲ್ರಿಗು ಗೊತ್ತು. ಹೋಗ್ಲಿ, ಡಿಕೆಶಿ ಸಾಹೇಬ್ರು ಸಿಎಂ ಆಗ್ತಾರಾ ಇಲ್ವ, ಸ್ವಲ್ಪ ಕೇಳಿ ಹೇಳ್ತೀರಾ?’

‘ಆ ಜ್ಯೋತಿಷಿಗೆ ಈಗ ಬಾಳ ಡಿಮ್ಯಾಂಡ್ ಕಣಯ್ಯ, ನಿನ್ ಡೌಟ್ಸ್ ಮತ್ತೇನಿದೆ ಒಟ್ಟಿಗೇ ಹೇಳಿಬಿಡು, ಕೇಳಿ ಹೇಳ್ತೀನಿ...’

‘ಓಕೆ, ಈಗ ಜಗತ್ತಲ್ಲಿ ಯುದ್ಧ ಯಾವಾಗ ನಿಲ್ತವೆ? ಟ್ರಂಪ್ ತಲೆ ಯಾವಾಗ ಸರಿ ಇರುತ್ತೆ? ಚಿನ್ನ ಯಾವಾಗ ಇಳಿಯುತ್ತೆ? ಸೆನ್ಸೆಕ್ಸ್ ಯಾವಾಗ ಏರುತ್ತೆ? ಮೋದಿ ಸಾಹೇಬ್ರ ಕಣ್ಣು ಮುಂದೆ ಯಾವ ರಾಜ್ಯದ ಮೇಲಿದೆ?’

‘ಲೇ ದಡ್ಡ, ಇವನ್ನೆಲ್ಲ ಹೇಳಾಕೆ ಆ ಬ್ರಹ್ಮನಿಗೂ ಸಾಧ್ಯ ಇಲ್ಲ ತಿಳ್ಕಾ. ನಾವು ಎಕ್ಸಿಟ್ ಪೋಲ್ ತರ ಒಂದು ಅಂದಾಜಿನ ಮೇಲೆ ಏನೋ ಹೇಳ್ತೀವಿ, ನೀವು ನಂಬಿಬಿಡ್ತೀರಿ. ಈಗ ತಮಿಳುನಾಡಿನ ಜ್ಯೋತಿಷಿಗೆ ತಾನು ಮುಖ್ಯಮಂತ್ರಿ ವಿಶೇಷಾಧಿಕಾರಿ ಆಗ್ತೀನಿ ಅಂತ ಮೊದ್ಲೇ ಗೊತ್ತಿತ್ತಾ? ಅದು ಬಿಡು, ಸಿಕ್ಕ ಅಧಿಕಾರ ಒಂದೇ ದಿನಕ್ಕೆ ಮುಂಡಾಮೋಚ್ಕಳುತ್ತೆ ಅಂತ ಗೊತ್ತಿತ್ತಾ?’

‘ಓ... ಹೌದಾ? ಇದ್ರಲ್ಲಿ ಹಂಗೆಲ್ಲ ಐತಾ?’

‘ಲೇ ತಮಾ... ಮತ್ತೆ ನಾನು ಇಂಗೆಲ್ಲ ಹೇಳಿದೆ ಅಂತ ಟಿವೀಲಿ ಹಾಕಿಬಿಟ್ಟೀಯ... ನಿನ್ನ ಸುಟ್ಟು ಭಸ್ಮ ಮಾಡಿಬಿಟ್ಟೇನು...’

ತೆಪರೇಸಿ ಹೆದರಿ ಪಟ್ಟಂತ ಫೋನಿಟ್ಟ.

ಸಂಗತ

ಮಕ್ಕಳಿಗಷ್ಟೇ ಅಲ್ಲ, ಕುಟುಂಬಕ್ಕೂ ಪರೀಕ್ಷೆ!


ಬದುಕು ಹಾಗೂ ಭವಿಷ್ಯ ನಿರ್ಧರಿಸಬೇಕಾದ ಪರೀಕ್ಷಾ ವ್ಯವಸ್ಥೆಯೇ ಕೊಳೆತು ನಾರತೊಡಗಿದರೆ, ಆ ವ್ಯವಸ್ಥೆಯನ್ನು ಯುವ ತಲೆಮಾರು ನಂಬುವುದು ಹೇಗೆ?

• ಡಾ. ಲಕ್ಷ್ಮಣ ವಿ.ಎ.

‘**ಮೊಬೈಲ್** ನೋಡಬೇಡ’, ‘ಆಟ ಆಮೇಲೆ’, ‘ಈಗ ಕಷ್ಟಪಟ್ಟರೆ ಲೈಫ್ ಸೆಟ್ಲ್...’ ಹೀಗೆ ಆರಂಭವಾಗುವ ಒಂದು ಮನೆಯ ದೈನಿಕದ ಸಂಘರ್ಷ, ಇಂದಿನ ಭಾರತದಲ್ಲಿ ಯಾವುದೋ ಒಂದು ಮನೆಯ ಕಥೆಯಲ್ಲ; ಲಕ್ಷಾಂತರ ಕುಟುಂಬಗಳ ದೈನಂದಿನ ಜೀವನವಾಗಿದೆ. ನೀಟ್, ಜೆಇಇ, ಯುಪಿಎಸ್‌ಸಿ, ಕೆಇಎ, ಬ್ಯಾಂಕಿಂಗ್, ಪೊಲೀಸ್ ನೇಮಕಾತಿ – ಪರೀಕ್ಷೆಗಳ ಹೆಸರು ಮಾತ್ರ ಬೇರೆ. ಪ್ರತಿಯೊಂದು ಪರೀಕ್ಷೆಯ ಹಿಂದೆಯೂ ಒಂದೇ ತರಹದ ಒತ್ತಡ, ಒಂದೇ ಬಗೆಯ ಭಯ, ಒಂದೇ ರೀತಿಯ ನಿರೀಕ್ಷೆ.

ಒಬ್ಬ ಹುಡುಗ ಅಥವಾ ಹುಡುಗಿ ಪರೀಕ್ಷೆ ಬರೆಯುವಾಗ, ನಿಜವಾಗಿ ಪರೀಕ್ಷೆ ಬರೆಯುವುದು ಇಡೀ ಕುಟುಂಬ! ತಂದೆ ಹೆಚ್ಚುವರಿ ಕೆಲಸ ಮಾಡುತ್ತಾನೆ. ತಾಯಿ ತನ್ನ ಆಸೆಗಳನ್ನು ಬದಿಗಿಡುತ್ತಾಳೆ. ಅಜ್ಜಿ ದೇವರುಗಳಿಗೆ ಹರಕೆ ಹೊರುತ್ತಾಳೆ. ತಂಗಿ ಟಿ.ವಿ.ಯ ಧ್ವನಿ ಕಡಿಮೆ ಮಾಡುತ್ತಾಳೆ. ಮನೆಯ ಗಡಿಯಾರವೇ ಪರೀಕ್ಷೆಯ ಟೈಮ್ ಟೇಬಲ್‌ಗೆ ತಕ್ಕಂತೆ ಓಡತೊಡಗುತ್ತದೆ. ಮಕ್ಕಳ ಕಣ್ಣಿನ ಕೆಂಪು, ನಿದ್ದೆಯ ಕೊರತೆ, ಅರ್ಧ ಊಟ, ಆತಂಕ, ಇವೆಲ್ಲ ಮನೆಯ ಪ್ರತಿಯೊಬ್ಬರ ದೇಹದಲ್ಲೂ ನೆರಳಾಗಿ ಇಳಿಯುತ್ತವೆ.

ಪರೀಕ್ಷೆಯ ದಿನ ಕಾಲೇಜಿನ ಗೇಟ್ ಹೊರಗೆ ಬಿಸಿಲಿನಲ್ಲಿ ಬೆವರುತ್ತ ನಿಂತಿರುವ ಪೋಷಕರನ್ನು ಗಮನಿಸಿ ನೋಡಿ. ಮಕ್ಕಳು ಪರೀಕ್ಷಾ ಕೊಠಡಿಯಲ್ಲಿ ಪ್ರಶ್ನೆಪತ್ರಿಕೆ ಬಿಡಿಸುತ್ತಿರುತ್ತಾರೆ. ಹೊರಗೆ ನಿಂತಿರುವ ಪೋಷಕರು ತಮ್ಮ ಬದುಕಿನ ವರ್ಷಗಳನ್ನು ಲೆಕ್ಕ ಹಾಕುತ್ತಿರುತ್ತಾರೆ. ಇಂತಹ ಸಾಮಾಜಿಕ ವಾಸ್ತವದ ದೇಶದಲ್ಲಿ, ಪರೀಕ್ಷಾ ಅಕ್ರಮವೆಂದರೆ ಬರೀ ಮಾಲ್‌ಪ್ರಾಕ್ಟೀಸ್ ಅಲ್ಲ. ಅದು ಲಕ್ಷಾಂತರ ಕುಟುಂಬಗಳ ವಿಶ್ವಾಸದ ಮೇಲೆ ನಡೆಸುವ ದಾಳಿ. ಪ್ರಶ್ನೆಪತ್ರಿಕೆ ಸೋರಿಕೆ ಎಂದರೆ ಬರೀ ಒಂದು ಕಾಗದ ಹೊರಗೆ ಬರುವುದು ಅಲ್ಲ. ಅದರ ಜೊತೆಗೆ ಭಗ್ನಗೊಳ್ಳುತ್ತದೆ: ಬಡ ಕುಟುಂಬದ ಹುಡುಗನ ಎರಡು ವರ್ಷದ ಶ್ರಮ, ನಿದ್ದೆ ಬಿಟ್ಟು ಓದಿದ ಹುಡುಗಿಯ ಆತ್ಮವಿಶ್ವಾಸ, ಸಾಲ ತೀರಿಸುವ ತಂದೆಯ ವಿಶ್ವಾಸ, ತಾಯಿಯ ಪ್ರಾರ್ಥನೆ ಹಾಗೂ ಕುಟುಂಬದ ಭವಿಷ್ಯದ ಕನಸು.



ಪರೀಕ್ಷೆ ರದ್ದಾದಾಗ ಸಾವಿರಾರು ಮನೆಗಳಲ್ಲಿ ಮತ್ತೆ ಆತಂಕ, ಅಳು, ಅವಮಾನ, ಡಿಪ್ರೆಶನ್, ಔಷಧಿ, ಕೌನ್ಸೆಲಿಂಗ್ ಆರಂಭವಾಗುತ್ತದೆ. ಕೆಲವು ಮಕ್ಕಳು ಮರುಪರೀಕ್ಷೆ ಬರೆದು ಯಶಸ್ವಿಯಾಗಬಹುದು. ಆದರೆ, ಒಮ್ಮೆ ಕುಸಿದ ಮಾನಸಿಕ ಸ್ಥೈರ್ಯವನ್ನು ಎಲ್ಲರೂ ಮರಳಿ ಕಟ್ಟಿಕೊಳ್ಳಲಾರರು.

ಪರೀಕ್ಷಾ ಅಕ್ರಮಗಳಲ್ಲಿ ವ್ಯವಸ್ಥೆ ಮಾತ್ರ ತಪ್ಪಿತಸ್ಥ ಅಲ್ಲ. ಕೆಲವು ಪೋಷಕರ ನೈತಿಕ ದಿವಾಳಿತನವೂ ಇಲ್ಲಿ ಪ್ರಶ್ನೆಗೊಳಗಾಗಬೇಕು. ಕದ್ದು ತಂದ ಪ್ರಶ್ನೆಪತ್ರಿಕೆಯನ್ನು ತಮ್ಮ ಮಕ್ಕಳ ಕೈಗೆ ಕೊಡುವ ಪೋಷಕರು, ಮಕ್ಕಳಿಗೆ ಯಶಸ್ಸಿನ ಹೆಸರಿನಲ್ಲಿ ವಂಚಿಸುವುದನ್ನು ಸಂಸ್ಕಾರವಾಗಿ ಮೈಗೂಡಿಸುತ್ತಿದ್ದಾರೆ. ‘ಹೇಗಾದರೂ ಗೆಲ್ಲು’ ಎಂಬ ವಿಷಕಾರಿ ಮನೋಭಾವವೇ ಇಂತಹ ಅಕ್ರಮಗಳ ಮೂಲ. ಮಕ್ಕಳಿಗೆ ಆದರ್ಶವಾಗಬೇಕಾದವರೇ, ‘ಒಮ್ಮೆ ಸೀಟ್ ಸಿಕ್ಕರೆ ಸಾಕು’ ಎಂದು ಅಕ್ರಮಕ್ಕೆ ಮೌನ ಒಪ್ಪಿಗೆ ನೀಡಿದಾಗ, ಸಮಾಜದ ನೈತಿಕ ಬೆನ್ನುಹುರಿಯೇ ಮುರಿಯುತ್ತದೆ. ಒಂದು ದಿನ ಆ ಮಗು ವೈದ್ಯನಾಗಬಹುದು, ಎಂಜಿನಿಯರ್ ಆಗಬಹುದು, ಶಿಕ್ಷಕನಾಗಬಹುದು, ಅಧಿಕಾರಿಯಾಗಬಹುದು. ಆದರೆ, ಅದರ ಯಶಸ್ಸಿನ ಅಡಿಪಾಯದಲ್ಲೇ ಮೋಸದ ಬೀಜಗಳಿದ್ದರೆ, ಆ ಸಮಾಜದ ಭವಿಷ್ಯ ಎಷ್ಟು ಸುರಕ್ಷಿತ?

ನಮ್ಮ ವ್ಯವಸ್ಥೆಗೆ ಪರೀಕ್ಷಾ ಅಕ್ರಮಗಳು ಹೊಸದಲ್ಲ. ಪ್ರಶ್ನೆಪತ್ರಿಕೆ ಸೋರಿಕೆ, ನಕಲಿ ಅಭ್ಯರ್ಥಿಗಳು, ನೋಟಿಗಾಗಿ ಸೀಟು, ಡಿಜಿಟಲ್ ಚೀಟಿಂಗ್, ಎಲ್ಲವನ್ನೂ ನೋಡುತ್ತಾ ಬಂದಿದ್ದೇವೆ. ಆದರೆ, ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಿರುವ ಉದಾಹರಣೆಗಳು ಅಪರೂಪ. ಕೆಲವು ದಿನ ಸುದ್ದಿ, ಚರ್ಚೆ. ಮತ್ತೆ ಮೌನ. ಈ ಮೌನವೇ ಅಪರಾಧಿಗಳಿಗೆ ಧೈರ್ಯ ತುಂಬುತ್ತದೆ.

ಪರೀಕ್ಷಾ ಅಕ್ರಮಗಳನ್ನು ಆಡಳಿತಾತ್ಮಕ ಲೋಪ ಎಂದಷ್ಟೇ ನೋಡಬಾರದು. ಅದು ಸಂಘಟಿತ ಭಯೋತ್ಪಾದನೆಯಷ್ಟೇ ಅಪಾಯಕಾರಿ, ಸಾಮಾಜಿಕ ಅಪರಾಧವೂ ಹೌದು. ಭಯೋತ್ಪಾದನೆ ಜನರ ಸುರಕ್ಷತೆಯನ್ನು ಹಾಳು ಮಾಡುತ್ತದೆ. ಪರೀಕ್ಷಾ ಅಕ್ರಮಗಳು ಯುವಜನರ ಭವಿಷ್ಯದ ಮೇಲಿನ ನಂಬಿಕೆಯನ್ನು ಹಾಳುಮಾಡುತ್ತವೆ. ಪ್ರಶ್ನೆಪತ್ರಿಕೆ ಸೋರಿಕೆ, ಪರೀಕ್ಷಾ ಮೋಸ, ಡಿಜಿಟಲ್ ಚೀಟಿಂಗ್, ಹಣಕ್ಕಾಗಿ ರ‍್ಯಾಂಕ್ ವ್ಯಾಪಾರ, ಇವೆಲ್ಲವನ್ನು ಅಪರಾಧಗಳೆಂದು ಪರಿಗಣಿಸಿ ಕಠಿಣ ಶಿಕ್ಷೆ ವಿಧಿಸಬೇಕು.

ಪಾರದರ್ಶಕತೆ ಇಲ್ಲದೆ ವಿಶ್ವಾಸ ಮರಳುವುದಿಲ್ಲ. ತಪ್ಪಿತಸ್ಥರಿಗೆ ಶಿಕ್ಷೆ ಇಲ್ಲದೆ ಭಯ ಹುಟ್ಟುವುದಿಲ್ಲ. ಒಂದು ದೇಶದ ಭವಿಷ್ಯ ಅದರ ತರಗತಿ ಕೊಠಡಿಗಳಲ್ಲಿ ರೂಪುಗೊಳ್ಳುತ್ತದೆ ಎಂದು ನಾವು ಹೇಳುತ್ತೇವೆ. ಆ ತರಗತಿಯ ಬಾಗಿಲಿಗೆ ತಲಪುವ ಪರೀಕ್ಷೆಯ ದಾರಿಯೇ ಕಲುಷಿತವಾದರೆ, ಮುಂದೆ ರೂಪುಗೊಳ್ಳುವ ಸಮಾಜ ಎಷ್ಟು ಪ್ರಾಮಾಣಿಕ?

ಜನರ ಆರೋಗ್ಯ ರಕ್ಷಿಸುವ ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಕಲ್ಪಿಸುವ ವ್ಯವಸ್ಥೆಯೇ ‘ನೀಟ್’ ಆಗಿಲ್ಲ ಎನ್ನುವುದಾದರೆ, ಇಲ್ಲಿ ಯಾವುದು ವಿಶ್ವಾಸಾರ್ಹ ಆಗಿರಲು ಸಾಧ್ಯ? ವಿದ್ಯಾರ್ಥಿ ಪರೀಕ್ಷೆಯಲ್ಲಿ ಸೋತರೆ ಮತ್ತೆ ಪ್ರಯತ್ನಿಸಬಹುದು. ಆದರೆ, ಒಂದು ಪೀಳಿಗೆ ವ್ಯವಸ್ಥೆಯ ಮೇಲಿನ ನಂಬಿಕೆ ಕಳೆದುಕೊಂಡರೆ, ದೇಶವೇ ನಿಧಾನವಾಗಿ ಸೋಲತೊಡಗುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಮೊದಲಿನಿಂದಲೂ ಚೀನಾ ಮತ್ತು ಅಮೆರಿಕ ಬದ್ಧವೈರಿಗಳಂತೆ ಇದ್ದ ದೇಶಗಳು. ಸೇನಾ ಸಾಮರ್ಥ್ಯ, ವ್ಯಾಪಾರ, ಸಂಪನ್ಮೂಲ ಇತ್ಯಾದಿಗಳ ವಿಚಾರದಲ್ಲಿ ದಶಕಗಳಿಂದಲೂ ಪೈಪೋಟಿ ನಡೆಸುತ್ತಲೇ ಇರುವಂಥವು. ಕಳೆದ ವರ್ಷ ಎರಡೂ ದೇಶಗಳ ನಡುವೆ ಸುಂಕ–ಪ್ರತಿಸುಂಕದ ಸಮರವೇ ನಡೆದಿತ್ತು. ಇಂಥ ಹಿನ್ನೆಲೆಯ ನಡುವೆಯೂ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಚೀನಾ ದೇಶಕ್ಕೆ ಭೇಟಿ ನೀಡಿರುವುದು ಜಾಗತಿಕ ಮಟ್ಟದಲ್ಲಿ ಕುತೂಹಲ ಕೆರಳಿಸಿದೆ. ಇರಾನ್ ಯುದ್ಧ, ಆರ್ಥಿಕ ಸಂಕಷ್ಟ, ತೈಲ ಬಿಕ್ಕಟ್ಟು, ತೈವಾನ್ ಮೇಲಿನ ಹಕ್ಕು ಸೇರಿದಂತೆ ಹಲವು ವಿಚಾರಗಳು ಮಾತುಕತೆಯಲ್ಲಿ ಪ್ರಮುಖ ಪಾತ್ರ ವಹಿಸುವ ಸಾಧ್ಯತೆ ಇದೆ

ಟ್ರಂಪ್–ಷಿ ಭೇಟಿ ಬಿಕ್ಕಟ್ಟಿನ ಕಾಲದ ಮಹತ್ವದ ಮಾತುಕತೆ


ಬೀಜಿಂಗ್‌ನಲ್ಲಿ ಗುರುವಾರ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಭೇಟಿ ಮಾಡಿದರು –ಎಎಫ್‌ಪಿ ಚಿತ್ರ

ಪ್ರಜಾವಾಣಿ ವಾರ್ತೆ

2025ರ ಏಪ್ರಿಲ್: ಅಮೆರಿಕದ 'ಸ್ವಾತಂತ್ರ್ಯ'ದ ಹೆಸರಿನಲ್ಲಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತ ಸೇರಿದಂತೆ ಹಲವು ದೇಶಗಳ ಮೇಲೆ ಪ್ರತಿಸುಂಕ ಹೇರಿದ್ದರು. ಅತಿಹೆಚ್ಚು ಪ್ರಮಾಣದ ಸುಂಕ ವಿಧಿಸಿದ್ದು ಚೀನಾ ಮೇಲೆ. ಅಮೆರಿಕಕ್ಕೆ ರಫ್ತಾಗುತ್ತಿದ್ದ ಚೀನಾದ ವಸ್ತುಗಳ ಮೇಲಿನ ಸುಂಕವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಿತ್ತು. ಚೀನಾ ಸಹ ತಿರುಗೇಟು ನೀಡಿತ್ತು. ಅಮೆರಿಕದಿಂದ ಆಮದಾಗುತ್ತಿದ್ದ ವಸ್ತುಗಳ ಮೇಲಿನ ಸುಂಕವನ್ನು ವಿಪರೀತ ಹೆಚ್ಚಿಸಿತು. ಆದರೆ, ಮೇ ಹೊತ್ತಿಗೆ ಬಿಗುವಿನ ಪರಿಸ್ಥಿತಿ ಬದಲಾಯಿತು. ಎರಡೂ ದೇಶಗಳು ಮಾತುಕತೆಗೆ ಮುಂದಾದವು.

ಡೊನಾಲ್ಡ್ ಟ್ರಂಪ್ ಅವರು 2017ರಲ್ಲಿಯೂ ಚೀನಾಕ್ಕೆ ಭೇಟಿ ನೀಡಿದ್ದರು. ಆ ಭೇಟಿ ಮತ್ತು ಅಲ್ಲಿನ ಆತಿಥ್ಯದ ಬಗ್ಗೆ ಅವರು ಸಂತೋಷದಿಂದ ಪ್ರತಿಕ್ರಿಯಿಸಿದ್ದರು. 'ನಾನು ಷಿ ಜಿನ್‌ಪಿಂಗ್ ಅವರ ಆತ್ಮೀಯ ಬೆಚ್ಚನೆಯ ಭಾವ ಹೊಂದಿದ್ದೇನೆ. ನಮ್ಮಿಬ್ಬರ ನಡುವೆ ಅತ್ಯುತ್ತಮ ಹೊಂದಾಣಿಕೆ ಇದೆ. ಇಬ್ಬರೂ ಜೊತೆಗೂಡಿ ಅಮೆರಿಕ ಮತ್ತು ಚೀನಾಕ್ಕೆ ಅದ್ಭುತಗಳನ್ನೇ ಮಾಡಲಿದ್ದೇವೆ' ಎಂದಿದ್ದರು. ಆದರೆ, ಅದರ ಮರುವರ್ಷವೇ ಚೀನಾ ವಸ್ತುಗಳ ವಿರುದ್ಧ ಹೆಚ್ಚುವರಿ ಸುಂಕ ವಿಧಿಸಿದ್ದರು.

ಚೀನಾದ್ದೂ ಇದೇ ಕಥೆ. ಅಮೆರಿಕದ ಸರಕು–ಸೇವೆಗಳನ್ನು ಹೆಚ್ಚು ಖರೀದಿಸುವ ಮೂಲಕ ವ್ಯಾಪಾರ ಕೊರತೆ ಕಡಿಮೆ ಮಾಡುವುದಾಗಿ ಟ್ರಂಪ್ ಅವರಿಗೆ ಚೀನಾ ಆರೇಳು ವರ್ಷಗಳ ಹಿಂದೆಯೇ ಭರವಸೆ ನೀಡಿತ್ತು. ಆದರೆ, ಚೀನಾ ಕೊಂಡದ್ದು ಶೇ 58ರಷ್ಟು ಮಾತ್ರ ಎಂದು ಅಮೆರಿಕದ 'ಪೀಟರ್‌ಸನ್ ಇನ್‌ಸ್ಟಿಟ್ಯೂಟ್ ಆಫ್ ಇಂಟರ್‌ನ್ಯಾಷನಲ್ ಎಕನಾಮಿಕ್ಸ್' ಹೇಳಿತ್ತು.

'ಇದೀಗ ಮತ್ತೆ ಉಭಯ ನಾಯಕರು ಭೇಟಿ–ಮಾತುಕತೆ ಭಾರಿ ಸಂಭ್ರಮದಿಂದ ಮಾತನಾಡುತ್ತಿದ್ದಾರೆ. ಚೀನಾ ಮತ್ತು ಅಮೆರಿಕದ ನಡುವಿನ ದ್ವಿಪಕ್ಷೀಯ ಸಂಬಂಧಕ್ಕೆ ಜಾಗತಿಕ ಮಹತ್ವ ಇದ್ದು, ಈ ಭೇಟಿಯು ಎರಡೂ ರಾಷ್ಟ್ರಗಳ ಸಂಬಂಧದಲ್ಲಿ ಶಾಶ್ವತವಾದ ಬದಲಾವಣೆ ತರಲಿದೆ ಎಂಬ ವಿಶ್ವಾಸ ವ್ಯಕ್ತವಾಗಿದೆ. ಚೀನಾದ ಮಹಾ ಪುನಶ್ಚೇತನ ಮತ್ತು ಅಮೆರಿಕ ಮತ್ತೊಮ್ಮೆ ಶ್ರೇಷ್ಠ ಸ್ಥಾನ ಪಡೆಯುವುದು–ಇವೆರಡೂ ಜೊತೆಜೊತೆಯಲ್ಲಿ ಸಾಗಬೇಕು ಎನ್ನುವ ಆಶಯವನ್ನು ಉಭಯ ನಾಯಕರು ವ್ಯಕ್ತಪಡಿಸಿದ್ದಾರೆ.

ವ್ಯಾಪಾರ, ಸುಂಕದಂಥ ಕೆಲವು ವಿಚಾರಗಳಲ್ಲಿ ಮಾತುಕತೆ ಫಲಪ್ರದವಾಗಬಹುದಾದರೂ, ಇರಾನ್ ಯುದ್ಧ ಮತ್ತು ತೈವಾನ್ ವಿಚಾರಗಳು ಮಾತುಕತೆಯಲ್ಲಿ ಕಗ್ಗಂಟಾಗಲಿವೆ ಎನ್ನಲಾಗುತ್ತಿದೆ.

ಯುದ್ಧ ನಿಲ್ಲಿಸಲು ಒತ್ತಡ

ಅಮೆರಿಕ ಮತ್ತು ಇಸ್ರೇಲ್, ಇರಾನ್ ಮೇಲೆ ಆರು ವಾರ ತೀವ್ರ ದಾಳಿ ನಡೆಸಿದ್ದವು. ಇರಾನ್ ಕೂಡ ದಿಟ್ಟ ಪ್ರತ್ಯುತ್ತರ ನೀಡಿತ್ತು. ಕದನ ವಿರಾಮ ಘೋಷಣೆಯಾಗಿ ತಿಂಗಳಿಗೂ ಹೆಚ್ಚು ಕಾಲವಾಗಿದೆ. ಯುದ್ಧ ನಿಲ್ಲಿಸುವ ಸಂಬಂಧ ಪಾಕಿಸ್ತಾನದ ಮಧ್ಯಸ್ಥಿಕೆಯಲ್ಲಿ ಮಾತುಕತೆ ನಡೆದರೂ ಅದು ಫಲಪ್ರದವಾಗಿಲ್ಲ. ಇರಾನ್ ಹೊರ್ಮುಜ್ ಜಲಸಂಧಿ ನಿರ್ಬಂಧಿಸಿರುವುದರಿಂದ ಜಾಗತಿಕ ಮಟ್ಟದಲ್ಲಿ ತೈಲ ಬಿಕ್ಕಟ್ಟು ತಲೆದೋರಿದೆ. ಅಮೆರಿಕ ಕೂಡ ಬೆಲೆಯೇರಿಕೆ, ತೈಲ ಕೊರತೆ, ಆರ್ಥಿಕ ಹಿಂಜರಿತದಂಥ ಸಮಸ್ಯೆಗಳನ್ನು ಎದುರಿಸುತ್ತಿದೆ. ಅಮೆರಿಕದ ನಿರ್ಬಂಧದ ಹೊರತಾಗಿಯೂ ಇರಾನ್‌ನಿಂದ ಚೀನಾ ತೈಲ ಖರೀದಿಸುತ್ತಿದೆ.


ಈ ದಿಸೆಯಲ್ಲಿ ಇರಾನ್ ಅನ್ನು ಯುದ್ಧ ನಿಲ್ಲಿಸುವಂತೆ, ಅಣ್ವಸ್ತ್ರ ಕಾರ್ಯಕ್ರಮ ಸ್ಥಗಿತಗೊಳಿಸುವಂತೆ ಮನವೊಲಿಸಲು ಚೀನಾ ಮೇಲೆ ಅಮೆರಿಕ ಒತ್ತಡ ಹೇರುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ. ಇರಾನ್ ಜೊತೆಗೆ ಚೀನಾ ಸ್ನೇಹ ಸಂಬಂಧ ಹೊಂದಿದ್ದು, ಅದರಿಂದ ದೊಡ್ಡ ಪ್ರಮಾಣದಲ್ಲಿ ತೈಲ ಖರೀದಿಸುತ್ತಿದೆ. ಯುದ್ಧದಲ್ಲಿ ಚೀನಾವು ಇರಾನ್‌ಗೆ ನೆರವು ನೀಡಿದೆ ಎಂದೂ ಹೇಳಲಾಗಿದೆ. ಅಮೆರಿಕಕ್ಕೆ ಅನುಕೂಲಕರವಾಗುವಂಥ ಯುದ್ಧ ಕೊನೆಗೊಳಿಸುವ ಒಪ್ಪಂದದ ಪರವಾಗಿ ಚೀನಾ ವಕಾಲತ್ತು ವಹಿಸಲಾರದು ಎನ್ನುವ ವಿಶ್ಲೇಷಣೆಯಿದೆ. ಗಮನಾರ್ಹ ವಿಚಾರವೆಂದರೆ, ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಕಳೆದ ವಾರವಷ್ಟೇ ಚೀನಾಕ್ಕೆ ಭೇಟಿ ನೀಡಿದ್ದರು.

ಅಮೆರಿಕ–ಚೀನಾ ಸರಕು ವ್ಯಾಪಾರ

(ಕೋಟಿ ಡಾಲರ್‌ಗಳಲ್ಲಿ)

ವರ್ಷ	ಅಮೆರಿಕ ಮಾಡುವ ರಫ್ತು	ಮಾಡಿಕೊಳ್ಳುವ ಆಮದು	ವ್ಯಾಪಾರ ಕೊರತೆ
2021	15,144	50,425	-35,281
2022	15,399	53,627	-38,228
2023	14,764	42,725	-27,961
2024	14,322	43,874	-29,552
2025	10,631	30,838	-20,207
2026*	2,738	6,087	-3,349

*(ಜನವರಿಯಿಂದ ಮಾರ್ಚ್‌ವರೆಗೆ)



ತೈವಾನ್ ವಿಚಾರ

ಮಾತುಕತೆಯಲ್ಲಿ ಪ್ರಸ್ತಾಪವಾಗಲಿರುವ ಮತ್ತೊಂದು ಪ್ರಮುಖ ವಿಚಾರ ತೈವಾನ್. ತೈವಾನ್ ತನ್ನ ಅವಿಭಾಜ್ಯ ಭಾಗ ಎಂದು ಚೀನಾ ಪ್ರತಿಪಾದಿಸುತ್ತಿದ್ದು, ಸ್ವತಂತ್ರ ರಾಷ್ಟ್ರವಾದ ತೈವಾನ್ ಅದನ್ನು ವಿರೋಧಿಸುತ್ತಿದೆ. ಅಮೆರಿಕವು ತೈವಾನ್‌ಗೆ ಶಸ್ತ್ರಾಸ್ತ್ರ ಪೂರೈಕೆ ಮಾಡುತ್ತಿದ್ದು, ಅದರೊಂದಿಗೆ ಉತ್ತಮ ಸಂಬಂಧ ಹೊಂದಿದೆ. ಒಂದು ವೇಳೆ ಚೀನಾ, ತೈವಾನ್ ಮೇಲೆ ದಾಳಿ ಮಾಡಿದರೆ, ಅಮೆರಿಕವು ತೈವಾನ್‌ನ ರಕ್ಷಣೆಗೆ ಬರುವ ಸಾಧ್ಯತೆಯೂ ಇದೆ ಎನ್ನಲಾಗುತ್ತಿದೆ. ಆದರೆ, ತೈವಾನ್ ಕಾರಣದಿಂದ ಅಮೆರಿಕ ಮತ್ತು ಚೀನಾ ನಡುವೆ ಸಂಘರ್ಷ ಏರ್ಪಡದಂತೆ ನೋಡಿಕೊಳ್ಳಬೇಕು ಎಂದು ಷಿ ಜಿನ್‌ಪಿಂಗ್ ಕಳೆದ ಜೂನ್‌ನಲ್ಲಿ ಟ್ರಂಪ್ ಅವರಿಗೆ ಎಚ್ಚರಿಸಿದ್ದರು. ಅವರು ಈಗಲೂ ಅದೇ ಮಾತನ್ನು ಪುನರುಚ್ಚರಿಸಿದ್ದಾರೆ.

ಟ್ರಂಪ್ ಅವರು 2017ರಲ್ಲಿ ಚೀನಾಕ್ಕೆ ಭೇಟಿ ನೀಡಿ ಮಾತುಕತೆ ನಡೆಸಿದ ನಂತರ ಎರಡೂ ದೇಶಗಳ ನಡುವೆ ಮಹತ್ವದ ಬದಲಾವಣೆಗಳೇನೂ ಘಟಿಸಿರಲಿಲ್ಲ. ಆದರೆ, ಚೀನಾ ವ್ಯಾಪಾರ, ಸೇನೆ, ಶಸ್ತ್ರಾಸ್ತ್ರ, ಜಾಗತಿಕ ಸಂಬಂಧಗಳ ವಿಚಾರದಲ್ಲಿ ಪ್ರಬಲವಾಗಿರುವುದನ್ನು ಅಮೆರಿಕ ಗಮನಿಸುತ್ತಲೇ ಇದೆ. ಜತೆಗೆ, ಜಾಗತಿಕ ಪರಿಸ್ಥಿತಿಗಳೂ ಬದಲಾಗಿದ್ದು, ಕ್ಲಿಷ್ಟ ವಾತಾವರಣ ಇದೆ. ಟ್ರಂಪ್ ಚೀನಾ ಭೇಟಿಯು ಎರಡೂ ದೇಶಗಳಲ್ಲಿ ಮತ್ತು ಜಾಗತಿಕ ಮಟ್ಟದಲ್ಲಿ ಎಷ್ಟರ ಮಟ್ಟಿಗೆ ಮತ್ತು ಎಂಥ ಬದಲಾವಣೆಗಳನ್ನು ತರಲಿದೆ ಎನ್ನುವುದು ಮುಂದಿನ ದಿನಗಳಲ್ಲಿ ತಿಳಿಯಲಿದೆ.

ಆಧಾರ: ಪಿಟಿಐ, ರಾಯಿಟರ್ಸ್, ನ್ಯೂಯಾರ್ಕ್ ಟೈಮ್ಸ್, ಸಿಎನ್‌ಎನ್ ಸೆನ್ಸಸ್.ಜಿಒವಿ, ಕಾಂಗ್ರೆಸ್.ಜಿಒವಿ,



ವ್ಯಾಪಾರ ಕೊರತೆ ಹೆಚ್ಚು

ಅಮೆರಿಕ ಮತ್ತು ಚೀನಾದ ನಡುವೆ ಹಲವು ಕ್ಷೇತ್ರಗಳಲ್ಲಿ ಪೈಪೋಟಿ ಇದ್ದರೂ, ಎರಡೂ ರಾಷ್ಟ್ರಗಳ ನಡುವೆ ಸರಕು ವ್ಯಾಪಾರ ಸಂಬಂಧ ದೊಡ್ಡ ಮಟ್ಟದಲ್ಲಿಯೇ ಇದೆ. ಹಲವು ಸರಕುಗಳಿಗೆ ಅಮೆರಿಕವು ಚೀನಾವನ್ನೇ ಅವಲಂಬಿಸಿದೆ. ಅಮೆರಿಕವು ಚೀನಾಕ್ಕೆ ರಫ್ತು ಮಾಡುವುದಕ್ಕಿಂತಲೂ ಹೆಚ್ಚು ಮೌಲ್ಯದ ಸರಕುಗಳನ್ನು ಅಲ್ಲಿಂದ ಆಮದು ಮಾಡಿಕೊಳ್ಳುತ್ತದೆ. ಚೀನಾದೊಂದಿಗೆ ಅಮೆರಿಕದ ವ್ಯಾಪಾರ ಕೊರತೆ ರಫ್ತಿನ ಮೌಲ್ಯಕ್ಕಿಂತ ಎರಡು ಪಟ್ಟು ಹೆಚ್ಚು ಇದೆ. 2021, 2022ರ ಅಂಕಿ ಅಂಶಗಳಿಗೆ ಹೋಲಿಸಿದರೆ, ನಂತರದ ವರ್ಷಗಳಲ್ಲಿ ಅಮೆರಿಕವು ಚೀನಾದಿಂದ ಮಾಡುವ ಆಮದು ಕೊಂಚ ಇಳಿದಿದೆ. ಅದೇ ರೀತಿ ರಫ್ತಿನ ಪ್ರಮಾಣದಲ್ಲೂ ಕಡಿಮೆಯಾಗಿದೆ.

ಸರಕುಗಳ ವ್ಯಾಪಾರಕ್ಕೆ ಹೋಲಿಸಿದರೆ ಸೇವೆಗಳ ವ್ಯಾಪಾರದ ಪ್ರಮಾಣ ಕಡಿಮೆ ಇದೆ. ಆದರೆ, ಸೇವೆಗಳ ವ್ಯಾಪಾರದಲ್ಲಿ ಅಮೆರಿಕ ವ್ಯಾಪಾರ ಮಿಗತೆಯನ್ನು ಹೊಂದಿದೆ. 2024ರಲ್ಲಿ ಎರಡೂ ರಾಷ್ಟ್ರಗಳ ನಡುವಿನ ಸೇವೆಗಳ ವ್ಯಾಪಾರ ಮೌಲ್ಯ 7690 ಕೋಟಿ ಡಾಲರ್. ಈ ಪೈಕಿ 5,500 ಕೋಟಿ ಡಾಲರ್ ರಫ್ತಿನ ಮೌಲ್ಯವಾಗಿದ್ದರೆ, 2,190 ಕೋಟಿ ಡಾಲರ್ ಮೌಲ್ಯದ ಸೇವೆಗಳನ್ನು ಆಮದು ಮಾಡಿಕೊಂಡಿವೆ.

ಅಮೆರಿಕದ ಬೆದರಿಕೆಗೆ ಮಣಿಯದ ಚೀನಾ

ವಿಶ್ವದ ಎರಡು ಪ್ರಮುಖ ಆರ್ಥಿಕ ಶಕ್ತಿಗಳಾಗಿರುವ ಅಮೆರಿಕ– ಚೀನಾ ನಡುವೆ ಈಗ ಇಂಧನ ತಂತ್ರಜ್ಞಾನ, ಸೇನೆ, ಸೆಮಿಕಂಡಕ್ಟರ್, ಬಾಹ್ಯಾಕಾಶ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಪೈಪೋಟಿ ನಡೆಯುತ್ತಿದೆ. ಡೊನಾಲ್ಡ್ ಟ್ರಂಪ್ ಅವರು ಎರಡನೇ ಬಾರಿಗೆ ಅಧ್ಯಕ್ಷರಾಗುವುದಕ್ಕೂ ಮೊದಲು ಚೀನಾದೊಂದಿಗಿನ ವ್ಯಾಪಾರ ಕೊರತೆಯನ್ನು ಕಡಿಮೆ ಮಾಡುವುದೇ ತಮ್ಮ ಗುರಿ ಎಂದು ಚುನಾವಣಾ ಪ್ರಚಾರದಲ್ಲಿ ಬಲವಾಗಿ ಪ್ರತಿಪಾದಿಸುತ್ತಾ ಬಂದಿದ್ದರು. ಚೀನಾದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ 60ರವರೆಗೂ ಸುಂಕವನ್ನು ವಿಧಿಸಲಾಗುವುದು ಎಂದು ಹೇಳಿದ್ದರು. ಅದರಂತೆ ಅಧಿಕಾರಕ್ಕೆ ಏರಿದ ನಂತರ ಎಲ್ಲ ದೇಶಗಳ ಸರಕುಗಳ ಮೇಲೆ ಸುಂಕ ವಿಧಿಸುವಾಗ ಚೀನಾದಿಂದ ಆಮದಾಗುವ ಸರಕುಗಳ ಮೇಲೆ ಹೆಚ್ಚೇ (ಸರಾಸರಿ ಶೇ 39) ವಿಧಿಸಿದ್ದರು.

ಇದರಿಂದ ಕೋಪಗೊಂಡ ಚೀನಾವು ಅಮೆರಿಕದ ಸರಕುಗಳ ಮೇಲೆ ಪ್ರತಿಸುಂಕ ಹಾಕಿತು. ಎರಡೂ ದೇಶಗಳ ನಡುವಿನ ಸುಂಕ ಸಮರ ಮಿತಿ ಮೀರಿ ಅಮೆರಿಕ ಶೇ 164ರವರೆಗೆ ಸುಂಕ ಘೋಷಿಸಿದರೆ, ಚೀನಾ ಶೇ 146ರಷ್ಟು ಸುಂಕ ವಿಧಿಸಿತು. ಇದರ ಬೆನ್ನಲ್ಲೇ ಚೀನಾವು ಅಮೆರಿಕದ ವಿವಿಧ ಉದ್ಯಮಗಳಿಗೆ ಅತಿ ಅಗತ್ಯವಾಗಿ ಬೇಕಾದ ಅಪರೂಪದ ಲೋಹಗಳ ರಫ್ತಿಗೆ ನಿರ್ಬಂಧ ಹೇರಿತು. ಇದರಿಂದ ತನ್ನ ಉದ್ಯಮಗಳಿಗೆ ಹೊಡೆತ ಬಿದ್ದ ಬಳಿಕ, ಅಮೆರಿಕ ಕೊಂಚ ಮೆತ್ತಗಾಯಿತು. ಆ ಬಳಿಕ ಸುಂಕದಲ್ಲಿ ಗಣನೀಯ ಇಳಿಕೆಯಾಯಿತು.

ಕಳೆದ ವರ್ಷದ ಅಕ್ಟೋಬರ್ ಅಂತ್ಯದಲ್ಲಿ ದಕ್ಷಿಣ ಕೊರಿಯಾದಲ್ಲಿ ಟ್ರಂಪ್ ಮತ್ತು ಷಿ ಜಿನ್‌ಪಿಂಗ್ ಅವರ ನಡುವೆ ಮಾತುಕತೆ ನಡೆದ ಬಳಿಕ ಎರಡೂ ದೇಶಗಳ ಸುಂಕದ ವಿಚಾರದಲ್ಲಿ ಉಂಟಾಗಿದ್ದ ಬಿಗು ಪರಿಸ್ಥಿತಿ ಕೊಂಚ ಸುಧಾರಿಸಿತು. ಈ ವರ್ಷದ ಫೆಬ್ರುವರಿಯ ಅಂಕಿ ಅಂಶಗಳ ಪ್ರಕಾರ, ಅಮೆರಿಕವು ಚೀನಾದ ಸರಕುಗಳ ಮೇಲೆ ವಿಧಿಸುತ್ತಿರುವ ಸುಂಕದ ಸರಾಸರಿ ಪ್ರಮಾಣ ಶೇ 34ರಷ್ಟಿದ್ದರೆ, ಚೀನಾವು ಅಮೆರಿಕದಿಂದ ಆಮದು ಮಾಡುವ ಸರಕುಗಳ ಮೇಲೆ ಸರಾಸರಿ ಶೇ 31ರಷ್ಟು ಸುಂಕ ವಿಧಿಸುತ್ತಿದೆ.

ಟ್ರಂಪ್ ಅವರು ಆಕ್ರಮಣಕಾರಿ ವಿದೇಶಾಂಗ ನೀತಿಯ ಮೂಲಕ ಚೀನಾದ ಮೇಲೆ ನಿಯಂತ್ರಣ ಸಾಧಿಸುವ ಪ್ರಯತ್ನ ಮಾಡಿದ್ದರು. ಆದರೆ, ಅಮೆರಿಕದ ಬೆದರಿಕೆಗೆ ಮಣಿಯದ ಚೀನಾ, ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಂಡಿದ್ದಲ್ಲದೇ ಅಮೆರಿಕದ ಕ್ರಮಕ್ಕೆ ಪ್ರತಿಕ್ರಮವನ್ನೂ ತೆಗೆದುಕೊಂಡಿತ್ತು. ಹೀಗಾಗಿ, ಚೀನಾಕ್ಕೆ ಸಂಬಂಧಿಸಿದ ತನ್ನ ನೀತಿಯನ್ನು ಟ್ರಂಪ್ ಆಡಳಿತ ಬದಲಿಸಿದಂತೆ ಕಾಣುತ್ತಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಈಗಿನ ಭೇಟಿ ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರ ಸಂಬಂಧವನ್ನು ಹಳಿಗೆ ತರುವ ಪ್ರಯತ್ನ ಆಗಿರಬಹುದು ಎಂದು ಹೇಳಲಾಗುತ್ತಿದೆ. ಟ್ರಂಪ್ ಅವರೊಂದಿಗೆ ಬಾಹ್ಯಾಕಾಶ, ಇವಿ ವಾಹನೋದ್ಯಮ, ಮೊಬೈಲ್ ತಂತ್ರಜ್ಞಾನ, ಎಐ, ಸೆಮಿಕಂಡಕ್ಟರ್ ಕ್ಷೇತ್ರಗಳ ಉದ್ಯಮಿಗಳನ್ನೊಳಗೊಂಡ ನಿಯೋಗ ತೆರಳಿದೆ. ಈ ಕ್ಷೇತ್ರಗಳಲ್ಲಿ ಎರಡೂ ದೇಶಗಳ ನಡುವೆ ಪೈಪೋಟಿ ಇರುವುದರಿಂದ ಈ ಭೇಟಿ ಹೆಚ್ಚಿನ ಮಹತ್ವ ಪಡೆದಿದೆ.

ದ್ವಿಪಕ್ಷೀಯ ಪಾಲುದಾರಿಕೆಗೆ ಬಲ

ಬೀಜಿಂಗ್ (ಪಿಟಿಐ): 'ಸಂಕಷ್ಟದ ಸಮಯದಲ್ಲಿ ನಾವು ಜತೆಯಾಗಿ ನಿಲ್ಲುತ್ತೇವೆ. ದ್ವಿಪಕ್ಷೀಯ ಸಹಕಾರದ ಮೂಲಕ ಅದ್ಭುತ ಭವಿಷ್ಯವನ್ನು ರೂಪಿಸಿಕೊಳ್ಳುತ್ತೇವೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರೊಂದಿಗೆ ಗುರುವಾರ ಬೀಜಿಂಗ್‌ನಲ್ಲಿ ಆರಂಭವಾದ ಸಭೆಯಲ್ಲಿ ಮಾತನಾಡಿದ ಟ್ರಂಪ್, ಉಭಯ ದೇಶಗಳ ನಡುವಿನ ವ್ಯಾಪಾರ ಸಂಘರ್ಷಕ್ಕೆ ತೆರೆ ಎಳೆಯುವ ಪ್ರಯತ್ನ ನಡೆಸಿದರು. ಜಿನ್‌ಪಿಂಗ್ ಅವರನ್ನು ಮಹಾನ್ ನಾಯಕ ಎಂದು ಬಣ್ಣಿಸಿದ ಟ್ರಂಪ್, ಅವರೊಂದಿಗಿನ ಮಾತುಕತೆಯನ್ನು 'ಅತಿ ದೊಡ್ಡ ಶೃಂಗಸಭೆ' ಎಂದು ಕರೆದರು.

ಟ್ರಂಪ್ ಮಾತಿಗೆ ಧನ್ಯವಾದ ಸಲ್ಲಿಸಿದ ಜಿನ್‌ಪಿಂಗ್, 'ಚೀನಾ ಮತ್ತು ಅಮೆರಿಕದ ಪಾಲಿಗೆ 2026 ಐತಿಹಾಸಿಕ ಮೈಲಿಗಲ್ಲಿನ ವರ್ಷವಾಗಲಿದೆ' ಎಂದರು. ಉಭಯ ದೇಶಗಳ ನಡುವೆ ಭಿನ್ನಾಭಿಪ್ರಾಯಗಳಿಗಿಂತಲೂ ಸಾಮಾನ್ಯ ಹಿತಾಸಕ್ತಿಗಳೇ ಹೆಚ್ಚಿವೆ' ಎನ್ನುವ ಮೂಲಕ ವ್ಯಾಪಾರ ಪಾಲುದಾರಿಕೆಯನ್ನು ಬಲಪಡಿಸುವ ಇಂಗಿತ ವ್ಯಕ್ತಪಡಿಸಿದರು. ಚೀನಾ–ಅಮೆರಿಕ ನಡುವಿನ ವ್ಯಾಪಾರ ಸಂಘರ್ಷದ ಬಗ್ಗೆ ಪರೋಕ್ಷವಾಗಿ ಪ್ರತಿಕ್ರಿಯಿಸಿದ ಜಿನ್‌ಪಿಂಗ್, 'ವ್ಯಾಪಾರ ಯುದ್ಧದಲ್ಲಿ ಯಾರೂ ಗೆದ್ದವರಿಲ್ಲ' ಎಂದರು.

ಉಭಯ ನಾಯಕರ ನಡುವಿನ ಮೊದಲ ಮಾತುಕತೆಯು ಎರಡು ಗಂಟೆ ಮುಂದುವರಿಯಿತು ಎಂದು ಮೂಲಗಳು ಹೇಳಿವೆ.

ಟ್ರಂಪ್ ಜತೆಗೆ ಉದ್ಯಮ ಪ್ರಮುಖರು: ಟ್ರಂಪ್ ಅವರ ಚೀನಾ ಪ್ರವಾಸದಲ್ಲಿ ಅಮೆರಿಕದ ಉದ್ಯಮ ಪ್ರಮುಖರೂ ಜತೆಗಿದ್ದಾರೆ. ಆ್ಯಪಲ್ ಕಂಪನಿಯ ಟಿಮ್ ಕುಕ್, ಎನ್ವಿಡಿಯಾದ ಜೆನ್ಸನ್ ಹುವಾಂಗ್, ಟೆಸ್ಲಾ ಕಂಪನಿಯ ಇಲಾನ್ ಮಸ್ಕ್, ಬ್ಲ್ಯಾಕ್‌ರಾಕ್‌ನ ಲ್ಯಾರಿ ಫಿಂಕ್ ಜತೆಗೆ ಇದ್ದಾರೆ. ಟ್ರಂಪ್ ಜತೆಗೆ ಅವರ ಪುತ್ರ ಎರಿಕ್, ಸೊಸೆ ಲಾರಾ ಹಾಗೂ ಇಲಾನ್ ಮಸ್ಕ್ ಒಟ್ಟಿಗೆ ಚೀನಾಕ್ಕೆ ಬಂದಿಳಿದರು. ಸಾಮಾನ್ಯ ರಾಜತಾಂತ್ರಿಕ ಶಿಷ್ಟಾಚಾರಕ್ಕಿಂತ ಭಿನ್ನವಾಗಿ, ಟ್ರಂಪ್‌ಗೆ ಅಭೂತಪೂರ್ವ ಸ್ವಾಗತವನ್ನು ಚೀನಾ ಕೋರಿದೆ.

ವಿರಳ ಲೋಹ ಸೇರಿ ಹಲವು ವಿಷಯಗಳ ಚರ್ಚೆ: ಪಶ್ಚಿಮ ಏಷ್ಯಾ ಸಂಘರ್ಷದ ಬೆನ್ನಲ್ಲೇ ಕಾಣಿಸಿಕೊಂಡಿರುವ ಆರ್ಥಿಕ, ಭೌಗೋಳಿಕ ಅಸ್ಥಿರತೆ, ತೈಲ ಬೆಲೆ ಏರಿಕೆ ಇತ್ಯಾದಿ ಸಮಸ್ಯೆಗಳಿಗೆ ವಿಶ್ವದ ಎರಡು ಪ್ರಮುಖ ಆರ್ಥಿಕ ಶಕ್ತಿಗಳ ನಡುವಿನ ಚರ್ಚೆಯು ಪರಿಹಾರದ ವೇದಿಕೆಯಾಗಬಹುದು ಎಂದು ಮೂಲಗಳು ಹೇಳಿವೆ

ವ್ಯಾಪಾರ ಮತ್ತು ಸುಂಕ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ, ತೈವಾನ್‌ಗೆ ಅಮೆರಿಕದ ಶಸ್ತ್ರಾಸ್ತ್ರ ಮಾರಾಟ, ಚೀನಾದಿಂದ ಅಮೆರಿಕಕ್ಕೆ ವಿರಳ ಲೋಹಗಳ ಆಮದು ಸೇರಿದಂತೆ ಹಲವು ವಿಷಯಗಳು ಟ್ರಂಪ್–ಜಿನ್‌ಪಿಂಗ್ ನಡುವೆ ಚರ್ಚೆಯಾಗುವ ಸಾಧ್ಯತೆಗಳಿವೆ.

ವಿರಳ ಲೋಹಗಳ ರಫ್ತಿನ ಮೇಲೆ ಚೀನಾ ನಿರ್ಬಂಧ ಹೇರಿದ ಬೆನ್ನಲ್ಲೇ, ಅಮೆರಿಕವು ಚೀನಾ ಮೇಲೆ ಹೆಚ್ಚುವರಿ ಸುಂಕ ವಿಧಿಸಿತ್ತು.

ತೈವಾನ್ ಬಗ್ಗೆ ಜಿನ್‌ಪಿಂಗ್ ಎಚ್ಚರಿಕೆ

ಬೀಜಿಂಗ್ ಶೃಂಗಸಭೆಯಲ್ಲಿ ತೈವಾನ್ ಬಗ್ಗೆ ಟ್ರಂಪ್‌ಗೆ ಎಚ್ಚರಿಕೆ ನೀಡಿದ ಜಿನ್‌ಪಿಂಗ್, 'ತೈವಾನ್ ಸಮಸ್ಯೆಯನ್ನು ಸರಿಯಾಗಿ ನಿರ್ವಹಿಸದಿದ್ದರೆ, ಅದು ಸಂಘರ್ಷಕ್ಕೆ ಕಾರಣವಾಗಬಹುದು ಮತ್ತು ಅತ್ಯಂತ ಅಪಾಯಕಾರಿ ಸ್ಥಿತಿಗೆ ತಲುಪಬಹುದು' ಎಂದು ಹೇಳಿದ್ದಾರೆ.

ಇದಕ್ಕೂ ಮುನ್ನ 'ಎರಡೂ ದೇಶಗಳು ಪಾಲುದಾರರಾಗಬೇಕೇ ಹೊರತು, ವಿರೋಧಿಗಳಲ್ಲ' ಎಂದು ಜಿನ್‌ಪಿಂಗ್ ಹೇಳಿದ್ದರು. ದಶಕದ ನಂತರ ನಡೆಯುತ್ತಿರುವ ಚೀನಾ ಮತ್ತು ಅಮೆರಿಕ ನಡುವಿನ ಮಾತುಕತೆಯು, ಉಭಯ ದೇಶಗಳ ನಡುವಿನ ಸಂಬಂಧ ಮುಂದುವರಿಯುವಲ್ಲಿ ನಿರ್ಣಾಯಕ ಪಾತ್ರ ವಹಿಸಿದೆ' ಎಂದು ಮೂಲಗಳು ಹೇಳಿವೆ.

ಚೀನಾದ ವೈಭವೋಪೇತವಾದ ಸ್ವಾಗತಕ್ಕೆ ಧನ್ಯವಾದ ಸಲ್ಲಿಸಿದ ಟ್ರಂಪ್, ಶ್ವೇತಭವನಕ್ಕೆ ಸೆಪ್ಟೆಂಬರ್ 24ರಂದು ಭೇಟಿ ನೀಡುವಂತೆ ಜಿನ್‌ಪಿನ್ ಅವರನ್ನು ಔಪಚಾರಿಕವಾಗಿ ಆಹ್ವಾನಿಸಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸುವೇಂದು ಅಧಿಕಾರಿ ಅವರು ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುವುದಕ್ಕೂ ಒಂದು ದಿನ ಮೊದಲು ದಿವ್ಯಾ ಯಾದವ್ ಎಂಬ 'ಎಕ್ಸ್' ಬಳಕೆದಾರರೊಬ್ಬರು, ಸುವೇಂದು ಅವರು ಮಾಧ್ಯಮಗಳೊಂದಿಗೆ ಮಾತನಾಡಿದ್ದಾರೆ ಎನ್ನಲಾದ ವಿಡಿಯೊ ತುಣುಕನ್ನು ಪೋಸ್ಟ್ ಮಾಡಿದ್ದು, ಅದರಲ್ಲಿ ಅವರು 'ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಹಿಂದೂಗಳ ಪರವಾಗಿ ಮಾತ್ರ ಕೆಲಸ ಮಾಡಲಿದೆ' ಎಂದು ಹೇಳುವುದು ಕೇಳಿಸುತ್ತದೆ. 'ರಾಜ್ಯದಲ್ಲಿ ಮುಂದಿನ 100 ವರ್ಷಗಳವರೆಗೆ ಅಧಿಕಾರದಲ್ಲಿರುವುದಕ್ಕಾಗಿ ಹಿಂದೂಗಳ ಪರವಾಗಿ ಕೆಲಸ ಮಾಡಿ, ಶೇ 27ರಷ್ಟಿರುವ ಮುಸ್ಲಿಮರನ್ನು ಬಿಜೆಪಿ ನಾಶ ಮಾಡಲಿದೆ' ಎಂದು ಅವರು ವಿಡಿಯೊದಲ್ಲಿ ಹೇಳಿದ್ದಾರೆ ಎಂದು ಪ್ರತಿಪಾದಿಸಲಾಗಿದೆ. ಆದರೆ, ಇದು ಸುಳ್ಳು.


ವಿಡಿಯೊ ತುಣಕನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಆ ವಿಡಿಯೊದ ಎಡಭಾಗದಲ್ಲಿ ಪಿಟಿಐ ಲೋಗೋ ಇರುವುದು ಕಂಡು ಬಂತು. ಸುವೇಂದು ಅಧಿಕಾರಿ ಅವರು ಇಂತಹ ಹೇಳಿಕೆ ನೀಡಿರುವ ವಿಡಿಯೊವನ್ನು ಪಿಟಿಐಯು ತನ್ನ ಅಧಿಕೃತ ಸಾಮಾಜಿಕ ಜಾಲತಾಣಗಳ ಪುಟಗಳಲ್ಲಿ ಪ್ರಕಟಿಸಿದೆಯೇ ಎಂದು ಪರಿಶೀಲಿಸಿದಾಗ, ನಾಲ್ಕು ವಿಡಿಯೊಗಳು ಸಿಕ್ಕಿದವು. ಆದರೆ, ಯಾವುದೇ ವಿಡಿಯೊದಲ್ಲಿ ಅವರು ಮೇಲಿನಂತೆ ಹೇಳಿರುವುದು ಕಂಡು ಬರಲಿಲ್ಲ. ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಿದಾಗ, 2026ರ ಮೇ 6ರಂದು ಸಬರ್ ಕೋಥಾ ಎಂಬ ಪಶ್ಚಿಮ ಬಂಗಾಳದ ಸ್ಥಳೀಯ ಯೂಟ್ಯೂಬ್ ಚಾನೆಲ್‌ನಲ್ಲಿ ಪೋಸ್ಟ್ ಮಾಡಲಾದ ವಿಡಿಯೊ ಸಿಕ್ಕಿತು. 12.19 ನಿಮಿಷಗಳ ಈ ವಿಡಿಯೊವನ್ನೂ ಪರಿಶೀಲಿಸಲಾಯಿತು. ಅದರಲ್ಲೂ ಇಂತಹ ಹೇಳಿಕೆ ಇರಲಿಲ್ಲ. ಮುಂದಿನ ಹಂತವಾಗಿ ವಿಡಿಯೊದಲ್ಲಿರುವ ಧ್ವನಿಯನ್ನು ಪ್ರತ್ಯೇಕಿಸಿ 'ರಿಸೆಂಬಲ್ ಎಐ' ಎಂಬ ಟೂಲ್‌ನಲ್ಲಿ ಹಾಕಿ ಪರಿಶೀಲಿಸಿದಾಗ ಅದು ಡೀಪ್‌ಫೇಕ್ ಧ್ವನಿ ಎಂಬುದು ಖಚಿತವಾಯಿತು. ವಿಡಿಯೊಕ್ಕೆ ತಿರುಚಿದ ಧ್ವನಿಯನ್ನು ಅಳವಡಿಸಿ ತಪ್ಪು ಮಾಹಿತಿಯನ್ನು ಹರಡಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಪದಬಂಧ 6403

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವರನು ನೋಡಿರುವ ಕೊಳ (4)
3.ಪಾಪಕ್ಕೆ ಹೆದರುವವನು (4)
5.ಚತುರ್ವರ್ಣಗಳಲ್ಲಿ ಎರಡನೆಯ ವರ್ಗ (3)
6.ರಸಿಕನಲ್ಲದವ ಇಲ್ಲಿದ್ದಾನೆ (4)
8.ಸರ ತಂದಿದ್ದಕ್ಕೆ ತೋರಿದ ಆದರ (3)
10.ಬೊಕ್ಕೆಗಳೆದ್ದು ತುರಿಕೆಗಳಾಗುವ ಚರ್ಮ ರೋಗ (2)
11.ಬೀಸಣಿಕೆ ಇಲ್ಲಿದೆ (2)
12.ನಳಪಾಕ ತಯಾರಿಸಿದವಳ ಕೆನ್ನೆ ಉಲ್ಟಾ ಕಾಣುತ್ತಿದೆ (3)
14.ತಮ್ಮನು ತೋರಿದ ಭೇದಭಾವ (4)
17.ವರನೊಳಗಿರುವ ಮಾತುಗಾರ (3)
18.ಈಕೆ ಬಹಳ ಬುದ್ಧಿವಂತೆ (4)
19.ದೇವಸ್ಥಾನದ ಬಳಿಯಿರುವ ಕೆತ್ತನೆಗಾರ (4)

ಮೇಲಿಂದ ಕೆಳಕ್ಕೆ
1.ಮಡಿವಾಳನಿಲ್ಲಿ ತಿರುಗಿದ್ದಾನಲ್ಲಾ? (3)
2.ಕಾಪಾಡುವವ ಇಲ್ಲಿದ್ದಾನೆ (3)
3.ಹಾಲಿನಿಂದ ಮಾಡಿದ ಸಿಹಿ ಭಕ್ಷ್ಯ (3)
4.ಜರೂರಾಗಿ ಮಾಡಿದ ಸಹಿ (2)
7.ರುಚಿಕರವಾದ ಭೋಜನ (5)
9.ಬೆಲೆಯುಳ್ಳ ಮಣಿಗಳನ್ನು ಕುಂದಣಿಸಿದ್ದು (5)
13.ಕಲ್ಲಿನಿಂದ ಬೀಸಿ ಹೊಡೆಯುವ ಸಾಧನ (3)
14.ಒಣಗಿದ ವಸ್ತುವಿಲ್ಲಿದೆ (3)
15.ಸವಿಯಾದುದು ಮರದೊಳಗಿದೆ (3)
16.ಕಂಬಿಯ ಹಿಂದೆ ನಿಂತು ತೋರಿದ ಡೌಲು (2)



6402ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪತ್ತಲ 4.ಶಮನ
6.ವರೋಪಚಾರ 7.ಶರ
9.ನಾಕ 10.ಅಂಕೆ 11.ಕದ
15.ಗಾಳಿಗೋಪುರ 17.ಕತ್ತರಿ
18.ಕಾಣಿಕೆ

ಮೇಲಿಂದ ಕೆಳಕ್ಕೆ:
1.ಪರವಶ 2.ಲವಣ
3.ಕೋಪ 4.ಶರಧಿ
5.ನಕ್ಷತ್ರಿಕ 8.ರಸಿಕೆ
9.ನಾಸ್ತಿಕ 10.ಅಂಗಾರಕ
12.ದಬ್ಬಾಳಿಕೆ 13.ನಗಾರಿ
14.ಣರಕಾ 16.ಗೋಪ್ಯ

ಸುಡೊಕು 6786

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	2			6	7	4		
3		4					7	2
	7			4	8		6	3
	4			3			8	
8		9		7				
	5		8		4		9	7
2				9		7	3	
		3						8
6			4			5		9

6785 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ದೃಢಸಂಕಲ್ಪ, ಆತ್ಮವಿಶ್ವಾಸ ಇರಲಿ

ನುಡಿ ಬೆಳಗು



ರೇಣುಕಾ ನಿಡಗುಂದಿ

ಒಮ್ಮೆ ಒಂದೂರಿನಲ್ಲಿ ಒಬ್ಬ ಯುವಕನಿದ್ದ. ಅವನು ಪರಿಶ್ರಮಿಯಾಗಿದ್ದರೂ ಮನಸ್ಸಿನಲ್ಲಿ ಶಂಕೆ ಇರುತ್ತಿತ್ತು. ತನ್ನ ಕಾರ್ಯಕ್ಷೇತ್ರದಲ್ಲಿ ಯಶಸ್ಸು ಸಿಗುವುದೋ ಇಲ್ಲವೋ ಎನ್ನುವುದೇ ಚಿಂತೆ. ಆವೇಶದ ಕಾರಣ ಯಾವಾಗಲೂ ಇನ್ನೊಬ್ಬರ ಮೇಲೆ ಸಿಟ್ಟುಗೊಳ್ಳುತ್ತಿದ್ದ.

ಆ ಊರಿಗೆ ಒಬ್ಬ ಮಹಾತ್ಮರು ಬಂದರು. ಯುವಕ ಅವರ ಬಳಿ ಬಂದು, 'ಮಹಾತ್ಮರೇ, ನಾನು ಕಠಿಣ ಪರಿಶ್ರಮ ಪಡುತ್ತೇನೆ, ಆದರೂ ನನಗೆ ಯಶಸ್ಸು ಸಿಗುತ್ತಿಲ್ಲ. ಏನಾದರೂ ಉಪಾಯ ಹೇಳಿ' ಎನ್ನುತ್ತಾನೆ.

ಮಹಾತ್ಮರು ನಕ್ಕು, ಒಂದು ತಾಯಿತ ಕೊಡುತ್ತಾರೆ. 'ಇದು ನಿನ್ನ ಎಲ್ಲ ಬಾಧೆಗಳನ್ನು ದೂರ ಮಾಡುತ್ತದೆ. ಆದರೆ ನೀನು ಒಂದು ದಿನ ರಾತ್ರಿ ಸ್ಮಶಾನದಲ್ಲಿ ಕಳೆಯಬೇಕಾಗುತ್ತದೆ' ಎಂದರು. ಸ್ಮಶಾನದ ಹೆಸರು ಕೇಳಿದ ಯುವಕ ಭಯದಿಂದ 'ಒಬ್ಬನೇ ಹೇಗೆ ಸ್ಮಶಾನದಲ್ಲಿ ಕಳೆಯಲಿ' ಎಂದು ಕಂಪಿಸುತ್ತ ಕೇಳಿದ.

'ಹೆದರಬೇಡ, ಇದು ಸಾಧಾರಣ ತಾಯಿತವಲ್ಲ, ಎಲ್ಲ ಸಂಕಟದಲ್ಲೂ ನಿನ್ನನ್ನು ಕಾಪಾಡುತ್ತದೆ'.

ಯುವಕ ಇಡೀ ರಾತ್ರಿ ಸ್ಮಶಾನದಲ್ಲಿ ಕಳೆದು ಮರುದಿನ ಮಹಾತ್ಮರಲ್ಲಿ ಹೋದ 'ಮಹಾತ್ಮರೇ, ನಿಜಕ್ಕೂ ಈ ತಾಯಿತ ಅದ್ಭುತವಾಗಿದೆ. ಕತ್ತಲೆಗೆ ಹೆದರುವ ನನ್ನಂಥ ಪುಕ್ಕಲ ಸ್ಮಶಾನದಲ್ಲಿ ರಾತ್ರಿ ಕಳೆಯುವುದೆಂದರೇನು? ಇದು ತಾಯಿತದ ಮಹಿಮೆಯೇ' ಎಂದ.

ಬಳಿಕ ಆ ಯುವಕ ಸಂಪೂರ್ಣ ಬದಲಾಗುತ್ತಾನೆ. ಎಲ್ಲ ಕಾರ್ಯದಲ್ಲೂ ಯಶಸ್ಸನ್ನು ಗಳಿಸಿ ಊರಿನ ಯಶಸ್ವಿ ಗಣ್ಯರಲ್ಲಿ ಒಬ್ಬನಾಗುತ್ತಾನೆ.

ಒಂದು ವರ್ಷದ ನಂತರ ಆ ಮಹಾತ್ಮರು ಪುನಃ ಆ ಹಳ್ಳಿಗೆ ಬರುತ್ತಾರೆ. ತಕ್ಷಣ ಆ ಯುವಕ ಅವರಲ್ಲಿಗೆ ಹೋಗಿ ಆ ಚಮತ್ಕಾರಿ ತಾಯಿತದ ಗುಣಗಾನ ಮಾಡುತ್ತಾನೆ. ಆಗ ಮಹಾತ್ಮರು 'ಮಗೂ ಆ ತಾಯಿತ ತೆಗೆದು ಕೊಡು' ಎಂದು ಆ ತಾಯಿತವನ್ನು ಬಿಚ್ಚಿ ತೋರಿಸುತ್ತಾರೆ. ತಾಯಿತದೊಳಗೆ ಯಾವ ಮಂತ್ರ-ಗಿಂತ್ರ ಯಂತ್ರವೂ ಇರುವುದಿಲ್ಲ. ಕೇವಲ ಧಾತುವಿನ ತುಂಡು. ಸಾಧಾರಣ ತಾಯಿತ ಇಷ್ಟೆಲ್ಲ ಸಫಲತೆಯನ್ನು ಕೊಟ್ಟದ್ದು ಹೇಗೆ?

ಮಹಾತ್ಮರು ತಿಳಿಹೇಳುತ್ತಾ, 'ನಿನಗೆ ಸಫಲತೆಯನ್ನು ತಂದುಕೊಟ್ಟದ್ದು ಈ ತಾಯಿತವಲ್ಲ. ನಿನ್ನಲ್ಲಿನ ಆತ್ಮವಿಶ್ವಾಸ ಹಾಗೂ ಪರಿಶ್ರಮ. ಮಗೂ ದೇವರು ಪ್ರತಿಯೊಂದು ಜೀವಿಗೂ ವಿಶೇಷ ಶಕ್ತಿಯನ್ನು ಕೊಟ್ಟಿದ್ದಾನೆ. ಅದು ನಂಬುಗೆಯ ಶಕ್ತಿ. ಹಿಂದೆ ನಿನಗೆ ನಿನ್ನಲ್ಲಿ ವಿಶ್ವಾಸ ಇರಲಿಲ್ಲ. ಅದಕ್ಕೇ ನೀನು ಯಶಸ್ವಿಯಾಗುತ್ತಿರಲಿಲ್ಲ. ಈ ತಾಯಿತದಿಂದಾಗಿ ನಿನ್ನೊಳಗಿನ ವಿಶ್ವಾಸ ಜಾಗೃತಗೊಳ್ಳುತ್ತಲೇ ನೀನು ಯಶಸ್ಸಿನತ್ತ ನಡೆದೆ. ಕೈಗೊಂಡ ಕಾರ್ಯಗಳೆಲ್ಲವೂ ಸಫಲವಾದವು. ಆದ್ದರಿಂದ ತಾಯಿತವನ್ನು ನಂಬುವ ಬದಲು ನಿನ್ನ ಕರ್ಮ, ನಿನ್ನ ಆಲೋಚನೆ, ನಿನ್ನ ನಿರ್ಣಯಗಳ ಮೇಲೆ ವಿಶ್ವಾಸವಿಡುವುದನ್ನು ಕಲಿ. ಜ್ಞಾಪಕವಿರಲಿ, ಆಗುವುದೆಲ್ಲ ಒಳಿತಿಗೇ ಅಂದುಕೋ. ಆಗ ನೀನು ಯಶಸ್ಸಿನ ಶಿಖರವನ್ನೇರುವೆ' ಎಂದರು.

ಯುವಕ ಮಹಾತ್ಮರ ಮಾತನ್ನು ಗಂಭೀರವಾಗಿ ಕೇಳುತ್ತಿದ್ದನು. ಬದುಕಿನಲ್ಲಿ ಸಫಲವಾಗಬೇಕೆಂದರೆ ಮೊದಲು ನಮಗೆ ನಮ್ಮ ಶಕ್ತಿ ಸಾಮರ್ಥ್ಯದ ಬಗ್ಗೆ ವಿಶ್ವಾಸವಿರಬೇಕು. ಸಫಲವಾಗುತ್ತೇನೆಂಬ ಆತ್ಮವಿಶ್ವಾಸವಿರಬೇಕು. ಈ ಆತ್ಮವಿಶ್ವಾಸವೊಂದಿದ್ದರೆ ಯಶಸ್ಸು ತಾನಾಗಿಯೇ ಒಲಿಯುತ್ತದೆ.

ಗೆಳೆಯರೇ, ಆತ್ಮವಿಶ್ವಾಸವೊಂದಿದ್ದರೆ ಜೋತಿಷ್ಯ, ಬೆರಳುಗಳ ತುಂಬ ಬೇರೆ ಬೇರೆ ಗ್ರಹಗಳ ಹರಳಿನ ಉಂಗುರ, ಕೊರಳಲ್ಲಿ ಮಾಲೆ, ತಾಯಿತಗಳನ್ನು ಧರಿಸುವ ಅಗತ್ಯವಿಲ್ಲ. ತಂತ್ರ ಮಂತ್ರಗಳ ಮೊರೆ ಹೋಗಬೇಕಿಲ್ಲ. ಮನಸ್ಸಿನಲ್ಲಿ ವಿಶ್ವಾಸ ಹಾಗೂ ದೃಢ ಸಂಕಲ್ಪವಿದ್ದರೆ ನೀವು ಎಂಥ ಕಠಿಣ ಕಾರ್ಯವನ್ನೂ ಮಾಡಬಲ್ಲಿರಿ. ಆ ವಿಶ್ವಾಸವಿರಲಿ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

15 ಮೇ 2026 ಶುಕ್ರವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣತ್ರಯೋದಶಿ ಗಂ. 8-32 ನಂತರ ಚತುರ್ದಶಿ ಗಂ. 29-12 ನಕ್ಷತ್ರ: ಅಶ್ವಿನಿ ಗಂ. 20-15 ಯೋಗ : ಆಯುಷ್ಮಾನ್ ಗಂ. 14-21 ಕರಣ : ವಣಿಜ್ ಗಂ. 08-32, ಮೇಷ ಮಾಸದ 31 ನೇ ದಿನ. ಮಳೆ ನಕ್ಷತ್ರ : ಕೃತ್ತಿಕ 2 ನೇ ಪಾದ. ರಾಹುಕಾಲ : ಮಧ್ಯಾಹ್ನ 10-30 - 12-00, ಸೂರ್ಯೋದಯ : 06-08 ಸೂರ್ಯಾಸ್ತ : 06-45, ಮುಸ್ಲಿಂ ದಿನಾಂಕ : 27 ಜುಲ್ಕಾದಾ, ಅದೃಷ್ಟ ಸಂಖ್ಯೆ : 3, 8

ಮೇಷ: ವ್ಯಾಪಾರದಲ್ಲಿ ಪರಿಸ್ಥಿತಿ ಅವಲೋಕಿಸಿಕೊಂಡು ಮುಂದಿನ ಹೆಜ್ಜೆ ಇರಿಸಿ. ಗೃಹ ಬಳಕೆಯ, ಅಲಂಕಾರಿಕ ಸಾಮಗ್ರಿಗಳ ಖರೀದಿ ಮಾಡುವಿರಿ. ಕರ್ತವ್ಯನಿಷ್ಠೆಯಿಂದ ಕಾರ್ಯ ಸಾಧಿಸುವಿರಿ.

ವೃಷಭ: ಕುಟುಂಬಕ್ಕೆ ಸಂಬಂಧಿಸಿದಂತೆ ಶುಭ ವಾರ್ತೆ ಕೇಳುವಿರಿ. ಅಣ್ಣ-ತಮ್ಮಂದಿರ, ಅಕ್ಕ-ತಂಗಿಯರ ಸಂಬಂಧಗಳಲ್ಲಿ ಸಾಮರಸ್ಯ ಕಾಯ್ದುಕೊಳ್ಳಿರಿ. ಗುರಿ ತಲುಪಲು ಆಂಜನೇಯನನ್ನು ಆರಾಧಿಸಿ.

ಮಿಥುನ: ಒತ್ತಡ ತರುವ ಕೆಲಸಗಳಿಂದ ದೂರ ಉಳಿಯಿರಿ. ಹಣ ಹೂಡಿಕೆಯ ವಿಷಯದಲ್ಲಿ ಅವರಿವರ ಮಾತುಗಳನ್ನು ಕೇಳುವ ಬದಲಾಗಿ ಅನಿಸಿಕೆಯಂತೆ ನಡೆಯಿರಿ.

ಕರ್ಕಾಟಕ: ಉತ್ತಮ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿಯೂ ಯಶಸ್ಸು ಪಡೆಯುವಿರಿ. ಅರ್ಧಕ್ಕೆ ನಿಂತಿದ್ದ ಗೃಹ ನಿರ್ಮಾಣ ಕೆಲಸಗಳು ಮುಂದುವರಿಯಲಿವೆ. ಶತ್ರು ಬಾಧೆ ನಿವಾರಣೆ ಆಗಲಿದೆ.

ಸಿಂಹ: ಜೀವನದಲ್ಲಿ ಸವಾಲಾಗಿ ಬಂದ ಜವಾಬ್ದಾರಿಯಲ್ಲಿ ಜಯ ಸಾಧಿಸಲಿದ್ದೀರಿ. ಬಹಳ ದಿನಗಳ ನಂತರ ಕೆಲಸದಲ್ಲಿ ಸಮಾಧಾನವನ್ನು ಹೊಂದುವಿರಿ. ಹೊಸ ಉದ್ಯೋಗಕ್ಕೆ ಹೊಂದಿಕೊಳ್ಳಲು ಕಷ್ಟವಾಗಬಹುದು.

ಕನ್ಯಾ: ಲೋಹಗಳ ಕೈಗಾರಿಕೆ ಉದ್ಯಮದವರಿಗೆ ಶ್ರಮದಿಂದ ಅಭಿವೃದ್ಧಿ. ಧ್ಯಾನ ಮಾಡುವ ಮೂಲಕ ಏಕಾಗ್ರತೆ ವೃದ್ಧಿಸಿಕೊಳ್ಳುವ ಪ್ರಯತ್ನ ಮಾಡಿ. ಗೋ ಸೇವೆಯಿಂದ ನೆಮ್ಮದಿ ಸಂಪಾದಿಸಬಹುದು.

ತುಲಾ: ಕೆಲವು ದಿನಗಳಿಂದ ಮುಂದೂಡಿದ್ದ ವಿದೇಶ ಪ್ರಯಾಣ ಕೈಗೊಳ್ಳುವ ಬಗ್ಗೆ ಯೋಚನೆ ಬರುವುದು. ಹಣಕಾಸಿನ ಬಗ್ಗೆ ಚಿಂತಿಸಬೇಕಿಲ್ಲ. ದಿನದ ಮಧ್ಯದಲ್ಲಿ ಅಚ್ಚರಿ ಸುದ್ದಿ ಕೇಳಲಿರುವಿರಿ.

ವೃಶ್ಚಿಕ: ವ್ಯಾಪಾರ ಸ್ಥಳವನ್ನು ಅಲಂಕಾರಯುತವಾಗಿ ವಿನ್ಯಾಸ ಮಾಡಿದರೆ ಹೆಚ್ಚಿನ ಲಾಭ ಪಡೆಯುವಿರಿ. ನಿಮ್ಮ ಪರವಾಗಿರುವ ಪರಿಸ್ಥಿತಿಯ ಲಾಭ ಪಡೆಯಲು ವಿಫಲರಾಗಬೇಡಿ.

ಧನು: ಮಗನ ಉನ್ನತ ವಿದ್ಯಾಭ್ಯಾಸ ವಿಷಯಗಳನ್ನು ಹಾಗೂ ಅದರಿಂದಾಗುವ ಲಾಭ ನಷ್ಟಗಳ ಬಗ್ಗೆ ಪುನರವಲೋಕನ ಮಾಡಿ. ಆಲಸ್ಯದಿಂದಾಗಿ ಕೆಲಸಗಳನ್ನು ಮುಂದೆ ಹಾಕದೆ ಪೂರ್ಣಗೊಳಿಸಿ.

ಮಕರ: ಅಸೂಯೆ ಪಡುವ ಸಹೋದ್ಯೋಗಿಗಳು ಹಾಗೂ ಮೇಲಧಿಕಾರಿಗಳೊಂದಿಗೆ ಜಾಣ್ಮೆಯಿಂದ ವ್ಯವಹರಿಸಿ. ಪರಿಣತರ ಸಲಹೆ, ಸೂಚನೆಗಳೊಂದಿಗೆ ಮುಂದುವರಿದರೆ ಪರಿಸ್ಥಿತಿ ತಿಳಿಯಾಗುತ್ತದೆ.

ಕುಂಭ: ಸುಪ್ತವಾಗಿ ಅಡಗಿರುವ ಪ್ರತಿಭೆ, ಕೌಶಲಗಳನ್ನು ಹೊರ ತೆಗೆಯಲು ವೇದಿಕೆ ಸಿಗುವುದು. ಮಾತುಗಳಿಗೆ ವಿರುದ್ಧ ಮಾತನ್ನು ಮಕ್ಕಳಿಂದ ಕೇಳಬೇಕಾಗಲಿದೆ. ಒತ್ತಡ ತರುವಂತಹ ಕೆಲಸಗಳಿಂದ ದೂರವಿರಿ.

ಮೀನ: ಗಿಡಗಳ ನರ್ಸರಿ ಮಾಡುವವರಿಗೆ ಕೀಟಬಾಧೆ ಉಂಟಾಗುವುದು. ಆಧ್ಯಾತ್ಮಿಕ ವಿಚಾರಗಳ ಪುಸ್ತಕಗಳನ್ನು ಕೊಳ್ಳಲು ಧನ ವಿನಿಯೋಗ ಆಗುವುದು. ಸಹವರ್ತಿಗಳೊಡನೆ ಸಂಯಮದಿಂದ ವರ್ತಿಸಿ.

ನಟನಾಗಿ ಮಿಂಚಲು ನವೀನ್ ಸಜ್ಜು



ಕನ್ನಡ ಚಿತ್ರರಂಗದಲ್ಲಿ ಹಿನ್ನೆಲೆ ಗಾಯಕನಾಗಿ ಹೆಸರು ಮಾಡಿರುವ ನವೀನ್ ಸಜ್ಜು ಇದೀಗ ನಾಯಕನಾಗಿಯೂ ಬೆಳ್ಳಿತೆರೆ ಮೇಲೆ ಮಿಂಚಲು ಸಜ್ಜಾಗಿದ್ದಾರೆ. ಅವರ ಅಭಿನಯದ 'ಲೋ ನವೀನ' ಇಂದು (ಮೇ 15) ತೆರೆಕಂಡಿದೆ. ಈಗಾಗಲೇ ಚಿತ್ರದ ಹಾಡುಗಳು ಸದ್ದು ಮಾಡಿದ್ದು, ಸಿನಿಮಾ ಕೂಡ ಪ್ರೇಕ್ಷಕರಿಗೆ ಇಷ್ಟವಾಗಲಿದೆ ಎಂಬ ವಿಶ್ವಾಸ ಅವರದ್ದು.

• ಆರ್. ಜಿತೇಂದ್ರ

• ನಾಯಕನಾಗಿ ಮೊದಲ ಸಿನಿಮಾ ತೆರೆಗೆ ಬರುತ್ತಿರುವ ಸಂದರ್ಭದಲ್ಲಿ ನಿಮ್ಮ ಆತ್ಮವಿಶ್ವಾಸ ಹೇಗಿದೆ?

ಚಿತ್ರದಲ್ಲಿನ ಏಳು ಹಾಡುಗಳ ಪೈಕಿ ನಾಲ್ಕು ಹಾಡುಗಳನ್ನು ಬಿಡುಗಡೆಗೊಳಿಸಿದ್ದೆವು. ಅವು ಸೂಪರ್ ಹಿಟ್ ಆಗಿವೆ. ಸಾಮಾಜಿಕ ಜಾಲತಾಣಗಳಲ್ಲೂ ವೈರಲ್ ಆಗುತ್ತಿವೆ. ಟ್ರೈಲರ್‌ಗೆ ಎಲ್ಲ ಕಡೆಗಳಿಂದ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಜನರ ಮಧ್ಯೆಯೂ ಚಿತ್ರದ ಬಗ್ಗೆ ಒಳ್ಳೆಯ ಚರ್ಚೆ ನಡೆಯುತ್ತಿದೆ. ಇದನ್ನೆಲ್ಲ ಗಮನಿಸಿದಾಗ, ಸಿನಿಮಾ ಖಂಡಿತ ಪ್ರೇಕ್ಷಕರಿಗೆ ಹಿಡಿಸಲಿದೆ ಎಂಬ ಭರವಸೆ ಮೂಡಿದೆ.

• ಸಿನಿಮಾದಿಂದ ಪ್ರೇಕ್ಷಕರು ಏನನ್ನು ನಿರೀಕ್ಷಿಸಬಹುದು?

ಇದು ಗ್ರಾಮೀಣ ಸೊಗಡಿನ, ನೂರಕ್ಕೆ ನೂರು ಮನರಂಜನೆ ನೀಡುವ ಸಿನಿಮಾ. ಚಿತ್ರಮಂದಿರಕ್ಕೆ ಬರುವ ಪ್ರೇಕ್ಷಕರಿಗೆ ಎರಡು ಗಂಟೆ ಭರಪೂರ ರಂಜನೆ ಸಿಗಲಿದೆ. ನಾವು ಬದುಕಿನಲ್ಲಿ ನೋಡಿದ, ಕೇಳಿದ ಘಟನೆಗಳನ್ನೇ ಸೇರಿಸಿ ಹೆಣೆದಿರುವ, ನೈಜತೆಗೆ ಹತ್ತಿರವಾದ ಕಥೆ ಇದು. ಹಾಸ್ಯ, ಪ್ರೇಮ, ಭಾವುಕತೆ–ಎಲ್ಲದರ ಹೂರಣ ಚಿತ್ರದಲ್ಲಿದೆ.

ಮೊಬೈಲ್ ಪಕ್ಕಕ್ಕಿಟ್ಟು ಮನಸಾರೆ ನೋಡಬಹುದಾದ ಸಿನಿಮಾ ಎನ್ನುವ ವಿಶ್ವಾಸ ನನಗಿದೆ. ಯಾರೇ ನೋಡಿದರೂ ತಮ್ಮ ಬದುಕಿನ ಯಾವುದೋ ಒಂದು ಕ್ಷಣಕ್ಕೆ ಕನೆಕ್ಟ್ ಆಗುವಂತಹ ಅಂಶಗಳು ಇಲ್ಲಿವೆ. ಕೆಲವು ದೃಶ್ಯಗಳು ಪ್ರೇಕ್ಷಕರನ್ನು ತಮ್ಮದೇ ನೆನಪುಗಳ ಲೋಕಕ್ಕೆ ಕರೆದೊಯ್ಯುತ್ತವೆ.

• ಗಾಯಕನಿಂದ ನಾಯಕನಾಗುವ ಪಯಣಕ್ಕೆ ಸಿದ್ಧತೆ ಹೇಗಿತ್ತು?

ನಾನು ಮೂಲತಃ ರಂಗಭೂಮಿಯಿಂದ ಬಂದವನು. ಮೈಸೂರಿನ ನಿರಂತರ ರಂಗತಂಡದಲ್ಲಿ ನಟನೆಯ ಪಾಠ ಕಲಿಯುತ್ತಿದ್ದಾಗಲೇ, ನನ್ನೊಳಗೆ ಒಬ್ಬ ಗಾಯಕನೂ ಇದ್ದಾನೆ ಎಂಬುದು ಗೊತ್ತಾಯಿತು. ಆರ್ಕೆಸ್ಟ್ರಾಗಳಲ್ಲಿ ಹಾಡುವುದರಿಂದ ಆರಂಭವಾದ ಪಯಣ, ಗಾಯಕನಾಗಿ ಮತ್ತು ಸಂಗೀತ ನಿರ್ದೇಶಕನಾಗಿ ಬೆಳೆಯುವ ತನಕ ಬರಲು ಒಂದು ದಶಕವೇ ಹಿಡಿದಿದೆ.

ಆದರೆ ಅದರಾಚೆಗೂ ನನ್ನೊಳಗೆ ಒಬ್ಬ ನಟ ಸದಾ ಜೀವಂತವಾಗಿದ್ದ. ಈಗ ಆ ನಟನಿಗೆ ವೇದಿಕೆ ಸಿಕ್ಕಿದೆ. ಅದಕ್ಕಾಗಿ ಸಾಕಷ್ಟು ಸಿದ್ಧತೆ ಮಾಡಿಕೊಂಡಿದ್ದೇನೆ. ಪರಿಶ್ರಮವೂ ಹಾಕಿದ್ದೇನೆ.

ನಾವು ಏನೇ ಮಾಡಿದರೂ ಅದು ಜನರಿಗೆ ಹಿಡಿಸಬೇಕು. ನಾನು ಹೀರೊಯಿಸಂ ಮಾಡಲು ಹೋಗಿದ್ದರೆ ಅದು ಯಶ ಕಾಣುವುದಿಲ್ಲ ಎಂಬ ಅರಿವು ನನಗಿತ್ತು. ಹೀಗಾಗಿ ನನಗೆ ತಕ್ಕಂತಹ ಕಥೆಯನ್ನು ಹುಡುಕಿಕೊಳ್ಳಲು, ಅದಕ್ಕೆ ಸರಿಯಾದ ತಂಡವನ್ನು ಕಟ್ಟಿಕೊಳ್ಳಲು ಎರಡು–ಮೂರು ವರ್ಷಗಳ ಕಾಲ ಹಿಡಿಯಿತು.

• ನಾಯಕನಾಗಿ ಮುಂದಿನ ಯೋಜನೆಗಳೇನು?

ಸಾಕಷ್ಟು ಯೋಜನೆಗಳಿವೆ. ಆದರೆ ಎಲ್ಲವೂ ಈ ಚಿತ್ರದ ಯಶಸ್ಸಿನ ಮೇಲೆ ನಿರ್ಧಾರವಾಗಲಿದೆ. ಪ್ರೇಕ್ಷಕರು ಒಂದು ಸಿನಿಮಾವನ್ನು ಕೈಹಿಡಿದು ಎತ್ತಿಕೊಂಡರೆ, ಅದು ಕಲಾವಿದನಿಗೆ ಹತ್ತು ಸಿನಿಮಾಗಳ ಶಕ್ತಿ ಕೊಡುತ್ತದೆ. ಜನ ಖಂಡಿತ ಈ ಸಿನಿಮಾವನ್ನು ಇಷ್ಟಪಡುತ್ತಾರೆ ಎಂಬ ನಂಬಿಕೆ ನನಗಿದೆ.

ಈಚಿನ ದಿನಗಳಲ್ಲಿ ಜನರು ಚಿತ್ರಮಂದಿರಕ್ಕೆ ಬರುವ ಪ್ರಮಾಣ ಸ್ವಲ್ಪ ಕಡಿಮೆಯಾಗಿದೆ. ಅದಕ್ಕಾಗಿಯೇ ಮೊದಲು ಹಾಡುಗಳನ್ನು ಬಿಡುಗಡೆ ಮಾಡಿ, ಜನರ ನಡುವೆ ಚಿತ್ರದ ಬಗ್ಗೆ ಕುತೂಹಲ ಮೂಡಿಸಿ, ನಂತರ ಸಿನಿಮಾವನ್ನು ತೆರೆಗೆ ತರುತ್ತಿದ್ದೇವೆ.

• ಲೂಸಿಯಾ ಚಿತ್ರದ ನಿಮ್ಮ ಮೊದಲ ಹಾಡೇ ದೊಡ್ಡ ಯಶಸ್ಸು ಕಂಡಿತ್ತು. ಈಗ ನಾಯಕನಾಗಿಯೂ ಅದೇ ರೀತಿಯ ಯಶಸ್ಸಿನ ನಿರೀಕ್ಷೆಯಿದೆಯೇ?

ಖಂಡಿತ ಇದೆ. ಮೊದಲ ಸಿನಿಮಾದ ಹಾಡಿನಿಂದ ನನಗೆ ಯಾವ ರೀತಿಯ ಯಶಸ್ಸು ಸಿಕ್ಕಿತೋ, ಅದೇ ರೀತಿಯ ಫಲಿತಾಂಶ ಈ ಸಿನಿಮಾದಿಂದಲೂ ಸಿಗಬಹುದು ಎಂಬ ನಿರೀಕ್ಷೆ ಇದೆ. ಈ ಚಿತ್ರದ ಹಾಡುಗಳಿಗೆ ಸಿಕ್ಕಿರುವ ಪ್ರತಿಕ್ರಿಯೆಯೇ ಅದನ್ನು ಹೇಳುತ್ತಿದೆ. ಒಟ್ಟಾರೆ ಸಿನಿಮಾದ ಸುತ್ತ ಪಾಸಿಟಿವ್ ವೈಬ್ ನಿರ್ಮಾಣವಾಗಿದೆ.

ನಾನು ಹಾಡುಗಾರನಾಗಿಯೇ ಮುಂದುವರಿಯಬಹುದಿತ್ತು. ಆದರೆ ಅದರಾಚೆಗೆ ಹೋಗಿ ಬೆವರು ಹರಿಸಿದಾಗ ಮಾತ್ರ ಹೊಸ ಯಶಸ್ಸು ಸಿಗುತ್ತದೆ. ನಾಯಕನಾಗಲು ನಾನು ಹತ್ತು ವರ್ಷಗಳ ಪರಿಶ್ರಮ ಪಟ್ಟಿದ್ದೇನೆ. ಮುಂದೆ ನಟನೆ ಮತ್ತು ಸಂಗೀತ ನಿರ್ದೇಶನ ಎರಡನ್ನೂ ಸಮತೋಲನದಿಂದ ಮುಂದುವರಿಸಿಕೊಂಡು ಹೋಗುವ ಆಸೆಯಿದೆ. ❖

ಶೀಘ್ರದಲ್ಲೇ 'ಪ್ರಜಾವಾಣಿ ಸಿನಿ ಸಮ್ಮಾನ'



4ನೇ ಆವೃತ್ತಿ



ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ನಮ್ಮ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿಯ ಸಮಾರಂಭ ಶೀಘ್ರದಲ್ಲಿ ಜರುಗಲಿದೆ.

ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗಿದೆ. 150ಕ್ಕಿಂತಲೂ ಅಧಿಕ ಸಿನಿಮಾಗಳು ಪ್ರಶಸ್ತಿಗಾಗಿ ಸ್ಪರ್ಧಿಸಿವೆ. ಈಗಾಗಲೇ ಈ ಸಿನಿಮಾಗಳು 'ಸಿನಿ ಸಮ್ಮಾನ'ದ 21 ತಾಂತ್ರಿಕ ತೀರ್ಪುಗಾರರ ಕೈಸೇರಿದ್ದು, ಶೀಘ್ರದಲ್ಲೇ ನಾಮನಿರ್ದೇಶನಗಳು ಹೊರಬೀಳಲಿವೆ. ಒಟ್ಟು 26 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ. ❖

2ನೇ ಆವೃತ್ತಿ



3ನೇ ಆವೃತ್ತಿ



ಇವರೇ ನಮ್ಮ 'ಕನ್ನಡ ಸಿನಿ ಧ್ರುವತಾರೆಗಳು'

'ಉಪೇಂದ್ರ' ನೋಡಿ ಕೋಟಿ ಗೆಲ್ಲಿ!

ಉಪೇಂದ್ರ ಅವರು ಅಭಿನಯಿಸಿದ 'ಉಪೇಂದ್ರ' ಸಿನಿಮಾ ಜೂನ್ 4ರಂದು ಮರುಬಿಡುಗಡೆಯಾಗಲಿದೆ.

ಇಷ್ ಮೈರಾ ಪ್ರೊಡ್ಯೂಸರ್ ಕಂಪನಿ ಅಡಿಯಲ್ಲಿ ಪರಮೇಶ್ವರ್ ಬಿ. ಸಿನಿಮಾವನ್ನು ರೀರಿಲೀಸ್ ಮಾಡುತ್ತಿದ್ದು, ಸಿನಿಮಾ ವೀಕ್ಷಿಸುವ ಪ್ರೇಕ್ಷಕರಿಗೆ ನಗದು ಪ್ರಶಸ್ತಿಯನ್ನೂ ಘೋಷಿಸಿದ್ದಾರೆ. ಸಿನಿಮಾವನ್ನು ರಾಜ್ಯದಾದ್ಯಂತ 100 ಚಿತ್ರಮಂದಿರಗಳಲ್ಲಿ ಮರುಬಿಡುಗಡೆ ಮಾಡುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. 'ವಿಶೇಷವೆಂದರೆ ಏಕಪರದೆ ಚಿತ್ರಮಂದಿರಗಳಲ್ಲಷ್ಟೇ ಸಿನಿಮಾ ಬಿಡುಗಡೆಯಾಗಲಿದೆ. ಪ್ರೇಕ್ಷಕರಿಗೆ ಪ್ರತಿ ಚಿತ್ರಮಂದಿರಗಳಲ್ಲಿ ಪ್ರದರ್ಶನ ಮುಗಿದ ನಂತರ 10 ನಿಮಿಷಗಳ ಪ್ರಶ್ನೋತ್ತರ ಕಾರ್ಯಕ್ರಮ ಏರ್ಪಡಿಸಲಾಗುವುದು. ಸರಿಯಾದ ಉತ್ತರ ನೀಡಿದ ಪ್ರೇಕ್ಷಕರಿಗೆ ಪ್ರಾಶಸ್ತ್ಯದ ಮೇರೆಗೆ ಆ ಪ್ರದರ್ಶನದ ಸಂಪೂರ್ಣ ಗಳಿಕೆಯನ್ನು ಬಹುಮಾನವಾಗಿ ನೀಡಲಾಗುವುದು. ಅಲ್ಲದೇ 'ಉಪೇಂದ್ರ' ಸಿನಿಮಾ ಪ್ರದರ್ಶನದ 25ನೇ ದಿನ ಅದೇ ರೀತಿ ಉತ್ತರ ನೀಡಿದ ಒಬ್ಬ ಪ್ರೇಕ್ಷಕನಿಗೆ ₹1 ಕೋಟಿ ಬಹುಮಾನ ನೀಡಲಾಗುವುದು' ಎಂದಿದ್ದಾರೆ ಪರಮೇಶ್ವರ್ ಬಿ.



ರವೀನಾ ಟಂಡನ್, ಉಪೇಂದ್ರ

'ಇಂದಿನ ಪೀಳಿಗೆಗೆ ಕನ್ನಡ ಚಿತ್ರರಂಗದಲ್ಲಿ ಇತಿಹಾಸ ಸೃಷ್ಟಿಸಿದ ಸಿನಿಮಾಗಳನ್ನು ಪರಿಚಯ ಮಾಡುವುದು ನಮ್ಮ ಉದ್ದೇಶ. ಜೊತೆಗೆ ಚಿತ್ರಮಂದಿರಗಳಿಗೆ ಪ್ರೇಕ್ಷಕರನ್ನ ಕರೆತಂದು ಏಕಪರದೆ ಚಿತ್ರಮಂದಿರಗಳನ್ನು ಉಳಿಸಿಕೊಳ್ಳುವ ಪ್ರಯತ್ನವೂ ಹೌದು' ಎನ್ನುತ್ತಾರೆ ಪರಮೇಶ್ವರ್. 'ಸಿನಿಮಾ ಮರುಬಿಡುಗಡೆಗೆ 'ಉಪೇಂದ್ರ' ಸಿನಿಮಾ ನಿರ್ಮಾಪಕರಾದ ಶಿಲ್ಪಾ ಶ್ರೀನಿವಾಸ್ ಅವರು ಅನುಮತಿ ಕೊಟ್ಟಿದ್ದಾರೆ' ಎಂದೂ ತಿಳಿಸಿದ್ದಾರೆ ಪರಮೇಶ್ವರ್. ❖



ಮಿತ್ರ

'ಲಕ್ಷ್ಮೀಪುತ್ರ'ದಲ್ಲಿ ಹೀಗಿದ್ದಾರೆ ಮಿತ್ರ

ಭಿನ್ನವಾದ ಪಾತ್ರಗಳ ಮೂಲಕ ಇತ್ತೀಚೆಗೆ ಸದ್ದು ಮಾಡುತ್ತಿರುವ ನಟ ಮಿತ್ರ, ಚಿಕ್ಕಣ್ಣ ನಟನೆಯ 'ಲಕ್ಷ್ಮೀಪುತ್ರ'ದಲ್ಲೂ ಪಾತ್ರವೊಂದಕ್ಕೆ ಬಣ್ಣಹಚ್ಚಿದ್ದಾರೆ.

ಅವರ ಜನ್ಮದಿನದಂದು ಚಿತ್ರತಂಡ ಮಿತ್ರ ಅವರ ಪಾತ್ರದ ಫಸ್ಟ್‌ಲುಕ್ ಬಿಡುಗಡೆ ಮಾಡಿದೆ. 2003ರಲ್ಲಿ ಚಿತ್ರರಂಗಕ್ಕೆ ಕಾಲಿಟ್ಟ ಮಿತ್ರ ಹಿರಿತೆರೆ, ಕಿರುತೆರೆಯಲ್ಲೂ ಮಿಂಚಿದವರು. 'ಮನಸಾರೆ', 'ಪಂಚರಂಗಿ' ಹೀಗೆ ನಟಿಸಿದ ಬಹುತೇಕ ಸಿನಿಮಾಗಳಲ್ಲಿ ಪಾತ್ರಗಳು ಹಾಸ್ಯಪ್ರಧಾನವಾಗಿದ್ದರೂ, ಬದಲಾವಣೆಗೆ ತೆರೆದುಕೊಂಡು 'ಲ್ಯಾಂಡ್‌ಲಾರ್ಡ್'ನಲ್ಲಿ ತಮ್ಮ ನಟನೆಯ ಸಾಮರ್ಥ್ಯ ಪ್ರದರ್ಶಿಸಿದವರು.

ನೂರಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿರುವ ಅವರ ಕೈಯಲ್ಲಿ ಪಿ.ಸಿ.ಶೇಖರ್ ನಿರ್ದೇಶನದ 'ಮಹಾನ್', ಪ್ರಜ್ವಲ್ ದೇವರಾಜ್ ನಟನೆಯ 'ಕರಾವಳಿ' ಸಿನಿಮಾಗಳಿದ್ದು, ಇವು ಇನ್ನಷ್ಟೇ ಬಿಡುಗಡೆಯಾಗಬೇಕಿದೆ. ಈ ಸಂದರ್ಭದಲ್ಲೇ 'ಲಕ್ಷ್ಮೀಪುತ್ರ'ದಲ್ಲಿನ ಅವರ ಪಾತ್ರವನ್ನು ಪರಿಚಯಿಸಲಾಗಿದ್ದು, ಮತ್ತೆ ಹಾಸ್ಯ ಪಾತ್ರದತ್ತ ಮಿತ್ರ ಹೊರಳಿದಂತಿದೆ. ವಿಜಯ್ ಸ್ವಾಮಿ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾವನ್ನು ನಿರ್ದೇಶಕ ಎ.ಪಿ. ಅರ್ಜುನ್ ನಿರ್ಮಾಣ ಮಾಡಿದ್ದು, ತಾರಾ, ಕುರಿ ಪ್ರತಾಪ್, ಧರ್ಮಣ್ಣ ಸೇರಿ ದೊಡ್ಡ ತಾರಾಗಣವೇ ಚಿತ್ರದಲ್ಲಿದೆ. ವಂದಿತಾ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. ❖

'ಮಲ್ಟಿಸ್ಟಾರರ್ ಸಿನಿಮಾ ಮಾಡುವ ಹಟವಿಲ್ಲ'

• ಅಭಿಲಾಷ್ ಪಿ.ಎಸ್.

ಶಿವರಾಜ್‌ಕುಮಾರ್ ಅವರು ಮುಖ್ಯಭೂಮಿಕೆಯಲ್ಲಿರುವ 'ಬೇಲ್' ಸಿನಿಮಾದ ಚಿತ್ರೀಕರಣ ಇತ್ತೀಚೆಗೆ ಪೂರ್ಣಗೊಂಡಿದೆ. 'ಗೂಗ್ಲಿ', 'ರಣವಿಕ್ರಮ', 'ನಟಸಾರ್ವಭೌಮ', 'ರೇಮೋ' ಸೇರಿದಂತೆ ಹಲವು ಹಿಟ್‌ಗಳನ್ನು ಕೊಟ್ಟಿರುವ ನಿರ್ದೇಶಕ ಪವನ್ ಒಡೆಯರ್ ನಿರ್ದೇಶನದ ಈ ಸಿನಿಮಾ ಇದೇ ವರ್ಷ ತೆರೆಗೆ ಬರಲಿದೆ. ಸಿನಿಮಾದ ಫಸ್ಟ್‌ಲುಕ್ ಮೇ 16ಕ್ಕೆ ರಿಲೀಸ್ ಆಗಲಿದ್ದು, ಈ ಹೊಸ್ತಿಲಲ್ಲಿ ಪವನ್ ಮಾತಿಗೆ ಸಿಕ್ಕರು.

'ಇತ್ತೀಚೆಗೆ ದೆಹಲಿ ಹಾಗೂ ಧರ್ಮಶಾಲಾ ಸೇರಿದಂತೆ ಉತ್ತರ ಭಾರತದ ಹಲವೆಡೆ ಶೂಟಿಂಗ್ ಪೂರ್ಣಗೊಳಿಸಿ ಮರಳಿದ್ದೇವೆ' ಎಂದು ಮಾತು ಆರಂಭಿಸಿ ಪವನ್, 'ನಾನು ಚಿತ್ರರಂಗಕ್ಕೆ ಬಂದು ಸುಮಾರು 16 ವರ್ಷವಾಯಿತು. ಈ ಅವಧಿಯಲ್ಲಿ ಹಾಸ್ಯ ಪ್ರಧಾನ, ಪ್ರೇಮಕಥೆ, ಆ್ಯಕ್ಷನ್ ಹೀಗೆ ಎಲ್ಲಾ ಜಾನರ್‌ನ ಸಿನಿಮಾಗಳನ್ನು ಮಾಡಿದ್ದೇನೆ. ಈ ಜಾನರ್‌ಗಳನ್ನು ಮಿಶ್ರಣ ಮಾಡಿ ಒಂದು ಸಿನಿಮಾ ಮಾಡಿದರೆ ಹೇಗಿರುತ್ತದೆ ಎನ್ನುವ ಆಲೋಚನೆ ಮೊದಲಿನಿಂದಲೇ ಇತ್ತು. ಈ ರಸಗಳೆಲ್ಲವನ್ನೂ ಸೇರಿಸಿ ಈ ಸಿನಿಮಾ ಮಾಡಿದ್ದೇನೆ' ಎಂದರು.

'ಈ ಚಿತ್ರದ ಚಿತ್ರಕಥೆ ರಚಿಸಲು ಸುಮಾರು ಒಂದೂವರೆ ವರ್ಷಕ್ಕೂ ಅಧಿಕ ಸಮಯ ತೆಗೆದುಕೊಂಡೆ. ಇದೊಂದು ಪಕ್ಕಾ ಕಮರ್ಷಿಯಲ್ ಎಂಟರ್‌ಟೇನ್ಮೆಂಟ್ ಸಿನಿಮಾ. ಕಥೆಯಲ್ಲಿ ಪಯಣವೂ ಇದೆ. ಕೋರ್ಟ್ ರೂಮ್ ಡ್ರಾಮಾ, ಕೌಟುಂಬಿಕ ಹಾಗೂ ಭಾವನಾತ್ಮಕ ಅಂಶಗಳು, ಸ್ನೇಹ ಹೀಗೆ ಹಲವು ಪದರಗಳು ಕಥೆಯೊಳಗಿವೆ' ಎಂದರು.

'ಕಥೆಗೆ ಅಗತ್ಯವಿದ್ದ ಕಾರಣ ಶಿವರಾಜ್‌ಕುಮಾರ್, ಜಯರಾಮ್, ಸಾಯಿಕುಮಾರ್ ಅವರಂಥ ದಿಗ್ಗಜರನ್ನೇ ಹಾಕಿಕೊಂಡಿದ್ದೇನೆ. ಅವರನ್ನು ಜೊತೆಯಾಗಿ ತೆರೆಯ ಮೇಲೆ ನೋಡುವುದೇ ಖುಷಿ. ಪ್ರಸ್ತುತ ಅಗತ್ಯ ಇದೆಯೋ ಇಲ್ಲವೋ ಪ್ರತಿ ಸಿನಿಮಾದಲ್ಲಿ ಸ್ಟಾರ್‌ಗಳನ್ನು ಕಥೆಗೆ ತುರುಕುವ ಸ್ಥಿತಿ ಇದೆ. ಆದರೆ ನಾವು ಯಾರನ್ನೂ ಒತ್ತಾಯಪೂರ್ವಕವಾಗಿ ಕಥೆಗೆ ಸೇರಿಸಿಲ್ಲ. ಮಲ್ಟಿಸ್ಟಾರರ್ ಸಿನಿಮಾ ಮಾಡಬೇಕು ಎನ್ನುವ ಹಟದಿಂದ ಹೀಗೆ ಮಾಡಿಲ್ಲ. ಎಲ್ಲರೂ ತಮ್ಮ ಪಾತ್ರಗಳನ್ನು ಅದ್ಭುತವಾಗಿ ನಿಭಾಯಿಸಿದ್ದಾರೆ. ಫಸ್ಟ್‌ಲುಕ್ ಅನ್ನು ಜನರು ಯಾವ ರೀತಿ ಸ್ವೀಕರಿಸುತ್ತಾರೆ ಎನ್ನುವ ಕುತೂಹಲವಿದೆ' ಎನ್ನುತ್ತಾ ಶೂಟಿಂಗ್ ಅನುಭವಗಳತ್ತ ಮಾತು ಹೊರಳಿಸಿದರು ಪವನ್.



ಶಿವರಾಜ್‌ಕುಮಾರ್



ದಲೈಲಾಮಾರಿಂದ ಆಶೀರ್ವಾದ ಪಡೆದ ಪವನ್ ಒಡೆಯರ್

'ಬೇಲ್' ಹೊಸ ಅನುಭವ

'ಉತ್ತರ ಭಾರತದ ಶೂಟಿಂಗ್ ಅನುಭವ ಚೆನ್ನಾಗಿತ್ತು. ವಾತಾವರಣವೂ ನಮ್ಮ ಶೂಟಿಂಗ್‌ಗೆ ಸೂಕ್ತವಾಗಿತ್ತು. ಧರ್ಮಶಾಲಾದಲ್ಲಿ ಟಿಬೆಟಿಯನ್ ಧಾರ್ಮಿಕ ನಾಯಕ ದಲೈಲಾಮಾ ಅವರನ್ನು ಭೇಟಿಯಾಗಿದ್ದೆವು. ಸುಮಾರು 80 ದಿನ ಶೂಟಿಂಗ್ ಮಾಡಿದ್ದೇವೆ. ಶಿವರಾಜ್‌ಕುಮಾರ್ ಅವರ ಜೊತೆ ಕೆಲಸ ಮಾಡುವುದೇ ಖುಷಿ. ಅವರೊಬ್ಬ ನಿರ್ದೇಶಕರ ನಟ. ಅವರು ನಿರ್ಮಾಪಕರ ದೃಷ್ಟಿಯಿಂದ ಆಲೋಚಿಸುವವರು. ಎಲ್ಲಿ ಖರ್ಚು ಉಳಿಸಬಹುದು ಎಂದು ಯೋಚಿಸುವವರು. ನನ್ನ ಈ ಸಿನಿಪಯಣದಲ್ಲಿ ಇಲ್ಲಿಯವರೆಗೆ ಮಾಡಿದ ಸಿನಿಮಾಗಳು ಒಂದು ಅನುಭವವಾದರೆ, 'ಬೇಲ್' ಹೊಸ ಅನುಭವ. ಸಿನಿಮಾದ ಸಣ್ಣಪುಟ್ಟ ಕೆಲಸಗಳು ಬಾಕಿ ಇವೆ. ಟೀಸರ್‌ನಲ್ಲಿ ಬಿಡುಗಡೆ ದಿನಾಂಕದ ಮಾಹಿತಿ ಹಂಚಿಕೊಳ್ಳುತ್ತೇವೆ. ಇದೇ ವರ್ಷದಲ್ಲೇ ಸಿನಿಮಾ ಬಿಡುಗಡೆ ಮಾಡಲಿದ್ದೇವೆ' ಎನ್ನುತ್ತಾ ಮಾತಿಗೆ ವಿರಾಮವಿತ್ತರು.

ಈ ಸಿನಿಮಾವನ್ನು ಕೆವಿಎನ್ ಪ್ರೊಡಕ್ಷನ್ಸ್‌ನ ವೆಂಕಟ್ ಕೆ.ನಾರಾಯಣ್ ನಿರ್ಮಾಣ ಮಾಡಿದ್ದಾರೆ. 'ಸಲಗ', 'ಎಕ್ಕ' ಖ್ಯಾತಿಯ ಸಂಜನಾ ಆನಂದ್, 'ದಿಯಾ', 'ದಸರಾ' ಖ್ಯಾತಿಯ ದೀಕ್ಷಿತ್ ಶೆಟ್ಟಿ ಅವರೂ ತಾರಾಬಳಗದಲ್ಲಿದ್ದಾರೆ. ❖

ಮೂರು ಸಿನಿಮಾಗಳು ತೆರೆಗೆ

ಚಂದನವನದ ತೆರೆಗಳಲ್ಲಿ ಇಂದು (ಮೇ 15) ಮೂರು ಸಿನಿಮಾಗಳು ತೆರೆಕಂಡಿವೆ.

ಲೋ ನವೀನ

ಗಾಯಕರಾಗಿ ಗುರುತಿಸಿಕೊಂಡಿರುವ ನವೀನ್ ಸಜ್ಜು ನಾಯಕನಾಗಿ ನಟಿಸಿರುವ ಮೊದಲ ಚಿತ್ರವಿದು. ಆರ್ಕೆಸ್ಟ್ರಾಗಳ ಮೂಲಕ ಗುರುತಿಸಿಕೊಂಡ ನವೀನ್ ಸಜ್ಜು ಅವರು, ಸುನೀಲ್ ಮೈಸೂರು ಹಾಗೂ ಅನೇಕ ಸ್ನೇಹಿತರ ಜೊತೆಗೂಡಿ ಈ ಚಿತ್ರದ ಕಥೆ ಬರೆದಿದ್ದಾರೆ. ಮನರಂಜನೆಯೇ ಪ್ರಧಾನವಾಗಿರುವ ಚಿತ್ರವನ್ನು ಧನುರ್ಧಾರಿ ಪವನ್ ನಿರ್ದೇಶಿಸಿದ್ದಾರೆ. ಬೆನ್ ಚಿಕ್ಕಸ್ವಾಮಿ ಅರ್ಪಿಸುವ, ಕೀರ್ತಿಸ್ವಾಮಿ ನಿರ್ಮಿಸಿರುವ ಈ ಚಿತ್ರಕ್ಕೆ ರಿಷಿಕೇಶ್ ಛಾಯಾಚಿತ್ರಗ್ರಹಣ, ವಿನಾಯಕ್ ಆಚಾರ್ಯ ನೃತ್ಯ ನಿರ್ದೇಶನವಿದೆ. ನವೀನ್ ಸಜ್ಜು ಅವರೇ ಸಂಗೀತ ಸಂಯೋಜಿಸಿರುವ ಐದು ಹಾಡುಗಳು ಚಿತ್ರದಲ್ಲಿವೆ.

ಶೇರ್

'ಕನ್ನಡತಿ' ಧಾರಾವಾಹಿ ಖ್ಯಾತಿಯ ಕಿರಣ್ ರಾಜ್ ಈ ಚಿತ್ರದ ಮುಖ್ಯಭೂಮಿಕೆಯಲ್ಲಿದ್ದಾರೆ. ಪ್ರಸಿದ್ಧ್ ನಿರ್ದೇಶನದಲ್ಲಿ ಈ ಸಿನಿಮಾ ಮೂಡಿಬಂದಿದ್ದು, ಗ್ರೇಸ್ ರಾಜ್ ಪ್ರೊಡಕ್ಷನ್ ಲಾಂಛನದಲ್ಲಿ ಸುದರ್ಶನ್ ಸುಂದರರಾಜ್ ನಿರ್ಮಾಣ ಮಾಡಿದ್ದಾರೆ. ಸಿನಿಮಾವು ಆ್ಯಕ್ಷನ್ ಥ್ರಿಲ್ಲರ್ ಜಾನರ್‌ನಲ್ಲಿದ್ದು, ಐದು ಅದ್ದೂರಿಯಾದ ಸಾಹಸ ಸನ್ನಿವೇಶಗಳನ್ನು ಒಳಗೊಂಡಿದೆ. ಕಿಟ್ಟಿ ಕೌಶಿಕ್ ಛಾಯಾಚಿತ್ರಗ್ರಹಣ, ವೆಂಕಿ ಯುಡಿವಿ ಸಂಕಲನ ಹಾಗೂ ಗುಮ್ಮಿನೇನಿ ವಿಜಯ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ಕ್ರಿಸ್ (ಗಿಲ್ಲಿ), ಸುರೇಖಾ, ತನೀಷಾ ಕುಪ್ಪಂಡ, ಯಶ್ ಶೆಟ್ಟಿ, ಶೋಭರಾಜ್, ಬಲ ರಾಜವಾಡಿ, ವೀಣಾ ಸುಂದರ್ ತಾರಾಬಳಗದಲ್ಲಿದ್ದಾರೆ.



ಕಿರಣ್‌ರಾಜ್

ಶಿಖಂಡಿ

ಪೋಲಾ ಪ್ರವೀಣ್ ಕುಮಾರ್ ನಿರ್ಮಾಣದ ಹಾಗೂ ಗುರುಮೂರ್ತಿ ವಿ. ನಿರ್ದೇಶನದ ಸಿನಿಮಾವಿದು. ಮಾಲಾಶ್ರೀ ಅವರು ಅಭಿನಯಿಸಿರುವ 'ಮಾರಕಾಸ್ತ್ರ' ಸಿನಿಮಾ ನಿರ್ದೇಶಿಸಿದ್ದ ಗುರುಮೂರ್ತಿ ಈ ಸಿನಿಮಾ ನಿರ್ದೇಶಿಸಿದ್ದಾರೆ. ಮಹಾಭಾರತದಲ್ಲಿ ಬರುವ 'ಶಿಖಂಡಿ' ಪಾತ್ರವನ್ನು ಆಧರಿಸಿರುವ ಕಥಾಹಂದರ ಚಿತ್ರದಲ್ಲಿದೆ. ಯುವರಾಜ್ ನಾಯಕನಾಗಿ, ಖ್ಯಾತಿ ನಾಯಕಿಯಾಗಿ ನಟಿಸಿದ್ದಾರೆ. ಮೊದಲು ಕನ್ನಡದಲ್ಲಿ ಸಿನಿಮಾ ಬಿಡುಗಡೆಯಾಗಲಿದ್ದು, ಆನಂತರ ಉಳಿದ ಭಾಷೆಗಳಲ್ಲಿ ಡಬ್ ಆಗಿ ಪ್ಯಾನ್ ಇಂಡಿಯಾ ಚಿತ್ರವಾಗಿ ತೆರೆಗೆ ಬರಲಿದೆ. ನಿಖಿತಾಸ್ವಾಮಿ, ನೀತು, ವೇದ, ಚಾಂದಿನಿ ಚಿತ್ರದ ತಾರಾಬಳಗದಲ್ಲಿದ್ದಾರೆ. ಮಂಜು ಕವಿ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ❖



ಯುವರಾಜ್

ಗುಳಿ ಕೆನ್ನೆಯ ರಚಿತಾ ರಾಮ್ @14

2013ರಲ್ಲಿ ತೆರೆಕಂಡ 'ಬುಲ್ ಬುಲ್' ಸಿನಿಮಾದ ಮೂಲಕ ನಾಯಕಿಯಾಗಿ ಚಂದನವನದಲ್ಲಿ ಪಯಣ ಆರಂಭಿಸಿದ್ದ ರಚಿತಾ ರಾಮ್ ಪಯಣಕ್ಕೀಗ 14 ವರ್ಷ. ಈ ಸಂದರ್ಭದಲ್ಲಿ ಕನ್ನಡದಲ್ಲಷ್ಟೇ ಅಲ್ಲ, ಪರಭಾಷೆಗಳಲ್ಲೂ ರಚಿತಾ ಅವರ ಹೊಸ ಪ್ರಾಜೆಕ್ಟ್‌ಗಳ ಸುಳಿವು ಸಿಕ್ಕಿದೆ.

ಕಿರುತೆರೆಯ 'ಅರಸಿ' ಧಾರಾವಾಹಿಯಲ್ಲಿ ವಿಂದ್ಯಾ ರಾಮ್ ಆಗಿ ಬಂದು 'ಬುಲ್ ಬುಲ್' ಬಳಿಕ ರಚಿತಾ ರಾಮ್ ಆಗಿ ಬದಲಾದರು. ಮೊದಲ ಸಿನಿಮಾದಲ್ಲೇ ದರ್ಶನ್ ಅವರ ಜೊತೆ ತೆರೆ ಹಂಚಿಕೊಂಡು ಸುದ್ದಿಯಾದರು. ಇಂದಿಗೂ ಈ ಗುಳಿ ಕೆನ್ನೆಯ ನಟಿ ಸ್ಯಾಂಡಲ್‌ವುಡ್‌ನ 'ಬುಲ್ ಬುಲ್' ಎಂದು ಕರೆಸಿಕೊಳ್ಳುತ್ತಾರೆ. ಅವರಿಗೆ 'ಅಯೋಗ್ಯ-2' ತಂಡ 'ಲೇಡಿ ಸೂಪರ್‌ಸ್ಟಾರ್' ಎನ್ನುವ ಬಿರುದನ್ನೂ ನೀಡಿದೆ.

ಸುದೀಪ್, ಪುನೀತ್ ರಾಜ್‌ಕುಮಾರ್, ಶಿವರಾಜ್‌ಕುಮಾರ್, ರಮೇಶ್ ಅರವಿಂದ್–ಹೀಗೆ ಎಲ್ಲ ಸ್ಟಾರ್‌ಗಳ ಜೊತೆ ನಟಿಸಿ ಸೈ ಎನಿಸಿಕೊಂಡಿರುವ ರಚಿತಾ ರಾಮ್, ತಮಿಳಿನ ಖ್ಯಾತ ನಟ ರಜನಿಕಾಂತ್ ಅವರ ಜೊತೆಗೆ 'ಕೂಲಿ' ಸಿನಿಮಾದಲ್ಲಿಯೂ ವಿಶೇಷ ಪಾತ್ರದಲ್ಲಿ ನಟಿಸಿ ಗಮನಸೆಳೆದಿದ್ದಾರೆ. ಅವರ ಸಿನಿ ಗ್ರಾಫ್‌ಗೆ 'ಕೂಲಿ' ಸಿನಿಮಾ ದೊಡ್ಡ ತಿರುವನ್ನೇ ನೀಡಿದೆ. ಡಿಂಪಲ್ ಕ್ವೀನ್ ನೋಡಿದಷ್ಟು ಸಿಂಪಲ್ ಅಲ್ಲ ಎನ್ನುವಂತೆ ಆ ಸಿನಿಮಾದ ಪಾತ್ರವನ್ನು ಅವರು ನಿಭಾಯಿಸಿದ್ದರು. ಜಡೇಶ್ ಕೆ.ಹಂಪಿ ನಿರ್ದೇಶನದ 'ಲ್ಯಾಂಡ್‌ಲಾರ್ಡ್'ನಲ್ಲೂ ಭಿನ್ನ ಪಾತ್ರಕ್ಕೆ ರಚಿತಾ ಬಣ್ಣಹಚ್ಚಿದ್ದರು.

ಸದ್ಯ ರಚಿತಾ ರಾಮ್ ಅವರು ಧ್ರುವ ಅವರ ಜೊತೆ 'ಕ್ರಿಮಿನಲ್', ಸತೀಶ್ ನೀನಾಸಂ ಜೊತೆ 'ಅಯೋಗ್ಯ-2' ಸಿನಿಮಾದಲ್ಲಿ ನಟಿಸುತ್ತಿದ್ದಾರೆ. ಜೊತೆಗೆ ತಮಿಳಿನಲ್ಲಿ ದೊಡ್ಡ ನಿರ್ಮಾಣ ಸಂಸ್ಥೆಯ ಸಿನಿಮಾವೊಂದರ ಕುರಿತು ಮಾತುಕತೆ ನಡೆದಿದ್ದು, ತೆಲುಗಿನಲ್ಲಿ ಎರಡು ಸಿನಿಮಾಗಳು ಈ ತಿಂಗಳಲ್ಲಿ ಘೋಷಣೆಯಾಗಲಿವೆ ಎಂಬ ಮಾಹಿತಿ ದೊರಕಿದೆ. ❖



ರಚಿತಾ ರಾಮ್

ಹೊಸಬರೆಂದ್ರು ಸುಮ್ನೆ ತಮಾಷೆಗೆ

ಘಟಕಲ ಸುರೇಶ್ ಬಾಬು ನಿರ್ದೇಶನದ 'ಸುಮ್ನೆ ತಮಾಷೆಗೆ' ಸಿನಿಮಾದ ಸ್ಕ್ರಿಪ್ಟ್ ಪೂಜೆ ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆಯಿತು.

ಈ ಹಿಂದೆ 'ಕಡಲ ತೀರದ ಭಾರ್ಗವ' ನಿರ್ದೇಶಿಸಿದ್ದ ಪನ್ನಗ ಹಾಗೂ ಅವರ ಸ್ನೇಹಿತರು, 'ಯಾವ ಮೋಹನ ಮುರಳಿ ಕರೆಯಿತು' ನಿರ್ದೇಶಕ ವಿಶ್ವಾಸ್ ಕೃಷ್ಣ ಈ ಸಿನಿಮಾಗೆ ಹಣ ಹೂಡುತ್ತಿದ್ದಾರೆ. ಸುರೇಶ್ ಬಾಬು ಅವರಿಗೆ ಇದು ಚೊಚ್ಚಲ ಚಿತ್ರ. 'ಕಡಲ ತೀರದ ಭಾರ್ಗವ', 'ಯಾವ ಮೋಹನ ಮುರಳಿ ಕರೆಯಿತು' ಹಾಗೂ 'ಪೀಟರ್' ಸಿನಿಮಾಗಳಲ್ಲಿ ನಟಿಸಿರುವ ಪಟೇಲ್ ವರುಣ್ ರಾಜು 'ಸುಮ್ನೆ ತಮಾಷೆಗೆ' ಸಿನಿಮಾದಲ್ಲಿ ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಹರೀಶ್, ದರ್ಶನ್ ಹಾಗೂ ಮಾಧವ ತಾರಾಬಳಗದಲ್ಲಿದ್ದಾರೆ. ಸಾಮ್ರಾಟ್ ಸಂಗೀತ ನಿರ್ದೇಶನ, ಪುನೀತ್ ಓಂಕಾರ್ ಸಾಹಸ ನಿರ್ದೇಶನ ಚಿತ್ರಕ್ಕಿದೆ. ❖



ಸುರೇಶ್ ಬಾಬು





ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕು ಮುಧೋಳ ಗ್ರಾಮದಲ್ಲಿರುವ ಶ್ರೀ ಲಕ್ಷ್ಮೀ ವೆಂಕಟೇಶ್ವರ ಕಲ್ಯಾಣ ಮಂಟಪದ ಗೋಡೆ ಹಾಗೂ ಪತ್ರಾಸ್‌ಗಳು ನೆಲಕ್ಕುರುಳಿದವು (ಎಡಚಿತ್ರ) ವಿರಾಜಪೇಟೆ – ಮೂರ್ನಾಡು ಮುಖ್ಯ ರಸ್ತೆಯಲ್ಲಿ ಮಳೆ, ಗಾಳಿಯಿಂದ ಗುರುವಾರ ಬಿದ್ದ ಮರವನ್ನು ಗೋಣಿಕೊಪ್ಪಲು ಕಾವೇರಿ ಕಾಲೇಜಿನ ಎನ್‌ಸಿಸಿ ವಿದ್ಯಾರ್ಥಿಗಳು ತೆರವುಗೊಳಿಸಿದರು

ಸಿಡಿಲು ಬಡಿದು ಮೂವರು ಸಾವು

ಬೆಳಗಾವಿ ಜಿಲ್ಲೆಯಲ್ಲಿ ಮನೆಗಳ ಚಾವಣಿಗೆ ಧಕ್ಕೆ, ಕಲಬುರಗಿ ಜಿಲ್ಲೆಯಲ್ಲಿ ಕಲ್ಯಾಣ ಮಂಟಪಕ್ಕೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಗುರುವಾರ ಬಿರುಗಾಳಿ ಸಹಿತ ಮಳೆಯಾಗಿದ್ದು, ದಾವಣಗೆರೆ, ಕಲಬುರಗಿ ಮತ್ತು ಉಡುಪಿ ಜಿಲ್ಲೆಯಲ್ಲಿ ಸಿಡಿಲು ಬಡಿದು ಮೂವರು ಮೃತಪಟ್ಟಿದ್ದಾರೆ. ಕಲಬುರಗಿ ಜಿಲ್ಲೆ ಸೇಡಂ ತಾಲ್ಲೂಕಿನ ಪಾಕಾಲ ಗ್ರಾಮದ ಲಕ್ಷ್ಮಣ ಬಡಿಗೇರ್ (62), ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಮರಡಿ ಗ್ರಾಮದ ದುಂಡಪ್ಪ ಬಿ.ಗವನಾಳ ಅಲಿಯಾಸ್ ಅಜಯ್ (19) ಮತ್ತು ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಹೆಮ್ಮಾಡಿ ಆರಾಟೆಯ ಬಳಿ ಪಂಜಾಬ್‌ನ ಕಾರ್ಮಿಕ ಅಶುತೋಷ್ (35) ಮೃತಪಟ್ಟಿದ್ದಾರೆ.



ಹಾವೇರಿ ತಾಲ್ಲೂಕಿನ ಹೊಸರಿತ್ತಿ ಗ್ರಾಮದಲ್ಲಿ ಗಾಳಿ ಸಹಿತ ಮಳೆಯಿಂದ ದರ್ಗಾವೊಂದರ ಮೇಲೆ ಮರ ಬಿದ್ದು ಹಾನಿಯಾಗಿದೆ

ಪಾಕಾಲ್ ಗ್ರಾಮದಲ್ಲಿ ಮೃತಪಟ್ಟಿದ್ದ ಬಾಲರಾಜ್ ಅವರ ಅಂತ್ಯಕ್ರಿಯೆಗೆ ಹೋಗಿದ್ದಾಗ, ಸಿಡಿಲು–ಗುಡುಗು ಸಮೇತ ಭಾರಿ ಮಳೆ ಆರಂಭವಾಯಿತು. ಮಳೆಯಿಂದ ರಕ್ಷಿಸಿಕೊಳ್ಳಲು ಮರವೊಂದರ ಬಳಿ ತೆರಳಿದ ಲಕ್ಷ್ಮಣ ಬಡಿಗೇರ ಅವರಿಗೆ ಸಿಡಿಲು ಹೊಡೆದಿದೆ. ಸಿಡಿಲಿನ ಹೊಡೆತಕ್ಕೆ ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಮರಡಿ ಗ್ರಾಮದಿಂದ ಕುರಿಗಳೊಂದಿಗೆ ವಲಸೆ ಬಂದಿದ್ದ ದುಂಡಪ್ಪ ಅವರ ಕುಟುಂಬ ದಾವಣಗೆರೆ ತಾಲ್ಲೂಕಿನ ಮುದಹದಡಿ ಗ್ರಾಮದಲ್ಲಿ ಬೀಡುಬಿಟ್ಟಿತ್ತು. ಕುರಿ ಮೇಯಿಸುತ್ತಿದ್ದ ಅವರು ಮಳೆಯಿಂದ ರಕ್ಷಣೆ ಪಡೆಯಲು ಮರದಡಿ ನಿಂತಿದ್ದರು. ಈ ವೇಳೆ ಸಿಡಿಲು ಬಡಿದು ಮೃತಪಟ್ಟಿದ್ದಾರೆ' ಎಂದು ಹದಡಿ ಠಾಣೆಯ ಪೊಲೀಸರು ಮಾಹಿತಿ ನೀಡಿದ್ದಾರೆ.

ಹೆಮ್ಮಾಡಿ ಆರಾಟೆಯ ರಾಷ್ಟ್ರೀಯ ಹೆದ್ದಾರಿಯ ಸೇತುವೆ ಕಾಮಗಾರಿ ನಿರ್ವಹಿಸುತ್ತಿದ್ದ ಅಶುತೋಷ್ ಸಿಡಿಲು ಬಡಿದು ನವಜೀತ್ ಸಿಂಗ್ ಎನ್ನುವವರು ಗಾಯಗೊಂಡಿದ್ದಾರೆ.

ಕಲಬುರಗಿ ವರದಿ: ಗುರುವಾರ ಸಂಜೆ ಸುರಿದ ಬಿರುಗಾಳಿ ಸಹಿತ ಮಳೆಗೆ ಸೇಡಂ ತಾಲ್ಲೂಕಿನ ಮುಧೋಳ ಗ್ರಾಮದ ಶ್ರೀ ಲಕ್ಷ್ಮಿ ವೆಂಕಟೇಶ್ವರ ಕಲ್ಯಾಣ ಮಂಟಪದ ತಡೆಗೋಡೆ ಕುಸಿದಿದೆ, ತಗಡಿನ ಶೀಟ್‌ಗಳು ಹಾರಿ ಹೋಗಿವೆ. ಯಾದಗಿರಿ ಹಾಗೂ ಶಹಾಪುರ ಪಟ್ಟಣಗಳಲ್ಲಿ ಉತ್ತಮ ಮಳೆಯಾಗಿದೆ. ಬೀದರ್, ಭಾಲ್ಕಿ, ಹುಲಸೂರ, ಭಾಲ್ಕಿಯಲ್ಲಿ ಬುಧವಾರ ರಾತ್ರಿ ಮಳೆಯಾಗಿದೆ. ಬೀದರ್ ನಗರದಲ್ಲಿ ಒಂದು ಗಂಟೆ ಕಾಲ ಗುಡುಗು ಮಿಂಚು ಸಹಿತ ಮಳೆಯಾಯಿತು.

30 ಮನೆಗಳ ಚಾವಣಿಗೆ ಹಾನಿ

ಬೆಳಗಾವಿ, ಹಾವೇರಿ, ಉತ್ತರ ಕನ್ನಡ ಮತ್ತು ವಿಜಯನಗರ ಜಿಲ್ಲೆಯ ವಿವಿಧೆಡೆ ಬುಧವಾರ ರಾತ್ರಿ ಮತ್ತು ಗುರುವಾರ ಧಾರಾಕಾರ ಮಳೆ ಸುರಿಯಿತು.

ಬೆಳಗಾವಿ ಜಿಲ್ಲೆಯ ಕಾಗವಾಡ ಸೇರಿ ಸಂಬರಗಿ, ನಾಗನೂರ, ತಾವಂಶಿ ಸೇರಿ ಹಲವು ಗ್ರಾಮಗಳಲ್ಲಿ ಗಾಳಿಯ ಅಬ್ಬರಕ್ಕೆ 30ಕ್ಕೂ ಹೆಚ್ಚು ಮನೆಗಳ ಚಾವಣಿಗಳು ಹಾರಿಹೋಗಿವೆ. ಚಾವಣಿ ಕುಸಿದು ಯುವಕನೊಬ್ಬನಿಗೆ ಗಾಯವಾಗಿದೆ. ದಾಳಿಂಬೆ, ಮಾವು ಸೇರಿ ಹಲವು ಬೆಳೆಗಳು ನೆಲಕಚ್ಚಿವೆ. ಕಾಗವಾಡದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಚಾವಣಿ ಹಾರಿಹೋಗಿದೆ. ಹಾವೇರಿ, ಶಿಗ್ಗಾವಿ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆಯ ಭಟ್ಕಳ, ಸಿದ್ದಾಪುರದಲ್ಲಿ ಮತ್ತು ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ನಿಟ್ಟೂರು, ನಂದ್ಯಾಲ, ಯಡಿಹಳ್ಳಿಯಲ್ಲಿ ಮಳೆ ಸುರಿಯಿತು.

20 ವಿದ್ಯುತ್ ಕಂಬಗಳು ಧರೆಗೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆ ಗುರುವಾರ ರಾತ್ರಿ ಗಾಳಿ ಮತ್ತು ಗುಡುಗಿನಿಂದ ಕೂಡಿದ ಮಳೆಯಾಗಿದೆ. ಬೆಳ್ತಂಗಡಿ ತಾಲ್ಲೂಕಿನ ಕಡಿರುದ್ಯಾವರ ಗ್ರಾಮದಲ್ಲಿ ಸುಮಾರು 20 ವಿದ್ಯುತ್ ಕಂಬಗಳು ಧರೆಗುರುಳಿವೆ. ಕೊಲ್ಲಿ-ಕಿಲ್ಲೂರು ರಸ್ತೆಗೆ ಮರ ಉರುಳಿ ಬಿದ್ದು, ಎರಡು ವಿದ್ಯುತ್ ಕಂಬಗಳು ಮುರಿದಿವೆ.

ಸಂಜೆ ವೇಳೆ ಭಾರಿ ಮಳೆ ಸುರಿದ ಸಂದರ್ಭದಲ್ಲಿ ಬಜಪೆಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನಗಳನ್ನು ಇಳಿಸುವುದಕ್ಕೆ ಸಮಸ್ಯೆ ಎದುರಾಗಿತ್ತು. ಬೆಂಗಳೂರಿನಿಂದ ಮಂಗಳೂರಿಗೆ ಬಂದಿದ್ದ ಎರಡು ವಿಮಾನಗಳು (ಇಂಡಿಗೊ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್) ಕೆಲ ಹೊತ್ತು ಆಕಾಶದಲ್ಲೇ ಸುತ್ತು ಹೊಡೆದವು. ಬಳಿಕ ಅವುಗಳನ್ನು ಸುರಕ್ಷಿತವಾಗಿ ಇಳಿಸಲಾಯಿತು ಎಂದು ವಿಮಾಣ ನಿಲ್ದಾಣದ ಮೂಲಗಳು ತಿಳಿಸಿವೆ.

ದಾವಣಗೆರೆ ವರದಿ: ದಾವಣಗೆರೆ ಜಿಲ್ಲೆಯ ದಾವಣಗೆರೆ ನಗರ, ಹೊನ್ನಾಳಿ, ಹರಿಹರ ಹಾಗೂ ಚನ್ನಗಿರಿ ತಾಲ್ಲೂಕಿನ ವಿವಿಧೆಡೆ ಗುರುವಾರ ಸಂಜೆ ಬಿರುಗಾಳಿ ಸಹಿತ ಉತ್ತಮ ಮಳೆಯಾಗಿದೆ. ಬೇಸಿಗೆ ಹಂಗಾಮಿನ ಭತ್ತ, ತೋಟಗಾರಿಕೆ ಬೆಳೆಗಳಿಗೆ ಅನುಕೂಲವಾಗಿದೆ. ಬಿರುಗಾಳಿಗೆ ಹಲವೆಡೆ ಮರ, ಗಿಡಗಳು ಧರೆಗೆ ಉರುಳಿವೆ.

ಶಿವಮೊಗ್ಗ ನಗರ ಸೇರಿದಂತೆ ಜಿಲ್ಲೆಯ ಹಲವೆಡೆ ಉತ್ತಮ ಮಳೆಯಾಗಿದೆ. ತೀರ್ಥಹಳ್ಳಿ ಭಾಗದಲ್ಲಿ ಆಲಿಕಲ್ಲು, ಕಾರ್ಗಲ್‌ನಲ್ಲಿ ಬಿರುಸಿನ ಮಳೆಯಾಗಿದೆ. ಹೊಸನಗರ, ರಿಪ್ಪನ್‌ಪೇಟೆ, ಕಾರ್ಗಲ್, ಆನವಟ್ಟಿ, ಸಾಗರ, ತುಮರಿಯಲ್ಲಿ ಉತ್ತಮ ಮಳೆಯಾಗಿದೆ. ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ಪಟ್ಟಣದಲ್ಲಿ ಸಂಜೆ ಬಿರುಗಾಳಿ, ಗುಡುಗು– ಸಿಡಿಲು ಸಹಿತ ಮಳೆಯಾಗಿದೆ.

ಮಡಿಕೇರಿ ವರದಿ: ಕೊಡಗು ಜಿಲ್ಲೆಯ ವಿರಾಜಪೇಟೆ– ಮೂರ್ನಾಡು ಮುಖ್ಯರಸ್ತೆಯಲ್ಲಿ ಅರಮೇರಿ ಸಮೀಪ ಮಳೆ, ಗಾಳಿಗೆ ಮರವೊಂದು ರಸ್ತೆಗೆ ಉರುಳಿ ಬಿದ್ದು ಸಂಚಾರ ಅಸ್ತವ್ಯಸ್ತಗೊಂಡಿತ್ತು.

ಅದೇ ವೇಳೆ ಪುತ್ತೂರಿನಲ್ಲಿ ವಿಪತ್ತು ನಿರ್ವಹಣಾ ತರಬೇತಿ ಮುಗಿಸಿಕೊಂಡು ವಾಪಸ್ ತೆರಳುತ್ತಿದ್ದ ಗೋಣಿಕೊಪ್ಪಲಿನ ಕಾವೇರಿ ಕಾಲೇಜಿನ ಎನ್‌ಸಿಸಿ ವಿದ್ಯಾರ್ಥಿಗಳು ಮರವನ್ನು ತೆರವುಗೊಳಿಸಿದರು. ಎನ್‌ಸಿಸಿ ಘಟಕದ ಡಾ. ಲೆಫ್ಟಿನೆಂಟ್ ಅಕ್ರಂ ಹಾಗೂ ಲೆಫ್ಟಿನೆಂಟ್ ಲೇಪಾಕ್ಷಿ ಅವರ ನೇತೃತ್ವದಲ್ಲಿ ವಿದ್ಯಾರ್ಥಿಗಳಾದ ಜಿತಿನ್, ರವಿಕುಮಾರ್, ಕಾರ್ತಿಕ್, ಆಮೀನ್, ಇಶಾನಿ, ಪ್ರಿನ್ಸಿ, ದೇಚಮ್ಮ, ಶ್ರೀನಿಧಿ, ವೈಷ್ಣವಿ, ಪ್ರದೀಪ್, ಸೋನಿಕಾ, ಮನೋಜ್ ಹಾಗೂ ಮಾಧವನ್ ಈ ಕಾರ್ಯಾಚರಣೆ ನಡೆಸಿದರು.

ಉತ್ತರ ಪ್ರದೇಶ: ಬಿರುಗಾಳಿ ಮಳೆ, 111 ಜನರ ಸಾವು



ಉತ್ತರ ಪ್ರದೇಶದ ಬರೇಲಿ ಜಿಲ್ಲೆಯಲ್ಲಿ ಬಿರುಗಾಳಿಗೆ ವ್ಯಕ್ತಿಯೊಬ್ಬರು ಚಾವಣಿಯೊಂದಿಗೆ ಸುಮಾರು 50 ಅಡಿ ದೂರ ಹಾರಿದ ದೃಶ್ಯ –ಪಿಟಿಐ ಚಿತ್ರ

ಲಖನೌ (ಪಿಟಿಐ): ಉತ್ತರ ಪ್ರದೇಶದ ಕೆಲ ಜಿಲ್ಲೆಗಳಲ್ಲಿ ಸುರಿದ ಭಾರಿ ಮಳೆ ಮತ್ತು ಬಿರುಗಾಳಿಗೆ ಕನಿಷ್ಠ 111 ಜನರು ಮೃತಪಟ್ಟಿದ್ದಾರೆ. ಹಲವು ಮರಗಳು, ವಿದ್ಯುತ್ ಕಂಬಗಳು ಉರುಳಿದ್ದು, ಹಲವು ಮನೆಗಳು ಹಾನಿಗೊಂಡಿವೆ.

ರಾಜ್ಯದ ವಿವಿಧ ಭಾಗಗಳಲ್ಲಿ ಬುಧವಾರ ರಾತ್ರಿ ಸುರಿದ ಗುಡುಗು, ಸಿಡಿಲು ಸಹಿತ ಭಾರಿ ಮಳೆಯಿಂದ ಬಾಧಿತ ಕುಟುಂಬಗಳಿಗೆ ತುರ್ತಾಗಿ ಪರಿಹಾರ ತಲುಪುವಂತೆ ಕ್ರಮ ತೆಗೆದುಕೊಳ್ಳಬೇಕು ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

'ಮೇ 13ರಂದು ಬಿರುಗಾಳಿ, ಆಲಿಕಲ್ಲು ಸಹಿತ ಭಾರಿ ಮಳೆ ಸುರಿದಿದ್ದು, ಕನಿಷ್ಠ 111 ಜನರು ಮೃತಪಟ್ಟು, 72 ಜನರಿಗೆ ಗಾಯಗಳಾಗಿವೆ. ಅಲ್ಲದೆ 170 ಜಾನುವಾರುಗಳು ಅಸುನೀಗಿದ್ದು, 227 ಮನೆಗಳಿಗೆ ಹಾನಿಯಾಗಿದೆ' ಎಂದು ಪರಿಹಾರ ಆಯುಕ್ತರ ಕಚೇರಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

ಪ್ರಯಾಗರಾಜ್‌ನಲ್ಲಿ 24, ಭದೋಹಿ ಜಿಲ್ಲೆಯಲ್ಲಿ 16, ಫತೇಹಪುರದಲ್ಲಿ 16, ಬದೌನ್‌ನಲ್ಲಿ 5, ಪ್ರತಾಪ್‌ಗಡದಲ್ಲಿ ನಾಲ್ವರು, ಕಾನ್ಪುರದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಜಿಲೆಟಿನ್ ಪತ್ತೆ: ತನಿಖೆ ತೀವ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಗ್ಗಲೀಪುರ ಪೊಲೀಸ್ ಠಾಣಾ ವ್ಯಾಪ್ತಿಯ ವಡೇರಹಳ್ಳಿ ಸೇತುವೆ ಬಳಿ ಜಿಲೆಟಿನ್ ಕಡ್ಡಿಗಳು ಪತ್ತೆಯಾದ ಪ್ರಕರಣದ ತನಿಖೆ ನಡೆಸುತ್ತಿರುವ ಬೆಂಗಳೂರು ದಕ್ಷಿಣ ಜಿಲ್ಲೆ ಹಾಗೂ ಸಿಸಿಬಿ ಪೊಲೀಸರು ಇದುವರೆಗೂ 100ಕ್ಕೂ ಹೆಚ್ಚು ಮಂದಿಯನ್ನು ವಿಚಾರಣೆ ನಡೆಸಿದ್ದಾರೆ. ಆದರೂ, ಆರೋಪಿಗಳ ಸುಳಿವು ಸಿಕ್ಕಿಲ್ಲ.

ಮೇ 10ರಂದು ಆರ್ಟ್ ಆಫ್ ಲಿವಿಂಗ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಪಾಲ್ಗೊಂಡಿದ್ದರು. ಅವರು ಸಾಗಿದ ನೈಸ್ ರಸ್ತೆಯ ಪಕ್ಕದ ಸೇತುವೆ ಬಳಿ ಜಿಲೆಟಿನ್ ಕಡ್ಡಿಗಳು, ಅಗರಬತ್ತಿ ಹಾಗೂ ಕರ್ಪೂರ ತುಂಬಿದ್ದ ರಟ್ಟಿನ ಬಾಕ್ಸ್ ಪತ್ತೆಯಾಗಿತ್ತು. ಆ ಪ್ರಕರಣದ ತನಿಖೆಗೆ ವಿಶೇಷ ತಂಡಗಳನ್ನು ರಚಿಸಲಾಗಿದ್ದು, ತಂಡಗಳು ತನಿಖೆ ಚುರುಕುಗೊಳಿಸಿವೆ.

'ಬೆಂಗಳೂರು ದಕ್ಷಿಣ ಜಿಲ್ಲೆಯ ಎಸ್‌ಪಿ ಶ್ರೀನಿವಾಸ್‌ಗೌಡ ನೇತೃತ್ವದಲ್ಲಿ ಆರು ವಿಶೇಷ ಪೊಲೀಸ್ ತಂಡಗಳನ್ನು ರಚಿಸಲಾಗಿದೆ. ತಾಂತ್ರಿಕ ಸುಳಿವು ಆಧರಿಸಿ ತಮಿಳುನಾಡು ಜತೆಗೆ ಮಹಾರಾಷ್ಟ್ರಕ್ಕೂ ಒಂದು ತಂಡವನ್ನು ಕಳುಹಿಸಲಾಗಿದೆ. ತಮಿಳುನಾಡು ಹಾಗೂ ಮಹಾರಾಷ್ಟ್ರದಲ್ಲಿ ಶಂಕಿತರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ. ಕನಕಪುರ, ರಾಮನಗರದಲ್ಲಿ ಕಲ್ಲು ಕ್ವಾರಿ ನಡೆಸುವ ಕೆಲವು ಮಾಲೀಕರು ಹಾಗೂ ಅಲ್ಲಿ ಕೆಲಸ ಮಾಡುವ ಕಾರ್ಮಿಕರಿಗೂ ನೋಟಿಸ್ ನೀಡಿ, ವಿಚಾರಣೆ ನಡೆಸಲಾಗಿದೆ. ಯಾವುದೇ ಸುಳಿವು ಸಿಕ್ಕಿಲ್ಲ' ಎಂದು ಮೂಲಗಳು ಹೇಳಿವೆ.

ಲೋಹಿತ್ ವಿಚಾರಣೆ

ಮೇ 10ರಂದೇ ಬೆಳಿಗ್ಗೆ 7.30ರ ಸುಮಾರಿಗೆ ಎಚ್‌ಎಎಲ್ ವಿಮಾನ ನಿಲ್ದಾಣ ಹಾಗೂ ಆರ್ಟ್ ಆಫ್ ಲಿವಿಂಗ್ ಆವರಣದಲ್ಲಿ ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಒಡ್ಡಿದ್ದ ಕೋರಮಂಗಲದ ಲೋಹಿತ್ ಅವರನ್ನು ಆಡುಗೋಡಿಯ ಟೆಕ್ನಿಕಲ್ ಸೆಲ್‌ನಲ್ಲಿ ಇರಿಸಿ ವಿಚಾರಣೆ ನಡೆಸಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

ಚುನಾವಣಾ ಆಯೋಗ ಸ್ವತಂತ್ರವಾಗಿರಬೇಕು: 'ಸುಪ್ರೀಂ'

ನವದೆಹಲಿ(ಪಿಟಿಐ): 'ಮುಕ್ತ ಹಾಗೂ ನಿಷ್ಪಕ್ಷಪಾತ ಚುನಾವಣೆಗಳನ್ನು ನಡೆಸುವುದು ಸಂವಿಧಾನದ ಮೂಲ ರಚನೆಯ ಭಾಗವೇ ಆಗಿದೆ. ಹೀಗಾಗಿ, ಚುನಾವಣಾ ಆಯೋಗವು ಸ್ವತಂತ್ರವಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಇದನ್ನು ಖಾತ್ರಿಪಡಿಸಲು ಸಾಧ್ಯ' ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಮುಖ್ಯ ಚುನಾವಣಾ ಆಯುಕ್ತ (ಸಿಇಸಿ) ಹಾಗೂ ಚುನಾವಣಾ ಆಯುಕ್ತರ (ಇ.ಸಿ) ನೇಮಕಕ್ಕೆ ಸಂಬಂಧಿಸಿ ರೂಪಿಸಲಾಗಿರುವ ನೂತನ ಕಾನೂನಿನ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿ ಸಲ್ಲಿಕೆಯಾಗಿರುವ 6 ಅರ್ಜಿಗಳ ಕುರಿತು ಅಂತಿಮ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್ ಈ ಮಾತು ಹೇಳಿದೆ.

ನ್ಯಾಯಮೂರ್ತಿಗಳಾದ ದೀಪಂಕರ್ ದತ್ತ ಹಾಗೂ ಸತೀಶಚಂದ್ರ ಶರ್ಮಾ ಅವರನ್ನು ಒಳಗೊಂಡ ನ್ಯಾಯಪೀಠ ಈ ಅರ್ಜಿಗಳ ವಿಚಾರಣೆ ನಡೆಯಿತು.

ಈ ಕಾಯ್ದೆ ಪ್ರಕಾರ, ಪ್ರಧಾನಿ, ಕೇಂದ್ರ ಸಚಿವ ಸಂಪುಟದ ಒಬ್ಬ ಸಚಿವ ಹಾಗೂ ಲೋಕಸಭೆಯಲ್ಲಿ ವಿಪಕ್ಷ ನಾಯಕನನ್ನು ಒಳಗೊಂಡ ಆಯ್ಕೆ ಸಮಿತಿಯ ಶಿಫಾರಸಿನಂತೆ ರಾಷ್ಟ್ರಪತಿಯವರು ಸಿಇಸಿ ಹಾಗೂ ಇ.ಸಿ.ಯವರನ್ನು ನೇಮಕ ಮಾಡುತ್ತಾರೆ.

ಈ ಹೊಸ ಕಾನೂನಿನಂತೆ, ಮೂವರು ಸದಸ್ಯರು ಇರುವ ಆಯ್ಕೆ ಸಮಿತಿಯಲ್ಲಿ ಮುಖ್ಯ ನ್ಯಾಯಮೂರ್ತಿ ಬದಲಾಗಿ ಕೇಂದ್ರ ಸಚಿವ ಸಂಪುಟದ ಒಬ್ಬ ಸಚಿವರು ಇರಲಿದ್ದಾರೆ.

ವಿಚಾರಣೆ ವೇಳೆ, ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರ ನಿವೇದನೆಗಳನ್ನು ಆಲಿಸಿದ ಬಳಿಕ ಪ್ರತಿಕ್ರಿಯಿಸಿದ ನ್ಯಾ. ದತ್ತ, 'ಆಯೋಗವು ಸ್ವತಂತ್ರವಾಗಿ ಇದ್ದರಷ್ಟೆ ಸಾಲದು. ಅದು ಸ್ವತಂತ್ರವಾಗಿ ಕಾರ್ಯ ನಿರ್ವಹಣೆ ಮಾಡುತ್ತಿದೆ ಎಂಬುದು ಸ್ಪಷ್ಟವಾಗಿ ಕಂಡುಬರುವುದು ಅಗತ್ಯ' ಎಂದರು.

ಆಗ, 'ಊಹೆಗಳಿಂದ ಕೂಡಿದ ಪಕ್ಷಪಾತ ಆಧಾರದಲ್ಲಿ ಈ ಕಾನೂನನ್ನು ನ್ಯಾಯಾಲಯ ರದ್ದು ಮಾಡಬಾರದು. ಇಂತಹ ಕ್ರಮಗಳ ಮೂಲಕ ನ್ಯಾಯಾಲಯವು ಶಾಸನಸಭೆಯ ಕಾರ್ಯವ್ಯಾಪ್ತಿಯನ್ನು ಪ್ರವೇಶಿಸಿದಂತಾಗಲಿದೆ ಇಲ್ಲವೇ ಸಂಸತ್‌ನ ಮತ್ತೊಂದು ಸದನದ ರೀತಿ ವರ್ತಿಸಿದಂತಾಗಲಿದೆ' ಎಂದು ವೆಂಕಟರಮಣಿ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾ. ದತ್ತ, 'ನ್ಯಾಯಾಂಗ ಕುರಿತು ಸಂಸತ್ ಏನನ್ನಾದರೂ ಹೇಳಬಹುದು. ನಮಗೆ ನಮ್ಮ ಲಕ್ಷ್ಮಣ ರೇಖೆ ಬಗ್ಗೆ ಅರಿವಿದೆ. ಅದನ್ನು ಎಂದಿಗೂ ದಾಟುವುದಿಲ್ಲ' ಎಂದರು.

ವಾದ–ಪ್ರತಿವಾದಗಳನ್ನು ಆಲಿಸಿದ ಪೀಠ, ವಿಚಾರಣೆಯನ್ನು ಮುಂದೂಡಿತು.

ತೀರ್ಪು ಕಾಯ್ದಿರಿಸಿದ ಸುಪ್ರೀಂ ಕೋರ್ಟ್

ಕೇರಳಂಶ ಶಬರಿಮಲೆ ದೇವಸ್ಥಾನ ಸೇರಿದಂತೆ ವಿವಿಧ ಧರ್ಮಗಳ ಪೂಜಾ ಸ್ಥಳಗಳಲ್ಲಿ ಮಹಿಳೆಯರ ಪ್ರವೇಶಕ್ಕೆ ನಿರ್ಬಂಧ ಹಾಗೂ ತಾರತಮ್ಯಕ್ಕೆ ಸಂಬಂಧಿಸಿದ ಅರ್ಜಿಗಳ ಅಂತಿಮ ವಿಚಾರಣೆ ನಡೆಸಿರುವ ಸುಪ್ರೀಂ ಕೋರ್ಟ್‌ನ ಒಂಬತ್ತು ನ್ಯಾಯಮೂರ್ತಿಗಳ ವಿಸ್ತೃತ ಪೀಠವು ತೀರ್ಪನ್ನು ಗುರುವಾರ ಕಾಯ್ದಿರಿಸಿದೆ.

ಸಿಜೆಐ ಸೂರ್ಯಕಾಂತ್ ನೇತೃತ್ವದ ಸಾಂವಿಧಾನಿಕ ಪೀಠವು ಅರ್ಜಿಗಳ ವಿಚಾರಣೆಯನ್ನು 16 ದಿನ ನಡೆಸಿತಲ್ಲದೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ಹಿರಿಯ ವಕೀಲರಾದ ಸಿ.ಎಸ್. ವೈದ್ಯನಾಥನ್, ಅಭಿಷೇಕ್ ಮನು ಸಿಂಘ್ವಿ, ಮುಕುಲ್ ರೋಹಟಗಿ, ಇಂದಿರಾ ಜೈಸಿಂಗ್, ನೀರಜ್ ಕಿಶನ್ ಕೌಲ್ ಮತ್ತು ಗೋಪಾಲ್ ಶಂಕರನಾರಾಯಣನ್ ಅವರ ವಾದವನ್ನು ಆಲಿಸಿತು.

ಈ ಪೀಠದಲ್ಲಿ ನ್ಯಾಯಮೂರ್ತಿಗಳಾದ ಬಿ.ವಿ. ನಾಗರತ್ನ, ಎಂ.ಎಂ. ಸುಂದರೇಶ್, ಅಹ್ಸಾನುದ್ದೀನ್ ಅಮಾನುಲ್ಲಾ, ಅರವಿಂದ ಕುಮಾರ್, ಆಗಸ್ಟಿನ್ ಜಾರ್ಜ್ ಮಸೀಹ್, ಪ್ರಸನ್ನ ಬಿ. ವರಾಳೆ, ಆರ್. ಮಹಾದೇವನ್ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರು ಇದ್ದಾರೆ.

ವಿಚಾರಣೆಗೂ ಮುನ್ನ ಕೇಂದ್ರ ಸರ್ಕಾರವು ಲಿಖಿತವಾಗಿ ತನ್ನ ವಾದ ಮಂಡಿಸಿದೆ. ಶಬರಿಮಲೆ ದೇವಸ್ಥಾನಕ್ಕೆ ಋತುಸ್ರಾವ ವಯಸ್ಸಿನ ಮಹಿಳೆಯರ ಪ್ರವೇಶದ ಮೇಲಿನ ನಿರ್ಬಂಧವನ್ನು ಎತ್ತಿಹಿಡಿಯುವಂತೆ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದೆ.

ಈ ವಿಷಯವು ಧಾರ್ಮಿಕ ನಂಬಿಕೆಯ ವ್ಯಾಪ್ತಿಯೊಳಗೆ ಬರುತ್ತದೆ ಮತ್ತು ನ್ಯಾಯಾಂಗದ ಪರಿಶೀಲನೆಯ ವ್ಯಾಪ್ತಿಯನ್ನು ಮೀರಿದೆ ಎಂದು ಸರ್ಕಾರ ಹೇಳಿದೆ.

ಮರು ಪರೀಕ್ಷೆಯ ಮೇಲ್ವಿಚಾರಣೆಗೆ ಉನ್ನತ ಮಟ್ಟದ ಸಮಿತಿ ನೇಮಿಸಲು 'ಸುಪ್ರೀಂ'ಗೆ ಮನವಿ

ಎನ್‌ಟಿಎ ಪುನರ್‌ರಚನೆಗೆ ಆಗ್ರಹಿಸಿ ಅರ್ಜಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಅನ್ನು ಬಲಿಷ್ಠ ಮತ್ತು ಸ್ವಾಯತ್ತ ವ್ಯವಸ್ಥೆಯೊಂದಿಗೆ ಪುನರ್‌ರಚಿಸಲು ಅಥವಾ ಬದಲಾಯಿಸಲು ನಿರ್ದೇಶಿಸುವಂತೆ ಅಖಿಲ ಭಾರತ ವೈದ್ಯಕೀಯ ಸಂಘಗಳ ಒಕ್ಕೂಟ (ಎಫ್‌ಎಐಎಂಎ) ಸುಪ್ರೀಂ ಕೋರ್ಟ್ ಅನ್ನು ಕೋರಿದೆ.

ಪದೇ ಪದೇ ನೀಟ್–ಯುಜಿ ಪ್ರಶ್ನೆಪತ್ರಿಕೆ ಸೋರಿಕೆಯಾಗುತ್ತಿದ್ದು, ಈ ಬಾರಿ 22.7 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳ ಮೂಲಭೂತ ಹಕ್ಕುಗಳ ಮೇಲೆ ನೇರ ದಾಳಿಯಾಗಿದೆ ಎಂದು ಅದು ಅರ್ಜಿಯಲ್ಲಿ ಆರೋಪಿಸಿದೆ.

'ಈ ಕುರಿತು ಹೊಸ ವ್ಯವಸ್ಥೆ ಆಗುವವರೆಗೆ ನೀಟ್–ಯುಜಿ ಮರು ಪರೀಕ್ಷೆಯ ಮೇಲ್ವಿಚಾರಣೆಗೆ ಉನ್ನತ ಮಟ್ಟದ ಮೇಲ್ವಿಚಾರಣಾ ಸಮಿತಿ ನೇಮಿಸಬೇಕು' ಎಂದು ಅದು ಮನವಿ ಮಾಡಿದೆ. ಆ ಸಮಿತಿಯು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಅಧ್ಯಕ್ಷತೆಯಲ್ಲಿರಬೇಕು, ಸೈಬರ್ ಭದ್ರತಾ ತಜ್ಞರು ಮತ್ತು ವಿಧಿವಿಜ್ಞಾನ ತಜ್ಞರನ್ನು ಒಳಗೊಂಡಿರಬೇಕು. ಆ ಸಮಿತಿಯು ಮುಂದೆ ಪ್ರಶ್ನೆಪತ್ರಿಕೆ ಸೋರಿಕೆ ಆಗದಂತೆ ನೋಡಿಕೊಳ್ಳಬೇಕು ಎಂದು ಒಕ್ಕೂಟದ ಪರ ವಕೀಲೆ ತನ್ವಿ ದುಬೆ ಕೋರಿದರು.

'ನೀಟ್ ಯುಜಿ' ನಡೆಸುವಲ್ಲಿ ಎನ್‌ಟಿಎ ಪುನರಾವರ್ತಿತ ತಪ್ಪುಗಳನ್ನು ಎಸಗಿದೆ. ಅದರ ವ್ಯವಸ್ಥಿತ ಮತ್ತು ವೈಫಲ್ಯದ ವಿರುದ್ಧ ನ್ಯಾಯಾಲಯ ತುರ್ತಾಗಿ ಮಧ್ಯಪ್ರವೇಶಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಪ್ರಶ್ನೆಪತ್ರಿಕೆ ಸೋರಿಕೆ ತಡೆಗೆ ಡಿಜಿಟಲ್ ಲಾಕ್ ವ್ಯವಸ್ಥೆಯನ್ನು ಕಡ್ಡಾಯಗೊಳಿಸುವ ಮತ್ತು ಕಂಪ್ಯೂಟರ್ ಆಧಾರಿತ ಪರೀಕ್ಷಾ ಮಾದರಿಗೆ ಬದಲಾಗುವ ಅಗತ್ಯವಿದೆ ಎಂದು ಒಕ್ಕೂಟ ಪ್ರತಿಪಾದಿಸಿದೆ. ನಾಲ್ಕು ವಾರಗಳಲ್ಲಿ ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸುವಂತೆ ಸಿಬಿಐಗೆ ನಿರ್ದೇಶಿಸಬೇಕು ಎಂದೂ ಅದು ತಿಳಿಸಿದೆ.

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಿರುವ ನೀಟ್ ವ್ಯವಸ್ಥೆಯನ್ನು ರದ್ದುಪಡಿಸಬೇಕು ಮತ್ತು 12ನೇ ತರಗತಿ ಅಂಕಗಳ ಆಧಾರದ ಮೇಲೆ ಸೀಟುಗಳನ್ನು ಭರ್ತಿ ಮಾಡಲು ರಾಜ್ಯಗಳಿಗೆ ಅನುಮತಿ ನೀಡಬೇಕು

ಸಿ. ಜೋಸೆಫ್ ವಿಜಯ್, ಮುಖ್ಯಮಂತ್ರಿ, ತಮಿಳುನಾಡು



'ನೀಟ್–ಯುಜಿ' ರದ್ದು ವಿರೋಧಿಸಿ ಗುರುವಾರ ಚೆನ್ನೈನಲ್ಲಿ ಪ್ರತಿಭಟನೆ ನಡೆಸಿದ ಎಸ್‌ಎಫ್‌ಐ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು — ಎಎಫ್‌ಪಿ ಚಿತ್ರ

ಪ್ರಧಾನಿಗೆ ಫೋರ್ಡಾ ಪತ್ರ

ನೀಟ್–ಯುಜಿ 2026ರ ಪ್ರಶ್ನೆಪತ್ರಿಕೆ ಸೋರಿಕೆಯಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಸ್ಥಾನಿಕ ವೈದ್ಯರ ಸಂಘಗಳ ಒಕ್ಕೂಟವು (ಫೋರ್ಡಾ) ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದೆ. ಜತೆಗೆ ನೀಟ್ ಪರೀಕ್ಷೆಯನ್ನು ಕಂಪ್ಯೂಟರ್ ಆಧಾರಿತವಾಗಿಸುವಂತೆಯೂ ಮನವಿ ಮಾಡಿದೆ. ಇಂಥ ಪ್ರಕರಣಗಳ ವಿಚಾರಣೆ ನಡೆಸಲು ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಬೇಕೆಂದೂ ಕೋರಿದೆ.

ಆರೋಪಿಗಳು ಏಳು ದಿನ ಸಿಬಿಐ ವಶಕ್ಕೆ

ಪ್ರಸಕ್ತ ಸಾಲಿನ 'ನೀಟ್–ಯುಜಿ' ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಬಂಧಿಸಲಾಗಿರುವ ನಾಲ್ವರು ಆರೋಪಿಗಳನ್ನು ಸಿಬಿಐ ಗುರುವಾರ ದೆಹಲಿ ನ್ಯಾಯಾಲಯಕ್ಕೆ ಹಾಜರುಪಡಿಸಿತು.

ಸಿಬಿಐ ವಿಶೇಷ ನ್ಯಾಯಾಧೀಶ ಅಜಯ್ ಗುಪ್ತಾ ಅವರು ಆರೋಪಿಗಳಾದ ಮಂಗಿಲಾಲ್ ಬಿವಾಲ್, ವಿಕಾಸ್ ಬಿವಾಲ್, ದಿನೇಶ್ ಬಿವಾಲ್ ಹಾಗೂ ಯಶ್ ಯಾದವ್ ಅವರನ್ನು ಹೆಚ್ಚಿನ ತನಿಖೆಗಾಗಿ ಏಳು ದಿನಗಳವರೆಗೆ ಸಿಬಿಐ ವಶಕ್ಕೆ ಒಪ್ಪಿಸಿ ಆದೇಶಿಸಿದರು.

'ನಾಸಿಕ್‌ನ ಶುಭಂ ಖೈರ್‌ನಾರ್ ಎಂಬುವರು ಯಶ್ ಯಾದವ್, ಮಂಗಿಲಾಲ್ ಅವರಿಗೆ ಸೋರಿಕೆಯಾದ ಪ್ರಶ್ನೆ ಪತ್ರಿಕೆ ನೀಡಿದ್ದರು. ಇದಕ್ಕಾಗಿ ಅವರು ₹10 ಲಕ್ಷದಿಂದ ₹12 ಲಕ್ಷದವರೆಗೆ ಪಡೆದಿದ್ದಾರೆ. ಯಶ್ ಯಾದವ್ ಈ ಪ್ರಶ್ನೆಪತ್ರಿಕೆಯ ಪ್ರತಿಯನ್ನು ಪಿಡಿಎಫ್ ರೂಪದಲ್ಲಿ ಏಪ್ರಿಲ್ 29ರಂದು ಟೆಲಿಗ್ರಾಮ್ ಮೂಲಕ ಕೆಲವರೊಂದಿಗೆ ಹಂಚಿಕೊಂಡಿದ್ದಾರೆ' ಎಂದು ಸಿಬಿಐ ವಿವರಿಸಿದೆ.

ಸೋರಿಕೆಯ ಮೂಲ ಪತ್ತೆಹಚ್ಚಲು, ಇತರ ಆರೋಪಿಗಳನ್ನು ಗುರುತಿಸಲು, ಡಿಜಿಟಲ್ ಮಾಹಿತಿ ಮತ್ತು ಹಣಕಾಸಿನ ವರ್ಗಾವಣೆಯನ್ನು ವಿಶ್ಲೇಷಿಸಲು ಮತ್ತು ಸಾಕ್ಷ್ಯಗಳನ್ನು ಮರುಪಡೆಯಲು ಆರೋಪಿಗಳನ್ನು ವಿಸ್ತೃತ ತನಿಖೆಗೆ ಒಳಪಡಿಸಬೇಕಿದೆ. ಅದಕ್ಕಾಗಿ ಅವರನ್ನು ಕಸ್ಟಡಿಗೆ ಪಡೆಯಬೇಕಾದ ಅಗತ್ಯವಿದೆ ಎಂದು ಸಿಬಿಐ ನ್ಯಾಯಾಲಯವನ್ನು ಕೋರಿತ್ತು.

ಆರೋಪಿಗಳ ಮೊಬೈಲ್ ಫೋನ್‌ಗಳಿಂದ ಚಾಟ್‌ಗಳು, ಸೋರಿಕೆಯಾದ ಪ್ರಶ್ನೆಪತ್ರಿಕೆ, ಇತರ ಡಿಜಿಟಲ್ ಪುರಾವೆಗಳನ್ನು ಸಂಗ್ರಹಿಸಲಾಗಿದೆ. ಕೆಲವು ಅಳಿಸಿರುವ ದತ್ತಾಂಶ ಪಡೆಯಲು ಮೊಬೈಲ್‌ಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು ಎಂದು ಸಿಬಿಐ ಹೇಳಿದೆ.

ವಿದ್ಯಾರ್ಥಿ ಆತ್ಮಹತ್ಯೆ

ಲಖೀಂಪುರ ಖೇರಿ (ಪಿಟಿಐ): ಇಲ್ಲಿನ 31 ರಿತಿಕ್ ಮಿಶ್ರಾ ಎಂಬ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 'ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಸುದ್ದಿ ಕೇಳಿ ಆತ ತೀವ್ರ ಒತ್ತಡದಲ್ಲಿ ಇದ್ದ' ಎಂದು ಕುಟುಂಬಸ್ಥರು ಮಾಹಿತಿ ನೀಡಿದ್ದಾರೆ. ಈ ಬಗ್ಗೆ ಪ್ರಕರಣ ದಾಖಲಾಗಿದೆ.

'ರಿತಿಕ್ ಈ ವರ್ಷ ಮೂರನೇ ಬಾರಿಗೆ ನೀಟ್ ಪರೀಕ್ಷೆ ಬರೆದಿದ್ದ. ಈ ಬಾರಿ ಪರೀಕ್ಷೆಯಲ್ಲಿ ಖಂಡಿತ ತೇರ್ಗಡೆ ಆಗುವ ವಿಶ್ವಾಸ ಅವನಿಗಿತ್ತು. ಪ್ರಶ್ನೆಪತ್ರಿಕೆ ಸೋರಿಕೆ ಸುದ್ದಿ ತಿಳಿದ ಬಳಿಕ ತೀವ್ರ ಒತ್ತಡಕ್ಕೆ ಒಳಗಾಗಿದ್ದ' ಎಂದು ಕುಟುಂಬಸ್ಥರು ತಿಳಿಸಿದರು. ಈ ಮಾಹಿತಿ ಆಧರಿಸಿ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಪತ್ನಿಯ ಮುಖ, ಕೈಗಳ ಮೇಲೆ ಗಾಯಗಳಾಗಿವೆ: ಪತಿ ಹೇಳಿಕೆ

ಮಹಿಳೆ ಮೇಲೆ ಎರಗಿದರು...

ನವದೆಹಲಿ (ಪಿಟಿಐ): ಇಡೀ ದೇಶವನ್ನೇ ನಲುಗಿಸಿದ್ದ ದೆಹಲಿಯ ನಿರ್ಭಯಾ ಘಟನೆಯನ್ನೇ ಹೋಲುವಂತದ್ದೇ ಘಟನೆ 14 ವರ್ಷಗಳ ಬಳಿಕ ಮತ್ತೊಮ್ಮೆ ದೆಹಲಿಯಲ್ಲಿ ನಡೆದಿದೆ. ಸಮಯವೆಷ್ಟು ಎಂದು ಕೇಳಿದ 30 ವರ್ಷದ ಮಹಿಳೆಯನ್ನು ಹತ್ತಿರಕ್ಕೆ ಬರುವಂತೆ ಕರೆದ ವ್ಯಕ್ತಿಯು ಆಕೆಯನ್ನು ಬಸ್‌ನೊಳಗೆ ಎಳೆದುಕೊಂಡು, ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಲಾಗಿದೆ.

'ಆಕೆ ಇಲ್ಲಿನ ಮಂಗೋಲ್‌ಪುರಿ ಪ್ರದೇಶದಲ್ಲಿರುವ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಕೆಲಸ ಮುಗಿಸಿ ಪೀತಮಪುರ ಪ್ರದೇಶದ ಸ್ಲಂನಲ್ಲಿರುವ ತಮ್ಮ ಮನೆಗೆ ವಾಪಸಾಗುತ್ತಿದ್ದರು. ಸರಸ್ವತಿ ವಿಹಾರ ಬಸ್ ನಿಲ್ದಾಣ ತಲುಪಿದಾಗ, ಹತ್ತಿರದಲ್ಲಿಯೇ ಬಸ್ ನಿಂತಿರುವುದು ಕಂಡಿತು. ಬಸ್‌ನ ಬಾಗಿಲ ಬಳಿಯಲ್ಲಿಯೇ ನಿಂತಿದ್ದ ವ್ಯಕ್ತಿಯೊಬ್ಬರ ಬಳಿ ತೆರಳಿದ ಮಹಿಳೆಯು ಆತನ ಬಳಿ ಸಮಯ ಎಷ್ಟು ಎಂದು ವಿಚಾರಿಸಿದರು' ಎಂದು ಪೊಲೀಸರು ಗುರುವಾರ ಘಟನೆಯನ್ನು ವಿವರಿಸಿದರು.

'ಸಮಯ ಕೇಳುತ್ತಿದ್ದಂತೆಯೇ ತುಸು ಹತ್ತಿರ ಬರಲು ಹೇಳಿದ ವ್ಯಕ್ತಿಯು, ಬಳಿಕ ಮಹಿಳೆಯನ್ನು ಬಸ್‌ನೊಳಗೆ ಎಳೆದುಕೊಂಡಿದ್ದಾನೆ. ಬಸ್ ಅನ್ನು ನಂಗಲೋಯಿ ಎಂಬ ಪ್ರದೇಶಕ್ಕೆ ತೆಗೆದುಕೊಂಡು ಹೋಗಿ, ಚಾಲಕ ಹಾಗೂ ನಿರ್ವಾಹಕ ಒಬ್ಬರ ನಂತರ ಒಬ್ಬರಂತೆ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ್ದಾರೆ. ಕೃತ್ಯದ ನಂತರ ನಂಗೋಲಿ ಪ್ರದೇಶದಲ್ಲಿನ ಮೆಟ್ರೊ ನಿಲ್ದಾಣದ ಬಳಿ ಬಸ್ ನಿಲ್ಲಿಸಿ, ಅಲ್ಲಿಯೇ ಮಹಿಳೆಯನ್ನು ಹೊರಗೆ ದೂಡಿ ಓಡಿಹೋಗಿದ್ದಾರೆ' ಎಂದರು.

'ಪತ್ನಿಯ ಮುಖ, ಕೈಗಳ ಮೇಲೆ ಗಾಯಗಳಾಗಿವೆ' ಎಂದು ಸಂತ್ರಸ್ತೆಯ ಪತಿ ಹೇಳಿದ್ದಾರೆ. 'ಆರೋಪಿಗಳಿಗೆ ಕಠಿಣ ಶಿಕ್ಷೆಯಾಗಬೇಕು' ಎಂದರು.

'ಎಲ್ಲ ಆಯಾಮದಲ್ಲೂ ತನಿಖೆ'

'ಘಟನೆ ಕುರಿತು ಎಲ್ಲ ಆಯಾಮದಲ್ಲಿಯೂ ತನಿಖೆ ನಡೆಯುತ್ತಿದೆ. ಘಟನೆ ನಡೆದ ಸ್ಥಳಗಳ ಬಳಿಯ ಸಿ.ಸಿ. ಟಿ.ವಿ ಕ್ಯಾಮೆರಾ ದೃಶ್ಯಾವಳಿಗಳನ್ನೂ ಸಂಗ್ರಹಿಸಲಾಗುತ್ತಿದೆ. ಬಸ್‌ಗೆ ಸ್ವಯಂಚಾಲಿತ ಬಾಗಿಲು ವ್ಯವಸ್ಥೆ ಇತ್ತೇ ಎನ್ನುವ ಬಗ್ಗೆಯೂ ತನಿಖೆ ನಡೆಯುತ್ತಿದೆ. ಇಬ್ಬರನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ನ್ಯಾಯಾಲಯವು ಇಬ್ಬರನ್ನು ನ್ಯಾಯಾಂಗ ಬಂಧನಕ್ಕೆ ನೀಡಿದೆ' ಪೊಲೀಸ್ ಮೂಲಗಳು ಮಾಹಿತಿ ನೀಡಿವೆ.

'ಘಟನೆ ನಡೆದ ಸ್ಲೀಪರ್ ಬಸ್, ಬಿಹಾರದಲ್ಲಿ ನೋಂದಣಿಯಾಗಿತ್ತು. ಸ್ಲೀಪರ್ ಬಸ್ ಆಗಿದ್ದರಿಂದ ಕಿಟಕಿಗಳಿಗೆ ಕರ್ಟನ್ ಮುಚ್ಚಲಾಗಿತ್ತು. ಈ ಕಾರಣದಿಂದ ಬಸ್‌ನೊಳಿನ ದೃಶ್ಯಗಳು ಹೊರಗಿನ ಜನರಿಗೆ ಕಾಣಲಿಲ್ಲ. ಬಸ್ ಅನ್ನು ವಶಕ್ಕೆ ಪಡೆಯಲಾಗಿದೆ' ಎಂದು ಮಾಧ್ಯಮಗಳು ವರದಿ ಮಾಡಿವೆ.

'ಅತ್ಯಾಚಾರ ಎಸಗಲಾಗುತ್ತಿದ್ದ ವೇಳೆ ಬಸ್ ಚಾಲನೆಯಲ್ಲಿತ್ತೇ, ಬಸ್‌ನಲ್ಲಿ ಪ್ರಯಾಣಿಕರು ಯಾರಾದರೂ ಇದ್ದರೆ ಎನ್ನುವುದು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರ ಮಾಹಿತಿ ನೀಡಿದರು.

ನಾಚಿಕೆಗೇಡು– ಮತ್ತೊಮ್ಮೆ ನಿರ್ಭಯಾ ಘಟನೆ ನಡೆದಿದೆ. ಘಟನೆ ವೇಳೆ 2 ತಾಸುಗಳವರೆಗೆ ಸುಮಾರು 7 ಕಿ.ಮೀ. ದೂರ ಬಸ್ ಚಲಿಸುತ್ತಲೇ ಇತ್ತು

ಸೌರಭ್ ಭಾರದ್ವಾಜ್, ಎಎಪಿ ದೆಹಲಿ ಘಟಕದ ಅಧ್ಯಕ್ಷ

'ದರ್ಶನ್‌ಗೆ ಅಗತ್ಯ ಮೂಲಸೌಕರ್ಯ'

ಪ್ರಜಾವಾಣಿ ವಾರ್ತೆ

ನವದೆಹಲಿ: ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿಯಾಗಿರುವ ನಟ ದರ್ಶನ್ ಅವರಿಗೆ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಅಗತ್ಯ ಮೂಲಸೌಕರ್ಯ ಕಲ್ಪಿಸಲಾಗಿದೆ ಎಂದು ಕರ್ನಾಟಕ ಸರ್ಕಾರ ಸ್ಪಷ್ಟಪಡಿಸಿದೆ.

ಜಾಮೀನು ಕೋರಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದ ದರ್ಶನ್, ಜೈಲಿನಲ್ಲಿ ಅಗತ್ಯ ಮೂಲಸೌಕರ್ಯ ಇಲ್ಲ ಎಂದು ಅಲವತ್ತುಕೊಂಡಿದ್ದರು. ಕೊಲೆ ಪ್ರಕರಣದ ಸಾಕ್ಷಿಗಳ ವಿಚಾರಣೆ ನಿಧಾನವಾಗಿ ಸಾಗುತ್ತಿದೆ ಎಂದು ದೂರಿದ್ದರು. ಈ ಬಗ್ಗೆ ವರದಿ ಸಲ್ಲಿಸುವಂತೆ ವಿಚಾರಣಾ ನ್ಯಾಯಾಲಯ ಹಾಗೂ ಕರ್ನಾಟಕ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ಜೈಲಿನಲ್ಲಿ ದರ್ಶನ್ ಅವರಿಗೆ ನೀಡಿರುವ ಸೌಕರ್ಯ ಹಾಗೂ ಕೊಲೆ ಪ್ರಕರಣದ ವಿಚಾರಣೆಯ ಪ್ರಗತಿ ಬಗ್ಗೆ ಪ್ರತ್ಯೇಕವಾಗಿ ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಲಾಗಿದೆ.



ದರ್ಶನ್

ದರ್ಶನ್ ಉಳಿದಿರುವ ಬ್ಯಾರಕ್‌ನಲ್ಲಿ ಅಗತ್ಯ ಸೌಕರ್ಯಗಳಿವೆ. ಗಾಳಿ ಹಾಗೂ ಬೆಳಕಿನ ಕೊರತೆ ಇಲ್ಲ. ದರ್ಶನ್ ಅವರ ಕಾರಿಡಾರ್‌ಗೆ ಬೇರೆ ಕೈದಿಗಳು ಬಾರದಂತೆ ತಡೆಯಲು ಸಿಬ್ಬಂದಿ ನಿಯೋಜಿಸಲಾಗಿದೆ. ಸಿಸಿಟಿವಿ ಕ್ಯಾಮೆರಾದ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಲಾಗಿದೆ.

ದರ್ಶನ್ ಅವರ ಜಾಮೀನನ್ನು ಸುಪ್ರೀಂ ಕೋರ್ಟ್ 2025ರ ಆಗಸ್ಟ್ 14ರಂದು ರದ್ದುಪಡಿಸಿತ್ತು. ಅಂದಿನಿಂದ ಇಲ್ಲಿಯ ವರೆಗೆ 73 ಸಲ ಕುಟುಂಬ ಸದಸ್ಯರನ್ನು ಭೇಟಿ ಮಾಡಿದ್ದಾರೆ. 28 ಸಲ ವಕೀಲರನ್ನು ಕಂಡಿದ್ದಾರೆ. ಅಗತ್ಯ ಬಿದ್ದಾಗಲೆಲ್ಲ ದರ್ಶನ್ ಅವರಿಗೆ ವೈದ್ಯಕೀಯ ಸೌಲಭ್ಯ ಒದಗಿಸಲಾಗಿದೆ' ಎಂದು ಪ್ರಮಾಣಪತ್ರದಲ್ಲಿ ತಿಳಿಸಲಾಗಿದೆ.

'ಪ್ರಕರಣದ ವಿಚಾರಣೆಯು ವಿಚಾರಣಾ ನ್ಯಾಯಾಲಯದಲ್ಲಿ ಪ್ರತಿ ಸೋಮವಾರ, ಮಂಗಳವಾರ ನಡೆಯುತ್ತಿದೆ. ಪ್ರಾಸಿಕ್ಯೂಷನ್ ಇಲ್ಲಿಯವರೆಗೆ 10 ಸಾಕ್ಷಿಗಳನ್ನು ವಿಚಾರಣೆ ಮಾಡಿದೆ. ಪ್ರಾಸಿಕ್ಯೂಷನ್ ಆರಂಭದಲ್ಲಿ ಸುಮಾರು 60 ಸಾಕ್ಷಿಗಳನ್ನು ಆದ್ಯತೆಯ ಮೇರೆಗೆ ವಿಚಾರಣೆ ಮಾಡಲು ಪ್ರಸ್ತಾಪಿಸಿತ್ತು. ಇದಲ್ಲದೆ, ಪ್ರತಿವಾದಿ/ರಾಜ್ಯವು ಒಟ್ಟು 272 ಸಾಕ್ಷಿಗಳನ್ನು ಉಲ್ಲೇಖಿಸಿದೆ. 17 ಆರೋಪಿಗಳನ್ನು ಏಳು ವಕೀಲರು ಪ್ರತಿನಿಧಿಸುತ್ತಿದ್ದಾರೆ. ಸಾಕ್ಷಿಯ ಮುಖ್ಯ ವಿಚಾರಣೆ ಪೂರ್ಣಗೊಂಡ ನಂತರ, ಪಾಟಿ ಸವಾಲು ನಡೆಸಲಾಗುತ್ತದೆ. ಇದಲ್ಲದೆ, ಸಾಕ್ಷಿಗಳಿಗೆ ಪುನರಾವರ್ತಿತ ಪ್ರಶ್ನೆಗಳನ್ನು ಕೇಳಲಾಗುತ್ತಿದೆ. ಇದರಿಂದ, ವಿಚಾರಣೆ ವಿಳಂಬವಾಗುತ್ತಿದೆ' ಎಂದು ಪ್ರಮಾಣಪತ್ರದಲ್ಲಿ ಸ್ಪಷ್ಟಪಡಿಸಲಾಗಿದೆ.

ಷೇರುಪೇಟೆ ವಹಿವಾಟು

74,608 ಹಿಂದಿನ ಅಂತ್ಯ | 789 | 75,398 ಇಂದಿನ ಅಂತ್ಯ

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	23,412
ಇಂದಿನ ಅಂತ್ಯ:	23,689
ದಿನದ ಕನಿಷ್ಠ:	23,426
	277

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

	100 ಕ್ಕೆ	₹590
	12 ಕ್ಕೆ	₹84
ಮೈಸೂರು:	100 ಕ್ಕೆ	₹595

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಪ್ರ.ಬಿ)	₹400-682
ದ್ವಿತಳಿ (ಬಿ.ವಿ)	₹466-835

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹257
ಆರ್‌ಎಸ್‌ಎಸ್-5	₹250
ಗುಡ್ ಲಾಟ್	₹217

ಮುದ್ರೆ-ಮನೆ ಕಾಫಿ (50 ಕೆಜಿಗೆ)

ಎಪಿ	₹23500
ಎಸಿ	₹14000
ಆರ್‌ಪಿ	₹18400
ಆರ್‌ಸಿ	₹10025

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ತಿಪಟೂರು	₹30600-33800
ತುರುವೇಕೆರೆ	₹33000-33000

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1590 (1600)
ಸೋಯಾ (ರಿಫೈನ್ಡ್)	₹1490 (1485)
ಸೂರ್ಯಕಾಂತಿ (ರಿಫೈನ್ಡ್)	₹1635 (1635)
ಪಾಮೋಲಿನ್	₹1470 (1470)

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1200-1600
ಮಧ್ಯಮ	₹800-1200
ಸಣ್ಣ	₹200-600

ಅಡಿಕೆ ಧಾರಣೆ

ಪುತ್ತೂರು	
ಕೋಕ	20000-34500
ಹೊಸತು	30000-47500
ಶಿವಮೊಗ್ಗ	
ಸರಕು/ಹಸ	50209-96096
ಬೆಟ್ಟೆ	54014-63859
ರಾಶಿಇಡಿ	46099-54496
ಗೊರಬಲು	19020-42899
ಯಲ್ಲಾಪುರ	
ಅಪಿ	56159-57169
ಬಿಳಿಗೋಟು	23612-36799
ಕೋಕ	21069-32900
ಹಳೆಚಾಲಿ	49599-49599
ಹೊಸಚಾಲಿ	37619-48099
ಕೆಂಪುಗೋಟು	24612-37399
ರಾಶಿ	46510-55699
ತಟ್ಟಿಬೆಟ್ಟೆ	38099-49799
ತೀರ್ಥಹಳ್ಳಿ	
ಇತರೆ	26835-27500
ರಾಶಿ	49178-49178
ಶಿರಸಿ	
ಬೆಟ್ಟೆ	36089-47699
ಬಿಳಿಗೋಟು	27899-37223
ಚಾಲಿ	44799-48391
ಕೆಂಪುಗೋಟು	32311-35899
ರಾಶಿ	51699-53399
ಸುಳ್ಯ	
ಕೋಕ	20000-33000
ಹಳತು	47500-55000
ಸಿದ್ದಾಪುರ	
ಬಿಳಿಗೋಟು	26269-35899
ಚಾಲಿ	39089-47100
ಕೋಕ	23199-31869
ಕೆಂಪುಗೋಟು	28989-35700
ರಾಶಿ	49089-53099
ತಟ್ಟಿಬೆಟ್ಟೆ	40099-49099

42 ತಿಂಗಳ ಗರಿಷ್ಠಕ್ಕೆ ಹಣದುಬ್ಬರ

ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಪರಿಣಾಮ ಸಗಟು ಹಣದುಬ್ಬರ ಪ್ರಮಾಣದ ಹೆಚ್ಚಳ

ನವದೆಹಲಿ (ಪಿಟಿಐ): ಸಗಟು ಹಣದುಬ್ಬರ ಪ್ರಮಾಣವು ಏಪ್ರಿಲ್‌ನಲ್ಲಿ 42 ತಿಂಗಳ ಗರಿಷ್ಠ ಮಟ್ಟವಾದ ಶೇಕಡ 8.3ಕ್ಕೆ ತಲುಪಿದೆ. ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಪರಿಣಾಮವಾಗಿ ಇಂಧನ ಬೆಲೆಯಲ್ಲಿ ಆದ ಏರಿಕೆಯು ಸಗಟು ಹಣದುಬ್ಬರ ಪ್ರಮಾಣದ ಹೆಚ್ಚಳಕ್ಕೆ ಮುಖ್ಯ ಕಾರಣವಾಗಿದೆ.



ಮಾರ್ಚ್ ತಿಂಗಳಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ 3.88ರಷ್ಟು ಇತ್ತು. ಇದು ಹಿಂದಿನ ವರ್ಷದ ಏಪ್ರಿಲ್ ತಿಂಗಳಲ್ಲಿ ಶೇ 0.85ರಷ್ಟು ಇತ್ತು.

ಇಂಧನ ಮತ್ತು ವಿದ್ಯುತ್ ವಿಭಾಗದಲ್ಲಿ ಸಗಟು ಹಣದುಬ್ಬರ ಪ್ರಮಾಣವು 42 ತಿಂಗಳ ಗರಿಷ್ಠ ಮಟ್ಟವಾದ ಶೇ 24.71ಕ್ಕೆ ಹೆಚ್ಚಾಗಿದೆ. ಇದು ಮಾರ್ಚ್‌ನಲ್ಲಿ ಶೇ 1.05ರಷ್ಟು ಮಾತ್ರ ಇತ್ತು. ಕಚ್ಚಾ ಪೆಟ್ರೋಲಿಯಂ ಉತ್ಪನ್ನದ ಹಣದುಬ್ಬರ ಪ್ರಮಾಣ ಶೇ 88.06ರಷ್ಟು ಆಗಿದೆ. ಇದು 2021ರ ಅಕ್ಟೋಬರ್ ನಂತರದ ಗರಿಷ್ಠ ಮಟ್ಟ.

ಪಶ್ಚಿಮ ಏಷ್ಯಾದಲ್ಲಿನ ಸಮರವು ಹೊರ್ಮುಜ್ ಜಲಸಂಧಿಯ ಮೂಲಕ ಕಚ್ಚಾ ಪೆಟ್ರೋಲಿಯಂ ಸಾಗಣೆಗೆ ಅಡ್ಡಿ ಉಂಟುಮಾಡಿದೆ. ಇದರಿಂದಾಗಿ ಭಾರತಕ್ಕೆ ಆಮದು ಕಷ್ಟವಾಗುತ್ತಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕಚ್ಚಾ ತೈಲದ ಬೆಲೆಯು ಹೆಚ್ಚಳ ಆಗಿರುವುದು ಕೂಡ ತೈಲ ಆಮದನ್ನು ದುಬಾರಿ ಆಗಿಸಿದೆ.

‘ಖನಿಜ ತೈಲ, ಕಚ್ಚಾ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ, ಮೂಲ ಲೋಹಗಳು, ತಯಾರಿಕೆಯಲ್ಲಿ ಬಳಸುವ ಉತ್ಪನ್ನಗಳು ಹಾಗೂ ಆಹಾರೇತರ ಉತ್ಪನ್ನಗಳ ಬೆಲೆಯಲ್ಲಿನ ಹೆಚ್ಚಳದ ಪರಿಣಾಮವಾಗಿ ಏಪ್ರಿಲ್‌ನಲ್ಲಿ ಸಗಟು ಹಣದುಬ್ಬರ ಜಾಸ್ತಿ ಆಗಿದೆ’ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಏಪ್ರಿಲ್‌ನಲ್ಲಿ ಎಲ್‌ಪಿಜಿ ಬೆಲೆ ಹೆಚ್ಚಳವು ಶೇ 10.92ರಷ್ಟು ಆಗಿದೆ. ಸಗಟು ಪೆಟ್ರೋಲ್ ಬೆಲೆ ಏರಿಕೆಯು ಶೇ 32.40ರಷ್ಟು ಆಗಿದೆ. ಡೀಸೆಲ್ ಸಗಟು ಬೆಲೆಯು ಶೇ 25.19ರಷ್ಟು ಹೆಚ್ಚಾಗಿದೆ.

ಮೇ ತಿಂಗಳಲ್ಲಿ ಸಗಟು ಹಣದುಬ್ಬರ ಪ್ರಮಾಣವು ಶೇ 9ಕ್ಕೆ ಹೆಚ್ಚುವ ಸಾಧ್ಯತೆ ಇದೆ ಎಂದು ಇಂಡಿಯಾ ರೇಟಿಂಗ್ಸ್ ಆ್ಯಂಡ್ ರಿಸರ್ಚ್ ಸಂಸ್ಥೆ ನಿರ್ದೇಶಕಿ ಮೇಘಾ ಅರೋರ ಅವರು ಹೇಳಿದ್ದಾರೆ.

ಕಚ್ಚಾ ತೈಲದ ಬೆಲೆಯಲ್ಲಿ ಏರಿಕೆ ಆಗಿರುವ ಹಿನ್ನೆಲೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮಾರಾಟ ಬೆಲೆಯು ಲೀಟರಿಗೆ ₹5ರಷ್ಟು ಜಾಸ್ತಿ ಆಗುವ ನಿರೀಕ್ಷೆ ಇದೆ ಎಂದು ಬ್ರೋಕರೇಜ್ ಸಂಸ್ಥೆ ಬಾರ್ಕ್ಲೇಸ್ ಅಂದಾಜು ಮಾಡಿದೆ.

ಸುದ್ದಿ 2 ನಿಮಿಷ

ಸಾಯಿ ಸಿಲ್ಕ್ಸ್‌ಗೆ ಭಾರದ್ವಾಜ್ ಸಿಇಒ

ಬೆಂಗಳೂರು: ಸಾಯಿ ಸಿಲ್ಕ್ಸ್ (ಕಳಾಮಂದಿರ್) ಲಿಮಿಟೆಡ್ ಕಂಪನಿಯು ಭಾರದ್ವಾಜ್ ರಾಚಮಡುಗು ಅವರನ್ನು ತನ್ನ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯನ್ನಾಗಿ (ಸಿಇಒ) ನೇಮಕ ಮಾಡಿದೆ.

ಭಾರದ್ವಾಜ್ ಅವರು ಕಂಪನಿಯ ವಿವಿಧ ಪ್ರಮುಖ ಯೋಜನೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಸಮೂಹದ ಇ-ವಾಣಿಜ್ಯ ವಿಭಾಗದ ಬೆಳವಣಿಗೆ, ವಿಸ್ತರಣೆ ಚಟುವಟಿಕೆಗಳ ಯೋಜನೆ ಸೇರಿದಂತೆ ಹಲವು ಕೆಲಸಗಳಲ್ಲಿ ಅವರು ಇದ್ದಾರೆ ಎಂದು ಕಂಪನಿಯ ಪ್ರಕಟಣೆ ಹೇಳಿದೆ.



ಕಂಪನಿಯ ಐಪಿಒ ಕೆಲಸಗಳಲ್ಲಿಯೂ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ಕಂಪನಿಯು ಹೊಸ ಮಾರುಕಟ್ಟೆಗಳಲ್ಲಿ ಬೆಳವಣಿಗೆ ಕಾಣಬೇಕು ಎಂಬ ನಿಟ್ಟಿನಲ್ಲಿ ಅವರು ಆಂತರಿಕ ಹಾಗೂ ಬಾಹ್ಯ ತಂಡಗಳ ಜೊತೆ ನಿಕಟವಾಗಿ ಕೆಲಸ ಮಾಡಿದ್ದಾರೆ ಎಂದು ತಿಳಿಸಿದೆ.

‘ಇಂಧನ ಬೆಲೆ ಹೆಚ್ಚಾಗಬಹುದು’

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಯುದ್ಧವು ಬಹುಕಾಲ ಮುಂದುವರಿದರೆ ಕೇಂದ್ರ ಸರ್ಕಾರವು ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಹೆಚ್ಚು ಮಾಡಬೇಕಾಗಬಹುದು ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಸಂಜಯ್ ಮಲ್ಹೋತ್ರಾ ಹೇಳಿದ್ದಾರೆ.

ಸ್ವಿಟ್ಜರ್ಲೆಂಡ್‌ನಲ್ಲಿ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ವಿತ್ತೀಯ ವಿಚಾರಗಳಲ್ಲಿ ಕೇಂದ್ರ ಸರ್ಕಾರವು ವಿವೇಕಯುತವಾದ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದು ಹೇಳಿದ್ದಾರೆ.

ಯುದ್ಧವು ಹೊರ್ಮುಜ್ ಜಲಸಂಧಿಯಲ್ಲಿ ಅಡ್ಡಿ ಸೃಷ್ಟಿಸಿದೆ. ಇದರಿಂದಾಗಿ ಕಚ್ಚಾ ತೈಲ ಮತ್ತು ಅನಿಲದ ಪೂರೈಕೆಗೆ ಅಡ್ಡಿ ಉಂಟಾಗಿದೆ. ಯುದ್ಧದಿಂದಾಗಿ ಉಂಟಾಗಿರುವ ಸಮಸ್ಯೆಗಳು ಭಾರತದ ಮೇಲೆ ಪರಿಣಾಮ ಬೀರಲು ಆರಂಭಿಸಿವೆ ಎಂದು ಅವರು ತಿಳಿಸಿದ್ದಾರೆ.


ಪವನರಾಜೇ ಹತ್ಯೆ: ತೀರ್ಪು ಜೂ. 16ಕ್ಕೆ

ಮುಂಬೈ: 20 ವರ್ಷಗಳ ಹಿಂದೆ ಮಹಾರಾಷ್ಟ್ರದ ರಾಜಕಾರಣದಲ್ಲಿ ತೀವ್ರ ಸಂಚಲನ ಮೂಡಿಸಿದ್ದ, ಶಿವಸೇನಾ (ಯುಬಿಟಿ) ಸಂಸದ ಓಂಪ್ರಕಾಶ ಭೂಪಾಲಸಿನ್ಹಾ ಅವರ ತಂದೆ ಪವನರಾಜೇ ನಿಂಬಾಳ್ಕರ್ ಕೊಲೆ ಪ್ರಕರಣದ ತೀರ್ಪು ಜೂನ್ 16ರಂದು ಪ್ರಕಟಗೊಳ್ಳಲಿದೆ.

ಉಪಮುಖ್ಯಮಂತ್ರಿ ಮತ್ತು ಎನ್‌ಸಿಪಿ ರಾಷ್ಟ್ರೀಯ ಅಧ್ಯಕ್ಷೆ ಸುನೇತ್ರಾ ಪವಾರ್ ಅವರ ಸಹೋದರ, ಮಾಜಿ ಸಚಿವ ಪದ್ಮಸಿನ್ಹಾ ಪಾಟೀಲ್ ಅವರು ಈ ಪ್ರಕರಣದ ಆರೋಪಿಯಾಗಿದ್ದಾರೆ. ಪಾಟೀಲ್ ಮತ್ತು ನಿಂಬಾಳ್ಕರ್ ಇಬ್ಬರೂ ಸೋದರ ಸಂಬಂಧಿಗಳಾಗಿದ್ದಾರೆ.

ಸಿಬಿಐ ವಿಶೇಷ ನ್ಯಾಯಾಲಯವು ಮೇ 16ರಂದು ತೀರ್ಪು ಪ್ರಕಟಿಸುವುದಾಗಿ ಹೇಳಿತ್ತು. ಆದರೆ, ಈಗ ಅದನ್ನು ಒಂದು ತಿಂಗಳು ಮುಂದೂಡಿದೆ.





ರಫ್ತುದಾರರಿಗೆ ಚಿನ್ನದ ಆಮದಿಗೆ ಮಿತಿ

ನವದೆಹಲಿ (ಪಿಟಿಐ): ಚಿನ್ನ ಮತ್ತು ಬೆಳ್ಳಿಯ ಆಮದು ಸುಂಕವನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಿದ ನಂತರ ಕೇಂದ್ರ ಸರ್ಕಾರವು, ‘ಮುಂಗಡ ದೃಢೀಕರಣ ಯೋಜನೆ’ಯ ಅಡಿಯಲ್ಲಿ ಚಿನ್ನವನ್ನು ಆಮದು ಮಾಡಿಕೊಳ್ಳುವವರಿಗೆ 100 ಕೆ.ಜಿ. ಮಿತಿ ವಿಧಿಸಿದೆ.

ರಫ್ತುದಾರರು ಈ ಯೋಜನೆಯ ಅಡಿಯಲ್ಲಿ ಕಚ್ಚಾ ವಸ್ತುಗಳನ್ನು ಅಥವಾ ರಫ್ತು ಉದ್ದೇಶದ ಉತ್ಪನ್ನವೊಂದರ ತಯಾರಿಕೆಗೆ ಅಗತ್ಯವಿರುವ ಇತರ ವಸ್ತುಗಳನ್ನು ಶೂನ್ಯ ಸುಂಕ ದರದಲ್ಲಿ ಆಮದು ಮಾಡಿಕೊಳ್ಳಲು ಅವಕಾಶ ಇದೆ.

ಈ ಯೋಜನೆಯ ಅಡಿಯಲ್ಲಿ ಚಿನ್ನದ ಆಮದಿಗೆ ಈ ಮೊದಲು ಮಿತಿ ಇರಲಿಲ್ಲ. ನಿರ್ಬಂಧಕ್ಕೆ ಸಂಬಂಧಿಸಿದ ಆದೇಶವನ್ನು ವಿದೇಶ ವ್ಯಾಪಾರಗಳ ಮಹಾನಿರ್ದೇಶನಾಲಯದ (ಡಿಜಿಎಫ್‌ಟಿ) ಹೊರಡಿಸಿದೆ.

‘ಮತ್ತೆ ಕೆಣಕಿದರೆ ಭಾರಿ ದಾಳಿ’

ಜೈಪುರ (ಪಿಟಿಐ): ಮತ್ತೆ ಕೆಣಕಿದರೆ ಭಾರತವು ಭಾರಿ ಪ್ರತಿದಾಳಿ ನಡೆಸಲಿದೆ. ಭಯೋತ್ಪಾದನೆಯ ವಿರುದ್ಧ ಭಾರತವು ಶೂನ್ಯ ಸಹಿಷ್ಣುತೆ ಹೊಂದಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಪಾಕಿಸ್ತಾನಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ.

ರಾಜಸ್ಥಾನದ ನಾಗೌರ್‌ನ ಮೆರ್ತಾದಲ್ಲಿ ರಜಪೂತ ದೊರೆ ರಾವ್ ದುಡಾ ಪ್ರತಿಮೆಯನ್ನು ಅನಾವರಣಗೊಳಿಸಿದ ಬಳಿಕ ರಾಜನಾಥ್ ಮಾತನಾಡಿದರು.

‘ಸಿಂಧೂರ’ ಕಾರ್ಯಾಚರಣೆಯು ಪಾಕಿಸ್ತಾನಕ್ಕೆ ಬಲವಾದ ಸಂದೇಶವನ್ನು ರವಾನಿಸಿದೆ. ಪಾಕಿಸ್ತಾನ ಮತ್ತೆ ಹಳೆ ದಾರಿ ಹಿಡಿದರೆ, ಈವರೆಗೆ ಎದುರಿಸದ ಪರಿಣಾಮ ಎದುರಿಸಬೇಕಾಗುತ್ತದೆ ಎಂದರು.


‘ಬ್ರಿಕ್ಸ್’ನ ಉನ್ನತ ಮಟ್ಟದ ರಾಜತಾಂತ್ರಿಕರಿಗೆ ಪ್ರಧಾನಿ ಆತಿಥ್ಯ

ವಿದೇಶಾಂಗ ಸಚಿವರ ಜತೆ ಮೋದಿ ಚರ್ಚೆ

ನವದೆಹಲಿ (ಪಿಟಿಐ): ‘ಬ್ರಿಕ್ಸ್’ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಗೆ ಗುರುವಾರ ಚಾಲನೆ ದೊರೆತಿದ್ದು, ‘ಪ್ರಭಾವಿ ಬಣ’ದ ಉನ್ನತ ಮಟ್ಟದ ರಾಜತಾಂತ್ರಿಕರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಆತಿಥ್ಯ ನೀಡಿದರು.

ಮೋದಿ ಅವರನ್ನು ರಷ್ಯಾದ ವಿದೇಶಾಂಗ ಸಚಿವ ಸೆರ್ಗಿ ಲಾವ್ರೊ, ಇರಾನ್‌ನ ಅಬ್ಬಾಸ್ ಅರಾಘ್ಚಿ, ಬ್ರೆಜಿಲ್‌ನ ಮೌರೊ ವಿಯೆರಾ, ಇಂಡೋನೇಷ್ಯಾದ ಸುಗಿಯೊನೊ ಮತ್ತು ದಕ್ಷಿಣ ಆಫ್ರಿಕಾದ ರೊನಾಲ್ಡ್ ಲಮೋಲಾ ಭೇಟಿ ಮಾಡಿ ಚರ್ಚಿಸಿದರು.

ಪಶ್ಚಿಮ ಏಷ್ಯಾ ಬಿಕ್ಕಟ್ಟಿನಿಂದ ಎದುರಾಗಿರುವ ಆರ್ಥಿಕ ಪರಿಣಾಮಗಳು, ಇಂಧನ ಪೂರೈಕೆಯಲ್ಲಿನ ವ್ಯತ್ಯಯ ಮತ್ತು ವ್ಯಾಪಾರ ಹಾಗೂ ಸುಂಕಗಳ ಮೇಲಿನ ಅಮೆರಿಕ ನೀತಿಯೊಂದಿಗೆ ‘ಬ್ರಿಕ್ಸ್’ ರಾಷ್ಟ್ರಗಳು ಹೆಣಗಾಡುತ್ತಿರುವಾಗ, ಭಾರತ ಆಯೋಜಿಸಿರುವ ಈ ಸಭೆಯು ಹೆಚ್ಚಿನ ಮಹತ್ವ ಪಡೆದುಕೊಂಡಿದೆ.



ನವದೆಹಲಿಯಲ್ಲಿ ‘ಬ್ರಿಕ್ಸ್’ ರಾಷ್ಟ್ರಗಳ ವಿದೇಶಾಂಗ ಸಚಿವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರುವಾರ ಭೇಟಿ ಮಾಡಿದರು —ಪಿಟಿಐ ಚಿತ್ರ

‘ಬ್ರಿಕ್ಸ್’ನ ನಾಯಕತ್ವ ವಹಿಸಿರುವ ಭಾರತವು ಸೆಪ್ಟೆಂಬರ್‌ನಲ್ಲಿ ನಡೆಯುವ ವಾರ್ಷಿಕ ಶೃಂಗಸಭೆಗೂ ಮುನ್ನ ಗುರುವಾರದಿಂದ ಎರಡು ದಿನಗಳ ಸಭೆಯನ್ನು ಆಯೋಜಿಸಿದೆ. ಸಭೆಯ ಅಧ್ಯಕ್ಷತೆಯನ್ನು ವಿದೇಶಾಂಗ ಸಚಿವ ಎಸ್. ಜೈಶಂಕರ್ ವಹಿಸಿದ್ದಾರೆ.

ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾವನ್ನು ಒಳಗೊಂಡಿದ್ದ ಬ್ರಿಕ್ಸ್‌ಗೆ 2024ರಲ್ಲಿ ಈಜಿಪ್ಟ್, ಇಥಿಯೋಪಿಯಾ, ಇರಾನ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ರಾಷ್ಟ್ರಗಳು ಸೇರ್ಪಡೆಯಾಗಿದ್ದವು. 2025ರಲ್ಲಿ ಇಂಡೋನೇಷ್ಯಾ ಸೇರ್ಪಡೆಯಾಗಿತ್ತು.

ಇದು ವಿಶ್ವದ 11 ಪ್ರಮುಖ ಉದಯೋನ್ಮುಖ ಆರ್ಥಿಕತೆಗಳನ್ನು ಒಟ್ಟುಗೂಡಿಸುವ ಮೂಲಕ ಪ್ರಭಾವಶಾಲಿ ಗುಂಪಾಗಿ ಹೊರಹೊಮ್ಮಿದೆ. ಇದು ಜಾಗತಿಕ ಜನಸಂಖ್ಯೆಯ ಸುಮಾರು ಶೇ 49.5ರಷ್ಟು, ಜಾಗತಿಕ ಜಿಡಿಪಿಯ ಸುಮಾರು ಶೇ 40 ಮತ್ತು ಜಾಗತಿಕ ವ್ಯಾಪಾರದ ಸುಮಾರು ಶೇ 26ರಷ್ಟನ್ನು ಪ್ರತಿನಿಧಿಸುತ್ತದೆ.

‘ಭಾರತದ ಹಡಗಿನ ಮೇಲೆ ದಾಳಿ ಸಲ್ಲದು’

ನವದೆಹಲಿ (ಪಿಟಿಐ): ಭಾರತದ ಧ್ವಜವಿದ್ದ ವಾಣಿಜ್ಯ ಹಡಗಿನ ಮೇಲೆ ಒಮಾನ್‌ನ ಕರಾವಳಿಯಲ್ಲಿ ದಾಳಿ ನಡೆದಿದ್ದು, ಹಡಗಿನ ಎಲ್ಲ 14 ಸಿಬ್ಬಂದಿ ಸುರಕ್ಷಿತವಾಗಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ಗುರುವಾರ ತಿಳಿಸಿದೆ.

‘ದಾಳಿ ನಡೆಸಿದ್ದು ಯಾರು ಎನ್ನುವುದು ಸದ್ಯಕ್ಕೆ ತಿಳಿದುಬಂದಿಲ್ಲ. ಈ ದಾಳಿ ಸಹಿಸುವಂಥದ್ದಲ್ಲ. ವಾಣಿಜ್ಯ ಮತ್ತು ನಾಗರಿಕ ಹಡಗುಗಳನ್ನು ಗುರಿಯಾಗಿಸಿ ದಾಳಿ ಮುಂದುವರಿದರೆ ಅದು ಅತ್ಯಂತ ಖಂಡನೀಯ’ ಎಂದು ಸಚಿವಾಲಯ ಹೇಳಿದೆ.

‘ಸೊಮಾಲಿಯಾದಿಂದ ಬರುತ್ತಿದ್ದ ಈ ಹಡಗು ದಾಳಿಯಿಂದ ಬೆಂಕಿ ಹೊತ್ತಿಕೊಂಡು ಮುಳುಗಲಾರಂಭಿಸಿತು. ಕೂಡಲೇ ಸಿಬ್ಬಂದಿಯನ್ನು ರಕ್ಷಿಸಿದ ಒಮನ್ ಆಡಳಿತಕ್ಕೆ ನಾವು ಧನ್ಯವಾದ ಸಲ್ಲಿಸುತ್ತೇವೆ. ಸಿಬ್ಬಂದಿಯನ್ನು ಒಮನ್ ಕರಾವಳಿ ಪಡೆಯು ದಿಬಾ ಬಂದರಿಗೆ ಕರೆತಂದಿದೆ’ ಎಂದು ಸಚಿವಾಲಯ ತಿಳಿಸಿದೆ.

ಅಮೆರಿಕ ಮತ್ತು ಇರಾನ್ ನಡುವೆ ಯುದ್ಧ ಆರಂಭವಾದ ನಂತರ ಭಾರತದ ಧ್ವಜವಿಲ್ಲದ ಎರಡು ಹಡಗುಗಳ ಮೇಲೆ ದಾಳಿ ನಡೆದಿದೆ.

ಮುಂದಿನ ದಶಕದಲ್ಲಿ ಅಧಿಕಾರ ಹಸ್ತಾಂತರ: ಮಿತ್ತಲ್

ನವದೆಹಲಿ (ಪಿಟಿಐ): ಭಾರ್ತಿ ಏರ್‌ಟೆಲ್ ಕಂಪನಿಯ ಆಡಳಿತವನ್ನು ಸುನಿಲ್ ಭಾರ್ತಿ ಮಿತ್ತಲ್ ಅವರು ಮುಂದಿನ ದಶಕದಲ್ಲಿ ತಮ್ಮ ಮಕ್ಕಳಿಗೆ ಹಸ್ತಾಂತರ ಮಾಡುವ ಉದ್ದೇಶ ಹೊಂದಿದ್ದಾರೆ.

ಅಲ್ಲದೆ, ಪ್ರವರ್ತಕ ಕಂಪನಿಯಾದ ಭಾರ್ತಿ ಟೆಲಿಕಾಂ, ಏರ್‌ಟೆಲ್‌ನಲ್ಲಿ ಮತ್ತೆ ಶೇ 50ಕ್ಕಿಂತ ಹೆಚ್ಚು ಷೇರುಪಾಲು ಹೊಂದಬೇಕು ಎಂದು ಅವರು ಬಯಸಿದ್ದಾರೆ. ಈಗ ಭಾರ್ತಿ ಟೆಲಿಕಾಂ ಕಂಪನಿಯು ಏರ್‌ಟೆಲ್‌ನಲ್ಲಿ ಶೇ 40.47ರಷ್ಟು ಪಾಲು ಹೊಂದಿದೆ.

ಮುಂಬೈ ಧಾರಣೆ (ಶೇಂಗಾ)

14-05-2026	
ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1600(1610)
ಒಂದು ವಾರದ ಡೆಲಿವರಿ	1595 (1605)
ಪಾಮ್ ವಾರದ ಡೆಲಿವರಿ	1468(1468)
ಸೂರ್ಯಕಾಂತಿ ಎಣ್ಣೆ ಕಚ್ಚಾ	1525 (1525)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,60,000 (1,60,000)
ಬೆಳ್ಳಿ ಕೆ.ಜಿಗೆ	2,80,000 (2,88,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಬಾಗ್ಮನೆ ಪ್ರಗತಿ ಎಂದರೆ ಅದು ಕರ್ನಾಟಕದ ಪ್ರಗತಿ: ಡಿ.ಕೆ.ಶಿವಕುಮಾರ್

‘ವಿಶ್ವದಲ್ಲೇ 3ನೇ ದೊಡ್ಡ ಕಚೇರಿ ‘ಬಾಗ್ಮನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕದ ಬಾಗ್ಮನೆ ಸಂಸ್ಥೆಯ ಸಾಧನೆಗೆ ಇಡೀ ದೇಶ ಹೆಮ್ಮೆಪಡುತ್ತಿದೆ. 20 ಕೋಟಿ ಚದರ ಅಡಿ ವಿಸ್ತಾರದಲ್ಲಿ ಎ-ಗ್ರೇಡ್ ಕಚೇರಿ ಜಾಗವನ್ನು ಹೊಂದಿರುವ ಇದು ಭಾರತದಲ್ಲೇ ಅತಿ ದೊಡ್ಡದಾಗಿದೆ, ವಿಶ್ವದಲ್ಲಿ ಮೂರನೇ ಸ್ಥಾನದಲ್ಲಿದೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಮುಂಬೈನ ರಾಷ್ಟ್ರೀಯ ಷೇರು ಪೇಟೆಯಲ್ಲಿ ಗುರುವಾರ ಬಾಗ್ಮನೆ ಕೇಂದ್ರ ಕಚೇರಿ ಹಮ್ಮಿಕೊಂಡಿದ್ದ ‘ಬೆಲ್ ರಿಂಗಿಂಗ್’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ‘ಬಾಗ್ಮನೆ ಪ್ರಗತಿ ಎಂದರೆ ಅದು ಕರ್ನಾಟಕದ ಪ್ರಗತಿ. ಬೆಂಗಳೂರು ಪ್ರತಿಭಾವಂತ ಮಾನವ ಸಂಪನ್ಮೂಲಗಳಿಗೆ ಹೆಸರಾಗಿದೆ. ಮೂರು ದಶಕಗಳ ಪಯಣದಲ್ಲಿ ಸಂಸ್ಥೆ ಹೊಸ ಮೈಲಿಗಲ್ಲು ಸ್ಥಾಪಿಸಿದೆ. ಬೆಳವಣಿಗೆ ಹಿಂದೆ ಬಹಳಷ್ಟು ಕಠಿಣ ಪರಿಶ್ರಮವಿದೆ. ಆರ್ಥಿಕ ಪ್ರಗತಿಗಿಂತ ಗಳಿಸಿರುವ ನಂಬಿಕೆ ದೊಡ್ಡದಿದೆ. ಮಾಲೀಕರಾದ ರಾಜಾ ಮತ್ತು ಅವರ ಕುಟುಂಬ ಕೊಟ್ಟಿರುವ ನಂಬಿಕೆ ಅಪಾರ’ ಎಂದರು.



ಮುಂಬೈನಲ್ಲಿ ಬಾಗ್ಮನೆ ಕೇಂದ್ರ ಕಚೇರಿ ಹಮ್ಮಿಕೊಂಡಿದ್ದ ‘ಬೆಲ್ ರಿಂಗಿಂಗ್’ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗವಹಿಸಿದ್ದರು. ಸಂಸ್ಥೆಯ ಮಾಲೀಕ ರಾಜಾ ಬಾಗ್ಮನೆ ಉಪಸ್ಥಿತರಿದ್ದರು

‘ನೀವು ವೇಗವಾಗಿ ಸಾಗಬೇಕಾದರೆ ಒಬ್ಬರೇ ಸಾಗಬೇಕು. ಬಹುದೂರ ಸಾಗಬೇಕಾದರೆ ಎಲ್ಲರೊಂದಿಗೆ ಸೇರಿ ಸಾಗಬೇಕು ಎಂದು ರತನ್ ಟಾಟಾ ಹೇಳಿದ್ದರು. ಅದೇ ರೀತಿ ಬಾಗ್ಮನೆ ಸಂಸ್ಥೆ ಮಾಲೀಕ ರಾಜಾ ಅವರು ಎಲ್ಲರನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಪ್ರಗತಿಯ ಹಾದಿಯಲ್ಲಿ ಸಾಗುತ್ತಿದ್ದಾರೆ’ ಎಂದು ಹೇಳಿದರು.

‘ಕರ್ನಾಟಕ ಪ್ರತಿ ವರ್ಷ 1 ಲಕ್ಷ ಐಟಿ ವೃತ್ತಿಪರರನ್ನು ಸೃಷ್ಟಿಸುತ್ತಿದೆ. ಕ್ಯಾಲಿಫೋರ್ನಿಯಾದಲ್ಲಿ 13 ಲಕ್ಷ ಇದ್ದರೆ, ಬೆಂಗಳೂರಿನಲ್ಲಿ 26 ಲಕ್ಷ ಎಂಜಿನಿಯರ್ ವೃತ್ತಿಪರರಿದ್ದಾರೆ. ವಿದೇಶಿ ಪಾಸ್‌ಪೋರ್ಟ್ ಹೊಂದಿರುವ 2 ಲಕ್ಷ ಮಂದಿ ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಬೆಂಗಳೂರಿನ 16 ಕಿ.ಮೀ ರಸ್ತೆಯಲ್ಲೇ 16 ಲಕ್ಷ ಎಂಜಿನಿಯರ್‌ಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಇದೇ ಬೆಂಗಳೂರಿನ ಶಕ್ತಿ’ ಎಂದು ಬಣ್ಣಿಸಿದರು.

ಸತೀಶನ್ ಕೇರಳಂ ಸಿ.ಎಂ

ಒಂದನೇ ಪುಟದಿಂದ...

ಮುಖ್ಯಮಂತ್ರಿ ಗಾದಿಗೇರಲು ಹೈಕಮಾಂಡ್ ಮಟ್ಟದಲ್ಲಿ ಭಾರಿ ಲಾಬಿ ನಡೆಸಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರೊಂದಿಗೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಗುರುವಾರ ಸುಮಾರು ಎರಡೂವರೆ ಗಂಟೆ ಸಮಾಲೋಚನೆ ನಡೆಸಿ ಮನವೊಲಿಸಿದರು. ಬಳಿಕ ಕೇರಳ ಕಾಂಗ್ರೆಸ್ ಉಸ್ತುವಾರಿ ದೀಪಾ ದಾಸ್‌ಮುನ್ಶಿ ಇಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ನಿರ್ಧಾರ ಪ್ರಕಟಿಸಿದರು. ‘ಚರ್ಚೆಗಳ ಆಧಾರದಲ್ಲಿ ಸತೀಶನ್ ಅವರನ್ನು ಸಿಎಲ್‌ಪಿ ನಾಯಕರನ್ನಾಗಿ ನೇಮಿಸಲು ನಿರ್ಧರಿಸಲಾಗಿದೆ’ ಎಂದರು.

> ಹೈಕಮಾಂಡ್ ನಿರ್ಧಾರವನ್ನು ಒಪ್ಪಿಕೊಂಡು ಅದನ್ನು ಕಾರ್ಯರೂಪಕ್ಕೆ ತರಲು ಶ್ರಮಿಸುತ್ತೇನೆ. ಕೇರಳ ಸರ್ಕಾರಕ್ಕೆ ಎಲ್ಲಾ ಬೆಂಬಲ ನೀಡುತ್ತೇನೆ
> **ಕೆ.ಸಿ. ವೇಣುಗೋಪಾಲ್**
> ಎಐಸಿಸಿ ಪ್ರಧಾನ ಕಾರ್ಯದರ್ಶಿ

ಹೆಚ್ಚಿನ ಸಂಖ್ಯೆಯ ಶಾಸಕರ ಬೆಂಬಲ ತನಗಿದೆ ಎಂದು ವೇಣುಗೋಪಾಲ್ ಪ್ರತಿಪಾದಿಸಿದ್ದರು. ಹಿರಿತನದ ಆಧಾರದಲ್ಲಿ ತಮ್ಮನ್ನು ಪರಿಗಣಿಸಬೇಕು ಎಂದು ಚೆನ್ನಿತ್ತಲ ಪಟ್ಟು ಹಿಡಿದಿದ್ದರು. ಫಲಿತಾಂಶದ ನಂತರ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾದ ಭಾರಿ ಬೆಂಬಲ ಹಾಗೂ ಮುಸ್ಲಿಂ ಲೀಗ್ ಸೇರಿದಂತೆ ಮಿತ್ರಪಕ್ಷಗಳ ಒತ್ತಡದಿಂದ ಸತೀಶನ್ ಅವರಿಗೆ ಹೈಕಮಾಂಡ್ ಮಣೆ ಹಾಕಿತು.

ಮೂವರು ಆಕಾಂಕ್ಷಿಗಳೊಂದಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಸಭೆ ನಡೆಸಿದರೂ ಬಿಕ್ಕಟ್ಟು ನಿವಾರಣೆಯಾಗಿರಲಿಲ್ಲ. ಮೂವರು ನಾಯಕರು ಪಟ್ಟು ಹಿಡಿದಿದ್ದರಿಂದ ಅನಿಶ್ಚಿತತೆ ಮುಂದುವರಿದಿತ್ತು. ಆ ಬಳಿಕ, ಕೇರಳಂ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷರ ಜತೆಗೆ ಹೈಕಮಾಂಡ್ ಸಮಾಲೋಚನೆ ನಡೆಸಿತ್ತು. ‘ಸತೀಶನ್ ಅವರು ವಿಪಕ್ಷ ನಾಯಕರಾಗಿ ಐದು ವರ್ಷ ಉತ್ತಮ ಕೆಲಸ ಮಾಡಿದ್ದರು. ಅವರನ್ನು ನಿರ್ಲಕ್ಷ್ಯ ಮಾಡಿದರೆ ತಪ್ಪು ಸಂದೇಶ ರವಾನಿಸಿದಂತಾಗುತ್ತದೆ. ವೇಣುಗೋಪಾಲ್ ಹೈಕಮಾಂಡ್‌ನಲ್ಲಿ ಪ್ರಭಾವಿ ಹುದ್ದೆಯಲ್ಲಿದ್ದಾರೆ. ಅವರನ್ನು ಆಯ್ಕೆ ಮಾಡಿದರೆ ಒತ್ತಡಕ್ಕೆ ಮಣಿದಂತಾಗುತ್ತದೆ’ ಎಂದು ಮಾಜಿ ಅಧ್ಯಕ್ಷರು ಹೈಕಮಾಂಡ್‌ಗೆ ಮನವರಿಕೆ ಮಾಡಿ ಕೊಟ್ಟಿದ್ದರು.

ವೇಣುಗೋಪಾಲ್ ಅವರು ಸಂಸದರಾಗಿರುವುದರಿಂದ ವಿಧಾನಸಭೆ ಮತ್ತು ಲೋಕಸಭೆಗೆ ಉಪಚುನಾವಣೆ ನಡೆಸುವ ವಿಷಯವನ್ನು ಕೆಲವು ನಾಯಕರು ಎತ್ತಿ ತೋರಿಸಿದ್ದಾರೆ. ಆಲಪ್ಪುಳ ಲೋಕಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ನಕಾರಾತ್ಮಕ ಫಲಿತಾಂಶದ ಸಾಧ್ಯತೆಯ ಬಗ್ಗೆಯೂ ಹಿರಿಯ ಮುಖಂಡರು ಎಚ್ಚರಿಸಿದ್ದರು. ಇನ್ನೊಂದೆಡೆ, ವಯನಾಡಿನಲ್ಲಿ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ವಾದ್ರಾ ವಿರುದ್ಧ ಪೋಸ್ಟರ್‌ಗಳನ್ನು ಅಂಟಿಸಿ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದರು.

ಸತೀಶನ್ ಅವರಿಗೆ ಅನುಕೂಲ ಮಾಡಿಕೊಟ್ಟ ಇನ್ನೊಂದು ವಿಷಯವೆಂದರೆ ಮುಸ್ಲಿಂ ಲೀಗ್‌ನಿಂದ ಅವರು ಪಡೆದ ಅಚಲ ಬೆಂಬಲ. ಅವರ ಕೆಲವೊಂದು ವಿರೋಧಿಗಳು ಇದೇ ವಿಷಯವನ್ನು ಅವರ ವಿರುದ್ಧ ಬಳಸಲು ಪ್ರಯತ್ನಿಸಿದ್ದರು. ಅವರು ಮಿತ್ರಪಕ್ಷಗಳ ಒತ್ತಡಕ್ಕೆ ಮಣಿಯಬಹುದು ಎಂದು ಹೈಕಮಾಂಡ್ ಮುಂದೆ ಪ್ರತಿಪಾದಿಸಿದ್ದರು.

ರಾಜ್ಯದಲ್ಲಿ ಸತತ ಸೋಲಿನ ನಂತರ ಪಕ್ಷವು ನಿಷ್ಕ್ರಿಯವಾಗಿತ್ತು. 2021ರಿಂದ ಸತೀಶನ್ ಪಕ್ಷವನ್ನು ಮುನ್ನಡೆಸಿದ್ದರು. ಅವರ ಸಂಘಟನಾ ಶಕ್ತಿ ಮತ್ತು ಸೈದ್ಧಾಂತಿಕ ಸ್ಪಷ್ಟತೆಯನ್ನು ಪಕ್ಷ ಗುರುತಿಸಿ ಉನ್ನತ ಸ್ಥಾನಕ್ಕೆ ಆಯ್ಕೆ ಮಾಡಿದೆ ಎಂದು ಮೂಲಗಳು ಹೇಳಿವೆ.

ಅದೇ ಸಮಯದಲ್ಲಿ, ವೇಣುಗೋಪಾಲ್ ಮತ್ತು ಚೆನ್ನಿತ್ತಲ ಅವರು ಪಕ್ಷದ ಹಿರಿಯ ನಾಯಕರು. ರಾಷ್ಟ್ರ ಮಟ್ಟದಲ್ಲಿ ಪಕ್ಷದ ಕಾರ್ಯಯೋಜನೆಯ ಭಾಗವಾಗಿರಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಉಗ್ರ ಇಕ್ಬಾಲ್ ಹಸ್ತಾಂತರಿಸಿದ ಪೋರ್ಚುಗಲ್

ಲಿಸ್ಬನ್ (ಪಿಟಿಐ): ಉಗ್ರ ಕೃತ್ಯಗಳಿಗೆ ಹಣ ನೀಡುತ್ತಿದ್ದ ಮತ್ತು ಪಾಕಿಸ್ತಾನದಿಂದ ಮಾದಕ ವಸ್ತುಗಳನ್ನು ಪಂಜಾಬ್‌ಗೆ ಕಳ್ಳಸಾಗಣೆ ಮಾಡುತ್ತಿದ್ದ ಆರೋಪ ಹೊತ್ತಿರುವ ಇಕ್ಬಾಲ್ ಸಿಂಗ್ ಅಲಿಯಾಸ್ ಶೇರಾನನ್ನು ಪೋರ್ಚುಗೀಸ್ ಸರ್ಕಾರವು ಭಾರತಕ್ಕೆ ಹಸ್ತಾಂತರಿಸಿದೆ.

ಇದಕ್ಕಾಗಿ ಭಾರತವು ಪೋರ್ಚುಗೀಸ್ ಸರ್ಕಾರಕ್ಕೆ ಧನ್ಯವಾದ ತಿಳಿಸಿದೆ. ಬುಧವಾರ ದೆಹಲಿ ವಿಮಾನ ನಿಲ್ದಾಣಕ್ಕೆ ಬಂದಿಳಿದ ಇಕ್ಬಾಲ್‌ನನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಂಧಿಸಿತು.

ಈತನು ತಲೆಮರೆಸಿಕೊಂಡು 2020ರಲ್ಲಿ ಪೋರ್ಚುಗಲ್‌ಗೆ ತೆರಳಿದ್ದನು.

ಕುಕಿ, ನಾಗಾ ಸಮುದಾಯದ 38 ಜನರ ಒತ್ತೆ ● ಬಿಡುಗಡೆಗೆ ಪ್ರಯತ್ನ

ಮಣಿಪುರ: ಮತ್ತೆ ಭುಗಿಲೆದ್ದ ಹಿಂಸಾಚಾರ

ಪ್ರಜಾವಾಣಿ ವಾರ್ತೆ/ಪಿಟಿಐ

ಇಂಫಾಲ್: ಮೈತೇಯಿ ಮತ್ತು ಕುಕಿ ಸಮುದಾಯದ ನಡುವಿನ ಸಂಘರ್ಷ ಕಣವಾಗಿರುವ ಮಣಿಪುರದಲ್ಲಿ, ಎರಡು ದಿನಗಳಿಂದ ಕುಕಿ-ಝೊ ಮತ್ತು ನಾಗಾ ಬುಡಕಟ್ಟು ಸಮುದಾಯದ ನಡುವೆ ಹಿಂಸಾಚಾರ ಭುಗಿಲೆದ್ದಿದೆ.

ಮೂವರು ಚರ್ಚ್ ಮುಖಂಡರ ಹತ್ಯೆ ಖಂಡಿಸಿ ಎರಡೂ ಸಮುದಾಯಗಳು ಮಣಿಪುರ ಬಂದ್‌ಗೆ ಕರೆ ನೀಡಿದ್ದು, ಜನಜೀವನ ಅಸ್ತವ್ಯಸ್ಥಗೊಂಡಿದೆ.

ಕಾಂಗ್‌ಪೋಕ್ಪಿ, ಚುರಾಚಾಂದ್‌ಪುರ ಮತ್ತು ಚಂದೇಲ್ ಜಿಲ್ಲೆಗಳಲ್ಲಿ ಗುರುವಾರ ಶಾಲಾ-ಕಾಲೇಜುಗಳು, ಅಂಗಡಿಗಳು ತೆರೆದಿರಲಿಲ್ಲ. ಜನ, ವಾಹನ ಸಂಚಾರ ವಿರಳವಾಗಿತ್ತು. ಸರ್ಕಾರಿ ಕಚೇರಿಗಳು ತೆರೆದಿದ್ದರೂ ಹೆಚ್ಚಿನ ಅಧಿಕಾರಿಗಳು ಗೈರುಹಾಜರಾಗಿದ್ದರು.

‘ಕುಕಿ, ನಾಗಾ ಸಮುದಾಯದ 38 ಜನರನ್ನು ಒತ್ತೆಯಾಳಾಗಿ ಇರಿಸಲಾಗಿದ್ದು, ಅವರ ಸುರಕ್ಷಿತ ಬಿಡುಗಡೆಗೆ ಅವಿರತ ಪ್ರಯತ್ನಗಳು ನಡೆದಿವೆ’ ಎಂದು ಗೃಹ ಸಚಿವ ಗೋವಿಂದಾಸ್ ಸಿಂಗ್ ಹೇಳಿದ್ದಾರೆ

‘ಒತ್ತೆಯಾಳುಗಳ ನಿಖರ ಸಂಖ್ಯೆ ತಿಳಿದಿಲ್ಲ, ಮಣಿಪುರದಲ್ಲಿ ಕುಕಿಗಳು, ನಾಗಾಗಳ ನಡುವಿನ ಉದ್ವಿಗ್ನತೆ ಕಡಿಮೆ ಮಾಡಿ, ಸಂಯಮ ಪಾಲಿಸಬೇಕು’ ಎಂದು ಕುಕಿ ಇನ್ಪಿ ಮಣಿಪುರ (ಕೆಐಎಂ) ಘಟಕದ ಮಾಹಿತಿ ಕಾರ್ಯದರ್ಶಿ ಜಂಗೋಲನ್ ಹಾಕಿಪ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

‘ನಾಗಾ ಸಮುದಾಯದ ಹಲವರನ್ನು ಕುಕಿ ಪ್ರಾಬಲ್ಯ ಇರುವ ಸೇನಾಪತಿ ಜಿಲ್ಲೆಯಲ್ಲಿ ಒತ್ತೆಯಾಳುಗಳಾಗಿ ಇರಿಸಲಾಗಿದೆ’ ಎಂದು ಸಂಯುಕ್ತ ನಾಗಾ ಸಮಿತಿ (ಯುಎನ್‌ಸಿ) ಆರೋಪಿಸಿದೆ.

ಕಾಂಗ್‌ಪೋಕ್ಪಿ ಜಿಲ್ಲೆಯಲ್ಲಿ ಬಂಡುಕೋರರು ಬುಧವಾರ ನಡೆಸಿದ ದಾಳಿಯಲ್ಲಿ ಕುಕಿ ಥಾಡೌ ಚರ್ಚ್‌ನ ಮೂವರು ಮುಖಂಡರು ಮೃತಪಟ್ಟಿದ್ದರು. ಥಾಡೊಸ್ ಜನರು ಕುಕಿ-ಝೊ ಸಮುದಾಯದ ಭಾಗವಾಗಿದ್ದಾರೆ.

48 ಗಂಟೆಗಳ ಬಂದ್‌ಗೆ ಕರೆ: ಘಟನೆಯನ್ನು ಖಂಡಿಸಿ 48 ಗಂಟೆಗಳ ಮಣಿಪುರ ಬಂದ್‌ಗೆ ಕುಕಿ ಸಮುದಾಯ ಕರೆ ನೀಡಿದೆ. ಗುರುವಾರ ಬೆಳಿಗ್ಗೆ ಪ್ರತಿಭಟನಕಾರರು ಬಲವಂತವಾಗಿ ಅಂಗಡಿಗಳನ್ನು ಮುಚ್ಚಿಸಿದರು. ಇಂಫಾಲ್ ಮತ್ತು ಕಾಂಗ್‌ಪೋಕ್ಪಿ ಜಿಲ್ಲೆಗಳನ್ನು ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ-2ರಲ್ಲಿ ವಾಹನ ಸಂಚಾರ ಸ್ಥಗಿತಗೊಂಡಿತ್ತು. ಚುರಾಚಾಂದ್‌ಪುರ ಜಿಲ್ಲೆಯಲ್ಲಿ ಝೋಮಿ ವಿದ್ಯಾರ್ಥಿ ಒಕ್ಕೂಟ ಅನಿರ್ದಿಷ್ಟಾವಧಿ ಬಂದ್‌ಗೆ ಕರೆ ನೀಡಿದೆ. ಚಂದೇಲ್ ಜಿಲ್ಲೆಯಲ್ಲಿ ನಾಗಾ ಸಮುದಾಯವು ಬಂದ್‌ಗೆ ಕರೆ ನೀಡಿದ್ದು, ಗುರುವಾರ ವ್ಯಾಪಾರ ವಹಿವಾಟು, ವಾಹನ ಸಂಚಾರ ಬಹುತೇಕ ಸ್ಥಗಿತಗೊಂಡಿತ್ತು.

ಮೈತೇಯಿ ಮತ್ತು ಕುಕಿ ಸಮುದಾಯದ ನಡುವೆ 2023ರ ಮೇ ತಿಂಗಳಲ್ಲಿ ಆರಂಭಗೊಂಡ ಸಂಘರ್ಷವು ಇದುವರೆಗೆ 260 ಜನರನ್ನು ಬಲಿ ಪಡೆದಿದೆ. ಸಾವಿರಾರು ಜನರು ಸ್ಥಳಾಂತರಗೊಂಡಿದ್ದಾರೆ.



ಮಣಿಪುರದಲ್ಲಿ ಕುಕಿ–ಝೊ ಮತ್ತು ನಾಗಾ ಸಮುದಾಯದ ನಡುವೆ ಸಂಘರ್ಷ ತೀವ್ರಗೊಂಡಿದ್ದು, ಗುರುವಾರ ಚುರಾಚಾಂದ್‌ಪುರ ಜಿಲ್ಲೆಯಲ್ಲಿ ಉದ್ವಿಗ್ನ ಸ್ಥಿತಿ ತಲೆದೋರಿತ್ತು — ಪಿಟಿಐ ಚಿತ್ರ

ಕೇಂದ್ರದ ಅಸಮರ್ಥತೆ: ಕಾಂಗ್ರೆಸ್ ಆಕ್ಷೇಪ

‘ಕೇಂದ್ರ ಮತ್ತು ರಾಜ್ಯ ಸರ್ಕಾರ ಸಾಂವಿಧಾನಿಕ ಅಧಿಕಾರ ಚಲಾಯಿಸಲು ಅಸಮರ್ಥ ಆಗಿರುವುದರಿಂದ ಮಣಿಪುರದಲ್ಲಿ ಪದೇ ಪದೇ ಹಿಂಸಾಚಾರ ಭುಗಿಲೇಳುತ್ತಿದೆ. ಮಣಿಪುರದಲ್ಲಿ ನಡೆಯುತ್ತಿರುವ ಕೊಲೆಗಳನ್ನು ಕೇಂದ್ರ ಸರ್ಕಾರ ಇನ್ನೆಷ್ಟು ದಿನ ಮೂಕಪ್ರೇಕ್ಷಕನಂತೆ ನೋಡುತ್ತದೆ’ ಎಂದು ಕಾಂಗ್ರೆಸ್‌ನ ಮಣಿಪುರ ಘಟಕವು ಆಕ್ರೋಶ ವ್ಯಕ್ತಪಡಿಸಿದೆ.

‘ಒಂದೇ ದಿನದಲ್ಲಿ ಮಣಿಪುರದಲ್ಲಿ ಹಿಂಸಾಚಾರಕ್ಕೆ ನಾಲ್ವರು ಬಲಿಯಾಗಿದ್ದಾರೆ. ಇವರಲ್ಲಿ ಮೂವರು ಒಂದೇ ಸಮುದಾಯದವರು. ಒಬ್ಬರು ಬೇರೊಂದು ಸಮುದಾಯಕ್ಕೆ ಸೇರಿದವರು. ಇದು ಪ್ರತೀಕಾರದ ಕೃತ್ಯದಂತೆ ಕಾಣುತ್ತದೆ’ ಎಂದು ಕಾಂಗ್ರೆಸ್‌ನ ಮಣಿಪುರ ರಾಜ್ಯ ಘಟಕದ ಅಧ್ಯಕ್ಷ ಒ.ಇಬೊಬಿ ಸಿಂಗ್ ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಚಿಟಿಕೆ ಸುದ್ದಿ

ಕೆಂಪುಕೋಟೆ ಬಳಿ ಸ್ಫೋಟ: ಆರೋಪ ಪಟ್ಟಿ ಸಲ್ಲಿಕೆ



ನವದೆಹಲಿ (ಪಿಟಿಐ): ಕೆಂಪು ಕೋಟೆ ಸಮೀಪ ಕಾರು ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ 10 ಆರೋಪಿಗಳ ವಿರುದ್ಧ ಎನ್‌ಐಎ 7,500 ಪುಟಗಳ ದೋಷಾರೋಪ ಪಟ್ಟಿಯನ್ನು ಸಲ್ಲಿಸಿದೆ.

ಕಳೆದ ವರ್ಷ ನವೆಂಬರ್ 10ರಂದು ನಡೆದ ಸ್ಫೋಟದಲ್ಲಿ 11 ಮಂದಿ ಮೃತಪಟ್ಟು, ಹಲವರು ಗಾಯಗೊಂಡಿದ್ದರು.

ಮುಖ್ಯ ಸಂಚುಕೋರ ಡಾ.ಉಮರ್ ಉನ್ ನಬಿ (ಮೃತ) ಸೇರಿದಂತೆ ಅಮೀರ್ ರಶೀದ್ ಮಿರ್, ಜಸೀರ್ ಬಿಲಾಲ್ ವಾನಿ, ಡಾ.ಮುಜಾಮಿಲ್ ಶಕೀಲ್, ಡಾ.ಆದಿಲ್ ಅಹ್ಮದ್ ರಾದರ್, ಡಾ.ಶಾಹಿನ್ ಸಯೀದ್, ಮುಫ್ತಿ ಇರ್ಫಾನ್ ಅಹ್ಮದ್ ವಗಾಯ್, ಸೋಯಬ್, ಡಾ.ಬಿಲಾಲ್ ನಸೀರ್ ಮುಲ್ಲಾ ಮತ್ತು ಯಾಸಿರ್ ಅಹ್ಮದ್ ಡಾರ್ ವಿರುದ್ಧ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ಹೇಳಿಕೆಯಲ್ಲಿ ತನಿಖಾ ಸಂಸ್ಥೆ ತಿಳಿಸಿದೆ.

ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ 1967, ಭಾರತೀಯ ನ್ಯಾಯ ಸಂಹಿತೆ–2023, ಸ್ಫೋಟಕ ವಸ್ತುಗಳ ಕಾಯ್ದೆ–1908 ಮತ್ತು ಸಶಸ್ತ್ರ ಕಾಯ್ದೆ–1959ರ ಅಡಿಯಲ್ಲಿ ದೋಷಾರೋಪ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ.

ಫಲಾನುಭವಿಗಳಿಗೆ ₹1,000 ಶೀಘ್ರ: ವಿಜಯ್

ಚೆನ್ನೈ (ಪಿಟಿಐ): ಹಿಂದಿನ ಡಿಎಂಕೆ ಸರ್ಕಾರ ಜಾರಿಗೆ ತಂದಿರುವ 'ಕಲೈಗ್ನರ್ ಮಗಳಿರ್ ಉರಿಮೈ ತೊಗೈ' ಯೋಜನೆಯ ಮಹಿಳಾ ಫಲಾನುಭವಿಗಳಿಗೆ ಮೇ ತಿಂಗಳ ಕಂತು ₹1,000 ಅನ್ನು ಶೀಘ್ರವೇ ನೀಡಲಾಗುವುದು ಎಂದು ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಘೋಷಿಸಿದರು.

ಫಲಾನುಭವಿಗಳ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡಲಾಗುವುದು ಎಂದು ವಿಜಯ್ ಅವರನ್ನು ಉಲ್ಲೇಖಿಸಿ ಸರ್ಕಾರ ಪ್ರಕಟಣೆ ಹೊರಡಿಸಿದೆ.

ಚುನಾವಣೆ ವೇಳೆ ತಾವು ಘೋಷಿಸಿರುವ, 60 ವರ್ಷಕ್ಕಿಂತ ಕಡಿಮೆ ವಯಸ್ಸಿನವರಿಗೆ ಮಾಸಿಕ ₹2,500 ನೆರವು ನೀಡುವ ಯೋಜನೆಯನ್ನು ಜಾರಿಗೆ ತರಲು ಸರ್ಕಾರಕ್ಕೆ ಸಮಯ ಬೇಕಾಗಿದೆ ಎಂದೂ ವಿಜಯ್ ಹೇಳಿದ್ದಾರೆ.

ತುಟ್ಟಿಭತ್ಯೆ ಹೆಚ್ಚಳ: ಸರ್ಕಾರಿ ನೌಕರರು ಹಾಗೂ ಶಿಕ್ಷಕರ ತುಟ್ಟಿಭತ್ಯೆಯನ್ನು (ಡಿಎ) ಶೇ 2ರಷ್ಟು ಏರಿಕೆ ಮಾಡುವುದಾಗಿ ವಿಜಯ್ ಗುರುವಾರ ಘೋಷಿಸಿದ್ದಾರೆ. ಶೇ 58ರಿಂದ 60ಕ್ಕೆ ತುಟ್ಟಿಭತ್ಯೆ ಏರಿಕೆ ಮಾಡಲಾಗಿದ್ದು, ಇದು ಜನವರಿ 1, 2026ರಿಂದ ಪೂರ್ವಾನ್ವಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಏಕ ಚುನಾವಣೆ ನಾಳೆಯಿಂದ ಜೆಪಿಸಿ ಪ್ರವಾಸ

ನವದೆಹಲಿ: ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸುವ 'ಒಂದು ದೇಶ ಒಂದು ಚುನಾವಣೆ'ಗೆ ಸಂಬಂಧಿಸಿದ ಎರಡು ಮಸೂದೆಗಳನ್ನು ಪರಿಶೀಲಿಸಲು ರಚಿಸಿರುವ ಜಂಟಿ ಸಂಸದೀಯ ಸಮಿತಿಯು (ಜೆಪಿಸಿ) ಇದೇ 16ರಿಂದ 21ರ ವರೆಗೆ ಬೆಂಗಳೂರು ಹಾಗೂ ಗಾಂಧಿನಗರಕ್ಕೆ ಅಧ್ಯಯನ ಪ್ರವಾಸ ಕೈಗೊಳ್ಳಲಿದೆ.

ಸಂಸದ ಪಿ.ಪಿ. ಚೌಧರಿ ಅಧ್ಯಕ್ಷತೆಯ ಸಮಿತಿಯು ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು, ವಿಧಾನಸಭೆಯ ಅಧ್ಯಕ್ಷರು, ವಿಧಾನ ಪರಿಷತ್ತಿನ ಸಭಾಪತಿಗಳು, ಚುನಾಯಿತ ಪ್ರತಿನಿಧಿಗಳು, ರಾಜಕೀಯ ಪಕ್ಷಗಳ ಮುಖ್ಯಸ್ಥರು, ರಾಜ್ಯ ಆಡಳಿತ, ಹಣಕಾಸು ಮತ್ತು ಶಿಕ್ಷಣ ಸಂಸ್ಥೆಗಳು, ವೃತ್ತಿಪರ ಸಂಸ್ಥೆಗಳು ಮತ್ತು ನಾಗರಿಕ ಸಮಾಜದ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಲಿದೆ.

ಇ–ರಿಕ್ಷಾದಲ್ಲಿ ಪ್ರಯಾಣಿಸಿದ ಮೇಘವಾಲ್

ಜೈಪುರ: ಕೇಂದ್ರ ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ರೈಲು ನಿಲ್ದಾಣದಿಂದ ರಾಜಸ್ಥಾನದ ಬಿಕಾನೇರ್‌ನಲ್ಲಿರುವ ತಮ್ಮ ನಿವಾಸಕ್ಕೆ ಇ-ರಿಕ್ಷಾದಲ್ಲಿ ಗುರುವಾರ ಪ್ರಯಾಣಿಸಿದರು.

ದೆಹಲಿಯಿಂದ ಬಿಕಾನೇರ್ ರೈಲು ನಿಲ್ದಾಣಕ್ಕೆ ಬಂದಿಳಿದ ಅವರು ಬೆಂಗಾವಲು ವಾಹನದ ಬದಲಾಗಿ ಇ-ರಿಕ್ಷಾ ಮೂಲಕ ನಿವಾಸಕ್ಕೆ ತೆರಳಿದರು.

ಕಾಲ್ನಡಿಗೆ: ಉತ್ತರ ಪ್ರದೇಶದಲ್ಲಿ ಕೆಲವು ಹಿರಿಯ ಅಧಿಕಾರಿಗಳು ಪರಿಸರಸ್ನೇಹಿ ಸಂಚಾರವನ್ನು ಉತ್ತೇಜಿಸುವ ಉದ್ದೇಶದಿಂದ, ಸೈಕಲ್ ಮತ್ತು ಕಾಲ್ನಡಿಗೆ ಮೂಲಕ ಗುರುವಾರ ಕಚೇರಿ ತಲುಪಿದರು.

ಮ್ಯಾಪಿಂಗ್: ಬೆಂಗಳೂರೇ ಹಿಂದೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಪೂರ್ವಭಾವಿಯಾಗಿ ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿಯು ನಡೆಸುತ್ತಿರುವ ಮತದಾರರ ಪಟ್ಟಿಯ ಮ್ಯಾಪಿಂಗ್‌ನಲ್ಲಿ ಬೆಂಗಳೂರಿನಲ್ಲಿಯೇ ಅತ್ಯಂತ ಕಡಿಮೆ ಪ್ರಗತಿ ದಾಖಲಾಗಿದೆ.

ಇಡೀ ರಾಜ್ಯದಲ್ಲಿ 75.70 ಲಕ್ಷ ಮತದಾರರ ಮ್ಯಾಪಿಂಗ್ ಪ್ರಕ್ರಿಯೆ ಇನ್ನಷ್ಟೇ ನಡೆಯಬೇಕಿದೆ. ಅದರಲ್ಲಿ ಬೆಂಗಳೂರಿನ ಮತದಾರರ ಸಂಖ್ಯೆಯೇ 31.11 ಲಕ್ಷದಷ್ಟಿದೆ.

2025ರ ಅಂತಿಮ ಮತದಾರರ ಪಟ್ಟಿಯ ಪ್ರಕಾರ ಬೆಂಗಳೂರು ನಗರದಲ್ಲಿ ಒಟ್ಟು 1.03 ಕೋಟಿಯಷ್ಟು ಮತದಾರರು ಇದ್ದಾರೆ. ಈ ಪೈಕಿ ಮೇ 14ರ ಗುರುವಾರದ ಬೆಳಿಗ್ಗೆಯ ವೇಳೆಗೆ 71.89 ಲಕ್ಷ ಮತದಾರರ ವಿವರಗಳನ್ನಷ್ಟೇ ಹೋಲಿಸಿ ನೋಡಿ, ಖಚಿತಪಡಿಸಿಕೊಳ್ಳಲಾಗಿದೆ. ಒಟ್ಟು ಮತದಾರರ ಸಂಖ್ಯೆಗೆ ಹೋಲಿಸಿದರೆ, ವಿವರ ಖಚಿತಗೊಂಡವರ ಪ್ರಮಾಣ ಶೇ 69.80ರಷ್ಟು ಮಾತ್ರ.

ಉಳಿದ ಜಿಲ್ಲೆಗಳ ಪೈಕಿ 18ರಲ್ಲಿ ಶೇ 90ಕ್ಕಿಂತಲೂ ಹೆಚ್ಚು ಪ್ರಗತಿ ದಾಖಲಾಗಿದ್ದರೆ, 12ರಲ್ಲಿ ಶೇ 80ಕ್ಕಿಂತಲೂ ಹೆಚ್ಚು ಮತ್ತು ಶೇ 90ಕ್ಕಿಂತ ಕಡಿಮೆಯಷ್ಟು ಮ್ಯಾಪಿಂಗ್ ಪ್ರಕ್ರಿಯೆ ಪೂರ್ಣಗೊಂಡಿದೆ. ಕೊಡಗಿನಲ್ಲಿ ಅತಿಹೆಚ್ಚು, ಅಂದರೆ ಶೇ 95.53ರಷ್ಟು ಮತದಾರರ ಮ್ಯಾಪಿಂಗ್ ಮುಗಿದಿದೆ.

ಜಿಲ್ಲಾವಾರು ಮ್ಯಾಪಿಂಗ್ ವಿವರ



ರಾಜ್ಯಕ್ಕೂ ಬಂತು ಎಸ್‌ಐಆರ್

ಒಂದನೇ ಪುಟದಿಂದ...

ಎಸ್‌ಐಆರ್‌ಗೆ ಈಗ ಆದೇಶ ಹೊರಡಿಸಿದ್ದರೂ, 2025ರ ಸೆಪ್ಟೆಂಬರ್‌ನಿಂದಲೇ ಇದರ ಪೂರ್ವ ತಯಾರಿ ಪ್ರಕ್ರಿಯೆ ಆರಂಭವಾಗಿದೆ. 2025ರ ಮತದಾರರ ಪಟ್ಟಿಯಲ್ಲಿದ್ದ ಮತದಾರರ ವಿವರಗಳನ್ನು 2002ರ ಮತದಾರರ ಪಟ್ಟಿಗೆ ಹೋಲಿಸಿ ನೋಡಿ (ಮ್ಯಾಪಿಂಗ್) ಖಚಿತಪಡಿಸಿಕೊಳ್ಳಲಾಗುತ್ತಿದೆ. 5.50 ಕೋಟಿ ಮತದಾರರ ಪೈಕಿ 4.79 ಕೋಟಿ ಜನರ ವಿವರಗಳ ಮ್ಯಾಪಿಂಗ್ ಪೂರ್ಣಗೊಂಡಿದೆ. 75.70 ಲಕ್ಷ ಮತದಾರರ ಮ್ಯಾಪಿಂಗ್ ಇನ್ನಷ್ಟೇ ನಡೆಯಬೇಕಿದೆ. ಮೇ 14ರ ಬೆಳಿಗ್ಗೆ 8ರ ವೇಳೆಗೆ ಒಟ್ಟು ಶೇ 86.37ರಷ್ಟು ಮತದಾರರ ವಿವರಗಳನ್ನು ಖಚಿತಪಡಿಸಿಕೊಳ್ಳಲಾಗಿದೆ.

'2002ರ ಮತದಾರರ ಪಟ್ಟಿಯಲ್ಲಿ 3.24 ಕೋಟಿ ಮತದಾರರು ಇದ್ದರು. 2025ರ ಪಟ್ಟಿಯಲ್ಲಿ ಇರುವವರ ಪೈಕಿ, 2002ರ ಮತದಾರರ ಪಟ್ಟಿಯಲ್ಲಿ 2.27 ಕೋಟಿ ಮತದಾರರ ವಿವರಗಳು ದೊರೆತಿವೆ. 2025ರ ಮತದಾರರ ಪಟ್ಟಿಯಲ್ಲಿದ್ದು, 2002ರ ಪಟ್ಟಿಯಲ್ಲಿ ಇಲ್ಲದೇ ಇರುವಂತಹ 2.52 ಕೋಟಿ ಮತದಾರರ ವಿವರಗಳನ್ನು ಅವರ ಪೋಷಕರ ವಿವರಗಳೊಂದಿಗೆ ಹೋಲಿಸಿ ನೋಡಿ ಖಚಿತಪಡಿಸಿಕೊಳ್ಳಲಾಗಿದೆ' ಎಂಬ ಮಾಹಿತಿ ಎಸ್‌ಐಆರ್ ಪೂರ್ವಭಾವಿ ಮ್ಯಾಪಿಂಗ್ ದತ್ತಾಂಶಗಳಲ್ಲಿ ಇದೆ.

ಎಸ್‌ಐಆರ್ ಪೂರ್ವಭಾವಿ ಮ್ಯಾಪಿಂಗ್‌ನಲ್ಲಿ ವಿವರ ಖಚಿತಗೊಂಡವರ ಹೆಸರಿನಲ್ಲಿ ಗಣತಿ ನಮೂನೆಯನ್ನು ಸೃಜಿಸಲಾಗುತ್ತದೆ. ಮ್ಯಾಪಿಂಗ್‌ನಲ್ಲಿ ವಿವರ ಖಚಿತವಾಗದ ಮತದಾರರು ಚುನಾವಣಾ ಆಯೋಗವು ನಿಗದಿಪಡಿಸುವ ದಾಖಲೆ ಪತ್ರಗಳನ್ನು ಸಲ್ಲಿಸಿ, ತಮ್ಮ ಮತದಾನದ ಹಕ್ಕನ್ನು ಸಾಬೀತುಪಡಿಸಬೇಕಾಗುತ್ತದೆ ಎಂಬ ವಿವರ 2025ರ ಸೆಪ್ಟೆಂಬರ್‌ನಲ್ಲಿ ಬಿಡುಗಡೆ ಮಾಡಿದ್ದ ಎಸ್‌ಐಆರ್ ಕೈಪಿಡಿಯಲ್ಲಿ ಇದೆ.

ಎಸ್‌ಐಆರ್ ಭಾಗವಾಗಿ ರಾಜ್ಯದ ಎಲ್ಲ ಮತಗಟ್ಟೆಗಳಿಗೆ ಮತಗಟ್ಟೆ ಅಧಿಕಾರಿಗಳನ್ನು (ಬಿಎಲ್‌ಒ) ನಿಯೋಜನೆ ಮಾಡಲಾಗುತ್ತದೆ. ಜತೆಗೆ ರಾಜಕೀಯ ಪಕ್ಷಗಳಿಂದ ಮತಗಟ್ಟೆ ಏಜೆಂಟರನ್ನು (ಬಿಎಲ್‌ಎ) ನೇಮಕ ಮಾಡುವಂತೆ ಸೂಚಿಸಲಾಗುತ್ತದೆ. ಬಿಎಲ್‌ಒ ಮತ್ತು ಬಿಎಲ್‌ಎಗಳು ಮನೆಮನೆಗೆ ಭೇಟಿ ನೀಡಿ, ಮತದಾರರ ವಿವರಗಳನ್ನು ಪರಿಶೀಲಿಸಲಿದ್ದಾರೆ. ಆನಂತರ ಅನರ್ಹ ಮತದಾರರನ್ನು ಕೈಬಿಟ್ಟು, ಅರ್ಹ ಮತದಾರರು ಮಾತ್ರ ಇರುವ ಮತದಾರರ ಕರಡು ಪಟ್ಟಿಯನ್ನು ರಾಜ್ಯ ಮುಖ್ಯ ಚುನಾವಣಾಧಿಕಾರಿ ಕಚೇರಿ ಪ್ರಕಟಿಸಲಿದೆ.

ಮತದಾರರ ಕರಡು ಪಟ್ಟಿಗೆ ಬಂದ ಆಕ್ಷೇಪಗಳನ್ನು ಪರಿಶೀಲಿಸಿ, ಅವುಗಳನ್ನು ವಿಲೇವಾರಿ ಮಾಡಲಾಗುತ್ತದೆ. ಆನಂತರ ಅಂತಿಮ ಮತದಾರರ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ.

ಐದು ಪಾಲಿಕೆಗಳ ಚುನಾವಣೆ ಮುಂದಕ್ಕೆ?

ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ರಾಜ್ಯ ಚುನಾವಣಾ ಆಯೋಗವು ತನ್ನದೇ ಪ್ರತ್ಯೇಕ ಮತದಾರರ ಪಟ್ಟಿಯನ್ನು ಸಿದ್ಧಪಡಿಸಲು ಮುಂದಾಗಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಪಾಲಿಕೆಗಳ ಚುನಾವಣೆಗೂ ಈ ಪಟ್ಟಿಯೇ ಅನ್ವಯವಾಗಲಿದೆ. ಈಗ ಎಸ್‌ಐಆರ್ ಪ್ರಕ್ರಿಯೆ ಆರಂಭವಾಗುವುದರಿಂದ, ಪ್ರತ್ಯೇಕ ಮತದಾರರ ಪಟ್ಟಿ ಸಿದ್ಧತೆಗೆ ತೊಡಕಾಗಬಹುದು. ಜತೆಗೆ ಇದೇ ಕಾರಣಕ್ಕೆ ಜಿಬಿಎ ವ್ಯಾಪ್ತಿಯ ಪಾಲಿಕೆಗಳ ಚುನಾವಣೆಯೂ ಮುಂದಕ್ಕೆ ಹೋಗಬಹುದು ಎಂಬ ಚರ್ಚೆ ರಾಜಕೀಯ ವಲಯದಲ್ಲಿ ಆರಂಭವಾಗಿದೆ.

ಅಬಕಾರಿ ನೀತಿ: ಬೇರೊಂದು ಪೀಠಕ್ಕೆ ವರ್ಗ

ನವದೆಹಲಿ: ದೆಹಲಿ ಅಬಕಾರಿ ಹಗರಣದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಬೇರೊಂದು ಪೀಠಕ್ಕೆ ವರ್ಗಾಯಿಸಿರುವುದಾಗಿ ದೆಹಲಿ ಹೈಕೋರ್ಟ್ ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮಾ ಗುರುವಾರ ಹೇಳಿದ್ದಾರೆ.

ವಿಚಾರಣೆಯಿಂದ ಹಿಂದೆ ಸರಿಯಬೇಕು ಎಂದು ಕೋರಿ ಆಮ್ ಆದ್ಮಿ ಪಕ್ಷದ (ಎಎಪಿ) ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಹಾಗೂ ಇತರರು ಸಲ್ಲಿಸಿದ್ದ ಅರ್ಜಿಯನ್ನು ಈ ಹಿಂದೆ ನ್ಯಾ. ಶರ್ಮಾ ನಿರಾಕರಿಸಿ, ವಿಚಾರಣೆಯಿಂದ ಹಿಂದೆ ಸರಿಯುವುದಿಲ್ಲ ಎಂದಿದ್ದರು. ಇದೀಗ ಅರವಿಂದ್ ಕೇಜ್ರಿವಾಲ್ ಸೇರಿದಂತೆ ಎಎಪಿಯ ಹಲವು ನಾಯಕರ ವಿರುದ್ಧ ನ್ಯಾಯಾಂಗ ನಿಂದನೆ ಕ್ರಮ ಜರುಗಿಸಲು ನ್ಯಾ.ಶರ್ಮಾ ಮುಂದಾಗಿರುವ ಕಾರಣ ಅಬಕಾರಿ ಪ್ರಕರಣದ ವಿಚಾರಣೆಯನ್ನು ಬೇರೊಂದು ಪೀಠಕ್ಕೆ ವರ್ಗಾಯಿಸುತ್ತಿರುವುದಾಗಿ ತಿಳಿಸಿದ್ದಾರೆ.

ಈ ಕುರಿತಂತೆ ನ್ಯಾ. ಶರ್ಮಾ ಸ್ಪಷ್ಟನೆ ನೀಡಿದ್ದು, 'ನಾನು ವಿಚಾರಣೆಯಿಂದ ಹಿಂದೆ ಸರಿಯುತ್ತಿಲ್ಲ ಪ್ರಕರಣವನ್ನು ಬೇರೊಂದು ಪೀಠಕ್ಕೆ ವರ್ಗಾಯಿಸುತ್ತಿದ್ದೇನೆ ಅಷ್ಟೇ. ಇದು ನ್ಯಾಯಾಂಗದ ಶಿಸ್ತು' ಎಂದೂ ಹೇಳಿದ್ದಾರೆ.

ನ್ಯಾಯಾಂಗ ನಿಂದನೆ ಕ್ರಮ: ಅರವಿಂದ ಕೇಜ್ರಿವಾಲ್, ಮನೀಶ್ ಸಿಸೋಡಿಯಾ, ದುರ್ಗೇಶ್ ಪಾಠಕ್, ಸಂಜಯ್ ಸಿಂಗ್, ಸೌರಭ್ ಭಾರದ್ವಾಜ್ ಹಾಗೂ ಎಎಪಿಯ ಇತರ ಕೆಲವು ನಾಯಕರ ವಿರುದ್ಧ ನ್ಯಾಯಾಂಗ ನಿಂದನೆ ಕ್ರಮ ಜರುಗಿಸಲು ನ್ಯಾ.ಶರ್ಮಾ ಗುರುವಾರ ಮುಂದಾಗಿದ್ದಾರೆ.

ಈ ಕುರಿತಂತೆ ಮಾಹಿತಿ ನೀಡಿರುವ ಅವರು, 'ಅಬಕಾರಿ ಪ್ರಕರಣದ ವಿಚಾರಣೆಯಿಂದ ನಾನು ಹಿಂದೆ ಸರಿಯುವುದಿಲ್ಲ ಎಂದು ಹೇಳಿದ ಬಳಿಕ ಕಾನೂನಾತ್ಮಕವಾಗಿ ಪರಿಹಾರ ಪಡೆಯುವ ಬದಲು ಕೇಜ್ರಿವಾಲ್ ನನ್ನ ಗೌರವಕ್ಕೆ ಚ್ಯುತಿ ತರುವ ಕೆಲಸಕ್ಕೆ ಕೈ ಹಾಕಿದ್ದಾರೆ. ಮಾನಹಾನಿಕರ ಪೋಸ್ಟ್‌ಗಳನ್ನು ಹಾಕುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ನ್ಯಾಯಾಂಗ ನಿಂದನೆ ಕ್ರಮ ಕೈಗೊಳ್ಳುತ್ತೇನೆ' ಎಂದಿದ್ದಾರೆ.

ಕೇರಳಂ ಜಿಲೆಟಿನ್ ಪತ್ತೆ: ಪ್ರಕರಣ ಎನ್‌ಐಎಗೆ ಹಸ್ತಾಂತರ

ಕೊಚ್ಚಿ (ಪಿಟಿಐ): ಕೇರಳಂನ ಮಲಪ್ಪುರಂ ಜಿಲ್ಲೆಯ ತಿರುರಂಗಾಡಿಯಲ್ಲಿ ಕಳೆದ ಫೆಬ್ರವರಿಯಲ್ಲಿ ಅಪಾರ ಪ್ರಮಾಣದ ಜಿಲೆಟಿನ್ ಕಡ್ಡಿಗಳು ಮತ್ತು ಸ್ಫೋಟಕಗಳು ಪತ್ತೆಯಾದ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ವಹಿಸಿಕೊಂಡಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಕೊಚ್ಚಿಯಲ್ಲಿರುವ ಎನ್‌ಐಎ ವಿಶೇಷ ಕೋರ್ಟ್‌ಗೆ ಪ್ರಕರಣದ ಎಲ್ಲ ದಾಖಲೆಗಳನ್ನು ವರ್ಗಾಯಿಸಲು ಪರಪ್ಪನಂಗಡಿ ಪ್ರಥಮ ದರ್ಜೆ ನ್ಯಾಯಾಲಯಕ್ಕೆ ಇತ್ತೀಚೆಗೆ ತನಿಖಾ ಸಂಸ್ಥೆ ಮನವಿ ಮಾಡಿದೆ.

ತಿರುರಂಗಡಿ ಸಮೀಪದ ಚೆಮ್ಮಾಡ್ ಬಳಿ ಫೆಬ್ರವರಿ 7ರಂದು ಈರುಳ್ಳಿ ತುಂಬಿದ್ದ ಲಾರಿಯಲ್ಲಿ 89,600 ಜಿಲೆಟಿನ್ ಕಡ್ಡಿಗಳಿದ್ದ 448 ಬಾಕ್ಸ್‌ಗಳು, 10,500 ಸ್ಫೋಟಕಗಳು ಪತ್ತೆಯಾಗಿದ್ದವು.

ಪೊಲೀಸರು ದಾಳಿ ನಡೆಸಿ ಸ್ಫೋಟಕವಿದ್ದ ಲಾರಿ ವಶಕ್ಕೆ ಪಡೆದು ಆರು ಮಂದಿಯನ್ನು ಬಂಧಿಸಿದ್ದರು.

'ಸ್ಫೋಟಕಗಳು ಅಕ್ರಮ ಕಲ್ಲು ಗಣಿಗಾರಿಕೆಗೆ ಸಂಬಂಧಿಸಿದ್ದು, ಕರ್ನಾಟಕದ ವಿಜಯಪುರದಿಂದ ಸಾಗಿಸಲಾಗುತ್ತಿತ್ತು ಎಂದು ತನಿಖೆಯಲ್ಲಿ ತಿಳಿದುಬಂದಿದೆ. ಆದರೆ ಎನ್‌ಐಎ ವಿಸ್ತೃತ ತನಿಖೆಗೆ ಬಯಸಿದೆ. ಕೇಂದ್ರ ಸಂಸ್ಥೆಗೆ ಪ್ರಕರಣ ವರ್ಗಾಯಿಸಲಾಗಿದೆ' ಎಂದು ತಿರುರಂಗಡಿ ಠಾಣೆ ಪೊಲೀಸರು ತಿಳಿಸಿದ್ದಾರೆ. ಸ್ಫೋಟಕ ಸಾಗಣೆ ಜಾಲದ ಶಂಕೆ ಮೇಲೆ ಆರೋಪಿಗಳ ವಿಚಾರಣೆ ನಡೆಸಲು ಎನ್‌ಐಎ ಸಿದ್ಧತೆ ನಡೆಸಿದೆ.

ಸರ್ಕಾರಿ ಕಚೇರಿಗಳಿಗೆ ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಆದೇಶ

ವಾರದಲ್ಲಿ 2 ದಿನ 'ವರ್ಕ್ ಫ್ರಂ ಹೋಮ್'

ನವದೆಹಲಿ (ಪಿಟಿಐ): ವಾರದಲ್ಲಿ ಎರಡು ದಿನ ಮನೆಯಿಂದಲೇ ಕೆಲಸ ನಿರ್ವಹಿಸುವಂತೆ (ವರ್ಕ್ ಫ್ರಂ ಹೋಮ್) ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತಾ ಅವರು ಸರ್ಕಾರಿ ಕಚೇರಿಗಳಿಗೆ ಗುರುವಾರ ಆದೇಶ ಹೊರಡಿಸಿದ್ದಾರೆ.

ಸಚಿವರು ಮತ್ತು ಅಧಿಕಾರಿಗಳು ಮೆಟ್ರೊ ರೈಲಿನಲ್ಲಿಯೇ ಸೋಮವಾರ ಪ್ರಯಾಣಿಸಬೇಕು. ನಾಗರಿಕರು ಪ್ರತಿ ವಾರವೂ ಸ್ವಯಂ ಪ್ರೇರಿತವಾಗಿ 'ವಾಹನರಹಿತ ದಿನ'ವೆಂದು ಪರಿಗಣಿಸಬೇಕು ಎಂದೂ ರೇಖಾ ಸೂಚಿಸಿದ್ದಾರೆ. ಇಂಧನ ಉಳಿತಾಯ ಮಾಡುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನತೆಗೆ ಮನವಿ ಮಾಡಿರುವುದನ್ನು ಪರಿಗಣಿಸಿ 'ಮೇರಾ ಭಾರತ್, ಮೇರಾ ಯೋಗದಾನ್' ಎಂಬ ಉಪಕ್ರಮದಡಿ ಹಲವು ಕ್ರಮಗಳನ್ನು ರೂಪಿಸಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ರೇಖಾ ಹೇಳಿದ್ದಾರೆ.

ರೇಖಾ ಅವರು ತಮ್ಮ ಬೆಂಗಾವಲು ವಾಹನಗಳ ಪೈಕಿ ಶೇ 60ರಷ್ಟು ವಾಹನಗಳನ್ನು ಕಡಿತಗೊಳಿಸಿದ್ದಾರೆ.

ಬೈಕ್‌ನಲ್ಲಿ ವಿಧಾನ ಭವನಕ್ಕೆ ಬಂದ ಫಡಣವೀಸ್

ಮುಂಬೈ: ಪ್ರಧಾನಿ ನರೇಂದ್ರ ಮೋದಿ ಅವರ 'ಮಿತವ್ಯಯ' ಕರೆಗೆ ಓಗೊಟ್ಟು, ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ತಮ್ಮ ನಿವಾಸದಿಂದ ವಿಧಾನ ಭವನಕ್ಕೆ ಗುರುವಾರ ಬೈಕ್‌ನಲ್ಲಿ ಬಂದರು.

ರಾಯಲ್ ಎನ್‌ಫೀಲ್ಡ್ ಕ್ಲಾಸಿಕ್–350 ಬೈಕನ್ನು ಸ್ವತಃ ಚಾಲನೆ ಮಾಡಿದರು. ಈ ವೇಳೆ ಸಚಿವ ಆಶಿಶ್ ಶೆಲಾರ್ ಜೊತೆಗೆ ಇದ್ದರು.

ಬಳಿಕ ಮಾತನಾಡಿದ ಅವರು, ಕೇಂದ್ರ ಸರ್ಕಾರದ 'ಮಿತವ್ಯಯ' ಕ್ರಮವನ್ನು ಸಮರ್ಥಿಸಿದರು. ವಿರೋಧ ಪಕ್ಷಗಳು ಈ ವಿಚಾರವಾಗಿ ಅನಗತ್ಯವಾಗಿ ವಿವಾದ ಸೃಷ್ಟಿಸುತ್ತಿವೆ ಎಂದು ಟೀಕಿಸಿದರು.

'ಪ್ರಧಾನಿ ಮೋದಿ ಅವರ ವಿದೇಶಿ ಭೇಟಿಯು ಕಾರ್ಯತಂತ್ರದ ಮೈತ್ರಿ ಮತ್ತು ಆರ್ಥಿಕ ಅನುಕೂಲದ ಗುರಿಯನ್ನು ಹೊಂದಿದೆ. ಇದನ್ನು ಪ್ರಶ್ನಿಸುವುದು ಮೂರ್ಖತನದ ಪರಮಾವಧಿ' ಎಂದು ಹರಿಹಾಯ್ದರು.

'ವಿರೋಧ ಪಕ್ಷಗಳು ಪ್ರಬುದ್ಧವಾಗಿ ವರ್ತಿಸುವ ಅಗತ್ಯವಿದೆ. ಜಗತ್ತಿನಾದ್ಯಂತ ಹಲವು ದೇಶಗಳು ಕಠಿಣ ನಿರ್ಧಾರ ತೆಗೆದುಕೊಳ್ಳುತ್ತಿವೆ. ಆದರೆ ಪ್ರಧಾನಿ ನರೇಂದ್ರ ಮೋದಿ ಅವರು 'ಸಣ್ಣ ತ್ಯಾಗ'ಕ್ಕೆ ಮನವಿ ಮಾಡಿದ್ದಾರೆ. ಸ್ವತಃ ಪ್ರಧಾನಿ ಕೂಡ ಕಠಿಣ ನಿರ್ಧಾರ ತೆಗೆದುಕೊಂಡಿದ್ದಾರೆ. ಅನಗತ್ಯವಾಗಿ ವಿವಾದ ಸೃಷ್ಟಿಸುವುದು ಸರಿಯಲ್ಲ' ಎಂದು ಹೇಳಿದರು.

ಸಿ.ಎಂ ಕೈಗೊಂಡಿರುವ ಕ್ರಮಗಳು

- ದೆಹಲಿಯ ಎಲ್ಲಾ ಸರ್ಕಾರಿ ಕಚೇರಿಗಳ ಉದ್ಯೋಗಿಗಳು ವಾರದಲ್ಲಿ ಎರಡು ದಿನ ಮನೆಯಿಂದಲೇ ಕೆಲಸ ಮಾಡಲಿದ್ದಾರೆ. ಖಾಸಗಿ ವಲಯಕ್ಕೂ ಈ ಕ್ರಮವನ್ನು ಅನುಸರಿಸಲು ವಿನಂತಿಸಲಾಗುವುದು
- ಎಲ್ಲಾ ಸಚಿವರು, ಅಧಿಕಾರಿಗಳು ಹಾಗೂ ಸ್ವತಃ ತಾವೂ ಸೋಮವಾರ ಮೆಟ್ರೊದಲ್ಲಿ ಪ್ರಯಾಣಿಸುವುದಾಗಿ ರೇಖಾ ಹೇಳಿದ್ದಾರೆ
- ನಾಗರಿಕರು ಪ್ರತಿ ವಾರವೂ ಸ್ವಯಂ ಪ್ರೇರಿತವಾಗಿ 'ವಾಹನ ರಹಿತ ದಿನ'ವನ್ನಾಗಿ ಅನುಸರಿಸಲು ಪ್ರೋತ್ಸಾಹಿಸಲಾಗುವುದು

ಪಳನಿಸ್ವಾಮಿ ಅನರ್ಹತೆಗೆ ಷಣ್ಮುಗಂ–ವೇಲುಮಣಿ ಪಟ್ಟು

ಎಐಎಡಿಎಂಕೆ ಬಣ ಜಗಳ ತಾರಕಕ್ಕೆ

ಚೆನ್ನೈ (ಪಿಟಿಐ): ತಮಿಳುನಾಡಿನಲ್ಲಿ ಎಐಎಡಿಎಂಕೆ ಪಕ್ಷದಲ್ಲಿನ ಬಣ ಜಗಳ ಗುರುವಾರ ತಾರಕಕ್ಕೇರಿದೆ. ಸಿ. ಜೋಸೆಫ್ ವಿಜಯ್ ನೇತೃತ್ವದ ಸರ್ಕಾರದ ವಿಶ್ವಾಸಮತ ಯಾಚನೆ ವೇಳೆ ವಿಪ್ ಉಲ್ಲಂಘಿಸಿದ ಪಕ್ಷದ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಮತ್ತು ಅವರ ಬೆಂಬಲಿಗ ಶಾಸಕರನ್ನು ಅನರ್ಹಗೊಳಿಸುವಂತೆ ವಿ.ಷಣ್ಮುಗಂ ಮತ್ತು ಎಸ್.ಪಿ. ವೇಲುಮಣಿ ನೇತೃತ್ವದ ಬಣ ಆಗ್ರಹಿಸಿದೆ.

ಶಾಸಕಾಂಗ ಪಕ್ಷವನ್ನು ಬಹುಮತದ ಮೇಲೆ ನಿರ್ಧರಿಸಲಾಗುತ್ತದೆ ಹಾಗೂ ತಮ್ಮ ಬಣಕ್ಕೆ ಹೆಚ್ಚಿನ ಶಾಸಕರ ಬೆಂಬಲವಿದೆ ಎಂದು ಷಣ್ಮುಗಂ–ವೇಲುಮಣಿ ಬಣವು ನೇಮಿಸಿರುವ ಮುಖ್ಯ ಸಚೇತಕ ಸಿ.ವಿಜಯಭಾಸ್ಕರ್ ಗುರುವಾರ ಹೇಳಿದ್ದಾರೆ.

'ಬುಧವಾರ ನಡೆದ ವಿಶ್ವಾಸಮತ ಯಾಚನೆ ವೇಳೆ ವಿಜಯ್ ನೇತೃತ್ವದ ಟಿವಿಕೆ ಸರ್ಕಾರದ ಪರವಾಗಿ ಮತ ಚಲಾಯಿಸುವಂತೆ ಪಕ್ಷದ ಸೂಚನೆಯನ್ನು ಎಐಎಡಿಎಂಕೆಯ ಎಲ್ಲ ಶಾಸಕರಿಗೆ ವಾಟ್ಸ್‌ಆ್ಯಪ್ ಮತ್ತು ಇ-ಮೇಲ್ ಮೂಲಕ ತಿಳಿಸಲಾಗಿದೆ' ಎಂದು ತಿಳಿಸಿದ್ದಾರೆ.

'47 ಶಾಸಕರ ಪೈಕಿ 25 ಶಾಸಕರು ಸೂಚನೆಯನ್ನು ಪಾಲಿಸಿದ್ದು, ಪಳನಿಸ್ವಾಮಿ ಸೇರಿದಂತೆ ಪಕ್ಷದ 22 ಶಾಸಕರು ಮುಖ್ಯ ಸಚೇತಕ ಆಗಿರುವ ನನ್ನ ಸೂಚನೆಯನ್ನು ಪಾಲಿಸದೆ ಅದಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದಾರೆ. ಹೀಗಾಗಿ, ವಿಧಾನಸಭೆ ಸ್ಪೀಕರ್ ಅವರನ್ನು ಭೇಟಿ ಮಾಡಿ ಪಕ್ಷಾಂತರ ನಿಷೇಧ ಕಾಯ್ದೆ ಅಡಿ 22 ಮಂದಿಯನ್ನು ಅನರ್ಹಗೊಳಿಸುವಂತೆ ಕೋರಿದ್ದೇವೆ' ಎಂದಿದ್ದಾರೆ.

'ವೇಲುಮಣಿ ನೇತೃತ್ವದ ಬಹುಪಾಲು ಶಾಸಕರು ವಿಪ್‌ಅನ್ನು ಅನುಸರಿಸಿದ್ದಾರೆ. ಹಾಗಾಗಿ, ಹೆಚ್ಚಿನ ಶಾಸಕರ ಬೆಂಬಲ ಹೊಂದಿರುವ ನಮ್ಮ ಬಣ ತೆಗೆದುಕೊಂಡು ನಿರ್ಧಾರ ಮಾತ್ರ ಮಾನ್ಯವಾಗಿದೆ' ಎಂದು ಹೇಳಿದ್ದಾರೆ.

ವಜಾಗೊಳಿಸುವಂತಿಲ್ಲ: ಪೂರ್ವನಿದರ್ಶನಗಳನ್ನು ಉಲ್ಲೇಖಿಸಿದ ವೇಲುಮಣಿ, 'ಪಕ್ಷದಲ್ಲಿ ಒಡಕು ಕಾಣಿಸಿಕೊಂಡಾಗ ಪಕ್ಷದ ಮುಖ್ಯಸ್ಥರು ಯಾವುದೇ ನಿರ್ಧಾರ ಗಳನ್ನು ತೆಗೆದುಕೊಳ್ಳುವಂತಿಲ್ಲ. ಪಕ್ಷದ ಹುದ್ದೆಗಳಿಗೆ ಯಾರನ್ನಾದರೂ ನೇಮಿಸಲು ಅಥವಾ ತೆಗೆದುಹಾಕಲು ಸಾಧ್ಯವಿಲ್ಲ' ಎಂದು ಸಿ.ವಿಜಯಭಾಸ್ಕರ್ ಹೇಳಿದ್ದಾರೆ.

ಪಕ್ಷದ ಹುದ್ದೆಗಳಿಂದ ಕೆಲವರನ್ನು ತೆಗೆದುಹಾಕುವ ಪಳನಿಸ್ವಾಮಿ ಅವರ ನಿರ್ಧಾರಗಳು ನ್ಯಾಯಸಮ್ಮತವಾಗಿಲ್ಲ. ಎಲ್ಲರೂ 'ತಮ್ಮ ತಮ್ಮ ಹುದ್ದೆಗಳಲ್ಲಿ ಮುಂದುವರಿಯಲಿದ್ದಾರೆ' ಎಂದಿದ್ದಾರೆ.

ಟಿವಿಕೆಯೊಂದಿಗೆ ಕೈಜೋಡಿಸಿದ ಮುಖಂಡರಾದ ವೇಲುಮಣಿ, ಷಣ್ಮುಗಂ ಹಾಗೂ ಸಿ. ವಿಜಯಭಾಸ್ಕರ್ ಅವರನ್ನು ಪಳನಿಸ್ವಾಮಿ ಅವರು ಪಕ್ಷದ ಹುದ್ದೆಗಳಿಂದ ಬುಧವಾರ ವಜಾಗೊಳಿಸಿ, ಹೊಸಬರನ್ನು ನೇಮಿಸಿದ್ದರು.

ಪಕ್ಷದ ಕೇಂದ್ರ ಕಚೇರಿಗೆ ಬಿಗಿ ಭದ್ರತೆ

ಎಐಎಡಿಎಂಕೆಯಲ್ಲಿನ ಬಣ ಜಗಳದ ನಡುವೆ, ಪಕ್ಷದ ಪ್ರಧಾನ ಕಚೇರಿ, 'ಪುರಚ್ಚಿ ತಲೈವರ್ ಎಂಜಿಆರ್ ಮಾಳಿಗೈ'ಗೆ ಭಾರಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದೆ. 2022ರಲ್ಲಿ ಪಕ್ಷದ ನಾಯಕತ್ವದ ವಿಚಾರದಲ್ಲಿ ಪಳನಿಸ್ವಾಮಿ ಮತ್ತು ಅಂದಿನ ನಾಯಕ ಓ. ಪನ್ನೀರಸೆಲ್ವಂ ನಡುವೆ ಭಿನ್ನಾಭಿಪ್ರಾಯ ಎದ್ದಾಗ ಪಕ್ಷದ ಪ್ರಧಾನ ಕಚೇರಿಯ ಸೊತ್ತುಗಳನ್ನು ಹಾನಿಗೊಳಿಸಲಾಗಿತ್ತು.

ಎರಡೂ ಬಣದವರು ಗುರುವಾರ ಸಭೆ ನಡೆಸಿ ತಮ್ಮ ಮುಂದಿನ ನಡೆಯ ಬಗ್ಗೆ ಚರ್ಚಿಸಿದರು. ಷಣ್ಮುಗಂ-ವೇಲುಮಣಿ ಬಣವು ಪಳನಿಸ್ವಾಮಿ ಅವರ ಬೆಂಬಲಿಗ ಶಾಸಕರಿಗಿಂತ ಹೆಚ್ಚು ಶಾಸಕರನ್ನು ಹೊಂದಿರುವುದರಿಂದ ಕಾನೂನು ಆಯ್ಕೆಗಳನ್ನು ಪರಿಗಣಿಸಿ ಮುಂದಿನ ಹೆಜ್ಜೆಯಿಡಲು ಯೋಜಿಸುತ್ತಿದೆ ಎಂದು ಎಐಎಡಿಎಂಕೆ ಮೂಲಗಳು ತಿಳಿಸಿವೆ. 'ನ್ಯಾಯ ಲಭಿಸುವವರೆಗೂ ನಾವು ಯಾರೂ ಪಕ್ಷದ ಕೇಂದ್ರ ಕಚೇರಿಗೆ ಭೇಟಿ ನೀಡುವುದಿಲ್ಲ. ಎರಡು ಗುಂಪುಗಳ ನಡುವೆ ಯಾವುದೇ ಘರ್ಷಣೆ ಆಗದಿರುವುದನ್ನು ಖಚಿತಪಡಿಸಿಕೊಳ್ಳುತ್ತೇವೆ' ಎಂದು ಷಣ್ಮುಗಂ ಹೇಳಿದ್ದಾರೆ.

ಬಂಡಾಯ ಎದ್ದಿರುವ ಬಣವನ್ನು ಎದುರಿಸಲು ಪಳನಿಸ್ವಾಮಿ ಅವರು ತಮ್ಮ ನಿವಾಸದಲ್ಲಿ ಬೆಂಬಲಿಗ ಶಾಸಕರೊಂದಿಗೆ ಸಭೆ ನಡೆಸಿದ್ದಾರೆ.

'ಸೋಲಿನ ಜವಾಬ್ದಾರಿ ಹೊತ್ತುಕೊಳ್ಳುವೆ'

ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಸೋಲಿನ ಸಂಪೂರ್ಣ ಜವಾಬ್ದಾರಿಯನ್ನು ತಾವು ಹೊರುವುದಾಗಿ ಡಿಎಂಕೆ ಅಧ್ಯಕ್ಷ ಎಂ. ಕೆ ಸ್ಟಾಲಿನ್ ಗುರುವಾರ ಹೇಳಿದ್ದಾರೆ. ಚುನಾವಣಾ ಸೋಲಿಗೆ ಕಾರಣಗಳನ್ನು ಪರಾಮರ್ಶಿಸಲು ಸಮಿತಿ ರಚಿಸಲಾಗುವುದು ಮತ್ತು ಸಮಿತಿಯು 20 ದಿನಗಳಲ್ಲಿ ವರದಿ ಸಲ್ಲಿಸಲಿದೆ ಎಂದು ಘೋಷಿಸಿದ್ದಾರೆ.

'ಡಿಎಂಕೆ ಮೈತ್ರಿಕೂಟ ದುರ್ಬಲ ಆಗಿಲ್ಲ': 'ಚುನಾವಣೆಯಲ್ಲಿ ಡಿಎಂಕೆ ಮೈತ್ರಿಕೂಟವು ಬಹುಮತ ಪಡೆಯದಿದ್ದರೂ ದುರ್ಬಲವಾಗಿಲ್ಲ' ಎಂದು ಅವರು ಹೇಳಿದ್ದಾರೆ.

'1.54 ಕೋಟಿ ಮತಗಳನ್ನು ಪಡೆದಿರುವುದು ಮತ್ತು ಮೈತ್ರಿಕೂಟದ ಪಕ್ಷಗಳು ಒಟ್ಟು 72 ಸ್ಥಾನಗಳನ್ನು ಗೆದ್ದಿರುವುದು ತಮಿಳುನಾಡಿನ ಜನರು ನಮ್ಮ ಮೇಲೆ ಇಟ್ಟಿರುವ ನಂಬಿಕೆಯನ್ನು ತೋರಿಸುತ್ತದೆ' ಎಂದಿದ್ದಾರೆ.

ಮ್ಯೂಸಿಕ್ ಅಕಾಡೆಮಿ ಕೋರ್ಸ್‌ಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಚೆನ್ನೈ: 'ದಿ ಮ್ಯೂಸಿಕ್ ಅಕಾಡೆಮಿ ಮದ್ರಾಸ್' ಸಂಸ್ಥೆಯು 2026ನೇ ಶೈಕ್ಷಣಿಕ ಸಾಲಿನ ಜುಲೈನಿಂದ ಆರಂಭವಾಗುವ ಕರ್ನಾಟಕ ಸಂಗೀತದ ಮೂರು ವರ್ಷಗಳ ಅಡ್ವಾನ್ಸ್ಡ್ ಡಿಪ್ಲೊಮಾ ಕೋರ್ಸ್‌ಗೆ ಅರ್ಜಿ ಆಹ್ವಾನಿಸಿದೆ.

ಅಕಾಡೆಮಿಯ 'ಅಡ್ವಾನ್ಸ್ಡ್ ಸ್ಕೂಲ್ ಆಫ್ ಕರ್ನಾಟಕ ಸಂಗೀತ' ನಡೆಸುವ ಈ ಕೋರ್ಸ್ ಪ್ರತಿ ವರ್ಷ ಎರಡು ಸೆಮಿಸ್ಟರ್‌ಗಳನ್ನು ಹೊಂದಿರಲಿದೆ. ಸೆಮಿಸ್ಟರ್ ಅವಧಿಯು ಜುಲೈ–ನವೆಂಬರ್ ಮತ್ತು ಜನವರಿ–ಏಪ್ರಿಲ್‌ವರೆಗೆ ಇರಲಿದೆ. ಪ್ರತಿ ಸೆಮಿಸ್ಟರ್‌ನ ಕೊನೆಯಲ್ಲಿ ಪರೀಕ್ಷೆಗಳು ನಡೆಯುತ್ತವೆ. ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 8ರಿಂದ ಮಧ್ಯಾಹ್ನ 12.30ರವರೆಗೆ ಚೆನ್ನೈನಲ್ಲಿರುವ ಅಕಾಡೆಮಿ ಆವರಣದಲ್ಲಿ ತರಗತಿಗಳು ನಡೆಯುತ್ತವೆ.

ದ್ವಿತೀಯ ಪಿಯುಸಿ ಅಥವಾ 12ನೇ ತರಗತಿ ಪೂರ್ಣಗೊಳಿಸಿದ 18ರಿಂದ 30 ವರ್ಷದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಜೂನ್ 15 ಕೊನೆ ದಿನ. ಆಸಕ್ತ ಅಭ್ಯರ್ಥಿಗಳು 'ದಿ ಮ್ಯೂಸಿಕ್ ಅಕಾಡೆಮಿ ಮದ್ರಾಸ್' ವೆಬ್‌ಸೈಟ್‌ನಿಂದ ಅರ್ಜಿ ನಮೂನೆಯನ್ನು ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿ, ತಮ್ಮ ಸಂಗೀತ ತರಬೇತಿಯ ವಿವರಗಳೊಂದಿಗೆ ಇಮೇಲ್ ಮಾಡಬಹುದು.

ಮಾಹಿತಿಗೆ ದೂ.ಸಂ. 044–28112231, 044–28116902, ಅಥವಾ 044–28115162 ಸಂಪರ್ಕಿಸಬಹುದು.

ನ್ಯಾಯಾಂಗ ಮಧ್ಯಪ್ರವೇಶಕ್ಕೆ ಒತ್ತಾಯ

ಕೋಲ್ಕತ್ತ (ಪಿಟಿಐ): ವಿಧಾನಸಭೆ ಚುನಾವಣೆ ಫಲಿತಾಂಶ ಘೋಷಣೆ ಬಳಿಕ ಪಕ್ಷದ ಕಾರ್ಯಕರ್ತರನ್ನು ಗುರಿಯಾಗಿಸಿ ನಡೆದಿದೆ ಎನ್ನಲಾದ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಅವರು ಕಲ್ಕತ್ತ ಹೈಕೋರ್ಟ್‌ನಲ್ಲಿ ಗುರುವಾರ ವಾದ ಮಂಡಿಸಿದರು.


'ಚುನಾವಣಾ ಫಲಿತಾಂಶ ಘೋಷಣೆಯಾದ ನಂತರ ಪಶ್ಚಿಮ ಬಂಗಾಳದಲ್ಲಿ ಹಿಂಸಾಚಾರ ನಡೆಯಿತು. ಈ ವೇಳೆ ರಾಜ್ಯದ ಪೊಲೀಸರು ಯಾವುದೇ ಕ್ರಮ ಕೈಗೊಳ್ಳದೇ ಮೂಕಪ್ರೇಕ್ಷಕರಂತೆ ನಿಂತಿದ್ದರು. ರಾಜ್ಯದ ಜನರನ್ನು ದಾಳಿಕೋರರಿಂದ ರಕ್ಷಿಸಲು ನ್ಯಾಯಾಂಗ ಕೂಡಲೇ ಮಧ್ಯಪ್ರವೇಶಿಸಬೇಕು' ಎಂದು ಅವರು ಒತ್ತಾಯಿಸಿದರು.

> **ಪಶ್ಚಿಮ ಬಂಗಾಳದಲ್ಲಿ ಪರಿಸ್ಥಿತಿ ಎಷ್ಟು ಹದಗೆಟ್ಟಿದೆ ಎಂದರೆ ದೂರು ದಾಖಲಿಸಲು ನಾನು ಪೊಲೀಸ್ ಠಾಣೆಗಳಿಗೆ ಹೋಗಲು ಸಾಧ್ಯವಾಗುತ್ತಿಲ್ಲ. ಇದಕ್ಕಾಗಿ ಆನ್‌ಲೈನ್ ವಿಧಾನದ ಮೊರೆ ಹೋಗಿದ್ದೇನೆ**
> **ಮಮತಾ ಬ್ಯಾನರ್ಜಿ** ಟಿಎಂಸಿ ಮುಖ್ಯಸ್ಥೆ

'ನಮ್ಮದು ಬುಲ್ಡೋಜರ್ ಬಳಕೆ ಮಾಡುವಂತಹ ರಾಜ್ಯವಲ್ಲ' ಎಂದು ಪ್ರತಿಪಾದಿಸಿದರು. ವಿಚಾರಣೆ ವೇಳೆ, 'ಚುನಾವಣಾ ಫಲಿತಾಂಶ ಘೋಷಣೆ ಬಳಿಕ ನಡೆದ ಹಿಂಸಾಚಾರದಲ್ಲಿ ಕನಿಷ್ಠ 10 ಜನರನ್ನು ಹತ್ಯೆ ಮಾಡಲಾಗಿದೆ. ಪಕ್ಷದ 150–160 ಕಚೇರಿಗಳನ್ನು ಧ್ವಂಸ ಮಾಡಲಾಗಿದೆ. ಎರಡು ಸಾವಿರದಷ್ಟು ಹಿಂಸಾಚಾರ ಘಟನೆಗಳು ಸಂಭವಿಸಿವೆ' ಎಂದು ಮಮತಾ ಬ್ಯಾನರ್ಜಿ ಅವರು ನ್ಯಾಯಾಲಯಕ್ಕೆ ತಿಳಿಸಿದರು.

'ನನ್ನ ಸಂಬಂಧಿಕರ 12 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗುವುದಾಗಿ ಬೆದರಿಕೆ ಹಾಕಲಾಗಿದೆ' ಎಂದು ಅವರು ಮುಖ್ಯನ್ಯಾಯಮೂರ್ತಿ ಸುಜಯ್ ಪಾಲ್ ನೇತೃತ್ವದ ವಿಭಾಗೀಯ ಪೀಠಕ್ಕೆ ತಿಳಿಸಿದರು. 'ಕೋಲ್ಕತ್ತದ ಕೇಂದ್ರ ಭಾಗದಲ್ಲಿರುವ 400 ವರ್ಷ ಹಳೆಯ ಹಾಗ್ ಮಾರುಕಟ್ಟೆಯಲ್ಲಿ ಬುಲ್ಡೋಜರ್ ಚಲಾಯಿಸಿ, ಕಟ್ಟಡ ಧ್ವಂಸ ಮಾಡಲಾಗುತ್ತಿದೆ. ಈ ರೀತಿ ಬುಲ್ಡೋಜರ್‌ನಿಂದ ನ್ಯಾಯ ಒದಗಿಸುವುದಕ್ಕೆ ನ್ಯಾಯಶಾಸ್ತ್ರದಲ್ಲಿ ಅವಕಾಶ ಇಲ್ಲ' ಎಂದು ಪಕ್ಷದ ನಾಯಕ ಕಲ್ಯಾಣ್ ಬ್ಯಾನರ್ಜಿ ಅವರು ಪೀಠಕ್ಕೆ ಅರುಹಿದರು.

ಥಾಯ್ಲೆಂಡ್ ಓಪನ್: ಕ್ವಾರ್ಟರ್‌ಗೆ ಸಿಂಧು, ಲಕ್ಷ್ಯ



ಭಾರತದ ಪಿ.ವಿ. ಸಿಂಧು

ಬ್ಯಾಂಕಾಕ್ (ಪಿಟಿಐ): ಭಾರತದ ಅನುಭವಿ ಆಟಗಾರ ಲಕ್ಷ್ಯ ಸೇನ್ ಮತ್ತು ಅಗ್ರ ಆಟಗಾರ್ತಿ ಪಿ.ವಿ.ಸಿಂಧು ಅವರು ₹4.80 ಕೋಟಿ ಬಹುಮಾನ ಮೊತ್ತದ ಥಾಯ್ಲೆಂಡ್ ಓಪನ್ ಸೂಪರ್ 500 ಟೂರ್ನಿಯ ಸಿಂಗಲ್ಸ್ ಪಂದ್ಯಗಳಲ್ಲಿ ಎದುರಾಳಿಗಳ ವಿರುದ್ಧ ನೇರ ಗೇಮ್‌ಗಳ ಜಯಗಳಿಸಿ ಎಂಟರ ಘಟ್ಟ ತಲುಪಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಶ್ರೇಯಾಂಕ ಪಡೆದಿರುವ ಸಿಂಧು 21-13, 21-15 ರಿಂದ ಡೆನ್ಮಾರ್ಕ್‌ನ ಅಮೇಲಿ ಶುಲ್ಜ್ ಅವರನ್ನು ಹಿಮ್ಮೆಟ್ಟಿಸಿದರು. ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಈ ಪಂದ್ಯ ಗೆಲ್ಲಲು ತೆಗೆದುಕೊಂಡಿದ್ದು 28 ನಿಮಿಷಗಳನ್ನಷ್ಟೇ.

ಸಿಂಧು ಅವರ ಮುಂದಿನ ಎದುರಾಳಿ ವಿಶ್ವ ಕ್ರಮಾಂಕದಲ್ಲಿ ಮೂರನೇ ಸ್ಥಾನದಲ್ಲಿರುವ ಅಕಾನೆ ಯಮಾಗುಚಿ. ಜಪಾನ್‌ನ ಆಟಗಾರ್ತಿ ಇಲ್ಲಿ ಶ್ರೇಯಾಂಕ ಪಡೆದಿದ್ದಾರೆ.

ಏಳನೇ ಶ್ರೇಯಾಂಕದ ಲಕ್ಷ್ಯ ಸೇನ್ ಎರಡನೇ ಸುತ್ತಿನಲ್ಲಿ 21-12, 21-13 ರಿಂದ ಚೀನಾದ ಝು ಷುವಾನ್ ಅವರನ್ನು ಸೋಲಿಸಿದರು.

ಸೇನ್ ಮುಂದಿನ ಸುತ್ತಿನಲ್ಲಿ ಎರಡನೇ ಶ್ರೇಯಾಂಕದ ಕುನ್ಲಾವುತ್ ವಿಟಿಡ್‌ಸರ್ನ್ ಅವರನ್ನು ಎದುರಿಸಲಿದ್ದಾರೆ. ಥಾಯ್ಲೆಂಡ್‌ನ ಆಟಗಾರ ಇನ್ನೊಂದು ಪಂದ್ಯದಲ್ಲಿ ಚೀನಾ ತೈಪೆಯ ಲೀ ಚಿಯಾ ಹಾವೊ ಅವರನ್ನು 21-11, 21-13 ರಿಂದ ಪರಾಭವಗೊಳಿಸಿದರು. ಆದರೆ ಅನುಭವಿ ಕಿದಂಬಿ ಶ್ರೀಕಾಂತ್ 16-21, 21-11, 18-21 ರಿಂದ ಚೀನಾ ತೈಪೆಯ ಸು ಲಿ ಯಾಂಗ್ ಅವರಿಗೆ ಮಣಿದರು.

ಸಾತ್ವಿಕ್-ಚಿರಾಗ್ ಮುನ್ನಡೆ: ಡಬಲ್ಸ್‌ನಲ್ಲಿ ಅಗ್ರ ಶ್ರೇಯಾಂಕ ಪಡೆದಿರುವ ಭಾರತದ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಜೋಡಿ ಸಹ ಎಂಟರ ಘಟ್ಟಕ್ಕೆ ಮುನ್ನಡೆಯಿತು. ಇವರಿಬ್ಬರು 21-12, 21-19 ರಿಂದ ಮಲೇಷ್ಯಾದ ಬ್ರಿಯಾನ್ ಜೆರೆಮಿ ಗೂಂಟಿಂಗ್– ಮುಹಮ್ಮದ್ ಹೈಕಲ್ ಅವರನ್ನು ಸೋಲಿಸಿತು.

ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಸಾತ್ವಿಕ್-ಚಿರಾಗ್ ಮುಂದಿನ ಸುತ್ತಿನಲ್ಲಿ ಆರನೇ ಶ್ರೇಯಾಂಕದ ತಕುಮಿ ನೊಮುರಾ– ಯುಯಿಚಿ ಶಿಮೋಗಮಿ (ಜಪಾನ್) ಜೋಡಿಯನ್ನು ಎದುರಿಸಲಿದ್ದಾರೆ.

ಮಹಿಳಾ ಸಿಂಗಲ್ಸ್‌ನಲ್ಲಿ ಯುವ ಆಟಗಾರ್ತಿ ದೇವಿಕಾ ಸಿಹಾಗ್ 21-23, 11-21 ರಲ್ಲಿ ಥಾಯ್ಲೆಂಡ್‌ನ ಪಿಟ್ಚಮೊನ್ ಒಪತ್‌ನಿಪುತ್ ಅವರನ್ನು ಮಣಿಸಿದರು.

ಸೆಮಿಗೆ ಸಿನ್ನರ್: ಗೆಲುವಿನ ದಾಖಲೆ

ರೋಮ್ (ಎಎಫ್‌ಪಿ): ಇಟಲಿಯ ಯಾನಿಕ್ ಸಿನ್ನರ್ ಅವರು ಗುರುವಾರ ಆ್ಯಂಡಿ ರುಬ್ಲೇವ್ ಅವರನ್ನು ನೇರ ಸೆಟ್‌ಗಳಿಂದ ಸದೆಬಡಿದು ಇಟಾಲಿಯನ್ ಓಪನ್ ಸೆಮಿಫೈನಲ್ ತಲುಪಿದರು. ಆ ಹಾದಿಯಲ್ಲಿ ಮಾಸ್ಟರ್ಸ್ 1000 ಟೂರ್ನಿಗಳಲ್ಲಿ ಸತತ ಗೆಲುವು ದಾಖಲಿಸಿದ ದಾಖಲೆಯನ್ನೂ ಸ್ಥಾಪಿಸಿದರು.

ಸಿನ್ನರ್ 6-2, 6-4 ರಿಂದ ಜಯಗಳಿಸುವ ಮೂಲಕ ಎಟಿಪಿಯ ಉನ್ನತ ಮಟ್ಟದ ಟೂರ್ನಿಯಲ್ಲಿ ಸತತ 32ನೇ ಜಯ ದಾಖಲಿಸಿದರು. ಈ ಹಿಂದಿನ ದಾಖಲೆಯನ್ನು (ನಿರಂತರ 31 ಗೆಲುವು) ಸರ್ಬಿಯಾದ ದಿಗ್ಗಜ ನೊವಾಕ್ ಜೊಕೊವಿಚ್ 2011ರಲ್ಲಿ ಸ್ಥಾಪಿಸಿದ್ದರು.


ಇಟಲಿಯ ಯಾನಿಕ್ ಸಿನ್ನರ್



ತಿಲಕ್ ಮಿಂಚಿನಾಟಕ್ಕೆ ಒಲಿದ ಗೆಲುವು

ಶಾರ್ದೂಲ್‌ಗೆ ನಾಲ್ಕು ವಿಕೆಟ್ • ಪಂಜಾಬ್ ಕಿಂಗ್ಸ್ ತಂಡಕ್ಕೆ ಸತತ ಐದನೇ ಸೋಲು

ಧರ್ಮಶಾಲಾ (ಪಿಟಿಐ): ವೇಗಿ ಶಾರ್ದೂಲ್ ಠಾಕೂರ್ (39ಕ್ಕೆ4) ಅವರ ಅಮೋಘ ಬೌಲಿಂಗ್ ದಾಳಿಯ ಬಳಿಕ ತಿಲಕ್ ವರ್ಮಾ (ಔಟಾಗದೇ 75;33ಎ) ಬ್ಯಾಟಿಂಗ್‌ನಲ್ಲಿ ಅಬ್ಬರಿಸಿದರು. ಇದರಿಂದಾಗಿ ಮುಂಬೈ ಇಂಡಿಯನ್ಸ್ ತಂಡವು ಗುರುವಾರ ನಡೆದ ಐಪಿಎಲ್‌ನ ರೋಚಕ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಆರು ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತು.

ಆರಂಭದ ಏಳು ಪಂದ್ಯಗಳಲ್ಲಿ ಅಜೇಯವಾಗಿದ್ದ ಶ್ರೇಯಸ್ ಅಯ್ಯರ್ ಪಡೆಯು ನಂತರ ಸತತ ಐದನೇ ಸೋಲು ಅನುಭವಿಸುವುದರೊಂದಿಗೆ ಒತ್ತಡಕ್ಕೆ ಸಿಲುಕಿತು. ಈ ಪಂದ್ಯವನ್ನು ಗೆದ್ದು ಪ್ಲೇ ಆಫ್ ಹೊಸ್ತಿಲಿಗೆ ಬಂದು ನಿಲ್ಲುವ ಕನಸಿನಲ್ಲಿದ್ದ ತಂಡಕ್ಕೆ ನಿರಾಸೆಯಾಯಿತು. ಇಂಡಿಯನ್ಸ್ ಈಗಾಗಲೇ ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದಿರುವುದರಿಂದ ಆ ತಂಡಕ್ಕೆ ಈ ಪಂದ್ಯ ಮಹತ್ವದ್ದಾಗಿರಲಿಲ್ಲ.

ಹಿಮಾಚಲ ಪ್ರದೇಶ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಶಾರ್ದೂಲ್ ದಾಳಿಯ ನಡುವೆಯೂ ಪಂಜಾಬ್ ತಂಡ 8 ವಿಕೆಟ್‌ಗಳಿಗೆ 200 ರನ್ ಗಳಿಸಿತು. ಆರಂಭಿಕ ಆಟಗಾರ ಪ್ರಭಸಿಮ್ರನ್ ಸಿಂಗ್ (57; 32ಎ, 4X6, 6X4) ಮತ್ತು ಅಝ್ಮತ್‌ವುಲ್ಲಾ ಒಮರ್‌ಝೈ (38; 17ಎ, 4X2, 6X4) ಉಪಯುಕ್ತ ಕಾಣಿಕೆ ನೀಡಿದರು.

ಗುರಿ ಬೆನ್ನಟ್ಟಿದ ಮುಂಬೈ ತಂಡಕ್ಕೆ ರೋಹಿತ್ ಶರ್ಮಾ (25;26ಎ) ಮತ್ತು ರಯಾನ್ ರಿಕೆಲ್ಟನ್ (48;23ಎ, 4x4, 6x4) ಉತ್ತಮ ಅಡಿಪಾಯ ಹಾಕಿದರು. ಮೊದಲ ವಿಕೆಟ್‌ಗೆ 61 ರನ್ ಸೇರಿಸಿದರು. ಅರ್ಧಶತಕದ ಹೊಸ್ತಿಲಲ್ಲಿದ್ದ ರಯಾನ್ ಅವರ ವಿಕೆಟ್ ಪಡೆದ ಒಮರ್‌ಝೈ ಸಂಭ್ರಮಿಸಿದರು. ನಂತರ ಬಂದ ನಮನ್ ಧೀರ್ (9) ಬೇಗನೆ ಔಟಾದರು. ಅದರ ಬೆನ್ನಲ್ಲೇ ರೋಹಿತ್ ಕೂಡ ನಿರ್ಗಮಿಸಿದರು.

83 ರನ್‌ಗಳಿಗೆ ಅಗ್ರ ಕ್ರಮಾಂಕದ ಮೂರು ಬ್ಯಾಟರ್‌ಗಳನ್ನು ಕಳೆದುಕೊಂಡ ಮುಂಬೈ ತಂಡ ಒತ್ತಡಕ್ಕೆ ಸಿಲುಕಿತು. ಈ ಹಂತದಲ್ಲಿ ಎಡಗೈ ಬ್ಯಾಟರ್ ತಿಲಕ್ ಜವಾಬ್ದಾರಿಯುತ ಆಟವಾಡಿದರು. ಅವರು, ಶೆರ್ಫೇನ್ ರುದರ್‌ಫೋರ್ಡ್ ಅವರೊಂದಿಗೆ 61 (42ಎ) ರನ್ ಸೇರಿಸಿ ತಂಡಕ್ಕೆ ಚೇತರಿಕೆ ನೀಡಿದರು. ಗೆಲುವಿಗೆ 21 ಎಸೆತಗಳಲ್ಲಿ 52 ರನ್ ಬೇಕಿದ್ದಾಗ ಶೆರ್ಫೇನ್ ಔಟಾದರು.

ತಿಲಕ್ ಅವರನ್ನು ಸೇರಿಕೊಂಡ ವಿಲ್ ಜ್ಯಾಕ್ಸ್ (25;10ಎ, 4x2, 6x2) ಡೆತ್ ಓವರ್‌ಗಳಲ್ಲಿ ಬೌಲರ್‌ಗಳನ್ನು ದಂಡಿಸಿದರು. ಮಾರ್ಕೊ ಯಾನ್ಸೆನ್ ಹಾಕಿದ 18ನೇ ಓವರ್‌ನಲ್ಲಿ 22 ರನ್ ರನ್ ಸೂರೆ ಮಾಡಿದ ಈ ಜೋಡಿ, ಪಂದ್ಯಕ್ಕೆ ಮಹತ್ವದ ತಿರುವು ನೀಡಿತು. ಅರ್ಷದೀಪ್ ಸಿಂಗ್ ಹಾಕಿದ 19ನೇ ಓವರ್‌ನಲ್ಲಿ 13 ರನ್ ಬಾಚಿತು. ಕೊನೆಯ ಓವರ್‌ನಲ್ಲಿ ಗೆಲುವಿಗೆ 15 ರನ್ ಬೇಕಿತ್ತು. ಝೇವಿಯರ್ ಬಾರ್ಟಲೆಟ್ ಹಾಕಿದ ಓವರ್‌ನಲ್ಲಿ ಒಂದು ಎಸೆತ ಬಾಕಿ ಇರುವಂತೆ ತಂಡವು ಗೆಲುವಿನ ದಡ ಸೇರಿತು. ಮುಂಬೈ 4 ವಿಕೆಟ್‌ಗೆ 205 ರನ್ ಗಳಿಸಿ ಸಂಭ್ರಮಿಸಿತು.



ಪಿಟಿಐ ಚಿತ್ರ

ಸಿಂಗ್ ಮಿಂಚು: ಇದಕ್ಕೂ ಮೊದಲು ಟಾಸ್ ಗೆದ್ದ ಮುಂಬೈ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಹಾರ್ದಿಕ್ ಪಾಂಡ್ಯ ಮತ್ತು ಸೂರ್ಯಕುಮಾರ್ ಯಾದವ್ ಅನುಪಸ್ಥಿತಿಯಲ್ಲಿ ಜಸ್‌ಪ್ರೀತ್ ಬೂಮ್ರಾ ನಾಯಕತ್ವ ವಹಿಸಿದರು.

ಬೂಮ್ರಾ ಹಾಕಿದ ಎರಡನೇ ಓವರ್‌ನಲ್ಲಿ ಪ್ರಭಸಿಮ್ರನ್ ಅವರ ಸುಲಭವಾದ ಕ್ಯಾಚ್ ಅನ್ನು ಸ್ಲಿಪ್ ಫೀಲ್ಡರ್ ನಮನ್ ಧೀರ್ ಕೈಚೆಲ್ಲಿದರು. ಇದರ ಲಾಭ ಪಡೆದ ಸಿಂಗ್ ಮತ್ತು ಪ್ರಿಯಾಂಶ್ ಆರ್ಯ (27 ರನ್) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿದರು. ಪ್ರಿಯಾಂಶ್ ಅವರನ್ನು ದೀಪಕ್ ಚಾಹರ್ ಕ್ಲೀನ್‌ಬೌಲ್ಡ್ ಮಾಡಿದರು. ಸಿಂಗ್ ಅವರು ಕೂಪರ್ ಕೊನೊಲಿ (21; 22ಎ) ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 57 ರನ್ ಸೇರಿಸಿದರು.

12ನೇ ಓವರ್‌ನಲ್ಲಿ ಸಿಂಗ್ ವಿಕೆಟ್ ಗಳಿಸಿದ ಶಾರ್ದೂಲ್ ಖಾತೆ ತೆರೆದರು. ಅದೇ ಓವರ್‌ನಲ್ಲಿ ಶ್ರೇಯಸ್ ವಿಕೆಟ್ ಕೂಡ ಎಗರಿಸಿದರು. ಸೂರ್ಯಾಂಶ್ ಶೆಡ್ಗೆ ಹಾಗೂ ಮಾರ್ಕೊ ಯಾನ್ಸೆನ್ ಅವರು ದೊಡ್ಡಮಟ್ಟದ ಇನಿಂಗ್ಸ್ ಆಡದಂತೆ ಕಡಿವಾಣ ಹಾಕಿದರು.

ಕೊನೆಯ ಹಂತದ ಓವರ್‌ಗಳಲ್ಲಿ ಒಮರ್‌ಝೈ ಬೀಸಾಟವಾಡಿದರು. ವಿಷ್ಣು ವಿನೋದ್ (ಔಟಾಗದೇ 15; 8ಎ) ಮತ್ತು ಝೇವಿಯರ್ (ಔಟಾಗದೇ 18) ಅವರು ಭರ್ಜರಿ ಬ್ಯಾಟಿಂಗ್ ಮಾಡಿದರು.

ಸಂಕ್ಷಿಪ್ತ ಸ್ಕೋರು: ಪಂಜಾಬ್ ಕಿಂಗ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 200 (ಪ್ರಿಯಾಂಶ್ ಆರ್ಯ 22, ಪ್ರಭಸಿಮ್ರನ್ ಸಿಂಗ್ 57, ಕೂಪರ್ ಕೊನೊಲಿ 21, ಅಝ್ಮತ್‌ವುಲ್ಲಾ ಒಮರ್‌ಝೈ 38, ವಿಷ್ಣು ವಿನೋದ್ ಔಟಾಗದೇ 15, ಝೇವಿಯರ್ ಬಾರ್ಟಲೆಟ್ ಔಟಾಗದೇ 18, ದೀಪಕ್ ಚಾಹರ್ 36ಕ್ಕೆ2, ಶಾರ್ದೂಲ್ ಠಾಕೂರ್ 39ಕ್ಕೆ4). ಮುಂಬೈ ಇಂಡಿಯನ್ಸ್: 19.5 ಓವರ್‌ಗಳಲ್ಲಿ 4 ವಿಕೆಟ್‌ಗೆ 205 (ರೋಹಿತ್ ಶರ್ಮಾ 25, ರಯಾನ್ ರಿಕೆಲ್ಟನ್ 48, ತಿಲಕ್ ವರ್ಮಾ ಔಟಾಗದೇ 75, ವಿಲ್ ಜ್ಯಾಕ್ಸ್ ಔಟಾಗದೇ 25; ಅಝ್ಮತ್‌ವುಲ್ಲಾ ಒಮರ್‌ಝೈ 36ಕ್ಕೆ 2). ಪಂದ್ಯದ ಆಟಗಾರ: ತಿಲಕ್ ವರ್ಮಾ

ಸೂಪರ್ ಕಿಂಗ್ಸ್–ಲಖನೌ ಮುಖಾಮುಖಿ ಇಂದು

ಚೆನ್ನೈ ಬಳಗಕ್ಕೆ ಮಹತ್ವದ ಪಂದ್ಯ

ಲಖನೌ (ಪಿಟಿಐ): ಪ್ಲೇ ಆಫ್ ಪ್ರವೇಶಿಸುವ ಅವಕಾಶವನ್ನು ಇನ್ನೂ ಉಳಿಸಿಕೊಂಡಿರುವ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಶುಕ್ರವಾರ ನಡೆಯಲಿರುವ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ಎದುರು ಆಡಲಿದೆ.

ರಿಷಭ್ ಪಂತ್ ನಾಯಕತ್ವದ ಲಖನೌ ಈಗಾಗಲೇ ಪ್ಲೇ ಆಫ್ ಹಾದಿಯಿಂದ ಹೊರಬಿದ್ದಿದೆ. ಚೆನ್ನೈ ತಂಡವು ಇದುವರೆಗೆ 11 ಪಂದ್ಯಗಳನ್ನು ಆಡಿದೆ. ಅದರಲ್ಲಿ ಆರರಲ್ಲಿ ಜಯಿಸಿ, ಐದರಲ್ಲಿ ಸೋತಿದೆ. ಇನ್ನುಳಿದಿರುವ ಎಲ್ಲ ಪಂದ್ಯಗಳಲ್ಲಿಯೂ ಗೆದ್ದರೆ,ಪ್ಲೇ ಆಫ್ ಪ್ರವೇಶಿಸುವ ಅವಕಾಶವೂ ತಂಡಕ್ಕೆ ಇದೆ.

ಋತುರಾಜ್ ಗಾಯಕವಾಡ ಬಳಗವು ಸತತ ಮೂರು ಪಂದ್ಯಗಳಲ್ಲಿ ಜಯಿಸಿದೆ. ಆದ್ದರಿಂದ ತುಂಬು ಆತ್ಮವಿಶ್ವಾಸದಲ್ಲಿದೆ. ಸಂಜು ಸ್ಯಾಮ್ಸನ್, ಊರ್ವಿಲ್ ಪಟೇಲ್ ಹಾಗೂ ಋತುರಾಜ್ ಅವರು ಉತ್ತಮ ಲಯದಲ್ಲಿದ್ದಾರೆ. ಮಧ್ಯಮ ಹಂತದ ಓವರ್‌ಗಳಲ್ಲಿ ಶಿವಂ ದುಬೆ, ಕಾರ್ತಿಕ್ ಶರ್ಮಾ ಮತ್ತು ಡಿವಾಲ್ಡ್ ಬ್ರೆವಿಸ್ ಅವರು ಕಾಣಿಕೆ ನೀಡುವುದು ಅಗತ್ಯವಾಗಿದೆ.

ಚೆನ್ನೈ ತಂಡದ ಬೌಲಿಂಗ್ ವಿಭಾಗಕ್ಕೆ ಮತ್ತೊಂದು ಆಘಾತವಾಗಿದೆ. ಬೌಲಿಂಗ್ ಆಲ್‌ರೌಂಡರ್ ಜೆಮಿ ಒವರ್ಟನ್ ಅವರು ಗಾಯದಿಂದಾಗಿ ಹೊರನಡೆದಿದ್ದಾರೆ. ಇದರಿಂದಾಗಿ ಸ್ಪಿನ್ನರ್ ನೂರ್ ಅಹಮದ್, ಮ್ಯಾಟ್ ಹೆನ್ರಿ ಹಾಗೂ ಅಕೀಲ್ ಹುಸೇನ್ ಅವರ ಮೇಲೆ ಹೆಚ್ಚು ಅವಲಂಬಿತರಾಗಬೇಕಿದೆ.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ						
ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಆರ್‌ಸಿಬಿ	12	8	4	0	16	1.053
ಜಿ ಟಿ	12	8	4	0	16	0.551
ಎಸ್‌ಆರ್‌ಎಚ್	12	7	5	0	14	0.331
ಪಿಬಿಕೆಎಸ್	12	6	5	1	13	0.355
ಸಿಎಸ್‌ಕೆ	11	6	5	0	12	0.185
ಆರ್ ಆರ್	11	6	5	0	12	0.082
ಡಿ ಸಿ	12	5	7	0	10	- 0.993
ಕೆಕೆಆರ್	11	4	6	1	9	- 0.198
ಎಂ ಐ	12	4	8	0	8	- 0.504
ಎಲ್‌ಎಸ್‌ಜಿ	11	3	8	0	6	- 0.907
ಆರೆಂಜ್ ಕ್ಯಾಪ್: ಹೆನ್ರಿಚ್ ಕ್ಲಾಸೆನ್, ಎಸ್‌ಆರ್‌ಎಚ್ (508 ರನ್)						
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (22 ವಿಕೆಟ್)						

ಇಂದಿನ ಪಂದ್ಯ

ಲಖನೌ ಸೂಪರ್ ಜೈಂಟ್ಸ್ V/s ಚೆನ್ನೈ ಸೂಪರ್ ಕಿಂಗ್ಸ್

ತಾಣ: ಲಖನೌ
ಪಂದ್ಯ ಆರಂಭ: ರಾತ್ರಿ 7.30

ಲೈವ್
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಲಖನೌ ತಂಡಕ್ಕೆ ಸೋಲಿನಿಂದ ಯಾವ ವ್ಯತ್ಯಾಸವೂ ಆಗುವುದಿಲ್ಲ. ಆದರೆ ಒಂದೊಮ್ಮೆ ಗೆದ್ದರೆ ಚೆನ್ನೈಗೆ ಮುಂದಿನ ಹಾದಿ ದುರ್ಗಮವಾಗುವ ಸಾಧ್ಯತೆ ಇದೆ. ರಿಷಭ್ ಅವರಿಗೆ ಲಯಕ್ಕೆ ಮರಳಲು ಇದು ಮತ್ತೊಂದು ಅವಕಾಶವಷ್ಟೇ. ಜೋಶ್ ಇಂಗ್ಲಿಸ್, ನಿಕೊಲಸ್ ಪೂರನ್ ಮತ್ತು ಮಿಚೆಲ್ ಮಾರ್ಷ್ ಅವರು ಸಾಮರ್ಥ್ಯವನ್ನು ತಕ್ಕಮಟ್ಟಿಗೆ ಮೆರೆದಿದ್ದಾರೆ. ಏಡನ್ ಮರ್ಕರಂ, ಬೌಲಿಂಗ್‌ನಲ್ಲಿ ಮೊಹಮ್ಮದ್ ಶಮಿ, ಆವೇಶ್ ಖಾನ್ ಮತ್ತು ಸ್ಪಿನ್ನರ್ ದಿಗ್ವೇಶ್ ರಾಠಿ ಅವರು ಬೌಲಿಂಗ್ ವಿಭಾಗದ ಶಕ್ತಿಯಾಗಿದ್ದಾರೆ. ತವರಿನಂಗಳದಲ್ಲಿ ಪಾರಮ್ಯ ಮೆರೆಯುವ ಸಾಮರ್ಥ್ಯವೂ ತಂಡಕ್ಕೆ ಇದೆ.

ಕರ್ನಾಟಕ ಓಪನ್ ಟೆನಿಸ್: ಹಮಿಶ್‌ಗೆ ಆಘಾತ

ಯಶಸ್ಸಿನ ಓಟ ಮುಂದುವರಿಸಿದ ಕ್ರಿಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಉದಯೋನ್ಮುಖ ಪ್ರತಿಭೆ ಕ್ರಿಶ್ ತ್ಯಾಗಿ ತಮ್ಮ ವೃತ್ತಿಜೀವನದಲ್ಲಿ ಅತಿ ದೊಡ್ಡ ಗೆಲುವನ್ನು ದಾಖಲಿಸಿದರು. ವೈಲ್ಡ್‌ಕಾರ್ಡ್ ಮೂಲಕ ಪ್ರವೇಶ ಪಡೆದಿರುವ ಕ್ರಿಶ್, ಕರ್ನಾಟಕ ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯಲ್ಲಿ ಎರಡನೇ ಶ್ರೇಯಾಂಕದ ಹಮಿಶ್ ಸ್ಟುವರ್ಟ್ ಅವರನ್ನು ಸೋಲಿಸಿ ಸೆಮಿಫೈನಲ್‌ಗೆ ದಾಪುಗಾಲಿಟ್ಟರು.

19 ವರ್ಷ ವಯಸ್ಸಿನ ಕ್ರಿಶ್ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ನಿರ್ಭೀತ ಆಟವಾಡಿ ವಿಶ್ವ ಕ್ರಮಾಂಕದಲ್ಲಿ 328ನೇ ಸ್ಥಾನದಲ್ಲಿರುವ ಸ್ಟುವರ್ಟ್ ಅವರನ್ನು 7–6 (7), 5–7, 6–4 ರಿಂದ ಸೋಲಿಸಿ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು. 1332ನೇ ಸ್ಥಾನದಲ್ಲಿರುವ ಬೆಂಗಳೂರಿನ ಹುಡುಗ, ಬ್ರಿಟನ್‌ನ ಅನುಭವಿ ಆಟಗಾರನ ಸವಾಲು ಅಂತ್ಯಗೊಳಿಸಲು 2 ಗಂಟೆ 40 ನಿಮಿಷ ಹೋರಾಡಿದರು.

ಹಮಿಶ್ 19 ಏಸ್‌ಗಳನ್ನು ಸಿಡಿಸಿದರೆ, ಭಾರತದ ಆಟಗಾರ ಒಂದು ಏಸ್ ಮಾತ್ರ ಹಾಕಿದರು. ಆದರೆ ಹೊಡೆತಗಳನ್ನು ನಿಯಂತ್ರಿಸಲು ಪರದಾಡಿದ ಬ್ರಿಟನ್ ಆಟಗಾರ 71 ತಪ್ಪುಗಳನ್ನು ಎಸಗಿದರು. ಕ್ರಿಶ್ 35 ತಪ್ಪುಗಳನ್ನು ಮಾಡಿದರು.


ಸರ್ವ್ ಮಾಡಿದ ಕರ್ನಾಟಕದ ಕ್ರಿಶ್ ತ್ಯಾಗಿ

‘ಮೊದಲ ಸಲ ಚಾಲೆಂಜರ್ ಸೆಮಿಫೈನಲ್ ತಲುಪಿದ್ದರಿಂದ ತುಂಬಾ ಸಂಸತವಾಗಿದೆ. ಹಿಂದೆಯೂ ಭರ್ಜರಿ ಸರ್ವ್‌ಗಳನ್ನು ಎದುರಿಸಿದ್ದೆ. ಆದರೆ ಅವುಗಳನ್ನು ಸರಿಯಾಗಿ ನಿಭಾಯಿಸಿದರೆ ಎದುರಾಳಿಯ ಲಯದ ಮೇಲೆ ಪರಿಣಾಮವಾಗುತ್ತದೆ. ನಾನು ನನ್ನ ಆಟದ ಕಡೆಗಷ್ಟೇ ಗಮನಹರಿಸಿದೆ’ ಎಂದು ಕ್ರಿಶ್ ಹೇಳಿದರು.

ಇದಕ್ಕೆ ಮೊದಲು, ಭಾರತದ ಇನ್ನೊಬ್ಬ ಆಟಗಾರ ಮನೀಶ್ ಸುರೇಶಕುಮಾರ್ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಬೆಲರೂಸ್‌ನ ಇಲ್ಯಾ ಇವಾಶ್ಕಾ ಅವರಿಗೆ 3–6, 3–6 ರಲ್ಲಿ ಮಣಿದರು.

ಅಗ್ರ ಶ್ರೇಯಾಂಕದ ಕೀಗನ್ ಸ್ಮಿತ್ (ಅಮೆರಿಕ) ಅವರು 7–6 (5), 6–3 ರಿಂದ ಐದನೇ ಶ್ರೇಯಾಂಕದ ಒಗನ್ಯೆನ್ ಮಿಲಿಕ್ (ಸರ್ಬಿಯಾ) ಅವರನ್ನು ಸೋಲಿಸಿರು. ನಾಲ್ಕನೇ ಶ್ರೇಯಾಂಕದ ಫಿಲಿಕ್ ಸೆಕುಲಿಕ್ (ಆಸ್ಟ್ರೇಲಿಯಾ) ಅವರು 6–7 (6), 6–3, 6–1 ರಿಂದ ಏಳನೇ ಶ್ರೇಯಾಂಕದ ಮ್ಯಾಕ್ಸಿಮಸ್ ಜೋನ್ಸ್ ಅವರನ್ನು ಮಣಿಸಿದರು. ಸೆಮಿಫೈನಲ್ ಪಂದ್ಯಗಳಲ್ಲಿ ಕೀಗನ್ ಸ್ಮಿತ್, ಇಲ್ಯಾ ಇವಾಶ್ಕಾ ಅವರನ್ನು, ಫಿಲಿಪ್ ಸೆಕುಲಿಕ್, ಕ್ರಿಶ್ ತ್ಯಾಗಿ ಅವರನ್ನು ಎದುರಿಸಲಿದ್ದಾರೆ.

ಭಾರತ ‘ಎ’ ತಂಡದಲ್ಲಿ ಸೂರ್ಯವಂಶಿ

ನವದೆಹಲಿ (ಪಿಟಿಐ): ಹದಿಹರೆಯದ ಪ್ರತಿಭಾವಂತ ಬ್ಯಾಟರ್ ವೈಭವ್ ಸೂರ್ಯವಂಶಿ ಅವರು ಶ್ರೀಲಂಕಾ ವಿರುದ್ಧ ಜೂನ್ 9 ರಿಂದ ನಡೆಯಲಿರುವ ತ್ರಿಕೋಣ ಏಕದಿನ ಸರಣಿಯಲ್ಲಿ ಆಡುವ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಅನುಭವಿ ಬ್ಯಾಟರ್ ತಿಲಕ್ ವರ್ಮಾ ತಂಡವನ್ನು ಮುನ್ನಡೆಸಲಿದ್ದಾರೆ.

ಅತಿಥೇಯ ಶ್ರೀಲಂಕಾದ ಜೊತೆ ಅಫ್ಗಾನಿಸ್ತಾನ ತಂಡವು ಟೂರ್ನಿಯಲ್ಲಿ ಭಾಗವಹಿಸುತ್ತಿರುವ ಮತ್ತೊಂದು ತಂಡವಾಗಿದೆ. ಪಂದ್ಯಗಳು ಡಂಬುಲಾದಲ್ಲಿ ನಡೆಯಲಿವೆ. ಭಾರತ ಎ ತಂಡವು ಶ್ರೀಲಂಕಾ ಎ ವಿರುದ್ಧ (ಜೂನ್ 9 ಮತ್ತು 15) ಮತ್ತು ಅಫ್ಗಾನಿಸ್ತಾನ ಎ (ಜೂನ್ 11 ಮತ್ತು 17) ವಿರುದ್ಧ ತಲಾ ಎರಡು ಬಾರಿ ಆಡಲಿದೆ. ಲೀಗ್ ನಂತರ ಅಗ್ರ ಎರಡು ತಂಡಗಳು ಜೂನ್ 21ರಂದು ನಡೆಯಲಿರುವ ಫೈನಲ್‌ನಲ್ಲಿ ಆಡಲಿವೆ.

ಭಾರತ ಎ ತಂಡವು ಏಕದಿನ ಸರಣಿಯ ಜೊತೆ ಶ್ರೀಲಂಕಾ ಎ ಜೊತೆ ಗಾಲೆಯಲ್ಲಿ ನಾಲ್ಕು ದಿನಗಳ ಎರಡು ‘ಟೆಸ್ಟ್’ ಪಂದ್ಯಗಳನ್ನು ಆಡಲಿದೆ. ಈ ಪಂದ್ಯಗಳಿಗೆ ತಂಡವನ್ನು ಮುಂದೆ ಪ್ರಕಟಿಸಲಾಗುವುದು.

ಸೀನಿಯರ್ ತಂಡಕ್ಕೆ ಆಯ್ಕೆ ಮಾಡುವ ಹಾದಿಯಲ್ಲಿ ಭಾರತ ಎ ತಂಡದಲ್ಲಿ ಸೂರ್ಯವಂಶಿ ಅವರ ಸಾಮರ್ಥ್ಯ ಪರೀಕ್ಷೆಗೆ ಅವಕಾಶ ನೀಡಲು ಆಯ್ಕೆಗಾರರು ಬಯಸಿದ್ದಾರೆ ಎನ್ನಲಾಗಿದೆ. ಜೂನ್ 26ರಿಂದ ಐರ್ಲೆಂಡ್ ಮತ್ತು ಇಂಗ್ಲೆಂಡ್ ಪ್ರವಾಸ ಕೈಗೊಳ್ಳುವ ಸೀನಿಯರ್ ತಂಡಕ್ಕೆ ಅವರನ್ನು ಆಯ್ಕೆ ಮಾಡುವ ಸಾಧ್ಯತೆಯಿದೆ.

ತಂಡ ಹೀಗಿದೆ

ತಿಲಕ್ ವರ್ಮಾ (ಕ್ಯಾಪ್ಟನ್), ಪ್ರಿಯಾಂಶ್ ಆರ್ಯ, ವೈಭವ್ ಸೂರ್ಯವಂಶಿ, ರಿಯಾನ್ ಪರಾಗ್ (ಉಪ ನಾಯಕ), ಆಯುಷ್ ಬಡೋನಿ, ನಿಶಾಂತ್ ಸಿಂಧು, ಹರ್ಷ್ ದುಬೆ, ಸೂರ್ಯಾಂಶ್ ಶೆಡ್ಗೆ, ಪ್ರಭಸಿಮ್ರನ್ ಸಿಂಗ್ (ವಿಕೆಟ್ ಕೀಪರ್), ಕುಮಾರ್ ಕುಶಾಗ್ರ (ವಿಕೆಟ್ ಕೀಪರ್), ವಿಪ್ರಜ್ ನಿಗಂ, ಯಶ್ ಠಾಕೂರ್, ಯುದ್ಧವೀರ್ ಸಿಂಗ್, ಅನ್ಷುಲ್ ಕಂಬೋಜ್, ಅರ್ಷದ್ ಖಾನ್.

ಎ ತಂಡಕ್ಕೆ ಆಯ್ಕೆಯಾಗಿರುವ ಆಟಗಾರರ ಸರಾಸರಿ ವಯಸ್ಸು 23. ಮೂವರಷ್ಟೇ– ಅರ್ಷದ್ ಖಾನ್, ಯುದ್ಧವೀರ್ ಸಿಂಗ್ ಮತ್ತು ಯಶ್ ಠಾಕೂರ್– 25 ವರ್ಷ ದಾಟಿದವರಾಗಿದ್ದಾರೆ. ವಿಜಯ್ ಹಜಾರೆ ಟ್ರೋಫಿಯಲ್ಲಿ ಉತ್ತಮ ಪ್ರದರ್ಶನ ನೀಡಿರುವ ಅವರು ಐಪಿಎಲ್ ತಂಡಗಳಲ್ಲೂ ಅವಕಾಶ ಪಡೆದಿದ್ದಾರೆ.

ತಂಡದಲ್ಲಿರುವವರಲ್ಲಿ ಅನ್ಷುಲ್ ಕಂಬೋಜ್ (ಟೆಸ್ಟ್), ರಿಯಾನ್ ಪರಾಗ್ ಮತ್ತು ತಿಲಕ್ ವರ್ಮಾ ಅವರು ಈಗಾಗಲೇ ಸೀನಿಯರ್ ತಂಡದಲ್ಲಿ ಆಡಿದ್ದಾರೆ.

ಸಾಹಸಿ ಪಾಂಡೆಯ ಸೂಪರ್ ಕ್ಯಾಚ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಟ್ರೇಲಿಯಾದ ಸ್ಫೋಟಕ ಶೈಲಿಯ ಬ್ಯಾಟರ್ ಟಿಮ್ ಡೇವಿಡ್ ಮತ್ತು ಬ್ಯಾಟಿಂಗ್ ಸೂಪರ್ ಸ್ಟಾರ್ ವಿರಾಟ್ ಕೊಹ್ಲಿ ಅವರಿಬ್ಬರೂ ಬುಧವಾರ ಏಕಕಾಲಕ್ಕೆ ಅಚ್ಚರಿಚಕಿತರಾಗುವಂತೆ ಮಾಡಿದವರು ಕರ್ನಾಟಕದ ಮನೀಷ್ ಪಾಂಡೆ.

ರಾಯಪುರದ ಶಹೀದ್ ವೀರನಾರಾಯಣ ಸಿಂಗ್ ಕ್ರೀಡಾಂಗಣದಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲಿರುವ ಪಾಂಡೆ ಪಡೆದ ಅಮೋಘ ಕ್ಯಾಚ್ ಹಾಗಿತ್ತು. ಆರ್‌ಸಿಬಿಯ ಡೇವಿಡ್ ಅವರು ಕಾರ್ತಿಕ್ ತ್ಯಾಗಿಯ ಎಸೆತವನ್ನು ಬ್ಯಾಕ್‌ಫುಟ್‌ನಲ್ಲಿ ಹೋಗಿ ಕಟ್ ಮಾಡಿದರು. ಚೆಂಡು ಗಾಳಿಯಲ್ಲಿ ಚಿಮ್ಮಿತು. ಚೆಂಡು ಇನ್ನೇನು ನೆಲಕ್ಕೆ ಸ್ಪರ್ಶಿಸಿ ಬೌಂಡರಿಯತ್ತ ರಭಸವಾಗಿ ಸಾಗಬೇಕು ಎನ್ನುವ ಹಂತದಲ್ಲಿ ಬ್ಯಾಕ್‌ವರ್ಡ್ ಪಾಯಿಂಟ್‌ನಲ್ಲಿದ್ದ ಪಾಂಡೆ ತಮ್ಮ ಎಡಕ್ಕೆ ಗಿಡುಗನಂತೆ ಹಾರಿ ಒಂದೇ ಕೈಯಲ್ಲಿ ಚೆಂಡನ್ನು ಹಿಡಿತಕ್ಕೆ ಪಡೆದು ನೆಲಕ್ಕುರುಳಿದರು. ‘ಇದ್ಯಾರು ಪಾಂಡೆನೋ, ಗ್ಲೆನ್ ಫಿಲಿಪ್ಸೋ’ ಎಂಬ ಉದ್ಗಾರ ಕಾಮೆಂಟ್ರಿ (ಹಿಂದಿ) ಬಾಕ್ಸ್‌ನಲ್ಲಿ ಹೊರಹೊಮ್ಮಿತ್ತು. ಬ್ಯಾಟರ್ ಡೇವಿಡ್ ಅಂತೂ ಗರಬಡಿದಂತೆ ನಿಂತುಬಿಟ್ಟರು. ನಾನ್‌ಸ್ಟ್ರೈಕರ್ ತುದಿಯಲ್ಲಿದ್ದ ವಿರಾಟ್ ಕೂಡ ಹುಬ್ಬೇರಿಸಿ, ತುಟ್ಟಿ ಕಚ್ಚಿ ತಲೆದೂಗಿದರು.

ಪಾಂಡೆ ಕ್ಯಾಚ್ ಪಡೆಯುವಾಗ ಚೆಂಡು ನೆಲಕ್ಕೆ ಸ್ಪರ್ಶಿಸಿದೆಯೇ ಎಂಬುದನ್ನು ಪರಿಶೀಲಿಸಿದ ಮೂರನೇ ಅಂಪೈರ್ ‘ಔಟ್’ ಎಂದು ತೀರ್ಪಿತ್ತು, ಡೇವಿಡ್ ಮರಳಿದರು.

ಪಾಂಡೆಯ ಈ ಸಾಹಸಭರಿತ ಕ್ಯಾಚ್ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಮೆಚ್ಚುಗೆಗೆ ಪಾತ್ರವಾಗಿದೆ. ಭಾರತ ತಂಡದ ಮಾಜಿ ಆಟಗಾರ, ಕರ್ನಾಟಕದ ದೊಡ್ಡ ಗಣೇಶ್ ಅವರು ಪಾಂಡೆ ಕ್ಯಾಚ್‌ನ ವಿಡಿಯೊವನ್ನು ‘ಎಕ್ಸ್’ನಲ್ಲಿ ಹಂಚಿಕೊಂಡು ಶ್ಲಾಘಿಸಿದ್ದಾರೆ.

ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಕೋಚ್ ಆಗಿರುವ ಸುನಿಲ್ ಜೋಶಿ ಅವರೂ ಒಂದು ಹಳೆಯ ವಿಡಿಯೊ ಲಿಂಕ್ ಹಂಚಿಕೊಂಡಿದ್ದಾರೆ. ಮೈಸೂರಿನಲ್ಲಿ ನಡೆದಿದ್ದ ಕರ್ನಾಟಕ–ಮುಂಬೈ ನಡುವಣ ರಣಜಿ ಟ್ರೋಫಿ ಫೈನಲ್‌ನಲ್ಲಿ ಸುನಿಲ್ ಜೋಶಿ ಅವರ ಬೌಲಿಂಗ್‌ನಲ್ಲಿ ಅಭಿಷೇಕ್ ನಾಯರ್ ಹೊಡೆದಿದ್ದ ಚೆಂಡನ್ನು ಪಾಂಡೆ ಅಮೋಘವಾಗಿ ಕ್ಯಾಚ್ ಮಾಡಿದ್ದರು.


ಮನೀಷ್ ಪಾಂಡೆಯನ್ನು ಅಭಿನಂದಿಸಿದ ವಿರಾಟ್ ಕೊಹ್ಲಿ
ಪಿಟಿಐ ಚಿತ್ರ

‘ಕೆಲವು ಕ್ಯಾಚ್‌ಗಳನ್ನು ಮರೆಯುವುದು ಅಸಾಧ್ಯ. ಅಂದು ಪಾಂಡೆ ಪಡೆದಿದ್ದ ಆ ಸಾಹಸಮಯ ಕ್ಯಾಚ್‌ಗೆ ಅಭಿಷೇಕ್ ನಾಯರ್ ಅವಾಕ್ಕಾಗಿದ್ದರು. ಈಗ ಅವರು ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಕೋಚ್ ಆಗಿದ್ದಾರೆ’ ಎಂದು ಪೋಸ್ಟ್‌ನಲ್ಲಿ ಬರೆದಿದ್ದಾರೆ.

ಐಪಿಎಲ್ ಇತಿಹಾಸದಲ್ಲಿ ಮೊದಲ ಶತಕ ಗಳಿಸಿದ ಭಾರತೀಯ ಬ್ಯಾಟರ್ ಎಂಬ ಹೆಗ್ಗಳಿಕೆಯೂ ಪಾಂಡೆ ಅವರದ್ದು. 2009ರಲ್ಲಿ ಅವರು ಆರ್‌ಸಿಬಿಯಲ್ಲಿ ಆಡುವಾಗ ಡೆಕ್ಕನ್ ಚಾರ್ಜರ್ಸ್ ವಿರುದ್ಧ 114 ರನ್ ಗಳಿಸಿದ್ದರು. 36 ವರ್ಷದ ಪಾಂಡೆ ಪ್ರಸಕ್ತ ಐಪಿಎಲ್‌ನಲ್ಲಿ ಮೂರು ಪಂದ್ಯಗಳಲ್ಲಿ ಆಡಿದ್ದಾರೆ. ಆದರೆ ಬ್ಯಾಟಿಂಗ್ ಮಾಡುವ ಅವಕಾಶ ಅವರಿಗೆ ಸಿಕ್ಕಿಲ್ಲ. ಇದೀಗ ಅದ್ಭುತವಾದ ಕ್ಯಾಚ್ ಮೂಲಕ ಗಮನ ಸೆಳೆದಿದ್ದಾರೆ. ಪಂದ್ಯದ ನಂತರ ವಿರಾಟ್ ಅವರು ಪಾಂಡೆಯನ್ನು ತಬ್ಬಿಕೊಂಡು ಅಭಿನಂದಿಸಿದರು.

ಶ್ರೀಜೇಶ್ ಸ್ಥಾನಕ್ಕೆ ಫ್ರಾನ್ಸ್‌ನ ಫ್ರೆಡೆರಿಕ್



ನವದೆಹಲಿ (ಪಿಟಿಐ): ಫ್ರಾನ್ಸ್‌ನ ಫ್ರೆಡೆರಿಕ್ ಸೊಯೆಝ್ ಅವರನ್ನು ಭಾರತ ಜೂನಿಯರ್ ಹಾಕಿ ತಂಡದ ಮುಖ್ಯ ತರಬೇತುದಾರರನ್ನಾಗಿ ನೇಮಕ ಮಾಡಲಾಗಿದೆ. ಅವರು ಭಾರತ ತಂಡದ ದಿಗ್ಗಜ ಗೋಲ್‌ಕೀಪರ್ ಆಗಿದ್ದ ಪಿ.ಆರ್.ಶ್ರೀಜೇಶ್ ಅವರ ಸ್ಥಾನ ತುಂಬಲಿದ್ದಾರೆ.

ಶ್ರೀಜೇಶ್ ಅವರನ್ನು 17 ತಿಂಗಳ ನಂತರ ಜೂನಿಯರ್ ತಂಡದ ಮುಖ್ಯ ತರಬೇತುದಾರನ ಸ್ಥಾನದಿಂದ ಕಿತ್ತುಹಾಕಲಾಗಿತ್ತು.

ತಮ್ಮ ಅವಧಿಯಲ್ಲಿ ತಂಡ ಸಾಕಷ್ಟು ಯಶಸ್ಸುಗಳಿಸಿದ್ದರೂ ವಿದೇಶಿ ಕೋಚ್ ನೇಮಕಕ್ಕಾಗಿ ತಮ್ಮನ್ನು ತೆಗೆದುಹಾಕಲಾಗಿದೆ ಎಂದು ಶ್ರೀಜೇಶ್ ಬುಧವಾರ ಎಕ್ಸ್‌ನಲ್ಲಿ ಹತಾಶೆ ತೋಡಿಕೊಂಡಿದ್ದರು.

ಅವರ ಗುತ್ತಿಗೆ ಅವಧಿ ಮುಗಿದಿದ್ದು, ಸಹಜವಾಗಿ ಹೊಸ ಕೋಚ್ ನೇಮಕ ಪ್ರಕ್ರಿಯೆ ನಡೆಸಲಾಗುತ್ತಿದೆ ಎಂದು ಹಾಕಿ ಇಂಡಿಯಾ ಸ್ಪಷ್ಟನೆ ನೀಡಿತ್ತು.

ಯುರೋಪಿನ ಹೆಸರಾಂತ ತರಬೇತುದಾರರಲ್ಲಿ ಒಬ್ಬರಾದ ಸೊಯೆಝ್ ಅವರು ಮೂರು ದಶಕಗಳ ಕೋಚಿಂಗ್ ಅನುಭವ ಹೊಂದಿದ್ದಾರೆ. ಫ್ರಾನ್ಸ್ ತಂಡದಲ್ಲಿ 15 ವರ್ಷ (1995–2010) ಆಡಿದ್ದರು. 196 ಪಂದ್ಯಗಳಲ್ಲಿ 195 ಗೋಲುಗಳನ್ನು ಗಳಿಸಿದ್ದರು.

ಫ್ರಾನ್ಸ್ ಮತ್ತು ಸ್ಪೇನ್ ತಂಡಗಳಿಗೆ ಅವರು ಮುಖ್ಯ ಕೋಚ್ ಆಗಿದ್ದರು. 2016 ಮತ್ತು 2020ರ ಒಲಿಂಪಿಕ್ಸ್‌ನಲ್ಲಿ ಸ್ಪೇನ್ ತಂಡಗಳಿಗೆ ಮುಖ್ಯ ತರಬೇತುದಾರನಾಗಿದ್ದ ಅವರು 2024ರ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಫ್ರಾನ್ಸ್ ತಂಡಕ್ಕೆ ಮಾರ್ಗದರ್ಶನ ನೀಡಿದ್ದರು.

ಬಾಕ್ಸರ್‌ಗಳ ಆಯ್ಕೆ ಟ್ರಯಲ್ಸ್ ನಿಖತ್ ಜರಿನ್‌ಗೆ ಆಘಾತ

ಪಟಿಯಾಲ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್ ಮತ್ತು ಏಷ್ಯನ್ ಕ್ರೀಡಾಕೂಟಕ್ಕಾಗಿ ಇಲ್ಲಿ ಗುರುವಾರ ನಡೆದ ಬಾಕ್ಸರ್‌ಗಳ ಆಯ್ಕೆ ಟ್ರಯಲ್ಸ್‌ನಲ್ಲಿ ಎರಡು ಬಾರಿಯ ವಿಶ್ವ ಚಾಂಪಿಯನ್ ನಿಖತ್ ಜರಿನ್ ಅವರು ಆಘಾತಕಾರಿ ಸೋಲು ಅನುಭವಿಸಿ ಹೊರಬಿದ್ದರು.


ನಿಖತ್ ಜರಿನ್

2022ರ ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್ ಮತ್ತು 2023ರ ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತೆ ನಿಖತ್ ಮಹಿಳೆಯರ 51 ಕೆಜಿ ವಿಭಾಗದ ಸೆಮಿಫೈನಲ್‌ನಲ್ಲಿ 1-4 ಅಂತರದಿಂದ ಸಾಕ್ಷಿ ಚೌಧರಿ ವಿರುದ್ಧ ಪರಾಭವಗೊಂಡರು.

ಕಾಮನ್‌ವೆಲ್ತ್ ಮತ್ತು ಏಷ್ಯನ್ ಕ್ರೀಡಾಕೂಟಕ್ಕೆ ಬಾಕ್ಸರ್‌ಗಳನ್ನು ಆಯ್ಕೆಗೆ ಹಮ್ಮಿಕೊಂಡಿದ್ದ ಕಾರ್ಯಕ್ಷಮತೆ ಶಿಬಿರಕ್ಕೆ ಭಾರತ ಕ್ರೀಡಾ ಪ್ರಾಧಿಕಾರ (ಸಾಯ್) ಭಾನುವಾರ ತಡೆಯೊಡ್ಡಿತ್ತು. ಹೀಗಾಗಿ, ಟ್ರಯಲ್ಸ್ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯಿತು. ಇದನ್ನು ಹೆಚ್ಚಿನ ಬಾಕ್ಸರ್‌ಗಳು ಸ್ವಾಗತಿಸಿದ್ದಾರೆ.

ಈ ಹಿಂದೆ 54 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿದ್ದ ಸರ್ವೀಸಸ್ ತಂಡದ ಸಾಕ್ಷಿ ಅವರು ಫೈನಲ್‌ನಲ್ಲಿ ಮಿನಾಕ್ಷಿ ಅವರನ್ನು ಎದುರಿಸಲಿದ್ದಾರೆ. ಮಿನಾಕ್ಷಿ ಅವರು ಮಾಜಿ ವಿಶ್ವ ಚಾಂಪಿಯನ್ ನೀತು ಘಾಂಗ್ಹಾಸ್ ಅವರನ್ನು ಸರ್ವಾನುಮತದ ತೀರ್ಪಿನಿಂದ ಸೋಲಿಸಿದರು.

ಮೂರು ಬಾರಿ ವಿಶ್ವಕಪ್ ಪದಕ ವಿಜೇತ ಹಿತೇಶ್ ಗುಲಿಯಾ (70 ಕೆ.ಜಿ) ಸೆಮಿಫೈನಲ್‌ನಲ್ಲಿ ಸುಮಿತ್ ವಿರುದ್ಧ ಸೋತಿದ್ದು, ಮತ್ತೊಂದು ಆಘಾತಕಾರಿ ಫಲಿತಾಂಶವಾಗಿದೆ. ಸುಮಿತ್ ಕೂಡ ಟ್ರಯಲ್ಸ್‌ಗಾಗಿ 75 ಕೆ.ಜಿಯಿಂದ ಈ ಕೆ.ಜಿ ವಿಭಾಗದಲ್ಲಿ ಸ್ಪರ್ಧಿಸಿದ್ದಾರೆ.

65 ಕೆಜಿ ಮಹಿಳಾ ವಿಭಾಗದ ಸೆಮಿಫೈನಲ್‌ನಲ್ಲಿ ಏಷ್ಯನ್ ಗೇಮ್ಸ್ ಕಂಚಿನ ಪದಕ ವಿಜೇತೆ ಪರ್ವೀನ್ ಹೂಡಾ ಅವರು ಅಂಕುಶಿತಾ ಬೊರೊ ಅವರನ್ನು ಸೋಲಿಸಿದರೆ, ಪೂಜಾ ರಾಣಿ ಅವರು 80 ಕೆಜಿ ವಿಭಾಗದಲ್ಲಿ ನೈನಾ ವಿರುದ್ಧ ಪರಾಭವಗೊಂಡರು.

ಕಳೆದ ತಿಂಗಳು ಮಂಗೋಲಿಯಾದಲ್ಲಿ ನಡೆದ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಫೈನಲ್‌ಗೆ ತಲುಪಿದ ಸಚಿನ್ ಸಿವಾಚ್ (60 ಕೆಜಿ), ಪ್ರೀತಿ ಪವಾರ್ (54 ಕೆಜಿ) ಮತ್ತು ಪ್ರಿಯಾ ಘಂಘಾಸ್ (60 ಕೆಜಿ) ಕಾಮನ್‌ವೆಲ್ತ್ ಮತ್ತು ಏಷ್ಯನ್ ಕ್ರೀಡಾಕೂಟ ಎರಡಕ್ಕೂ ಅರ್ಹತೆ ಪಡೆದಿದ್ದಾರೆ. ಹಾಲಿ ವಿಶ್ವ ಚಾಂಪಿಯನ್ ಜಾಸ್ಮಿನ್ ಲಂಬೋರಿಯಾ (57 ಕೆಜಿ) ಮತ್ತು ಅರುಂಧತಿ ಚೌಧರಿ (70 ಕೆಜಿ) ಅವರು ಕಾಮನ್‌ವೆಲ್ತ್ ಗೇಮ್ಸ್‌ಗೆ ಟಿಕೆಟ್ ಗಳಿಸಿದರು.

ವೇಟ್‌ಲಿಫ್ಟಿಂಗ್: ಅಜಿತ್‌ಗೆ 2 ಕಂಚು



ಗಾಂಧಿನಗರ (ಪಿಟಿಐ): ಏಷ್ಯನ್ ಸೀನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಸ್ಫೂರ್ತಿಯುತ ಪ್ರದರ್ಶನ ಮುಂದುವರಿದಿದೆ. ಗುರುವಾರ ನಡೆದ ಪುರುಷರ 71 ಕೆ.ಜಿ. ವಿಭಾಗದಲ್ಲಿ ಅಜಿತ್ ನಾರಾಯಣ ಅವರು ಕ್ಲೀನ್ ಅಂಡ್ ಜರ್ಕ್ ಮತ್ತು ಒಟ್ಟಾರೆ ತೂಕ ವಿಭಾಗಗಳಲ್ಲಿ ಕಂಚಿನ ಪದಕಗಳನ್ನು ತಮ್ಮದಾಗಿಸಿಕೊಂಡರು.

ಏಷ್ಯದ ಅತ್ಯುತ್ತಮ ಸ್ಪರ್ಧಿಗಳ ಎದುರು ಕಣಕ್ಕಿಳಿದ ಅವರು ಈ ವಿಭಾಗದಲ್ಲಿ ಒಟ್ಟು 314 ಕೆ.ಜಿ. ಭಾರ ಎತ್ತಿದರು. ಇದರಲ್ಲಿ ಕ್ಲೀನ್ ಮತ್ತು ಜರ್ಕ್‌ನಲ್ಲಿ 174 ಕೆ.ಜಿ. ಎತ್ತಿದ್ದರು.

ಈ ವಿಭಾಗದಲ್ಲಿ ಚಿನ್ನದ ಪದಕ ಕೊರಿಯಾದ ವೊನ್ ಜು ರಿ ಪಾಲಾಯಿತು. ಅವರು ಒಟ್ಟು 351 ಕೆ.ಜಿ. ಭಾರ ಎತ್ತಿದರು. 335 ಕೆ.ಜಿ. ತೂಕ ಎತ್ತಿದ ಚೀನಾದ ಜಿಯಾನ್ ಚೆನ್ ಬೆಳ್ಳಿ ಪದಕ ಗಳಿಸಿದರು. ಅಜಿತ್ ಈ ಕೂಟದಲ್ಲಿ ಪದಕ ಗೆದ್ದ ಭಾರತದ ಮೂರನೇ ಸ್ಪರ್ಧಿ ಎನಿಸಿದರು. ಕೋಮಲ್ ಕೋಹರ್ ಮಹಿಳೆಯರ 48 ಕೆ.ಜಿ. ವಿಭಾಗದಲ್ಲಿ ಕಂಚಿನ ಪದಕ ಗಳಿಸಿದ್ದರು. ಜ್ಞಾನೇಶ್ವರಿ ಯಾದವ್ ಅವರು 53 ಕೆ.ಜಿ ವಿಭಾಗದಲ್ಲಿ ಬುಧವಾರ ಒಂದು ಬೆಳ್ಳಿ, ಒಂದು ಕಂಚಿನ ಪದಕ ತಮ್ಮದಾಗಿಸಿಕೊಂಡಿದ್ದರು.